# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ



ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ

ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ

## ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram

Scan QR Code
To Download
KPSC Vaani App

# 01-07-2021

## 'ಸಂಸ್ಕೃತ'ಪತ್ರಿಕೆಸಂಪಾದಕಸಂಪತ್‌ಕುಮಾರ್‌ವಿಧಿವಶ



* ವಿಶ್ವದ ಏಕೈಕ ಸಂಸ್ಕೃತ ಪತ್ರಿಕೆ ಯಾಗಿರುವ "ಸುಧರ್ಮಾ" ಪತ್ರಿಕೆ ಸಂಪಾದಕರಾಗಿರುವ ಸಂಪತ್ ಕುಮಾರ್ ಅವರು ತಮ್ಮ 64 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

* ಪ್ರಸ್ತುತ 1970 ರಲ್ಲಿ "ಸುಧರ್ಮಾ" ಸಂಸ್ಕೃತ ಪತ್ರಿಕೆಯನ್ನು ಸಂಪತ್ ಕುಮಾರ್ ಅವರು ತಂದೆಯವರಾದ ವರದರಾಜ ಅಯ್ಯಂಗಾರ್ ಅವರು ಪ್ರಾರಂಭಿಸಿದರು.

*ಕೇಂದ್ರ ಸರ್ಕಾರವು ಸಂಪತ್ ಕುಮಾರ್ ಮತ್ತು ಅವರ ಧರ್ಮ ಪತ್ನಿ ಜಯಲಕ್ಷ್ಮಿ ಅವರಿಗೆ ಪದ್ಮಶ್ರೀ ಪ್ರಶಸ್ತಿ, ಜೊತೆಗೆ ಸಂಪತ್ ಕುಮಾರ್ ಅವರಿಗೆ ಅಬ್ದುಲ್ ಕಲಾಂ ಪ್ರಶಸ್ತಿ ಹೀಗೆ ಇನ್ನು ಹಲವು ಪ್ರಶಸ್ತಿಗಳುನ್ನು ನೀಡಿದೆ.

## ವಾಯುಪಡೆಯ ನೂತನ ಉಪ ಮುಖ್ಯಸ್ಥರಾಗಿ ವಿ.ಆರ್.ಚೌಧರಿ ಅಧಿಕಾರಸ್ವೀಕಾರ



* ಪ್ರಸ್ತುತ ಭಾರತೀಯ ವಾಯುಪಡೆ (IAF) ನ ಹೊಸ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ವಿ.ಆರ್.ಚೌಧರಿ ಅವರು ಇದೇ ಜುಲೈ.1 ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

* ಈ ಮೊದಲು ಏರ್ ಮಾರ್ಷಲ್ ಎಚ್.ಎಸ್.ಅರೋರಾ ಅವರು ವಾಯುಪಡೆಯ ಉಪ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಇವರ ನಿವೃತ್ತಿ ನಂತರ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ವಿ.ಆರ್.ಚೌಧರಿ ಅಧಿಕಾರ ವಹಿಸಿಕೊಂಡಿದ್ದಾರೆ.

* ಪ್ರಸ್ತುತ ಉಪ ಮುಖ್ಯಸ್ಥರಾಗಿರುವ ಏರ್ ಮಾರ್ಷಲ್ ಚೌಧರಿ ಅವರು 2020 ರ ಆಗಸ್ಟ್.01 ರಿಂದ ವೆಸ್ಟರ್ನ್ ಏರ್ ಕಮಾಂಡ್'ನ ಏರ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು, ಹಾಗೂ ಇವರು ಫೈಟರ್ ಪೈಲಟ್ ಆಗಿ 1982 ರ ಡಿಸೆಂಬರ್ 29 ರಂದು IAF ನ ಫೈಟರ್ ಸ್ಟ್ರೀಮ್'ಗೆ ನಿಯೋಜನೆ ಗೊಂಡಿದ್ದರು.

* ಏರ್ ಮಾರ್ಷಲ್ ರಿಚರ್ಡ್ ಜಾನ್ ಡಕ್ವರ್ತ್ ಅವರು ವಾಯುಪಡೆಯ ಸಿ ಸೆಂಟ್ರಲ್ ಏರ್ ಕಮಾಂಡ್'ನ ಎಒಸಿಯಾಗಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ.

## ವಿದ್ಯುತ್ ವಿತರಣಾ ಯೋಜನೆಗೆ ಸಚಿವ ಸಂಪುಟ ಅನುಮೋದನೆ



* ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕ್ರಮವನ್ನು ಕೈಗೊಳ್ಳುವ ನಿಟ್ಟಿನಲ್ಲಿ ಇದೀಗ 3.03 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗೆ ಅನುಮೋದನೆ ನೀಡಲಾಗಿದೆ ಎಂದು ವಿದ್ಯುತ್ ಮತ್ತು ನವೀಕರಿಸಬಹುದಾದ ಇಂಧನ ಸಚಿವಆರ್.ಕೆ.ಸಿಂಗ್ ಮಾಹಿತಿಯನ್ನು ನೀಡಿದ್ದಾರೆ.

* ಈ ವಿದ್ಯುತ್ ವಿತರಣಾ ಯೋಜನೆ ಅಡಿಯಲ್ಲಿ ಕೃಷಿ ಕ್ಷೇತ್ರಗಳಿಗೆ ಸಮರ್ಪಕ ವಿದ್ಯುತ್ ಪೂರೈಸಲು ಉದ್ದೇಶ ಇದಾಗಿದೆ ಎಂದಿದ್ದಾರೆ, ಹಾಗೂ ಇದರ ಜೊತೆಯಲ್ಲಿ ಸೌರಶಕ್ತಿಯಿಂದ ಬೆಳಕಿನ ಸಮಯದಲ್ಲಿ ರೈತರಿಗೆ ವಿದ್ಯುತ್ ಪೂರೈಸಲು ಈ ಯೋಜನೆಯನ್ನು ಉದ್ದೇಶಿಸಲಾಗಿದೆ.

* ಈ ವಿದ್ಯುತ್ ವಿತರಣಾ ಯೋಜನೆ ಅಡಿಯಲ್ಲಿ 25 ಕೋಟಿ ಸ್ಮಾರ್ಟ್ ಮೀಟರ್ ಅಳವಡಿಕೆ, ಹಾಗೂ 10 ಸಾವಿರ ಫೀಡರ್‌ಗಳ ಸ್ಥಾಪನೆಯ ಯೋಜನೆ ಇದಾಗಿದೆಎಂದಿದ್ದಾರೆ.

## ಅತುಲ್ ಕೇಶಪ್ ಅವರು ಭಾರತಕ್ಕೆ ಅಮೆರಿಕದ ತಾತ್ಕಾಲಿಕ ರಾಯಭಾರಿಯಾಗಿನೇಮಕ



* ಅತುಲ್ ಕೇಶಪ್ ಅವರು ಇದೀಗ ಭಾರತಕ್ಕೆ ಅಮೆರಿಕದ ತಾತ್ಕಾಲಿಕ ರಾಯಭಾರಿಯಾಗಿ ನೇಮಕವಾಗಿದ್ದರೆ.

* ಈ ಹಿಂದಿನ ರಾಯಭಾರಿಯಾಗಿ ಡೇನಿಯಲ್ ಸ್ಮಿತ್ ನಿವೃತ್ತಿಯಾದ ಕಾರಣದಿಂದಾಗಿ ತಾತ್ಕಾಲಿಕವಾಗಿ ಅತುಲ್‌ಕೇಶಪ್‌ಅವರನ್ನುರಾಯಭಾರಿಯನ್ನಾಗಿನೇಮಕಮಾಡಲಾಗಿದೆ.

* ಅತುಲ್ ಕೇಶಪ್ ಅವರು ಇದಕ್ಕೂ ಮೊದಲು ಶ್ರೀಲಂಕಾ, ಮಾಲ್ಡೀವ್ಸ್ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ್ದರು, ಹಾಗೂ 1994 ರಲ್ಲಿ ಅಮೆರಿಕ ವಿದೇಶಾಂಗ ಸೇವೆಗೆ ಸೇರ್ಪಡೆಯಾಗಿದ್ದರು.

* ಅಮೆರಿಕದ ರಾಯಭಾರ ಕಚೇರಿಯಲ್ಲಿ ಅತುಲ್ ಅವರು 2005 ರಿಂದ 2008 ರ ಅವಧಿಯಲ್ಲಿ ಉಪರಾಜಕೀಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.

* ರಾಷ್ಟ್ರೀಯ ಭದ್ರತಾ ಸಮಿತಿಯ ಉತ್ತರ ಆಫ್ರಿಕಾ ಮತ್ತು ಮಧ್ಯ ಪೂರ್ವ ಪ್ರದೇಶಗಳ ನಿರ್ದೇಶಕರಾಗಿ 2003 ರಲ್ಲಿ ಅತುಲ್ ಕೇಶಪ್ ಅವರು ಶ್ವೇತಭವನ ಸೇರಿದ್ದರು.

## ಎಮಿಲಿಯೊವಿಶ್ವದಅತ್ಯಂತಹಿರಿಯವ್ಯಕ್ತಿ



* ಲಂಡನ್'ನ ಪೋರ್ಟೋ ರಿಕೊದ ಎಮಿಲಿಯೊ ಫ್ಲಾರಸ್ ಮಾರ್ಕ್ವರ್ಯೆಝ್ ಎನ್ನುವವರು ವಿಶ್ವದ ಅತಿ ಹಿರಿಯ ವ್ಯಕ್ತಿಯಾಗಿದ್ದಾರೆ, ಇವರಿಗೆ ಸುಮಾರು 112 ವರ್ಷ 326 ದಿನಗಳಾಗಿ ಗಿನ್ನಿಸ್ ವಿಶ್ವ ದಾಖಲೆಯನ್ನು ಬರೆದಿದ್ದಾರೆ.

* ಎಮಿಲಿಯೊ ಎನ್ನುವವರು 1908 ರಲ್ಲಿ ಕೊರೊಲಿನಾದಲ್ಲಿ ಜನಿಸಿದ್ದಾರೆ ಇತ್ತೀಚಿಗೆ ಇವರಿಗೆ ಗಿನ್ನಿಸ್‌ದಾಖಲೆಯಪ್ರಮಾಣಪತ್ರವನ್ನುನೀಡಿದ್ದಾರೆ.

* ಈ ಮೊದಲು ಅತ್ಯಂತ ಹಿರಿಯ ವ್ಯಕ್ತಿ ಸ್ಥಾನದಲ್ಲಿ ರೊಮೆನಿಯಾದ ಡುಮಿತ್ರು ಕೊಮಾನೆಸ್ಕು ಅವರು ಗಿನ್ನಿಸ್ ವಿಶ್ವ ದಾಖಲೆಯನ್ನು ನಿರ್ಮಿಸಿದ್ದರು ಇವರು 2020 ರ ಜೂನ್ 27 ರಂದು ನಿಧನರಾಗಿದ್ದಾರೆ (111ವರ್ಷ219ದಿನಗಳವರೆಗೆಬದುಕಿದ್ದರು).

## ಮೇರಿ ಕೋಮ್ ಬಾಕ್ಸಿಂಗ್ ತರಬೇತಿಗಾಗಿ ಇಟಲಿಗೆ



* ಮೇರಿ ಕೋಮ್ ಅವರು '6' ಬಾರಿಯ ವಿಶ್ವ ಚಾಂಪಿಯನ್ ಆಗಿದ್ದರು, ಇದೀಗ ಮೇರಿ ಕೋಮ್ ಅವರು ತರಬೇತಿಗಾಗಿ ಇಟಲಿಯಲ್ಲಿನ ದೇಶದ ಇತರ ಬಾಕ್ಸರ್‌ಗಳನ್ನು ಸೇರಿಕೊಳ್ಳಲು ತೀರ್ಮಾನವನ್ನು ಕೈಗೊಂಡಿದ್ದಾರೆ, ಈ ಬಾರಿ ನಡೆಯುವ ಟೋಕಿಯೊ ಒಲಿಂಪಿಕ್ಸ್'ಗಾಗಿ ಜಪಾನ್ ಸರ್ಕಾರದ ನಿರ್ಬಂಧಗಳಿಂದ ಪಾರಾಗಲು ಈ ತೀರ್ಮಾನ ಕೈಗೊಂಡಿದ್ದಾರೆ.

* ಪ್ರಸ್ತುತ ಮೇರಿ ಕೋಮ್ ಅವರು ಇಲ್ಲಿಯತನಕ ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದುಕೊಳ್ಳುತ್ತಿದ್ದರು.

## CBSE NPCI ವಿದ್ಯಾರ್ಥಿಗಳಿಗೆ ಆರ್ಥಿಕ ಸಾಕ್ಷರತಾ ಪಠ್ಯಕ್ರಮವನ್ನು ಆರಂಭಿಸಿದೆ.



* ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (CBSE) ಮತ್ತು ರಾಷ್ಟ್ರೀಯ ಪಾವತಿ ನಿಗಮ (NPCI)ಗಳು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಆರ್ಥಿಕ ಸಾಕ್ಷರತಾ ಪಠ್ಯಕ್ರಮವನ್ನು ಪರಿಚಯಿಸಲು ಮುಂದಾಗಿವೆ.

* ಇದನ್ನು "ಆರ್ಥಿಕ ಸಾಕ್ಷರತೆ" ವಿಷಯದ ಭಾಗವಾಗಿ ಆರಂಭಿಸಲಾಗಿದೆ, ಇದರಿಂದ ವಿದ್ಯಾರ್ಥಿಗಳಿಗೆ ಶಿಕ್ಷಣದ ಪ್ರಾಥಮಿಕ ಮೂಲ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕಾರಿಯಾಗಲಿದೆ.

* ಇದು ಕಾರ್ಡ್‌ಗಳು, ಯುಪಿಐ, ವ್ಯಾಲೆಟ್ ಸೇರಿದಂತೆ ಬ್ಯಾಂಕಿಂಗ್ ಮತ್ತು ಡಿಜಿಟಲ್ ಪಾವತಿಗಳ ವಿಧಾನಗಳ ಮತ್ತು ಮೂಲ ಹಣಕಾಸು ಪರಿಕಲ್ಪನೆಗಳು ಇರಲಿವೆ, ಹಾಗೂ ಬ್ಯಾಂಕಿಂಗ್‌ನ ಮೂಲವಾಗಿರುವ ನಾಣ್ಯಗಳಿಂದ ಕಾಗದದ ಹಣಕ್ಕೆ ಪರಿವರ್ತನೆ, ಬ್ಯಾಂಕುಗಳ ಕಾರ್ಯಾಚರಣೆ ಮತ್ತು ಸೇವೆಗಳ ಬಗ್ಗೆ ಮಾಹಿತಿ ನೀಡುತ್ತದೆ.

* 7 ಮತ್ತು 8 ತರಗತಿಗಾಗಿ ಸಿಬಿಎಸ್‌ಇಯೊಂದಿಗೆ ಎನ್‌ಪಿಸಿಐ ಕೋರ್ಸ್ ವಿಷಯಗಳ ಅಭಿವೃದ್ಧಿಗೆ ಕಾರ್ಯನಿರ್ವಹಿಸಲಿದೆ.

* ಈ ಹೊಸ ಶಿಕ್ಷಣ ನೀತಿಯಿಂದ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಮನಸ್ಥಿತಿಯನ್ನು ಬೆಳಸಲಾಗುತ್ತದೆ.

* ಈ ಹೊಸ ಪಠ್ಯಪುಸ್ತಕವು ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಕೇಂದ್ರೀಕರಿಸಲಿದೆ, ಹಾಗೂ ಆರ್ಥಿಕ ಸಾಕ್ಷರತೆಯ ಸಣ್ಣ ಮಾಡ್ಯೂಲ್ ಇದಾಗಿದೆ, ಇದರಿಂದಾಗಿ ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲೇ ಹಣಕಾಸಿನ ವಿಷಯಗಳ ಬಗ್ಗೆ ಶಿಕ್ಷಣ ನೀಡಲಿದೆಎಂದಿದ್ದಾರೆ.

## ಗ್ರೀನ್ ಫ್ರೈಟ್ ಕಾರಿಡಾರ್ 2 ರ ಮೊದಲ ಸಮುದ್ರಯಾನ ಆರಂಭ



* 2021 ರ ಜೂನ್ 30 ರಂದು ಶಿಪ್ಪಿಂಗ್ ಸಚಿವಾಲಯವು ಗ್ರೀನ್ ಫ್ರೈಟ್ ಕಾರಿಡಾರ್ 2 ರ ಅಡಿಯಲ್ಲಿ ಮೊದಲ ಸಮುದ್ರಯಾನವನ್ನು ಆರಂಭಿಸಿದೆ.

* ಗ್ರೀನ್ ಫ್ರೈಟ್ ಕಾರಿಡಾರ್ 2 ಕರಾವಳಿ ಹಡಗು ಸೇವೆಯಿಂದ ಉತ್ತರ ಕೇರಳದಲ್ಲಿನ ಕೊಚ್ಚಿನ್ ಬಂದರಿನಿಂದ ಬೇಪೋರ್ ಮತ್ತು ಅಜಿಕಲ್ ಬಂದರುಗಳಿಗೆ ವಾಯೇಜ್ ಆರಂಭಿಸಲಾಗಿದೆ.

* ಗ್ರೀನ್ ಫ್ರೈಟ್ ಕಾರಿಡಾರ್ 2 ರ ಸಮುದ್ರಯಾನವು ಕರಾವಳಿ ವ್ಯಾಪಾರವನ್ನು ಉತ್ತೇಜಿಸಲು ಪ್ರಮುಖ ಮತ್ತು ಪ್ರಮುಖವಾಗಿರದ ಬಂದರುಗಳ ನಡುವೆ ಸುಧಾರಿತ ಸಂಪರ್ಕವನ್ನು ಕಲ್ಪಿಸಲು ಈ ಸಮುದ್ರಯಾನ ಸೇವೆಯನ್ನು ಆರಂಭಿಸಲಾಗಿದೆ.

* ಸುಧಾರಿತ ಜಲಮಾರ್ಗಗಳ ಬಳಕೆ, ರಸ್ತೆ ಮತ್ತು ರೈಲು ಸಂಚಾರವನ್ನು ಕತ್ತರಿಸಿ ವ್ಯವಸ್ಥಾಪನಾ ವೆಚ್ಚಗಳನ್ನು ಕಡಿತಗೊಳಿಸುವ ಸಮುದ್ರಯಾನ ಇದಾಗಿದೆ.

* ಕೊಚ್ಚಿನ್ ಬಂದರು ಕೇರಳದ ಕೊಚ್ಚಿ ನಗರದ ಅರೇಬಿಯನ್ ಸಮುದ್ರ, ಲಕ್ಕಾಡಿವ್ ಸಮುದ್ರ ಮತ್ತು ಹಿಂದೂ ಮಹಾಸಾಗರದ ಸಮುದ್ರ ಮಾರ್ಗದ ಮುಖ್ಯವಾದ ಬಂದರು ಇದಾಗಿದೆ, ಹಾಗೂ ಭಾರತದ ಅತಿದೊಡ್ಡ ಬಂದರುಗಳಲ್ಲಿ ಇದು ಒಂದಾಗಿದೆ, ಮತ್ತು ಭಾರತದ ಮೊದಲ ಸಾಗಣೆ ಬಂದರು ಇದಾಗಿದೆ.

## 2021 24 ರ ಐಟಿ ನೀತಿಯನ್ನು ಆರಂಭಿಸಿದ ಆಂಧ್ರ ಪ್ರದೇಶ



* 2021 ರ ಜೂನ್. 30 ರಂದು ಆಂಧ್ರ ಪ್ರದೇಶ ರಾಜ್ಯ ಸರ್ಕಾರವು ಹೊಸ "ಎಪಿ ಮಾಹಿತಿ ತಂತ್ರಜ್ಞಾನ ನೀತಿ2021 24"ನ್ನುಆರಂಭಿಸಿದೆ.

*ಆಂಧ್ರಪ್ರದೇಶಮುಖ್ಯಮಂತ್ರಿವೈಎಸ್‌ಜಗನ್‌ಮೋಹನ್‌ರೆಡ್ಡಿ ಅವರ ರಾಜ್ಯ ಕ್ಯಾಬಿನೆಟ್ ಈ ಹೊಸ ನೀತಿಯನ್ನು ಅನುಮೋದಿಸಿದೆ, ಈ ನೀತಿಯಿಂದಾಗಿ ಮುಂಬರುವ ಮೂರು ವರ್ಷಗಳಲ್ಲಿ 55,000 ಕ್ಕೂ ಅಧಿಕ ಉದ್ಯೋಗಗಳನ್ನು ಸೃಷ್ಟಿಯಾಗುವ ಸಾಧ್ಯತೆ ಇದೇ ಎಂದು ತಿಳಿಸಿದ್ದಾರೆ.

* ಐಟಿ, ಎಲೆಕ್ಟ್ರಾನಿಕ್ಸ್ ಹಾಗೂ ಸಂವಹನ ವಿಭಾಗವನ್ನು ಸಹ ಸ್ವಾವಲಂಬಿ ಸಾಧಿಸುವ ಉದ್ದೇಶದಿಂದ ಆದಾಯ ಕೇಂದ್ರವಾಗಿ ಪರಿವರ್ತಿಸಲಾಗುವುದು, ಹಾಗೂ 1.65 ಲಕ್ಷ ಪರೋಕ್ಷ ಉದ್ಯೋಗವನ್ನು ಸೃಷ್ಟಿಸುವ ಸಾಧ್ಯತೆ ಇದೇ ಎಂದಿದ್ದಾರೆ, ಮತ್ತು ಈ ನೀತಿಯು 2024 ರ ಮಾರ್ಚ್ 24 ರವರೆಗೆ ಜಾರಿಯಲ್ಲಿರಲಿದೆ ಎಂದು ತಿಳಿದು ಬಂದಿದೆ.

* ಈ ಐಟಿ ನೀತಿಯ ಅಡಿಯಲ್ಲಿ ಆಂಧ್ರ ಸರ್ಕಾರವು ಕಾವು ಕೇಂದ್ರಗಳನ್ನು ಸ್ಥಾಪನೆ ಮಾಡುತ್ತದೆ, ಹಾಗೂ ಸ್ಟಾರ್ಟ್‌ಅಪ್'ಗಳಿಗಾಗಿ ಕಾರ್ಯಾಗಾರಗಳನ್ನು ಆಯೋಜಿಸುತ್ತದೆ, ಇದರ ಜೊತೆಗೆ ಆಂಧ್ರ ರಾಜ್ಯ ಸರ್ಕಾರವು ವಿಶಾಖಪಟ್ಟಣಂ ನಲ್ಲಿ ಐಟಿ ಎಮರ್ಜಿಂಗ್ ಟೆಕ್ನಾಲಜೀಸ್ ರಿಸರ್ಚ್ ಯೂನಿವರ್ಸಿಟಿಯನ್ನು ಸ್ಥಾಪಿಸಲಾಗುತ್ತದೆಎಂದುತಿಳಿಸಿದ್ದಾರೆ.

# 02-07-2021

## 82 ವರ್ಷದ ಮಹಿಳಾ ಪೈಲಟ್ ಬಾಹ್ಯಾಕಾಶಕ್ಕೆ



* ಉದ್ಯಮಿ ಜೆಫ್ ಬೆಜೋಸ್ ಅವರು ಬಾಹ್ಯಾಕಾಶಕ್ಕೆ ಪ್ರಯಾಣ ಬೆಳಸಲಿದ್ದಾರೆ ಇದೀಗ ಅವರ ಜೊತೆಯಲ್ಲಿ 82 ವರ್ಷ ವಯಸ್ಸಿನ ಮಹಿಳಾ ಪೈಲಟ್ ಕೂಡ ಬಾಹ್ಯಾಕಾಶಕ್ಕೆ ಪ್ರಯಾಣ ಬೆಳಸಲಿದ್ದಾರೆ.

* ಪ್ರಸ್ತುತ ಜುಲೈ. 20 ರಂದು ನ್ಯೂ ಶೆಫರ್ಡ್ ಬಾಹ್ಯಾಕಾಶ ನೌಕೆಯಲ್ಲಿ ಉದ್ಯಮಿ ಜೆಫ್ ಬೆಜೋಸ್ ಹಾಗೂ ವಾಲಿ ಫಂಕ್ ಪ್ರಯಾಣ ಬೆಳಸಲಿದ್ದಾರೆ, ಮತ್ತು ಇವರು ಈ ಪ್ರಯಾಣದ ಹಿರಿಯ ವ್ಯಕ್ತಿಯಾಗಿಲಿದ್ದಾರೆ.

* ಗಗನಯಾತ್ರಿಗಳಿಗೆ ಅಮೆರಿಕದಲ್ಲಿ 1960 ರಿಂದ 1961 ರವರೆಗೂ ಬಾಹ್ಯಾಕಾಶ ಪ್ರಯಾಣಕ್ಕೆ ತೆರಳುವ ತರಬೇತಿಯನ್ನು "ಮರ್ಕ್ಯುರಿ 13" ಕಾರ್ಯಕ್ರಮದಡಿಯಲ್ಲಿ ಮಹಿಳಾ ಪೈಲಟ್‌ಗಳಿಗೆನೀಡಲಾಗುತಿತ್ತು,ತರಬೇತಿಪಡೆದವರಲ್ಲಿ ಫಂಕ್‌ಕೂಡಒಬ್ಬರಾಗಿದ್ದಾರೆ.

* ಜುಲೈ 20 ರಂದು ಅಪೋಲೊ 11 ನೌಕೆಯು ಚಂದ್ರನ ಮೇಲೆ ಇಳಿದ ದಿನದ ವಾರ್ಷಿಕೋತ್ಸವ, ಹಾಗೂ ಅದೇ ದಿನವೇ ಟೆಕ್ಸಾಸ್‌ನಿಂದ ಬಾಹ್ಯಾಕಾಶದ ಪ್ರಯಾಣ ಪ್ರಾರಂಭಿಸಲಿದೆ ಎಂದುತಿಳಿಸಿದ್ದಾರೆ.

## ಮಹಾರಾಷ್ಟ್ರದ ಮುಂಬೈಗಿಂತ ದೊಡ್ಡ ನಗರ ಪುಣೆ



* ಮಹಾರಾಷ್ಟ್ರದ ಭೌಗೋಳಿಕ ವಿಸ್ತೀರ್ಣದ ವ್ಯಾಪ್ತಿಯ ದೃಷ್ಟಿಯಿಂದ ಪುಣೆ ನಗರವು ಮಹಾರಾಷ್ಟ್ರದ ಅತಿದೊಡ್ಡ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ, ಇದೀಗ ಈ ಪುಣೆ ನಗರವು ಮುಂಬೈ ನಗರಕ್ಕಿಂತಲೂ ದೊಡ್ಡದಾಗಿದೆ.

* ಪ್ರಸ್ತುತ ಪುಣೆ ಮಹಾನಗರಪಾಲಿಕೆಯ ವ್ಯಾಪ್ತಿಯು ಇದೀಗ 518 ಚದರ ಕಿ.ಮೀ ಆಗಿದೆ, ಹಾಗೂ ಮುಂಬೈ ಮಹಾನಗರಪಾಲಿಕೆಯ ವ್ಯಾಪ್ತಿಯು 434 ಚದರ ಕಿ.ಮೀ ಇದೇ ಎಂದು ತಿಳಿಸಿದ್ದಾರೆ.

* ಮಹಾರಾಷ್ಟ್ರದ ಪುಣೆ ಮಹಾನಗರಪಾಲಿಕೆಯ ಈ ಮೊದಲು 331 ಚದರ ಕಿ.ಮೀ ವ್ಯಾಪ್ತಿಯನ್ನು ಹೊಂದಿತ್ತು, ಇದೀಗ ಮಹಾರಾಷ್ಟ್ರದ ನಗರಾಭಿವೃದ್ಧಿ ಇಲಾಖೆಯು ಪುಣೆ ನಗರದ ವ್ಯಾಪ್ತಿಗೆ ಸುತ್ತಮುತ್ತಲಿನ 23 ಗ್ರಾಮಗಳನ್ನು ಸೇರಿಸಿದ ಹಾಗೂ ಆದೇಶವನ್ನು ಹೊರಡಿಸಿದೆ, ಇದರಿಂದಾಗಿ ಪುಣೆಯ ನಗರಪಾಲಿಕೆಯ ಒಟ್ಟಾರೆ 518 ಚದರ ಕಿ.ಮೀ ವ್ಯಾಪ್ತಿಯು ಹೊಂದಿದಂತಾಗಿದೆ.

* ಪ್ರಸ್ತುತ ಪುಣೆ ನಗರದ ಬಜೆಟ್ ಗಾತ್ರ ಮತ್ತು ಜನಸಂಖ್ಯೆಯನ್ನು ಗಮನಿಸಿದರೆ, ಸದ್ಯ ಮುಂಬೈ ನಗರ ಹೆಚ್ಚಿದೆ, ಪ್ರಸಕ್ತ 2021 22 ನೇ ಸಾಲಿನ ಹಣಕಾಸು ವರ್ಷದಲ್ಲಿ ಮುಂಬೈ ಪಾಲಿಕೆಯ ಬಜೆಟ್ ಗಾತ್ರ 39,038 ಕೋಟಿ ರೂ. ಆಗಿತ್ತು, ಆದರೆ ಪುಣೆ ಪಾಲಿಕೆಯ ಬಜೆಟ್ ಗಾತ್ರ 8,370 ಕೋಟಿಯಾಗಿದೆ.

* ಸದ್ಯ ಮುಂಬೈ ನಗರಪಾಲಿಕೆಯ ಜನಸಂಖ್ಯೆಯು 1.2 ಕೋಟಿ ಇದೇ, ಹಾಗೂ ಪುಣೆನಗರವು34ಲಕ್ಷಜನಸಂಖ್ಯೆಯನ್ನುಹೊಂದಿದೆ.

## ಸುಪ್ರೀಂ ಕೋರ್ಟ್ ರಾಜ್ಯಗಳಿಗೆ OBC ಘೋಷಿಸುವ ಅಧಿಕಾರ ಇಲ್ಲ



* ರಾಜ್ಯಗಳು ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವ ಉದ್ದೇಶದಿಂದ ಸಮುದಾಯಗಳನ್ನು ಇತರ ಹಿಂದುಳಿದ ವರ್ಗಗಳು OBC ಎಂದು ಘೋಷಣೆ ಮಾಡುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ಮರು ಪರಿಶೀಲಿಸಲು ನಿರಾಕರಿಸಿದೆ, ಹಾಗೂ ಕೇಂದ್ರ ಸರ್ಕಾರವು ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ನ್ಯಾಯಾಲಯ ಸದ್ಯ ವಜಾಗೊಳಿಸಿದೆ.

* ಪ್ರಸ್ತುತ ಸಮುದಾಯಗಳನ್ನು ಹಿಂದುಳಿದವು ಎಂದು ಗುರುತಿಸುವ ಏಕೈಕ ಅಧಿಕಾರ ರಾಷ್ಟ್ರಪತಿಗೆ ಮಾತ್ರ ಇದೆ ಎಂದು ನ್ಯಾಯಾಲಯ ತಿಳಿಸಿದೆ, ಹಾಗೂ ಯಾವುದೇ ರಾಜ್ಯಗಳಿಗೆ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಗಳನ್ನು ಸಿದ್ಧಪಡಿಸುವ ಅಧಿಕಾರ ಇರುವದಿಲ್ಲ ಎಂದು ನ್ಯಾಯಾಲಯಘೋಷಣೆಮಾಡಿದೆ.

## ಟೋಕಿಯೊ ಒಲಿಂಪಿಕ್ಸ್‌ಗೆ ಭಾರತದ ಅಥ್ಲೀಟ್‌ಗಳು




* ಪ್ರಸ್ತುತ ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ವಿಭಾಗದ ವೈಯಕ್ತಿಕ ಸ್ಪರ್ಧೆಗಳಲ್ಲಿ ಭಾರತದ ಅಥ್ಲೀಟ್‌ಗಳು ಸ್ಪರ್ಧಿಸಲಿದ್ದಾರೆ, ಹಾಗೂ ಪುರುಷರ ಮತ್ತು ಮಿಶ್ರ ವಿಭಾಗಗಳ ರಿಲೆ ತಂಡಗಳು ಕೂಡಪಾಲ್ಗೊಳ್ಳಲಿವೆಎಂದುವಿಶ್ವಅಥ್ಲೆಟಿಕ್ಸ್‌ಸಂಸ್ಥೆಯುಮಾಹಿತಿನೀಡಿದೆ.

* ಅಥ್ಲೀಟ್‌ಗಳ ಮಾಹಿತಿ : ನೀರಜ್ ಚೋಪ್ರಾ, ಶಿವಪಾಲ್ ಸಿಂಗ್ ಅವರು ಪುರುಷರ ಜಾವೆಲಿನ್ ಥ್ರೋ ಭಾಗಿ, ಅವಿನಾಶ್ ಸಬ್ಲೆ ಅವರು ಪುರುಷರ 3000 ಮೀ ಸ್ಟೀಪಲ್‌ಚೇಸ್'ನಲ್ಲಿ ಭಾಗಿ, ಕೆ.ಟಿ. ಇರ್ಫಾನ್, ಸಂದೀಪ್ ಕುಮಾರ್, ರಾಹುಲ್ ರೋಹಿಲಾ ಅವರು 20 ಕಿ.ಮೀ ನಡಿಗೆಯಲ್ಲಿ ಸ್ಪರ್ಧಿಸಲಿದ್ದಾರೆ, ಭಾವಾ ಜಾಟ್, ಪ್ರಿಯಾಂಕಾ ಗೋಸ್ವಾಮಿ ಯವರು ಮಹಿಳೆಯರ 20 ಕಿ.ಮೀ ನಡಿಗೆಯಲ್ಲಿ ಭಾಗಿ, ಎಂ. ಶ್ರೀಶಂಕರ್ ಅವರು ಪುರುಷರ ಲಾಂಗ್ ಜಂಪ್'ನಲ್ಲಿ ಭಾಗವಹಿಸಲಿದ್ದಾರೆ, ತಜಿಂದರ್ ಪಾಲ್ ಸಿಂಗ್ ತೂರ್ ಅವರು ಪುರುಷರ ಶಾಟ್‌ಪಟ್ ವಿಭಾಗದಲ್ಲಿ ಭಾಗಿ, ಕಮಲ್‌ಪ್ರೀತ್ ಕೌರ್, ಸೀಮಾ ಪೂನಿಯಾ ರವರು ಮಹಿಳೆಯರ ವಿಭಾಗದ ಡಿಸ್ಕಸ್‌ಥ್ರೋ'ನಲ್ಲಿ ಭಾಗಿ, ದ್ಯುತಿ ಚಾಂದ್ ರವರು ಮಹಿಳೆಯರ 100 ಮೀ, 200 ಮೀ ಓಟದ ವಿಭಾಗದಲ್ಲಿ ಭಾಗಿ, ಎಂ.ಪಿ. ಜಬೀರ್ ರವರು ಪುರುಷರ 400 ಮೀ ಹರ್ಡಲ್ಸ್'ನಲ್ಲಿ ಭಾಗಿ, ಅನು ರಾಣಿಯವರು ಮಹಿಳಾ ವುಭಾಗದ ಜಾವೆಲಿನ್ ಥ್ರೋ'ನಲ್ಲಿ ಸ್ಪರ್ಧೆ, ಹಾಗೂ ಎಂ.ಪಿ. ಜಬೀರ್ ಅವರು 4X400 ಮೀ.ಪುರುಷರರಿಲೆಮತ್ತುರಿಲೆಮಿಶ್ರತಂಡದಲ್ಲಿಸ್ಪರ್ಧಿಸಲಿದ್ದಾರೆ.

## ಅಮೆಜಾನ್ ನದಿ ಕಲ್ಪನೆಯ ಅನುಭವ ರೈಲು ನಿಲ್ದಾಣದಲ್ಲಿ



* ಬೆಂಗಳೂರು ನಗರದ (ಮೆಜಿಸ್ಟಿಕ್) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಅಮೆಜಾನ್ ನದಿ ಕಲ್ಪನೆಯಡಿ 12 ಅಡಿ ಉದ್ದದ ಸುರಂಗವನ್ನು ನಿರ್ಮಿಸಲಾಗಿದೆ.

* ಈ ಅಮೆಜಾನ್ ನದಿ ಕಲ್ಪನೆಯಿಂದಾಗಿ ರೈಲು ನಿಲ್ದಾಣದಲ್ಲಿ ರೈಲುಗಳಿಗಾಗಿ ಕಾಯುತ್ತಿರು ಪ್ರಯಾಣಿಕರನ್ನುಸೆಳೆಯುವಉದ್ದೇಶದಿಂದ ನಿಲ್ದಾಣದಲ್ಲಿ ಸುರಂಗವನ್ನು ನಿರ್ಮಿಸಿದ್ದಾರೆ.

* ಈ ಸುರಂಗದಲ್ಲಿ ಅಕ್ವೇರಿಯಂ'ನ್ನು ಪ್ರಾರಂಭಿಸಿದ್ದಾರೆ, ಈ ಸುರಂಗ ಪ್ರವೇಶಕ್ಕೆ 25 ರೂ. ಶುಲ್ಕ ನಿಗದಿ ಪಡಿಸಿದ್ದಾರೆ, ಈ ಸುರಂಗದಲ್ಲಿ ಅಮೆಜಾನ್ ನದಿಗಳ ಮೀನುಗಳು ಮತ್ತು ಸಾಗರದಲ್ಲಿ ಕಂಡುಬರುವ ಮತ್ಸ್ಯಪ್ರಭೇದಗಳು, ಸಮುದ್ರಜೀವಿಗಳ ಮಾದರಿಯಲ್ಲಿ ಇರಲಿವೆ ಎಂದು ತಿಳಿಸಿದ್ದಾರೆ.

* 1.2 ಕೋಟಿ ರೂ. ವೆಚ್ಚದಲ್ಲಿ ಭಾರತೀಯ ರೈಲ್ವೆ ನಿಲ್ದಾಣ ಅಭಿವೃದ್ಧಿ ಪ್ರಾಧಿಕಾರವು ಈ ಸುರಂಗವನ್ನುನಿರ್ಮಿಸಿದೆ.

## ಮಾಜಿ ರಕ್ಷಣಾ ಕಾರ್ಯದರ್ಶಿ ಡೊನಾಲ್ಡ್ ರಮ್ಸ್‌ಫೆಲ್ಡ್ ವಿಧಿವಶ



* ಡೊನಾಲ್ಡ್ ರಮ್ಸ್‌ಫೆಲ್ಡ್ ಅವರು ವಿಧಿವಶರಾಗಿದ್ದಾರೆ, ಇವರು ಈ ಮೊದಲು ಇವರು 2 ಬಾರಿ ಅಮೆರಿಕದಮಾಜಿ ರಕ್ಷಣಾ ಕಾರ್ಯದರ್ಶಿಯಾಗಿದ್ದರು.

* ಡೊನಾಲ್ಡ್ ರಮ್ಸ್‌ಫೆಲ್ಡ್ ಅವರು ಶ್ವೇತಭವನದ ಮುಖ್ಯಸ್ಥರು ಕೂಡ ಆಗಿದ್ದರು, ಹಾಗೂ 2001 ರಿಂದ 2006 ರವರೆಗೆ ಅಧ್ಯಕ್ಷ ಜಾರ್ಜ್ ಬುಷ್ ಅವರ ಜೊತೆಗೆ ಕಾರ್ಯ ನಿರ್ವಹಿಸಿದ್ದರು, ಮತ್ತು 2003 ರಲ್ಲಿನ ಇರಾಕ್ ಆಕ್ರಮಣದ ಪ್ರಮುಖರಾಗಿದ್ದರು

.* ಡೊನಾಲ್ಡ್ ರಮ್ಸ್‌ಫೆಲ್ಡ್ ಅವರು 1975 ರಿಂದ 1977 ರವರೆಗೆ ಅಧ್ಯಕ್ಷರಾಗಿದ್ದ ಜೆರಾಲ್ಡ್ ಫೋರ್ಡ್ ಅವರ ಸಮ್ಮುಖದಲ್ಲಿ 2ಬಾರಿ ರಕ್ಷಣಾ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

## ಸಲಿಂಗಿಗಳ ವಿವಾಹಕ್ಕೆ ಮೆಥೋಡಿಸ್ಟ್ ಚರ್ಚ್‌ನಲ್ಲಿ ಅವಕಾಶ



* ಪ್ರಸ್ತುತ ಬ್ರಿಟನ್‌ನ ಮೆಥೋಡಿಸ್ಟ್ ಚರ್ಚ್ ಸಲಿಂಗಿ ಜೋಡಿಗಳಿಗೆ ಮದುವೆಯಾಗಲು ಅವಕಾಶ ನೀಡಲಾಗುತ್ತದೆ ಎಂದು ಘೋಷಣೆ ಮಾಡಿದೆ.

* ಸಲಿಂಗಿ ಜೋಡಿಗಳಿಗೆ ಮದುವೆಯಾಗಲು ಅವಕಾಶ ನೀಡುವ ಸಲುವಾಗಿ ಮೆಥೋಡಿಸ್ಟ್ ಚರ್ಚ್‌ನಲ್ಲಿ ಸಭೆಯನ್ನು ನಡೆಸಲಾಯಿತ್ತು, ಈ ಸಭೆಯಲ್ಲಿ 254 ಜನರು ಪರ ಹಾಗೂ ಇನ್ನು 46 ಜನ ವಿರೋಧವಾಗಿ ಮತಗಳನ್ನೂ ಚಲಾಯಿಸಿದರು.

* ಇದು ಬ್ರಿಟನ್,ನ 4 ನೇ ಅತಿ ದೊಡ್ಡ ಚರ್ಚ್ ಆಗಿದೆ, ಇದು ಒಟ್ಟು 164,000 ಸದಸ್ಯರನ್ನು ಹೊಂದಿದೆ.

## ಚೀನಾದ ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವದ ಸಂಭ್ರಮ



* ಚೀನಾ ದೇಶದ ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವದ ಸಂಭ್ರಮವನ್ನು ಆಚರಣೆ ಮಾಡಿದೆ, ಈ ಸಂದರ್ಭದಲ್ಲಿ ಚೀನಾ ಅಧ್ಯಕ್ಷ ಷಿ ಜಿಂಗ್‌ಪಿನ್ ಅವರು ಮಾತನಾಡಿದರು, ಚೀನಾ ದೇಶದ ಮೇಲೆ ದಬ್ಬಾಳಿಕೆ ನಡೆಸಲು ಯಾವುದೇ ವಿದೇಶಿ ಶಕ್ತಿಗಳಿಗೆ ಅವಕಾಶ ನೀಡಲಾಗುವದಿಲ್ಲ ಮತ್ತು ನಮ್ಮ ದೇಶದ ಸಾರ್ವಭೌಮತೆಯನ್ನು ನಮ್ಮ ಸೇನೆ ಕಾಪಾಡಲಿದೆ ಎಂದು ತಿಳಿಸಿದರು.

* ಚೀನಾದ ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವದ ಕಾರ್ಯಕ್ರಮವು ಯಾನನ್ಮೆನ್ ಸ್ಕ್ವೇರ್‌ನಲ್ಲಿ ನಡೆಯಿತ್ತು.

* ಪ್ರಸ್ತುತ ಚೀನಾ ದೇಶದಲ್ಲಿ 140 ಕೋಟಿಗಿಂತ ಹೆಚ್ಚಿನ ಜನಸಂಖ್ಯೆ ಇದೇ, ಒಂದುವೇಳೆ ಬೇರೆ ಯಾವುದೇ ದೇಶಗಳು ದಬ್ಬಾಳಿಕೆ ನಡೆಸಲು ಬಂದರೆ ಈ ಚೀನಾದ ಜನಗಳ ನಡುವೆ ಸಿಕ್ಕಿಕೊಂಡು ಆ ದೇಶಗಳ ಪರಿಸ್ಥಿತಿ ಅದೋಗತಿ ಯಾಗಲಿದೆ ಎಂದು ಅಧ್ಯಕ್ಷ ಷಿ ಜಿಂಗ್‌ಪಿನ್ ಅವರು ತಿಳಿಸಿದರು.

## ಗ್ರ್ಯಾಂಡ್ ಮಾಸ್ಟರ್ ಪಟ್ಟ ಪಡೆದ ಭಾರತ ಮೂಲದ ಅಭಿಮನ್ಯು ಮಿಶ್ರಾ



* ಬಾಲಕ ಅಭಿಮನ್ಯು ಮಿಶ್ರಾ ಅವರು ವಿಶ್ವ ಚೆಸ್ ಇತಿಹಾಸದಲ್ಲೇ ಗ್ರ್ಯಾಂಡ್ ಮಾಸ್ಟರ್ ಪಟ್ಟ ಪಡೆದ ಅತ್ಯಂತ ಕಿರಿಯ ಆಟಗಾರರಾಗಿದ್ದಾರೆ, ಇವರು ಭಾರತ ಮೂಲದ ಅಮೆರಿಕನ್ ಅತ್ಯಂತ ಕಿರಿಯ ಆಟಗಾರ ಇದೀಗ ಇವನಿಗೆ 12 ವರ್ಷ ವಯಸ್ಸು.

* ಅಭಿಮನ್ಯು ಮಿಶ್ರಾ ಎಂಬ ಬಾಲಕ ಸತತ 19 ವರ್ಷಗಳಿಂದ ರಷ್ಯಾದ ಸೆರ್ಗೆ ಕಾರ್ಜಕಿನ್ ಅವರ ಹೆಸರಿನಲ್ಲಿರುವ ದಾಖಲೆಯನ್ನು ಮೀರಿಸಿದ್ದಾರೆ.

* ರಷ್ಯಾದ ಸೆರ್ಗೆ ಅವರು 12 ವರ್ಷ ವಯಸ್ಸಿನಲ್ಲಿ ಅಂದರೆ 2002 ರಲ್ಲಿ ಗ್ರ್ಯಾಂಡ್ ಮಾಸ್ಟರ್ ಪಟ್ಟ ಪಡೆದುಕೊಂಡಿದ್ದರು.

* ಈ ಹಿಂದೆ ಅಭಿಮನ್ಯು ಮಿಶ್ರಾ 10 ವರ್ಷ 9 ತಿಂಗಳದವನಿದ್ದಾಗಲೇ ಅಂದರೆ 2019 ರ ನವೆಂಬರ್ 'ನಲ್ಲಿ ಅತಿಕಿರಿಯ ಇಂಟರ್ ನ್ಯಾಷನಲ್ ಮಾಸ್ಟರ್ ಬಿರುದು ಪಡೆದುಕೊಂಡಿದ್ದ.

## 2020 ಕುವೆಂಪು ರಾಷ್ಟ್ರೀಯ ಪುರಸ್ಕಾರ



* 2020 ರ ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರಶಸ್ತಿಯನ್ನು ಒಡಿಯಾ ಕವಿ ಡಾ.ರಾಜೇಂದ್ರ ಕಿಶೋರ್ ಪಾಂಡ ಅವರಿಗೆ ಲಭಿಸಿದೆ.

* ಈ ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರಶಸ್ತಿಯನ್ನು ಪ್ರೊ.ಹಂಪಾ ನಾಗರಾಜಯ್ಯ ಅವರ ನೇತೃತ್ವದ 3ಸದಸ್ಯರ ಸಮಿತಿಯಿಂದ ಡಾ.ಪಾಂಡ ಅವರ ಹೆಸರನ್ನು ಅಂತಿಮಗೊಳಿಸಲಾಯಿತು.

* ದಿವಂಗತ ರಾಷ್ಟ್ರ ಕವಿ ಕುವೆಂಪು ಅವರ ಸವಿ ನೆನಪಿಗಾಗಿ ಈ ಕುವೆಂಪು ರಾಷ್ಟ್ರೀಯ ಪುರಸ್ಕಾರವನ್ನು 2013 ರಲ್ಲಿ ರಾಷ್ಟ್ರಕವಿ ಕುವೆಂಪು ಟ್ರಸ್ಟ್ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ, ಈ ಪ್ರಶಸ್ತಿಯು 5 ಲಕ್ಷ ರೂ.ಗಳ ನಗದು ಹಾಗೂ ಬೆಳ್ಳಿ ಪದಕ ಮತ್ತು ಪ್ರಮಾಣ ಪತ್ರವನ್ನು ಒಳಗೊಂಡಿರುತ್ತದೆ.

* ಈ ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರಶಸ್ತಿಯನ್ನು ಮಲಯಾಳಂ, ಉರ್ದು, ಹಿಂದಿ, ಮರಾಠಿ, ಪಂಜಾಬಿ ಹಾಗೂ ಕನ್ನಡದ ಬರಹಗಾರರಿಗೆ ನೀಡಲಾಗಿದೆ.

* 1944 ರ ಜೂನ್. 24 ರಂದು ಡಾ ರಾಜೇಂದ್ರ ಕಿಶೋರ್ ಪಾಂಡ ಅವರು ಜನಿಸಿದರು, ಪ್ರಸ್ತುತ ಇವರು ಒಡಿಯಾ ಭಾಷೆಯಲ್ಲಿ ಬರಹಗಳನ್ನು ರಚಿಸುತ್ತಾರೆ, ಇವರು ಒಟ್ಟು 16 ಕವನ ಸಂಕಲನಗಳು ಹಾಗೂ ಒಂದು ಕಾದಂಬರಿಯನ್ನು ಪ್ರಕಟಣೆಮಾಡಿದ್ದಾರೆ.

## ರಾಷ್ಟ್ರೀಯ ವೈದ್ಯರ ದಿನ




* ಪ್ರತಿವರ್ಷ ಜುಲೈ. 1 ರಂದು ಭಾರತೀಯ ವೈದ್ಯಕೀಯ ಸಂಘವು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಣೆ ಮಾಡುತ್ತದೆ, ಪ್ರಸ್ತುತ ಜನನ ಹಾಗೂ ಮರಣ ವಾರ್ಷಿಕೋತ್ಸವವನ್ನು ಗೌರವಿಸಲು ಈ ದಿನ ಆಚರಣೆ ಮಾಡಲಾಗುತ್ತದೆ.

* ಪ್ರಸ್ತುತ ಡಾ. ಬಿಧಾನ್ ಚಂದ್ರ ರಾಯ್ ಅವರು ಮಹಾನ್ ವೈದ್ಯ ಹಾಗೂ ಪಶ್ಚಿಮ ಬಂಗಾಳದ 2ನೇ ಮುಖ್ಯಮಂತ್ರಿ ಇವರು 1882 ರ ಜುಲೈ. 1 ರಂದು ಜನಿಸಿದರು ಹಾಗೂ 1962 ರ ಜುಲೈ. 1 ರಂದುನಿಧನರಾದರು.

*ಭಾರತದಲ್ಲಿಮೊದಲವೈದ್ಯರದಿನಡಾ.ಬಿಧನ್‌ಚಂದ್ರರಾಯ್‌ಅವರಿಗೆಗೌರವ ನೀಡಲು 1991 ರಲ್ಲಿ ಭಾರತದಲ್ಲಿ ಮೊದಲ ಬಾರಿ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಣೆ ಮಾಡಲಾಗಿದೆ.

* ಪ್ರಸ್ತುತ ಭಾರತ ಸೇರಿ ವೈದ್ಯರ ದಿನವನ್ನು ಬೇರೆ ಬೇರೆ ದೇಶಗಳಲ್ಲಿ ಆಚರಣೆ ಮಾಡುತ್ತಾರೆ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ಮಾರ್ಚ್. 30ರಂದು ವೈದ್ಯರ ದಿನವನ್ನು ಆಚರಿಸುತ್ತಾರೆ, ಕ್ಯೂಬಾದಲ್ಲಿ ಡಿಸೆಂಬರ್. 3 ರಂದು ಆಚರಿಸುತ್ತಾರೆ, ಹಾಗೂ ಇರಾನ್'ನಲ್ಲಿ ಆಗಸ್ಟ್.23ರಂದು ಆಚರಿಸುತ್ತಾರೆ.

# 03-07-2021

## ಹೊಸ ಪ್ರಭೇದದ ಸಸ್ಯ ಪತ್ತೆ



* ಕರ್ನಾಟಕ ರಾಜ್ಯದ ತುಮಕೂರು ತಾಲ್ಲೂಕಿನ ದೇವರಾಯನದುರ್ಗ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಹೊಸ ಸಸ್ಯ ಪ್ರಭೇದ ಪತ್ತೆಯಾಗಿದೆ.

* ಈ ಹೊಸ ಪ್ರಭೇದದ ಸಸ್ಯವು ಒಣ ನೆಲದಲ್ಲಿ ಬೆಳೆಯುತ್ತದೆ ಹಾಗೂ ಇದಕ್ಕೆ ಜಿಲ್ಲೆಯ ಸ್ಮರಣಾರ್ಥ 'ಬ್ರಾಕಿಸ್ಟೆಲ್ಮಾ ತುಮಕೂರೆನ್ಸ್' ಎಂದು ನಾಮಕರಣ ಮಾಡಿದ್ದಾರೆ ಎಂದು ವನ್ಯಜೀವಿ ಜಾಗೃತಿ ನಿಸರ್ಗ ಸಂಸ್ಥೆ ಅಧ್ಯಕ್ಷ ಬಿ.ವಿ.ಗುಂಡಪ್ಪ ಮಾಹಿತಿಯನ್ನು ನೀಡಿದ್ದಾರೆ.

* ಈ ಹೊಸ ಪ್ರಭೇದದ ಸಸ್ಯವನ್ನು ದೇವರಾಯನದುರ್ಗ ಒಣ ಎಲೆ ಉದುರುವ ಕಾಡಿನ ಸಸ್ಯ ಅಧ್ಯಯನದ ಸಂದರ್ಭದಲ್ಲಿ ಪತ್ತೆ ಮಾಡಲಾಗಿದೆ, ಈ ಸಸ್ಯವು ಸುಮಾರು ಒಂದು ಮೀಟರ್ ಉದ್ದ ಹಾಗೂದುಂಡಾದಕಾಂಡವನ್ನುಹೊಂದಿರಲಿದೆಎಂದುತಿಳಿಸಿದ್ದಾರೆ.

## ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಉತ್ತರಾಖಂಡ್ ಮುಖ್ಯಮಂತ್ರಿ ತೀರಥ್‌ಸಿಂಗ್



* ಇತ್ತೀಚಿಗೆ ಉತ್ತರಾಖಂಡ್'ದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ತೀರಥ್ ಸಿಂಗ್ ರಾವತ್ ಅವರು ನಿನ್ನೆ ರಾತ್ರಿ ರಾಜಭವನದಲ್ಲಿ ಉತ್ತರಾಖಂಡ್'ನ ರಾಜ್ಯಪಾಲೆಯಾಗಿರುವ ಬೇಬಿ ರಾಣಿ ಮೌರ್ಯ ಅವರಿಗೆ ಭೇಟಿ ನೀಡಿ ರಾಜೀನಾಮೆಯನ್ನು ನೀಡಿದ್ದಾರೆ.

* ಉತ್ತರಾಖಂಡ್ ರಾಜ್ಯದ ಅತೀ ಕಡಿಮೆ ಅಧಿಕಾರ ನಡೆಸಿದ ಮುಖ್ಯಮಂತ್ರಿ ಇವರಾಗಿದ್ದಾರೆ, ತೀರಥ್ ಸಿಂಗ್ ಅವರು ಮುಖ್ಯಮಂತ್ರಿಯಾಗಿ 115 ದಿನಗಳ ಕಾಲ ಅಧಿಕಾರ ನಡೆಸಿದ್ದಾರೆ.

* ಉತ್ತರಾಖಂಡದ ಮುಖ್ಯಮಂತ್ರಿಯಾಗಿ ತೀರಥ್ ಸಿಂಗ್ ರಾವತ್ ಮಾರ್ಚ್. 10 ರಂದು ಅಧಿಕಾರ ವಹಿಸಿಕೊಂಡಿದ್ದರು.

## ಭಾರತದ ಧ್ವಜಧಾರಿ ಹೈಜಂಪ್ ಪಟು ಮಾರಿಯಪ್ಪನ್ ತಂಗವೇಲು



* ಈ ಬಾರಿಯ ಟೋಕಿಯೊ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಪಥ ಸಂಚಲನದಲ್ಲಿ ತ್ರಿವರ್ಣ ಧ್ವಜ ಹಿಡಿದು ಭಾರತ ತಂಡವನ್ನು ಪ್ಯಾರಾ ಹೈಜಂಪ್ ಪಟುಯಾಗಿರುವ

ಮಾರಿಯಪ್ಪನ್ ತಂಗವೇಲು ಅವರು ಮುನ್ನಡೆಸಲಿದ್ದಾರೆ.

* ಈ ಬಾರಿಯ ಟೋಕಿಯೊ ಪ್ಯಾರಾಲಿಂಪಿಕ್ಸ್ ಆಗಸ್ಟ್. 24 ರಿಂದ ಸೆಪ್ಟೆಂಬರ್. 5 ರವರೆಗೆ ನಡೆಯಲಿದೆ.

*ಪ್ಯಾರಾಹೈಜಂಪ್‌ಪಟು ಮಾರಿಯಪ್ಪನ್ ತಂಗವೇಲು ಅವರು 2016 ರಲ್ಲಿ ಬ್ರೆಜಿಲ್‌ನ ರಿಯೋ ಡಿ ಜನೈರೊದಲ್ಲಿ ನಡೆದ ಪ್ಯಾರಾಂಲಿಪಿಕ್ಸ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದರು.

* ಮಾರಿಯಪ್ಪನ್ ತಂಗವೇಲು ಅವರು ತಮಿಳುನಾಡು ರಾಜದವರಾಗಿದ್ದು, ಕಳೆದ ವರ್ಷ ಇವರಿಗೆ "ಖೇಲ್ ರತ್ನ" ಕ್ರೀಡಾ ಪ್ರಶಸ್ತಿ ನೀಡಿ ಗೌರವಒಂದನೆಗಳನ್ನುನೀಡಲಾಗಿತ್ತು.

## ಜರ್ಮನಿಯ ಟೋನಿ ಕ್ರೂಸ್ ಅಂತರ್ ರಾಷ್ಟ್ರೀಯ ಫುಟ್ಬಾಲ್'ಗೆನಿವೃತ್ತಿ



* ಪ್ರಸ್ತುತ ಯುರೋಪಿಯನ್ ಚಾಂಪಿಯನ್‌ಶಿಪ್'ನಿಂದ ಜರ್ಮನಿಯ ಮಿಡ್‌ಫೀಲ್ಡರ್ ಟೋನಿ ಕ್ರೂಸ್ ಅವರ ತಂಡವು ಹೊರ ನಡೆದ ನಂತರ ಅಂತರರಾಷ್ಟ್ರೀಯ ಫುಟ್ಬಾಲ್'ಗೆ ನಿವೃತ್ತಿ ಘೋಷಣೆ ಮಾಡಿದ್ದಾರೆ, ಈ ಮಾಹಿತಿಯನ್ನು ಕ್ರೂಸ್ ಅವರ ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಮ್‌ನಲ್ಲಿ ಪ್ರಕಟಿಸಿದ್ದಾರೆ.

* ಕ್ರೂಸ್ ಅವರು 2014 ರಲ್ಲಿ ವಿಶ್ವಕಪ್ ವಿಜೇತ ತಂಡದ ಸದಸ್ಯರಾಗಿದ್ದರು ಇವರುಒಟ್ಟಾರೆ ದೇಶಕ್ಕಾಗಿ 106 ಪಂದ್ಯಗಳನ್ನು ಆಡಿ, 17 ಗೋಲುಗಳನ್ನು ತಮ್ಮ ತಂಡಕ್ಕಾಗಿ ಗಳಿಸಿದ್ದಾರೆ.

## 2020 ನೇ ಸಾಲಿನ ಕನ್ನಡ ಪುಸ್ತಕ ಪ್ರಾಧಿಕಾರದ ವಾರ್ಷಿಕ ಪ್ರಶಸ್ತಿ




* 2020 ನೇ ಸಾಲಿನ ಕನ್ನಡ ಪುಸ್ತಕ ಪ್ರಾಧಿಕಾರದ ವಾರ್ಷಿಕ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ಮುಕ್ತಾಯವಾಗಿದೆ, ಇದರಲ್ಲಿ ಡಾ. ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿಗಾಗಿ ಹಿರಿಯಸಾಹಿತಿಯಾಗಿರುವ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರನ್ನು ಆಯ್ಕೆ ಮಾಡಿದ್ದಾರೆ.

* ಪ್ರಸ್ತುತ ಕನ್ನಡ ಪುಸ್ತಕ ಪ್ರಾಧಿಕಾರದಿಂದ ನೀಡುವ ಅತ್ಯುತ್ತಮ ಪ್ರಕಾಶನ ಪ್ರಶಸ್ತಿಯನ್ನು ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನಕ್ಕೆ ನೀಡಿದ್ದಾರೆ.

* ಮೈಸೂರಿನ ಸಯ್ಯದ್ ಇಸಾಕ್ ಅವರನ್ನು ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ, ಹಾಗೂ ಡಾ. ಅನುಪಮ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿಯನ್ನು ಡಾ. ಸುಧೀಂದ್ರ ಹಾಲ್ದೊಡ್ಡೇರಿ ಅವರನ್ನು ಆಯ್ಕೆ ಮಾಡಿ ಅವರಿಗೆ ನೀಡಿದ್ದಾರೆ.

* ಪ್ರಶಸ್ತಿಗಳ ವಿವರ: ಅತ್ಯುತ್ತಮ ಪ್ರಕಾಶನ ಪ್ರಶಸ್ತಿಯು 1 ಲಕ್ಷ ರೂ. ನಗದು ಮತ್ತು ಪ್ರಶಸ್ತಿಯನ್ನು ಒಳಗೊಂಡಿರಲಿದೆ. ಡಾ. ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ 75 ಸಾವಿರ ರೂ. ನಗದು ಹಾಗೂ ಪ್ರಶಸ್ತಿಯನ್ನು ಒಳಗೊಂಡಿರಲಿದೆ. ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ 50 ಸಾವಿರ ರೂ. ಮತ್ತು ಪ್ರಶಸ್ತಿಯನ್ನು ಒಳಗೊಂಡಿರಲಿದೆ. ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ ರೂ.25 ಸಾವಿರ ರೂ. ನಗದು ಮತ್ತು ಪ್ರಶಸ್ತಿಯನ್ನುಒಳಗೊಂಡಿರಲಿದೆ.

## ಒಲಿಂಪಿಕ್ಸ್'ಗೆ ಅರ್ಹತೆ ಪಡೆದ ಈಜುಗಾರ್ತಿ ಮಾನಾ ಪಟೇಲ್



* ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳಲು ಭಾರತೀಯ ಮಹಿಳಾ ಈಜುಗಾರ್ತಿ ಮಾನಾ ಪಟೇಲ್ ಅರ್ಹತೆಯನ್ನು ಪಡೆದುಕೊಂಡಿದ್ದಾರೆ ಎಂದು ಸ್ವಿಮ್ಮಿಂಗ್ ಫೆಡರೇಶನ್ ಆಫ್ ಇಂಡಿಯಾ ಮಾಹಿತಿ ಪ್ರಕಟಿಸಿದೆ.

* ಪ್ರಸ್ತುತ ಭಾರತೀಯ ಮಹಿಳಾ ಈಜುಗಾರ್ತಿ ಮಾನಾ ಪಟೇಲ್ ಅವರು ಟೋಕಿಯೋ ಒಲಿಂಪಿಕ್ಸ್'ನಲ್ಲಿ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಸ್ಪರ್ಧಿಸಲಿದ್ದಾರೆ, ಹಾಗೂ ಇವರು ಒಲಿಂಪಿಕ್ಸ್'ಗೆ ಅರ್ಹತೆ ಪಡೆದ ಭಾರತದ 3 ನೇ ಈಜುಗಾರ್ತಿಯಾಗಿದ್ದಾರೆ.

* ಇತ್ತೀಚೆಗೆ ನಟರಾಜ್ ಹಾಗೂ ಪ್ರಕಾಶ್ ಅವರು ಒಲಿಂಪಿಕ್ ಕ್ವಾಲಿಫಿಕೇಷನ್ ಟೈಮಿಂಗ್ 'ಎ' ಮಟ್ಟವನ್ನು ಸಾಧಿಸಿ ಒಲಿಂಪಿಕ್ಸ್'ಗೆ ಅರ್ಹತೆ ಪಡೆದುಕೊಂಡಿದ್ದಾರೆ.

* ದೇಶದಿಂದ ಒಬ್ಬ ಪುರುಷ ಹಾಗು ಒಬ್ಬ ಮಹಿಳಾ ಸ್ಪರ್ಧಿಯನ್ನು ಯುನಿವರ್ಸಲಿಟಿ ಕೋಟಾದ ಮೂಲಕ ಒಲಿಂಪಿಕ್ಸ್'ನಲ್ಲಿ ಸ್ಪರ್ಧಿಸಲು ಅವಕಾಶ ನೀಡುತ್ತದೆ.

## ಫ್ಲಿಪ್‌ಕಾರ್ಟ್‌ನ ಹೊಸ ಅಪ್ಲಿಕೇಶನ್ ಆನ್‌ಲೈನ್ ವ್ಯವಹಾರಕ್ಕಾಗಿ




* ಇದೀಗ ಫ್ಲಿಪ್‌ಕಾರ್ಟ್ ಸಂಸ್ಥೆಯು ಆನ್‌ಲೈನ್ ವ್ಯವಹಾರಕ್ಕಾಗಿ ಹೊಸ "ಶಾಪ್ಸಿ" ಆ್ಯಪ್'ನ್ನು ಬಿಡುಗಡೆಗೊಳಿಸಿದೆ.

* ಪ್ರಸ್ತುತ ಫ್ಲಿಪ್‌ಕಾರ್ಟ್'ಣ ಈ ಅಪ್ಲಿಕೇಶನ್ ಯಾವುದೇ ತರಹದ ಹೂಡಿಕೆಯಿಲ್ಲದೆ ಆನ್‌ಲೈನ್ ವ್ಯವಹಾರಗಳನ್ನು ಆರಂಭಿಸಲು ಜನಗಳಿಗೆ ಸಹಾಯ ಮಾಡುವ ಅಪ್ಲಿಕೇಶನ್ ಇದಾಗಿದೆ ಎಂದು ತಿಳಿಸಿದ್ದಾರೆ.

* ಈ ಅಪ್ಲಿಕೇಶನ್ ಫೋನ್ ನಂಬರ್ ಮೂಲಕ ನೋಂದಾಯಿಸಿಕೊಂಡು ಆನ್‌ಲೈನ್ ವ್ಯವಹಾರಗಳನ್ನೂ ಆರಂಭಿಸಬಹುದಾಗಿದೆ.

* ಪ್ರಸ್ತುತ ಫ್ಲಿಪ್ಕಾರ್ಟ್'ನ ಈ ಶಾಪ್ಸಿ ಅಪ್ಲಿಕೇಶನ್‌ನಿಂದ 2023 ರ ಸಮಯಕ್ಕೆ 25 ದಶಲಕ್ಷಕ್ಕೂ ಅಧಿಕ ಆನ್‌ಲೈನ್ ಉದ್ಯಮಿಗಳನ್ನು ಡಿಜಿಟಲ್ ವಾಣಿಜ್ಯದ ಭಾಗದಲ್ಲಿ ಸಕ್ರಿಯಗೊಳಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ.

* ಈ ಫ್ಲಿಪ್ಕಾರ್ಟ್ ಭಾರತೀಯ ಮೂಲದ ಇ ಕಾಮರ್ಸ್ ಕಂಪನಿಯಾಗಿದೆ, ಇದು ತನ್ನ ಪ್ರಧಾನ ಕಚೇರಿಯನ್ನು ಬೆಂಗಳೂರಿನಲ್ಲಿ ಹೊಂದಿದೆ, ಹಾಗೂ ಸಿಂಗಾಪುರದಲ್ಲಿ ಖಾಸಗಿ ಸೀಮಿತ ಕಂಪನಿಯಾಗಿ ಆಯೋಜಿಸಲಾಗಿದೆ.

## ಬೆಳೆ ವಿಮೆ ಜಾಗೃತಿ ಅಭಿಯಾನವನ್ನು ಕೃಷಿ ಸಚಿವಾಲಯ ಪ್ರಾರಂಭಿಸಿದೆ



* ಫಸಲ್ ಭೀಮಾ ಯೋಜನೆಗಾಗಿ ಬೆಳೆ ವಿಮೆ ಜಾಗೃತಿ ಅಭಿಯಾನವನ್ನು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಾಗಿರುವ ನರೇಂದ್ರ ಸಿಂಗ್ ತೋಮರ್ ಅವರು ಆರಂಭಿಸಿದ್ದಾರೆ.

* ಈ ಫಸಲ್ ಬೀಮಾ ಯೋಜನೆಯನ್ನು ದೇಶದ ಎಲ್ಲ ಪ್ರತಿ ರೈತರಿಗೆ ಭದ್ರತಾ ನೀಡುವ ಉದ್ದೇಶದಿಂದ ಆರಂಭಿಸಲಾಗಿದೆಎಂದು ತಿಳಿಸಿದ್ದಾರೆ.

* ರೈತರು 17 ಸಾವಿರ ಕೋಟಿ ರೂ. ಪ್ರೀಮಿಯಂ'ನ್ನು ಈ ಹಿಂದೆ ಕಳೆದ 4 ವರ್ಷಗಳಲ್ಲಿ ಠೇವಣಿ ಇಟ್ಟಿದ್ದಾರೆ, ಹಾಗೂ ಸುಮಾರು 95 ಸಾವಿರ ಕೋಟಿ ರೂ. ಹಕ್ಕುಗಳಾಗಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

* 2016 ರ ಫೆಬ್ರುವರಿ. 18 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನ್ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಆರಂಭಿಸಿದರು, ಹಾಗೂ ಈ ಯೋಜನೆಯ ಒನ್ ನೇಷನ್ ಒನ್ ಸ್ಕೀಮ್ ಥೀಮ್‌ಗೆಅನುಗುಣವಾಗಿರಚಿಸಲಾಗಿದೆ.

## ಅತ್ಯಂತ ನವೀನ ಹೂಡಿಕೆ ಪ್ರಚಾರ ಸಂಸ್ಥೆ 2021 ರ ಪ್ರಶಸ್ತಿಯನ್ನು ಇನ್ವೆಸ್ಟ್ ಇಂಡಿಯಾ ಪಡೆದಿದೆ

* ವಿಶ್ವದ ಅತ್ಯಂತ ನವೀನ ಪ್ರಚಾರ ಸಂಸ್ಥೆಯು 2021 ರ ಪ್ರಶಸ್ತಿಯನ್ನು ಇನ್ವೆಸ್ಟ್ ಇಂಡಿಯಾ ಪಡೆದಿದೆ, ಹಾಗೂ ಈ ಪ್ರಶಸ್ತಿಯನ್ನು ಒಕೊ ಗ್ಲೋಬಲ್ ನೀಡಿದೆ.

* ಇನ್ವೆಸ್ಟ್ ಇಂಡಿಯಾ ಎಂಬುವದು ಭಾರತದ ರಾಷ್ಟ್ರೀಯ ಹೂಡಿಕೆ ಉತ್ತೇಜನ ಹಾಗೂ ಸೌಲಭ್ಯದಸಂಸ್ಥೆಯಾಗಿದೆ.

*2009ರಲ್ಲಿ ಕೈಗಾರಿಕೆ ಮತ್ತು ಆಂತರಿಕ ಪ್ರಚಾರಕ್ಕಾಗಿ ಇಲಾಖೆಯ ಲಾಭರಹಿತ ಉದ್ಯಮವಾಗಿ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಇದನ್ನು ಸ್ಥಾಪನೆ ಮಾಡಲಾಗಿದೆ, ಹಾಗೂ ಇದು ಭಾರತದಾದ್ಯಂತ ಸುಸ್ಥಿರ ಹೂಡಿಕೆಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಲಿದೆ ಎಂದು ತಿಳಿಸಲಾಗಿದೆ.

* ಪ್ರಸ್ತುತ ಇನ್ವೆಸ್ಟ್ ಇಂಡಿಯಾ ಎಂಬುವದು ಹೂಡಿಕೆ ಪ್ರಚಾರ ಏಜೆನ್ಸಿಗಳು ಹಾಗೂ ಬಹುಪಕ್ಷೀಯ ಸಂಸ್ಥೆಗಳೊಂದಿಗೆ ಪಾಲುದಾರಿಕೆಯನ್ನು ಹೊಂದಿದೆ, ಹಾಗೂ ವಲಯ ನಿರ್ದಿಷ್ಟ ಹೂಡಿಕೆದಾರರ ಗುರಿ ಮತ್ತು ಸುಸ್ಥಿರ ಹೂಡಿಕೆಗಾಗಿ ಅಭಿವೃದ್ಧಿಗಳ ಮೇಲೆ ಹೆಚ್ಚು ಕೇಂದ್ರೀಕರಿಸಲಿದೆ ಎಂದು ತಿಳಿದು ಬಂದಿದೆ.

## ಇಸ್ರೋ ಸ್ಯಾಟಲೈಟ್ ಟಿವಿ ತರಗತಿ ಕೊಠಡಿಗಳನ್ನು ಕಾರ್ಯಗತಗೊಳಿಸಲುಅನುಮತಿ

* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಉಂಟಾದ ಲಾಕ್‌ಡೌನ್‌ನಿಂದ ಕಲಿಕೆಯ ಅಂತರವನ್ನು ನಿವಾರಿಸುವಸಲುವಾಗಿ ಭಾರತದಾದ್ಯಂತಉಪಗ್ರಹಟಿವಿ ತರಗತಿ ಕೋಣೆಗಳಿಗೆತಾಂತ್ರಿಕ ನೆರವು ನೀಡುವ ಸಲುವಾಗಿ ಇಸ್ರೋ ಶಿಕ್ಷಣದ ಸಂಸದೀಯ ಸ್ಥಾಯಿ ಸಮಿತಿಗೆ ಅನುಮೋದನೆ ನೀಡಿದೆ.

* ಇಸ್ರೊ ವಿಜ್ಞಾನಿಗಳು ಶಿಕ್ಷಣಕ್ಕಾಗಿ ಸಂಸದೀಯ ಸ್ಥಾಯಿ ಸಮಿತಿಯ 2021 ರ ಜುಲೈ. 2 ರಂದು ವಿದ್ಯಾರ್ಥಿಗಳಿಗೆ ಉಪಗ್ರಹ ಟಿವಿ ತರಗತಿಯ ವಿಷಯದ ಬಗ್ಗೆ ವಿವರವಾದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಹಾಗೂ ದೂರದರ್ಶನದ ಮುಂದೆ ಈ ಮಾಹಿತಿಯನ್ನು ತಿಳಿಸಿದ್ದಾರೆ.

* ಇಸ್ರೋ ಇದೀಗ ಉಪಗ್ರಹ ಟಿವಿ ತರಗತಿ ಕೊಠಡಿಗಳನ್ನು ಆರಂಭಿಸಲು ರಾಜ್ಯಗಳಿಗೆ ಉಪಗ್ರಹ ಹಕ್ಕುಗಳನ್ನು ನೀಡಲು ಸಿದ್ಧವಾಗಿದೆ ಎಂದು ಇಸ್ರೋ ವಿಜ್ಞಾನಿಗಳು ತಿಳಿಸಿದ್ದಾರೆ, ಹಾಗೂ ಇದನ್ನು ಶಾಲಾ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಸಾರ ಮಾಡಲು ಬಳಕೆ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ದೂರದರ್ಶನ ನಿರ್ವಹಿಸುವ ಉಪಗ್ರಹ ಟೆಲಿವಿಷನ್ ಸೇವೆಗಳಲ್ಲಿ ರಾಷ್ಟ್ರೀಯ ನೆಟ್‌ವರ್ಕಿಂಗ್ ಸೇವೆ, ಡಿಡಿ ನ್ಯೂಸ್, ಡಿಡಿ ಉರ್ದು, ಡಿಡಿ ಸ್ಪೋರ್ಟ್ಸ್, ಡಿಡಿ ಇಂಡಿಯಾ, ಡಿಡಿ ಭಾರತಿ ಮತ್ತು ಡಿಡಿ ಎಚ್‌ಡಿಈಎಲ್ಲ ಸೇವೆಗಳನ್ನು ಒಳಗೊಂಡಿವೆ.

# 05-07-2021

## ಪುಷ್ಕರ್ ಸಿಂಗ್ ಧಮಿ 11ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ



* ಪ್ರಸ್ತುತ ಉತ್ತರಾಖಂಡ ರಾಜ್ಯದ 11 ನೇ ಮುಖ್ಯಮಂತ್ರಿಯಾಗಿ ಪುಷ್ಕರ್ ಸಿಂಗ್ ಧಮಿ ಅವರು ಪ್ರಮಾಣ ವಚನವನ್ನು ಸ್ವೀಕರಿಸಿದರು, ಇತ್ತೀಚಿಗೆ ಇವರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ತದನಂತರ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ್ದಾರೆ.

* ಪುಷ್ಕರ್ ಸಿಂಗ್ ಧಮಿ ಅವರು ಉತ್ತರಾಖಂಡ ರಾಜ್ಯದ ಕಿರಿಯ ವಯಸ್ಸಿನ ಮುಖ್ಯಮಂತ್ರಿಯಾಗಿದ್ದಾರೆ, ಹಾಗೂ ಇವರು ಉತ್ತರಾಖಂಡ ರಾಜ್ಯದ ಕಾಟಿಮಾ ಎಂಬ ಮತ ಕ್ಷೇತ್ರದಿಂದ 2 ಬಾರಿ ಶಾಸಕರಾಗಿದ್ದರು ಆದರೆ ಸಚಿವ ಸ್ಥಾನ ಲಭಿಸಿರಲಿಲ್ಲ, ಇದೀಗ ಇವರೇ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ.

* 2002 ಮತ್ತು 2008 ರಲ್ಲಿ ಪುಷ್ಕರ್ ಸಿಂಗ್ ಧಮಿ ಅವರು ಉತ್ತರಾಖಂಡ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

## ಅಮೆಜಾನ್ ಸಿಇಒ ಹುದ್ದೆಯಿಂದ ಜೆಫ್ ಬೆಜೋಸ್ ನಿರ್ಗಮನ



* ಪ್ರಸ್ತುತ ಅಮೆಜಾನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಹುದ್ದೆಯಿಂದ ಜೆಫ್ ಬೆಜೋಸ್ ಅವರ ನಿರ್ಗಮನ, ಹಾಗೂ ಇದೊಂದು ಪ್ರಸಿದ್ಧ ಇ ಕಾಮರ್ಸ್ ತಾಣವಾಗಿದೆ.

* ಪ್ರಸ್ತುತ ಇದೇ ಜುಲೈ 5ರಂದು ಅಮೆಜಾನ್ CEO ಸ್ಥಾನವನ್ನು ಜೆಫ್ ಬೆಜೋಸ್ ಅವರು ಆಂಡಿ ಜಾಸಿ ಅವರಿಗೆ ಹಸ್ತಾಂತರಿಸಲಿದ್ದಾರೆ, ತದನಂತರ ಜೆಫ್ ಬೆಜೋಸ್ ಅವರು ಬಾಹ್ಯಾಕಾಶ ಯಾನ ಮತ್ತು ಇನ್ನಿತರ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿದು ಬಂದಿದೆ.

* ಈ ಅಮೆಜಾನ್ ಸಮಸ್ಥೆಯು ಈ ಹಿಂದೆ ಅಂದರೆ ಸುಮಾರು 27 ವರ್ಷದ ಹಿಂದೆ ಚಿಕ್ಕ ಪುಸ್ತಕ ಮಾರಾಟದ ಆನ್‌ಲೈನ್ ತಾಣವಾಗಿತ್ತು ಇದನ್ನು ಜೆಫ್ ಬೆಜೋಸ್ ಪ್ರಾರಂಭಿಸಿದ್ದರು, ಇದೀಗ ಅಮೆಜಾನ್'ನ ಈ ಸಂಸ್ಥೆಯ ಜಗತ್ತಿನ ಅತ್ಯಂತ ಪ್ರಮುಖ ಹಾಗೂ ಅತಿ ದೊಡ್ಡ ಇ ಕಾಮರ್ಸ್‌ಜಾಲತಾಣವಾಗಿದೆ.

## 50 ವರ್ಷಗಳಲ್ಲಿ ಬಿಸಿಗಾಳಿಯಿಂದ 17 ಸಾವಿರ ಜನರು ಸಾವು



* ಇತ್ತೀಚಿಗೆ ದೇಶದ ಹವಾಮಾನ ತಜ್ಞರ ಸಂಶೋಧನಾ ಪತ್ರಿಕೆಯುಲ್ಲಿ ಪ್ರಕಟಿಸಿರುವ ಮಾಹಿತಿಯ ಪ್ರಕಾರ ದೇಶದಲ್ಲಿ ಈ ಹಿಂದೆ ಕಳೆದಿರುವ 50 ವರ್ಷಗಳಲ್ಲಿ 17 ಸಾವಿರಕ್ಕೂ ಅಧಿಕ ಜನರು ಬಿಸಿಗಾಳಿಯಿಂದಮೃತಪಟ್ಟಿದ್ದಾರೆ.

* 1971 2019 ರವರೆಗೂ ದೇಶದಲ್ಲಿನ ಬಿಸಿಗಾಳಿಯ ಅಧ್ಯಯನ.

* ಬಿಸಿಗಾಳಿಯಿಂದ ಮೃತಪಟ್ಟವರ ಮಾಹಿತಿಯು, ಪ್ರಸ್ತುತ ಭೂ ವಿಜ್ಞಾನ ಸಚಿವಾಲಯದ ಕಾರ್ಯದರ್ಶಿಯಾಗಿರುವ ಎಂ ರಾಜೀವನ್ ಹಾಗೂ ವಿಜ್ಞಾನಿಗಳಾದ ಕಮಲ್ಜಿತ್ ರೇ, ಎಸ್ ಎಸ್ ರೇ, ಆರ್ ಕೆ ಗಿರಿ ಮತ್ತು ಎಪಿ ದಿಮ್ರಿ ಈ ವರ್ಷದ ಪ್ರಾರಂಭದಲ್ಲಿ ಪ್ರಕಟಿಸಿರುವ ಸಂಶೋಧನಾ ಪತ್ರಿಕೆಯಲ್ಲಿ ಈ ಮಾಹಿತಿ ಲಭ್ಯವಾಗಿದೆ.

* ಕಳೆದ 50 ವರ್ಷಗಳಲ್ಲಿ ಹವಾಮಾನ ಕಾರಣಗಳಿಂದ 1,41,308 ಜನರು ಮೃತಪಟ್ಟಿದ್ದಾರೆ, ಇದರಲ್ಲಿ ಸುಮಾರು 17,362 ಜನರು ಬಿಸಿಗಾಳಿಯಿಂದ ಮೃತಪಟ್ಟಿದ್ದಾರೆ ಎಂದು ಅಧ್ಯಯನದಲ್ಲಿ ತಿಳಿದು ಬಂದಿದೆ.

* ಬಿಸಿಗಾಳಿಯಿಂದ ಸಾವಿನ ಪ್ರಕರಣಗಳು ವರದಿಯಾದ ರಾಜ್ಯಗಳು: ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಒಡಿಶಾ.

* ಪ್ರಸ್ತುತ ಅತ್ಯಂತ ಹೆಚ್ಚಿನ ಬಿಸಿಗಾಳಿಯ ವಲಯಗಳು: ಪಂಜಾಬ್, ಹಿಮಾಚಲ ಪ್ರದೇಶ, ಉತ್ತರಾಖಂಡ, ದೆಹಲಿ, ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ, ಗುಜರಾತ್, ಮಧ್ಯ ಪ್ರದೇಶ, ಮಹಾರಾಷ್ಟ್ರ, ಛತ್ತೀಸ್ ಗಢ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರಪ್ರದೇಶಮತ್ತುತೆಲಂಗಾಣರಾಜ್ಯಪ್ರದೇಶಗಳು.

## ತಾಲಿಬಾನ್ ಉಗ್ರಪಡೆಗಳಿಂದ ಅಫ್ಘಾನಿಸ್ತಾನದ ಕೆಲವು ಜಿಲ್ಲೆಗಳು ವಶ



* ಪ್ರಸ್ತುತ ತಾಲಿಬಾನ್ ಉಗ್ರಪಡೆಗಳು ಅಫ್ಘಾನಿಸ್ತಾನದ ಕೆಲವು ಜಿಲ್ಲೆಗಳನ್ನು ವಶಪಡಿಸಿಕೊಂಡಿವೆ, ಇತ್ತೀಚಿಗೆ ಅಮೇರಿಕ 2 ದಶಕಗಳ ಬಳಿಕ ಆಫ್ಘಾನಿಸ್ತಾನದ ಬಗ್ರಾಮ್ ವಾಯುನೆಲೆಯನ್ನು ತೊರೆದ ಹಿನ್ನಲೆಯಿಂದಾಗಿ ಈ ಘಟನೆ ನಡೆದಿದೆ ಎನ್ನಲಾಗಿದೆ.

* ಅಫ್ಘಾನಿಸ್ತಾನದ ಅಧಿಕಾರಿಗಳು ಮಾಹಿತಿ ನೀಡಿರುವ ಪ್ರಕಾರ, ತಾಲಿಬಾನ್ ಉಗ್ರಪಡೆಗಳ ಬೆದರಿಕೆಗೆ ಅಫ್ಘಾನಿಸ್ತಾನದ ಮಿಲಿಟರಿ ಪಡೆಯು ಆ ಪ್ರದೇಶದಿಂದ ಸ್ಥಳಾಂತರಗೊಂಡಿದೆ ಹಾಗೂ ನೂರಾರು ಜನಗಳು ತಜಕಿಸ್ತಾನದ ಗಡಿ ಪ್ರದೇಶಕ್ಕೆ ಪ್ರಯಾಣವನ್ನು ಬೆಳಸಿದ್ದಾರೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ತಜಕಿಸ್ತಾನದ ಅಧಿಕಾರಿಗಳು ಅಫ್ಘಾನಿಸ್ತಾನದ ರಾಷ್ಟ್ರೀಯ ರಕ್ಷಣಾ ಮತ್ತು ಭದ್ರತಾ ಪಡೆಗಳಿಗೆ "ಮಾನವತಾವಾದ ಹಾಗೂ ಉತ್ತಮ ನೆರೆಹೊರೆಯ ತತ್ವಗಳ" ಕಾರಣದಿಂದಾಗಿ ತಜಕಿಸ್ತಾನಕ್ಕೆ ಪ್ರವೇಶಿಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ.

* ತಾಲಿಬಾನ್ ಉಗ್ರಪಡೆಗಳು ಅಫ್ಘಾನಿಸ್ತಾನದ 421 ಜಿಲ್ಲೆಗಳು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ 3 ನೇ ಒಂದು ಭಾಗವನ್ನುವಶಪಡಿಸಿಕೊಂಡಿದೆಎಂದುತಿಳಿದುಬಂದಿದೆ.

## ಫಿಲಿಪ್ಪಿನ್ಸ್'ನ ಸೇನಾ ವಿಮಾನ ದುರಂತ



* ಫಿಲಿಪ್ಪಿನ್ಸ್ ವಾಯುಪಡೆಯ ಸಿ 130 ವಿಮಾನವು ಅಪಘಾತಕ್ಕೀಡಾಗಿದೆ, ಫಿಲಿಪ್ಪಿನ್ಸ್ ರಾಷ್ಟ್ರವು ಮುಸ್ಲಿಂ ಉಗ್ರರ ವಿರುದ್ಧ ಹೋರಾಡಲು ನಿಯೋಜಿಸಿರುವ ಯೋಧರನ್ನು ಹೊತ್ತ ವಿಮಾನ ಇದಾಗಿತ್ತು ಎಂದು ತಿಳಿಸಿದ್ದಾರೆ, ಒಟ್ಟಾರೆ ಈ ದುರಂತದಲ್ಲಿ 45 ಜನರು ಅಂದರೆ 42 ಸೈನಿಕರು ಹಾಗೂ 3 ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ಫಿಲಿಪೀನ್ಸ್‌ನ ಸೇನಾ ಮುಖ್ಯಸ್ಥರು ಮಾಹಿತಿ ನೀಡಿದ್ದಾರೆ.

* ಈ ವಿಮಾನಅಪಘಾತವುಫಿಲಿಪ್ಪಿನ್ಸ್'ನಸುಲುಪ್ರಾಂತ್ಯದಪಾಟಿಕುಲ್ಎಂಬನಗರದಲ್ಲಿಸಂಭವಿಸಿದೆ.

## ಅಮೆರಿಕದ 245 ನೇ ಸ್ವಾತಂತ್ರ್ಯ ದಿನಾಚರಣೆಗೆ ಭಾರತೀಯ ಪ್ರಧಾನಿಯಿಂದಶುಭಾಶಯ




* ಪ್ರಸ್ತುತ ಅಮೆರಿಕ ರಾಷ್ಟ್ರವು 245 ನೇ ಸ್ವಾತಂತ್ರ್ಯ ದಿನ ಆಚರಿಸುತ್ತಿರುವ ಹಿನ್ನಲೆಯಿಂದ ಭಾರತೀಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಜೀ ಅವರು ಅಮೇರಿಕದ ಅಧ್ಯಕ್ಷ ಜೋ ಬೈಡನ್ ಹಾಗೂ ಜನತೆಗೆ ಶುಭಾಶಯವನ್ನು ತಿಳಿಸಿದ್ದಾರೆ.

* ಪ್ರಧಾನಮಂತ್ರಿ ನರೇದ್ರ ಮೋದಿ ಅವರು ಈ ಶುಭಾಶಯವನ್ನು ಟ್ವೀಟ್'ನ ಮೂಲಕ ಅಮೇರಿಕದ

ಅಧ್ಯಕ್ಷ ಜೋ ಬೈಡನ್ ಹಾಗೂ ಅಲ್ಲಿನ ಜನತೆಗೆ ತಿಳಿಸಿದ್ದಾರೆ.

* ಜುಲೈ. 4 ರಂದು ಅಮೆರಿಕಾ ಸಂಯುಕ್ತ ಸಂಸ್ಥಾನದ ರಾಜ್ಯಗಳ ಒಕ್ಕೂಟವು ಸ್ವಾತಂತ್ರ್ಯ ದಿನ ಘೋಷಣೆ ಮಾಡಿದೆ, ಈ 1776 ರ ಜುಲೈ. 4 ರಂದು ಅಮೆರಿಕಾ ಸಂಯುಕ್ತ ರಾಜ್ಯಗಳ ಒಕ್ಕೂಟಅಸ್ತಿತ್ವಕ್ಕೆಬಂದದಿನವಾಗಿದೆ.

## ಗುಜರಾತ್'ನ ಪಂಚಮುಲಿ ಸರೋವರದಿಂದ 194 ಮೊಸಳೆಗಳನ್ನುಸ್ಥಳಾಂತರ



* ಪ್ರಸ್ತುತ ಗುಜರಾತ್‌ನ ನರ್ಮದಾ ಜಿಲ್ಲೆಯ ಪ್ರತಿಮೆ ಆಫ್ ಯೂನಿಟಿ ಬಳಿಯಲ್ಲಿನ ಪಂಚಮುಲಿ ಸರೋವರದಿಂದ194ಮೊಸಳೆಗಳನ್ನುಸ್ಥಳಾಂತರಮಾಡಲಾಗಿದೆ.

* ಪ್ರಸ್ತುತ ಕೆವಾಡಿಯಾದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ 182 ಮೀ. ಎತ್ತರದ ಪ್ರತಿಮೆಯ ಬಳಿಯಲ್ಲಿನ ಪಂಚಮುಲಿ ಸರೋವರದಲ್ಲಿ ದೋಣಿ ವಿಹಾರ ಮಾಡುವ ಪ್ರವಾಸಿ ಪ್ರೇಕ್ಷಕರ ಸುರಕ್ಷತೆ ಸಲುವಾಗಿ ಮೊಸಳೆಗಳನ್ನು ಸ್ಥಳಾಂತರ ಮಾಡಲಾಗಿದೆ ಎಂದು ತಿಳಿಸಿದ್ದಾರೆ.


* ಈ ಸರೋವರದಿಂದ 2019 20 ರ ಮಧ್ಯೆ ಸುಮಾರು 143 ಮೊಸಳೆಗಳು ಹಾಗೂ 2020 21 ರಲ್ಲಿ 51 ಮೊಸಳೆಗಳನ್ನು ಸ್ಥಳಾಂತರಿಸಿದ್ದಾರೆ.

* ಈ ಪಂಚಮುಲಿ ಸರೋವರವನ್ನು ಸರ್ದಾರ್ ಸರೋವರ್ ಅಣೆಕಟ್ಟಿನ "ಡೈಕ್ 3" ಎನ್ನುತ್ತಾರೆ, ಇಲ್ಲಿನ ಪ್ರತಿಮೆಯ ಏಕತೆಗೆ ಭೇಟಿ ನೀಡುವ ಪ್ರವಾಸಿ ಜನರಿಗಾಗಿ ಅಭಿವೃದ್ಧಿಪಡಿಸಲಾಗಿದೆ.

* ಭಾರತೀಯ ಮೊದಲ ಉಪ ಪ್ರಧಾನಿ ಹಾಗೂ ಸ್ವತಂತ್ರ ಭಾರತದ ಗೃಹ ಸಚಿವ ಸರ್ದಾರ್ ವಲ್ಲಭಭಾಯ್ ಭಾಯ್ ಪಟೇಲ್'ರ ಬೃಹತ್ ಪ್ರತಿಮೆ ಇದಾಗಿದೆ, ಹಾಗೂ ಇದು ಗುಜರಾತ್ ರಾಜ್ಯದಲ್ಲಿದೆ.

* ಸರ್ದಾರ್ ವಲ್ಲಭಭಾಯ್ ಭಾಯ್ ಪಟೇಲ್ ಅವರ 182 ಮೀ. ಎತ್ತರದ ಈ ಪ್ರತಿಮೆಯು ವಿಶ್ವದ ಅತಿ ಎತ್ತರದ ಪ್ರತಿಮೆಯಾಗಿದೆ, ಈ ಪ್ರತಿಮೆಯನ್ನು ಪಟೇಲ್'ರವರ 143 ನೇ ಜನ್ಮ ದಿನಾಚರಣೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು 2018 ರ ಅಕ್ಟೋಬರ್.31ರಂದುಉದ್ಘಾಟಿಸಿದ್ದಾರೆ.

## ಕ್ಯೂಬಾದ ಸಮೀಪದಲ್ಲಿ ಉಷ್ಣವಲಯದ ಚಂಡಮಾರುತ ಎಲ್ಸಾ(Elsa)



*2021ರಜುಲೈ.3ರಂದುದಕ್ಷಿಣ ಮಧ್ಯಕ್ಯೂಬಾಗೆಉಷ್ಣವಲಯದಬಿರುಗಾಳಿಯಾಗಿರುವ ಎಲ್ಸಾತಲುಪಿದೆ ಎಂದು ತಿಳಿದು ಬಂದಿದೆ.

* ಈ ಉಷ್ಣವಲಯದ ಬಿರುಗಾಳಿ ಎಲ್ಸಾ ಕ್ಯೂಬಾದ ಮೇಲೆ ಹಾದು ಹೋಗುವಕ್ಕಿಂತ ಮೊದಲು ಹೆಚ್ಚು ಬಲಶಾಲಿಯಾಗಲಿದೆ ಎಂದು ಯು.ಎಸ್. ನ್ಯಾಷನಲ್ ಹರಿಕೇನ್ ಸೆಂಟರ್ ಮಾಹಿತಿ ನೀಡಿದೆ, ಪ್ರಸ್ತುತ ಈ ಬಿಸಿಗಾಳಿಯ ಗರಿಷ್ಠ ಬೀಸುವ ವೇಗವು ಗಂಟೆಗೆ 100 ಕಿ.ಮೀ. ಇರಲಿದೆ ಎಂದು ತಿಳಿಸಿದ್ದಾರೆ.

* ಎಲ್ಸಾ ಎಂಬುವದು ಉಷ್ಣವಲಯದ ಚಂಡಮಾರುತವಾಗಿದೆ, ಹಾಗೂ ಇದು ಕೆರಿಬಿಯನ್ ಹಾಗೂ ಆಗ್ನೇಯ ಯುನೈಟೆಡ್ ಸ್ಟೇಟ್ಸ್ನ ಭಾಗಗಳ ಮೇಲೆ ಅತೀ ಹೆಚ್ಚು ಪರಿಣಾಮ ಬೀರಲಿದೆ ಎಂದಿದ್ದಾರೆ, ಇದು 2021 ರ 5 ನೇ ಹೆಸರಿನ ಚಂಡಮಾರುತ ಹಾಗೂ ಮೊದಲ ಚಂಡಮಾರುತ ಇದಾಗಿದೆ.

* ರಾಷ್ಟ್ರೀಯ ಚಂಡಮಾರುತ ಕೇಂದ್ರವು ಜೂನ್. 29 ರಂದು ಎಲ್ಸಾವನ್ನು ಉಷ್ಣವಲಯದ ಅಲೆಯಾಗಿದೆ ಎಂದು ಪ್ರಥಮ ಬಾರಿ ಮೇಲ್ವಿಚಾರಣೆಯನ್ನು ಮಾಡಿತ್ತು, ಈ ಹಿಂದೆ 2005 ರಲ್ಲಿನ ಎಮಿಲಿ ಚಂಡಮಾರುತದ ತದನಂತರ ಪೂರ್ವ ಕೆರಿಬಿಯನ್ ಸಮುದ್ರದಲ್ಲಿ ಪ್ರಬಲ ಚಂಡಮಾರುತ ಇದಾಗಿದೆ ಹಾಗೂ ಇದು ಅಟ್ಲಾಂಟಿಕ್ ಉಷ್ಣವಲಯದ ವೇಗವಾಗಿ ಚಲಿಸುವ ಚಂಡಮಾರುತ ಇದಾಗಿದೆ ಎಂದು ತಿಳಿಸಿದ್ದಾರೆ, ಹಾಗೂ ಈ ಚಂಡಮಾರುತವು ವಾಯುವ್ಯ ಪೆಸಿಫಿಕ್ ಮಹಾಸಾಗರದಲ್ಲಿ ಸಂಭವಿಸಲಿದೆಎಂದುತಿಳಿಸಿದ್ದಾರೆ.

## ಫೋನ್ ಪೇ ಫ್ಲಿಪ್‌ಕಾರ್ಟ್ ಜೊತೆಯಾಗಿ 'ಸ್ಕ್ಯಾನ್ ಮತ್ತು ಪೇ' ವೈಶಿಷ್ಟ್ಯ ಪ್ರಾರಂಭ




* ಪ್ರಸ್ತುತ ಡಿಜಿಟಲ್ ಪಾವತಿ ಪ್ಲಾಟ್‌ಫಾರ್ಮ್ ಫೋನ್ ಪೇ ಫ್ಲಿಪ್‌ಕಾರ್ಟ್‌ನೊಂದಿಗೆ ಜೊತೆಯಾಗಿ ಫ್ಲಿಪ್‌ಕಾರ್ಟ್‌ನ ಪೇ ಆನ್ ಡೆಲಿವರಿ ಆದೇಶಗಳಿಗಾಗಿ ಸಂಪರ್ಕವಿಲ್ಲದ "ಸ್ಕ್ಯಾನ್ ಮತ್ತು ಪೇ" ವೈಶಿಷ್ಟ್ಯವನ್ನು ಪ್ರಾರಂಭಿಸಲು ಮುಂದಾಗಿದೆ.

* ಈ ಫೋನ್ ಪೇ'ಯ ಕ್ಯೂಆರ್ ಕೋಡ್ ಗ್ರಾಹಕರಿಗೆ ಉತ್ಪನ್ನ ವಿತರಣೆಯ ಸಮಯದಲ್ಲಿ ಯುಪಿಐ(UPI) ಅಪ್ಲಿಕೇಶನ್‌ಗಳ ಮೂಲಕ ಡಿಜಿಟಲ್ ರೂಪದಲ್ಲಿ ಪಾವತಿಸಲು ಸಹಾಯ ಮಾಡಲಿದೆ. ಇದರಿಂದಾಗಿ ಸುರಕ್ಷತೆಯನ್ನು ಖಾತರಿಪಡಿಸುವ ಸಂದರ್ಭದಲ್ಲಿ ವೈಯಕ್ತಿಕ ಸಂಪರ್ಕವನ್ನು ಕಡಿಮೆ ಮಾಡಲು ಸಹಾಯ ಮಾಡಲಿದೆ ಎಂದು ತಿಳಿಸಿದ್ದಾರೆ.

* ನಗದು ಆಧಾರಿತ ಪಾವತಿಗಳ ಡಿಜಿಟಲೀಕರಣವು ಇ ಕಾಮರ್ಸ್'ಗೆ ಉತ್ತೇಜನವನ್ನು ನೀಡಲಿದೆ ಎಂದಿದ್ದಾರೆ, ಹಾಗೂ ಈ ಸೌಲಭ್ಯವು ಫೋನ್‌ಪೇ ಕ್ಯೂಆರ್ ಕೋಡ್'ನ್ನು ಸ್ಕ್ಯಾನ್ ಮಾಡಿ ಗ್ರಾಹಕರಿಗೆ ಪಾವತಿಸಲು ಅವಕಾಶ ಮಾಡಿಕೊಡಲಿದೆ, ಹಾಗೂ ಗ್ರಾಹಕರು ಮನೆಯಿಂದ ಸಂಪರ್ಕವಿಲ್ಲದ ಫ್ಲಿಪ್‌ಕಾರ್ಟ್‌ನಿಂದ ವಿತರಣೆಯ ಪಾವತಿಗಳನ್ನು ಮಾಡಬಹುದಾಗಿದೆ.

* ಪ್ರಸ್ತುತ ಫೋನ್‌ಪೇ ಭಾರತೀಯಡಿಜಿಟಲ್ ಪಾವತಿ ಮತ್ತು ಹಣಕಾಸು ಸೇವೆಯಾಗಿದೆ, ಇದನ್ನು 2015 ರ ಡಿಸೆಂಬರ್'ನಲ್ಲಿ ಸ್ಥಾಪನೆಯಾಗಿದೆ, ಇದರ ಪ್ರಧಾನ ಕಚೇರಿಯು ಸಿಲಿಕಾನ್ ಸಿಟಿ ಬೆಂಗಳೂರು ನಗರದಲ್ಲಿದೆ.

* ಈ ಫೋನ್ ಪೇ'ಯನ್ನು ಸಮೀರ್ ನಿಗಮ್, ರಾಹುಲ್ ಚಾರಿ ಮತ್ತು ಬುರ್ಜಿನ್ ಎಂಜಿನಿಯರ್ ಸ್ಥಾಪಿಸಿದ್ದಾರೆ, ಈ ಫೋನ್ ಪೇ ಅಪ್ಲಿಕೇಶನ್ ಭಾರತೀಯ 11 ಭಾಷೆಗಳಲ್ಲಿ ಲಭ್ಯವಿದೆ.

* ಪ್ರಸ್ತುತ ಈ ಅಪ್ಲಿಕೇಶನ್ ಮೂಲಕ ಹಣವನ್ನು ಕಳುಹಿಸಲು ಹಾಗೂ ಸ್ವೀಕರಿಸಲು, ಡೇಟಾ ಕಾರ್ಡ್‌ಗಳು, ರೀಚಾರ್ಜ್ ಮೊಬೈಲ್, ಡಿಟಿಎಚ್, ಅಂಗಡಿಗಳಲ್ಲಿ ಪಾವತಿಸಲು, ಯುಟಿಲಿಟಿ ಪಾವತಿಗಳನ್ನು ಮಾಡಲು, ತೆರಿಗೆ ಉಳಿತಾಯ ನಿಧಿಗಳು ಮತ್ತು ದ್ರವ ನಿಧಿಗಳಲ್ಲಿ ಹೂಡಿಕೆ ಮಾಡಲು ಬಳಕೆ ಮಾಡಲಾಗುತ್ತದೆ. ವಿಮೆ, ಮ್ಯೂಚುವಲ್ ಫಂಡ್ ಮತ್ತು ಚಿನ್ನವನ್ನು ಖರೀದಿಸಲು ಇದನ್ನು

ಬಳಸಬಹುದು.

* ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ ಯುಪಿಐ ಅಭಿವೃದ್ಧಿಪಡಿಸಿದೆ, ಹಾಗೂ ತ್ವರಿತ ನೈಜ ಸಮಯ ಪಾವತಿ ವ್ಯವಸ್ಥೆ ಇದಾಗಿದೆ, ಹಾಗೂ ಮೊಬೈಲ್ ಪ್ಲಾಟ್‌ಫಾರ್ಮ್'ನಲ್ಲಿ 2 ಬ್ಯಾಂಕ್‌ಖಾತೆಗಳಮಧ್ಯೆ ಹಣವನ್ನುತಕ್ಷಣವರ್ಗಾಯಿಸುವಕಾರ್ಯನಿರ್ವಹಿಸುತ್ತದೆ.

### ಸಿಂಧೂ ನದಿ ಒಪ್ಪಂದ



* ಸಿಂಧೂ ಒಪ್ಪಂದದ ಪ್ರಕಾರ ಭಾರತವು ಸ್ವಂತ ಭೂಮಿಗೆ ನೀರಾವರಿ ಮಾಡಲು ಹೆಚ್ಚುವರಿ ನೀರನ್ನು ಬಳಸುವುದು ಎಂದರ್ಥ.

* ಪ್ರಸ್ತುತ 1960ರ ಸಿಂಧೂ ನದಿ ನೀರಿನ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ ಹೆಚ್ಚುವರಿ ನೀರು ಹರಿಯುವುದನ್ನು ತಡೆಯಲು ಭಾರತವು ತನ್ನ ಹಕ್ಕುಗಳಿಗಾಗಿ ಕೆಲಸ ಮಾಡಲು ಆರಂಭಿಸಿದೆ ಎಂದು ಕೇಂದ್ರ ಜಲಶಕ್ತಿ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್ ಅವರು ತಿಳಿಸಿದ್ದಾರೆ.

* ಸಿಂಧೂ ನೀರಿನ ಒಪ್ಪಂದಕ್ಕೆ ಭಾರತ ಹಾಗೂ ಪಾಕಿಸ್ತಾನ ರಾಷ್ಟ್ರಗಳು ಸತತ ಒಂಬತ್ತು ವರ್ಷಗಳ ಮಾತುಕತೆಯತದನಂತರ 1960 ರಲ್ಲಿ ಸಹಿ ಹಾಕಿವೆ, ಜೊತೆಗೆ ವಿಶ್ವಬ್ಯಾಂಕ್ ಕೂಡ ಈ ಒಪ್ಪಂದಕ್ಕೆ ಸಹಿ ಹಾಕಿದೆ.

* 1960 ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಸಿಂಧೂ ವಾಟರ್ ಒಪ್ಪಂದಕ್ಕೆ ಸಹಿ ಹಾಕಲಾಗಿದೆ, ಈ ಒಪ್ಪಂದದ ಮಾಹಿತಿಯ ಪ್ರಕಾರ 3 ಪೂರ್ವ ನದಿಗಳಾಗಿರುವ ರಾವಿ, ಸಟ್ಲೆಜ್ ಮತ್ತು ಬಿಯಾಸ್'ನ ಎಲ್ಲಾ ನೀರನ್ನು ಭಾರತಕ್ಕೆ ಪ್ರತ್ಯೇಕವಾಗಿ ಬಳಸಲು ಹಂಚಿಕೆಯನ್ನು ಮಾಡಲಾಯಿತು,ಹಾಗೆ ಪಾಶ್ಚಿಮಾತ್ಯ ನದಿಗಳಾಗಿರುವ ಸಿಂಧೂ, ಝೀಲಂ ಹಾಗೂ ಚೆನಾಬ್ ನೀರನ್ನು ಪಾಕಿಸ್ತಾನಕ್ಕೆ ಹಂಚಿಕೆ ಮಾಡಲಾಯಿತು.

* ಆದರೆ ಪಾಶ್ಚಿಮಾತ್ಯ ನದಿಗಳ ನೀರನ್ನು ನಿರ್ದಿಷ್ಟವಾಗಿ ಪಾಕಿಸ್ತಾನಕ್ಕೆ ಬಳಕೆಯಾಗದ ಹಾಗೂ ಕೃಷಿ ಬಳಕೆಗಾಗಿ ಬಳಸಲು ಭಾರತಕ್ಕೆ ವಿನಾಯಿತಿಯನ್ನು ಈ ಒಪ್ಪಂದದಲ್ಲಿ ನೀಡಲಾಗಿದೆ, ಮತ್ತು ಭಾರತಕ್ಕೆ ನದಿ ಯೋಜನೆಗಳ ಅಡಿಯಲ್ಲಿ ಜಲವಿದ್ಯುತ್ ಉತ್ಪಾದಿಸುವ ಹಕ್ಕನ್ನುನೀಡಲಾಗಿದೆ.

## 06-07-2021

### ಬಾಂಗ್ಲಾ ಪ್ರಧಾನಿಯಿಂದ 2600 ಕೆ.ಜಿ ಮಾವಿನ ಹಣ್ಣು ಉಡುಗೊರೆ



* ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಾಂಗ್ಲಾದೇಶದ ಪ್ರಧಾನಿಯಾಗಿರುವ ಶೇಖ್ ಹಸೀನಾ ಅವರು ಸ್ನೇಹದ ಸಂಕೇತವಾಗಿ 2,600 ಕೆ.ಜಿ "ಹರಿಭಾಂಗ" ತಳಿಯ ಮಾವಿನ ಹಣ್ಣು ಉಡುಗೊರೆಯಾಗಿ ನೀಡಿದ್ದಾರೆ.

* ಡೈಲಿ ಸ್ಟಾರ್ ಪತ್ರಿಕೆ ನೀಡಿರುವ ವರದಿಯ ಪ್ರಕಾರ ಮಾವಿನ ಹಣ್ಣು ಹೊತ್ತ ಟ್ರಕ್ ಜೆಸ್ಸೋರ್'ನ ಬೆನಾಪೋಲ್ ಮೂಲಕ ಭಾರತ ಗಡಿಯನ್ನು ಪ್ರವೇಶಿಸಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಉಡುಗೊರೆಯಾಗಿ ನೀಡಿರುವ ಈ ಹರಿಭಾಂಗ ಮಾವಿನ ಹಣ್ಣಿನ ತಳಿಯನ್ನು ಬಾಂಗ್ಲಾದ ರಂಗ್‌ಪುರ ಪ್ರದೇಶದಲ್ಲಿ ಬೆಳೆಯುತ್ತಾರೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ಮಾಹಿತಿ ನೀಡಿದೆ.

* ಬಾಂಗ್ಲಾ ದೇಶಕ್ಕಿಂತ ಮೊದಲು ಪಾಕಿಸ್ತಾನದ ಮಾಜಿ ಪ್ರಧಾನಿಗಳಾದ ಜಿಯಾ ಉಲ್ ಹಕ್ ಹಾಗೂ ಪರ್ವೇಜ್ ಮುಷರಫ್ ಸಹ ಈ ಹಿಂದೆ ಭಾರತಕ್ಕೆ ಮಾವಿನ ಹಣ್ಣುಗಳನ್ನು ಉಡುಗೊರೆಯಾಗಿ ನೀಡಿದ್ದರು.

### ಕೋವಿನ್ ಆಯಪ್ ಎಲ್ಲಾ ದೇಶಗಳಿಗೂ ಲಭ್ಯ




* ಭಾರತದ ಕೋವಿಡ್ ಲಸಿಕಾ ಅಭಿಯಾನದ ತಂತ್ರಜ್ಞಾನ ವೇದಿಕೆಯಾಗಿರುವ ಕೋವಿನ್ ಆಯಪ್ 'ನ್ನು ಜಾಗತಿಕ ಮಟ್ಟದ ಬಳಕೆಗೆ ವಿಸ್ತರಣೆ ಮಾಡಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕೋವಿನ್ ಗ್ಲೋಬಲ್ ಕಾನ್‌ಕ್ಲೇವ್'ನಲ್ಲಿ ತಿಳಿಸಿದ್ದಾರೆ.

* ಪ್ರಧಾನಿ ಮೋದಿ ಅವರು ಈ ಕಾರ್ಯಕ್ರಮಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡಿದ್ದರು, ಈ ಕೋವಿಡ್ 19 ಸಾಂಕ್ರಾಮಿಕದ ವಿರುದ್ಧದ ಹೋರಾಟದಲ್ಲಿ ಭಾರತವು ತನ್ನ ಅನುಭವ ಹಾಗೂ ಸಂಪನ್ಮೂಲಗಳನ್ನು ಸಮುದಾಯದ ಜೊತೆ ಹಂಚಿಕೊಳ್ಳಲು ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ.

* ಇದೇ ಸಂದರ್ಭದಲ್ಲಿ ಮೋದಿ ಅವರು ಯಾವುದೇ ದೇಶವು ಎಷ್ಟೇ ಪ್ರಬಲವಾದರೂ ಈ ರೀತಿಯ ಸಾಂಕ್ರಾಮಿಕವನ್ನು ಏಕಾಂಗಿಯಾಗಿ ಎದುರಿಸಲು ಸಾಧ್ಯವಾಗದು ಎಂದು ತೋರಿಸಿಕೊಟ್ಟಿದೆ.

* ಈ ಕೋವಿನ್ ಆಯಪ್ ಲಸಿಕಾ ಅಭಿಯಾನವನ್ನು ಅಳವಡಿಸಿಕೊಳ್ಳಲು ಸುಮಾರು 50 ಕ್ಕೂ ಅಧಿಕ ದೇಶಗಳು ಆಸಕ್ತಿ ತೋರಿಸಿವೆ ಎಂದು ರಾಷ್ಟ್ರೀಯಆರೋಗ್ಯಪ್ರಾಧಿಕಾರವುತಿಳಿಸಿದೆ.

### ತೆಲಂಗಾಣ ರಾಜ್ಯವು 1 ಗಂಟೆ ಅವಧಿಯಲ್ಲಿ 1 ಮಿಲಿಯನ್ ಸಸಿ ನೆಟ್ಟುವಿಶ್ವದಾಖಲೆನಿರ್ಮಾಣ



* ಗ್ರೀನ್ ಇಂಡಿಯನ್ ಚಾಲೆಂಜ್ ಇದೀಗ ನಾಲ್ಕು ವರ್ಷ ಪೂರೈಸಿದೆ ಇದರ ಅಂಗವಾಗಿ ತೆಲಂಗಾಣ ರಾಜ್ಯದ ಆದಿಲಾಬಾದ್ ಜಿಲ್ಲೆಯಲ್ಲಿ ಕೇವಲ 1 ಗಂಟೆಯಲ್ಲಿ 1 ಮಿಲಿಯನ್ ಸಸಿಗಳನ್ನ ನೆಟ್ಟು ವಿಶ್ವ ದಾಖಲೆಯನ್ನ ನಿರ್ಮಿಸಿದ್ದಾರೆ.

* ಪ್ರಸ್ತುತ ವಂಡರ್ ಬುಕ್ ಆಫ್ ರೆಕಾರ್ಡ್ ತೆಲಂಗಾಣ ರಾಜ್ಯದ ಆದಿಲಾಬಾದ್ ಜಿಲ್ಲೆಯಲ್ಲಿಯ ಕೆಲಸಗಾರರಈಕಾರ್ಯವನ್ನ ಮೆಚ್ಚಿ ಈಕೆಲಸಗಾರರಿಗೆ ಮತ್ತು ಸಂಘಟಕರಿಗೆ ಮೆಚ್ಚುಗೆ ಪತ್ರವನ್ನ ನೀಡಿದೆ.

* ಈ ಕಾರ್ಯಕ್ರಮದಲ್ಲಿ ಸುಮಾರು 5 ಲಕ್ಷ ಸಸಿಗಳನ್ನು 200 ಎಕರೆ ಜಾಗದಲ್ಲಿ ಮಿಯಾವಕಿ ಮಾದರಿಯಲ್ಲಿ ನೆಡಲಾಗಿದೆ, ಹಾಗೂ 30 ಸಾವಿರಕ್ಕೂ ಹೆಚ್ಚು ಟಿಆರ್‌ಎಸ್ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

* ಈ ಹಿಂದೆ 2019 ರಲ್ಲಿ ಟರ್ಕಿ 3.03 ಲಕ್ಷ ಗಿಡಗಳನ್ನು ಕೇವಲ 1 ಗಂಟೆಯಲ್ಲಿ ನೆಟ್ಟು ವಿಶ್ವ ದಾಖಲೆ ನಿರ್ಮಿಸಿತ್ತು.

## ಅಂತರಾಷ್ಟ್ರೀಯ ಚಲನಚಿತ್ರೋತ್ಸವದ ಪೋಸ್ಟರ್ ಬಿಡುಗಡೆ




* ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು ಪ್ರಸ್ತುತ ವರ್ಷ 2021 ರ ನವೆಂಬರ್'ನಲ್ಲಿ ಗೋವಾ ರಾಜ್ಯದಲ್ಲಿ ನಡೆಯಲಿರುವ 52 ನೇಯ ಅಂತರಾಷ್ಟ್ರೀಯ ಚಲನಚಿತ್ರ ಮಹೋತ್ಸವದ ಪೋಸ್ಟರ್' ಹಾಗೂ ಚಲನಚಿತ್ರೋತ್ಸವದ ನಿಯಮಾವಳಿ ಪುಸ್ತಕವನ್ನು ದೆಹಲಿಯಲ್ಲಿ ಬಿಡುಗಡೆ ಮಾಡಿದರು.

* ಪ್ರತಿ ವರ್ಷ ಗೋವಾ ರಾಜ್ಯದಲ್ಲಿ ನವೆಂಬರ್ ತಿಂಗಳಿನಲ್ಲಿ ನಡೆಯುವ ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ವಿಶ್ವದ 70 ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಮತ್ತು ಚಲನಚಿತ್ರ ರಂಗದ ಕಲಾವಿದರು ಭಾಗಿಯಾಗುತ್ತಿದ್ದರು. ಆದರೆ ಕೋವಿಡ್ 19 ಸಾಂಕ್ರಾಮಿಕ ರೋಗದ ಭೀತಿಯಿಂದಾಗಿ ಈ ಬಾರಿಯ ಗೋವಾದಲ್ಲಿ ನಡೆಯುವ ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಆನ್‌ಲೈ ನ್ ಮೂಲಕ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

## ಹೊಸ ಕಕ್ಷೀಯ ಕೇಂದ್ರದ ಹೊರಗೆ ಚೀನಿ ಗಗನಯಾತ್ರಿಗಳಿಂದ ಮೊದಲಸ್ಪೇಸ್‌ವಾಕ್



* ಚೀನಾ ದೇಶದ ಗಗನಯಾತ್ರಿಗಳು ಹೊಸ ಕಕ್ಷೀಯ ಕೇಂದ್ರದ ಹೊರಗೆ ಮೊದಲ ಸ್ಪೇಸ್ ವಾಕ್ ನಡೆಸಿದ್ದಾರೆ, ಸುಮಾರು 15 ಮೀ. ಉದ್ದದ ರೊಬೋಟಿಕ್ ಆರ್ಮ್'ನ್ನು ಹೊಸ ಕಕ್ಷೀಯ ಕೇಂದ್ರದಲ್ಲಿ ಸ್ಥಾಪನೆ ಮಾಡಿದ್ದಾರೆ.

* ಲಿಯು ಬೊಮಿಂಗ್ ಮತ್ತು ಟ್ಯಾಂಗ್ ಹಾಂಗ್ಬೋ ಈ ಚೀನಾ ಗಗನ ಯಾತ್ರಿಗಳು ಹೊಸ ಕಕ್ಷೀಯ ಕೇಂದ್ರದ ಹೊರಗಡೆ ಇದ್ದರು ಮತ್ತೊಬ್ಬ ಸದಸ್ಯ ಕಮಾಂಡರ್ ನೀ ಹೈಶೆಂಗ್ ಕೇಂದ್ರದ ಒಳಭಾಗದಲ್ಲಿ ಕೇಂದ್ರದ ಕಾರ್ಯವನ್ನು ನಿರ್ವಹಣೆ ಮಾಡುತಿದ್ದರು.

* ಈ ಹಿಂದೇ ಮೇ ತಿಂಗಳಲ್ಲಿ ಮಂಗಳನ ಮೇಲೆ ರೋಬೋಟ್ ರೋವರ್ ಲ್ಯಾಂಡ್ ಆದ ಮಹತ್ವದ ಯೋಜನೆಯ ನಂತರ ಚೀನಾದ ಗಗನಯಾತ್ರಿಗಳು 3 ತಿಂಗಳ ಮಿಷನ್'ನ್ನು ಕೈಗೊಂಡಿದ್ದಾರೆ ಇದು ಕೂಡ ಬಾಹ್ಯಾಕಾಶ ಭಾಗವಾಗಿದೆ ಎಂದು ತಿಳಿಸಿದ್ದಾರೆ.

* ಚೀನಾ ದೇಶದ ಆಡಳಿತ ಪಕ್ಷವಾಗಿರುವ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ 100 ನೇ ವಾರ್ಷಿಕೋತ್ಸವದ ಭಾಗವಾಗಿ ಈ ಮಿಷನ್'ನ್ನು ಕೈಗೊಂಡಿದ್ದಾರೆ ಎಂದು ತಿಳಿದು ಬಂದಿದೆ.

## ಉತ್ತರಪ್ರದೇಶದ ಗೋಮತಿ ನದಿ ಯೋಜನೆ ಅಕ್ರಮ



* ಈ ಹಿಂದೆ ಉತ್ತರಪ್ರದೇಶ ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಸರ್ಕಾರವು ಆಡಳಿತದಲ್ಲಿ ಇರುವ ಸಂಧರ್ಭದಲ್ಲಿ ಲಖನೌ'ನ ಗೋಮತಿ ನದಿ ಯೋಜನೆಯಲ್ಲಿ ಅಕ್ರಮ ನಡೆದಿದೆ ಎಂದು ಸಿಬಿಐ ಹೊಸ ಪ್ರಕರಣಗಳನ್ನೂ ದಾಖಲಿಸಿದೆ.

* ಈ ಗೋಮತಿ ನದಿ ಯೋಜನೆಗೆ ಸಂಬಂಧಿಸಿ ದಾಖಲಾಗಿರುವ ಎಫ್ಐಆರ್(FIR) ಆಧರಿಸಿ ರಾಜ್ಯದ 43 ಸ್ಥಳಗಳಲ್ಲಿ ಸಿಬಿಐ(CBI) ಶೋಧ ಕಾರ್ಯಾಚರಣೆಯನ್ನು ಆರಂಭಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಉತ್ತರ ಪ್ರದೇಶ ರಾಜ್ಯ ಸರ್ಕಾರವು ಈ ಗೋಮತಿ ನದಿ ಯೋಜನೆಗೆ ಸಂಬಂಧಿಸಿದ ಎಂಜಿನಿಯರ್ ಗಳು ಹಾಗೂ 180 ಅಧಿಕಾರಿಗಳ ಹೆಸರುಗಳು ಎಫ್ಐಆರ್(FIR)ನಲ್ಲಿ ದಾಖಲಿಸಿದೆ, ಇದು ಈ ಯೋಜನೆಗೆ ಸಂಬಂಧಿಸಿದ 2 ನೇ ಎಫ್ಐಆರ್(FIR) ಇದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## Paytm ನಿಂದ ಪೋಸ್ಟ್ ಪೇಯ್ಡ್ ಮಿನಿ ಸೇವೆ ಪ್ರಾರಂಭ




* 2021 ರ ಜುಲೈ. 5 ರಂದು ಡಿಜಿಟಲ್ ಪಾವತಿಗಳು ಮತ್ತು ಹಣಕಾಸು ಸೇವೆಗಳ ವೇದಿಕೆಯಾಗಿರುವ Paytm' ಬಳಕೆಯ ಗ್ರಾಹಕರಿಗೆ 'ಪೋಸ್ಟ್‌ಪೇಯ್ಡ್ ಮಿನಿ' ಸೇವೆಯನ್ನು ಆರಂಭಿಸಿದೆ.

* ಭಾರತದ 550 ನಗರಗಳಲ್ಲಿ ಈ Paytm ಪೋಸ್ಟ್‌ಪೇಯ್ಡ್ ಸೇವೆ ಲಭ್ಯವಿದೆ.

* ಈ ಪೋಸ್ಟ್ ಪೇಯ್ಡ್ ಮಿನಿ ಸೇವೆಯನ್ನು ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್ ಸಹಯೋಗದೊಂದಿಗೆ ಆರಂಭಿಸಲಾಗಿದೆ, ಹಾಗೂ ಇದು ಒಂದು ಸಣ್ಣ ಟಿಕೆಟ್ ತ್ವರಿತ ಸಾಲ ಸೌಲಭ್ಯವಾಗಿದೆ, ಇದರಿಂದ ಕೋವಿಡ್ 19 ಸಾಂಕ್ರಾಮಿಕದ ಮಧ್ಯೆ ಬಳಕೆದಾರರಿಗೆ ಮನೆಯ ಖರ್ಚುಗಳನ್ನು ನಿಭಾಯಿಸಲು ಸಹಾಯಕಾರಿಯಾಗಲಿದೆ ಎಂದು ತಿಳಿಸಲಾಗಿದೆ.

* Paytm ಪೋಸ್ಟ್‌ಪೇಯ್ಡ್'ನ ಶೂನ್ಯ(ಜೀರೋ) ಶೇಕಡಾ ಬಡ್ಡಿ ಸಾಲವನ್ನು ಮರು ಪಾವತಿ ಮಾಡಲು 30 ದಿನಗಳವರೆಗೆ ಕಾಲಾವಕಾಶವನ್ನು ನೀಡಲಿದೆ, ಹಾಗೂ ಯಾವುದೇ ವಾರ್ಷಿಕ ಶುಲ್ಕ ಇರುವುದಿಲ್ಲ, ಆದರೆ ಕನಿಷ್ಠ ಅನುಕೂಲ ಶುಲ್ಕವನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಪೇಟಿಎಂ ತಿಳಿಸಿದೆ.

* ಪ್ರಸ್ತುತ ಈ ಪೋಸ್ಟ್‌ಪೇಯ್ಡ್ ಮಿನಿ ವ್ಯವಸ್ಥೆಯ ಸಹಾಯದಿಂದ 250 ರಿಂದ 1000 ರೂ.ವರೆಗಿನ ಸಾಲಗಳಿಗೆ ಪೇಟಿಎಂ ಪ್ರವೇಶವನ್ನು ನೀಡಲಿದೆ, ಹಾಗೂ ಪೋಸ್ಟ್‌ಪೇಯ್ಡ್ ಮಿನಿ ಸೇವೆಯು 60,000 ರೂ.ಗಳವರೆಗೆ ಸಾಲವನ್ನು ಬಳಕೆದಾರರಿಗೆ ನೀಡಲಿದೆ ಎಂದು ತಿಳಿಸಿದೆ.

* ಈ Paytm ಪೋಸ್ಟ್‌ಪೇಯ್ಡ್ ಸೇವೆಯನ್ನು ಭಾರತ ದೇಶಾದ್ಯಂತ ಆನ್‌ಲೈನ್ ಮತ್ತು ಆಫ್‌ಲೈನ್ ವ್ಯಾಪಾರಿ ಅಂಗಡಿಗಳಲ್ಲಿ ಪಾವತಿ ಮಾಡಲು ಅವಕಾಶ ನೀಡಲಾಗುತ್ತದೆ, ಹಾಗೂ ಪೆಟ್ರೋಲ್ ಪಂಪ್, ಸುತ್ತ ಮುತ್ತಲಿನಕಿರಾಣಿ, ಔಷಧಿ ಅಂಗಡಿಗಳಲ್ಲಿ ಬಳಕೆದಾರರಿಂದ ಸ್ವೀಕರಿಸಲಾಗುತ್ತದೆ ಎಂದು ಪೇಟಿಎಂ ತಿಳಿಸಿದೆ.

## ಶ್ರೀನಗರ ಜಿಲ್ಲೆಯಲ್ಲಿ ಡ್ರೋನ್‌ಗಳ ಸಂಗ್ರಹಣೆ, ಮಾರಾಟ, ಬಳಕೆಯನ್ನು ನಿಷೇಧಿಸಿದೆ



* ಪ್ರಸ್ತುತ ಡ್ರೋನ್‌ಗಳು ಹಾಗೂ ಮಾನವರಹಿತ ವೈಮಾನಿಕ ವಾಹನಗಳನ್ನು ಶ್ರೀನಗರ ಜಿಲ್ಲೆಯ ಪ್ರಾದೇಶಿಕ ವ್ಯಾಪ್ತಿಯಲ್ಲಿ ಸಂಗ್ರಹಣೆ, ಮಾರಾಟ, ಬಳಕೆ ಮತ್ತು ಸಾಗಣೆಯನ್ನು ಶ್ರೀನಗರ ಜಿಲ್ಲೆಯ ಅಧಿಕಾರಿಗಳು ನಿಷೇಧಿಸಿದ್ದಾರೆ ಎಂದು ತಿಳಿದು ಬಂದಿದೆ.

* ಶ್ರೀನಗರ ಜಿಲ್ಲೆಯ ಎಲ್ಲಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೂಟಗಳಲ್ಲಿ ಡ್ರೋನ್‌ಗಳ ಬಳಕೆಯನ್ನು ನಿಲ್ಲಿಸುವುದು ಕಡ್ಡಾಯ ಎಂದು ಅಲ್ಲಿನ ಅಧಿಕಾರಿಗಳು ಸಿಆರ್‌ಪಿಸಿಯ ಸೆಕ್ಷನ್ 144 ರ ಅಡಿಯಲ್ಲಿ ಈ ಆದೇಶವನ್ನು ಹೊರಡಿಸಿದ್ದಾರೆ.

* ಪ್ರಸ್ತುತ ಶ್ರೀನಗರ ಜಿಲ್ಲೆಯಲ್ಲಿ ಈಗಾಗಲೇ ಡ್ರೋನ್ ಕ್ಯಾಮೆರಾಗಳು ಅಥವಾ ಮಾನವರಹಿತವೈಮಾನಿಕ ವಾಹನಗಳನ್ನು (UAV) ಹೊಂದಿರುವ ವ್ಯಕ್ತಿಗಳು ಅವುಗಳ ರಶೀದಿಯೊಂದಿಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದಾಖಲಿಸಬೇಕು ಎಂದು ತಿಳಿಸಿದ್ದಾರೆ.

* ಇತ್ತೀಚಿಗೆ ಜೂನ್. 27 ರಂದುಜಮ್ಮು ವಾಯುಪಡೆ ನಿಲ್ದಾಣದ ಮೇಲೆ ಡ್ರೋನ್‌ಗಳನ್ನು ಬಳಸಿ ದಾಳಿ ನಡೆಸಿರುವ ಕಾರಣಗಳಿಂದ ಈ ಆದೇಶವನ್ನುಅಧಿಕಾರಿಗಳುಹೊರಡಿಸಿದ್ದಾರೆ.

## ರಾಜ್ಯಪಾಲರ ಬಗ್ಗೆ ಸಂಕ್ಷಿಪ್ತ ಮಾಹಿತಿ



* ರಾಜ್ಯದ ಮೊದಲ ಪ್ರಜೆ
* 153 ನೇ ವಿಧಿ: "ರಾಜ್ಯಗಳಿಗೆ ರಾಜ್ಯಪಾಲರ ಹುದ್ದೆ ಅವಕಾಶ ಕಲ್ಪಿಸಿದೆ,"
* 154 ನೇ ವಿಧಿ: "ರಾಜ್ಯಪಾಲರ ಕಾರ್ಯಂಗಾಧಿಕಾರ"
* 155 ವಿಧಿ : "ರಾಜ್ಯಪಾಲರುರಾಷ್ಟ್ರಪತಿಗಳಿಂದನೇಮಕ"
*156ನೇವಿಧಿ:"ಅಧಿಕಾರಅವಧಿ
* ಐದು ವರ್ಷಗಳು. ಕೆಲವೊಮ್ಮೆ ಉತ್ತರಾಧಿಕಾರಿ ಬರುವರೆಗೂ ಅಧಿಕಾರವಧಿ ವಿಸ್ತರಿಸಬಹುದು", ( ರಾಷ್ಟ್ರಪತಿಗಳ ಇಚ್ಛೆ ಇರುವರಿಗೂಅಧಿಕಾರದಲ್ಲಿ ಇರುತ್ತಾರೆ)
*157ನೇವಿಧಿ :ರಾಜ್ಯಪಾಲರಾಗಲುಅರ್ಹತೆಗಳು
* 158ನೇ ವಿಧಿ: "ರಾಜ್ಯಪಾಲರ ವೇತನ ಮತ್ತು ಸವಲತ್ತು". (ರಾಜ್ಯಪಾಲರ ಅಧಿಕೃತ ನಿವಾಸ= ರಾಜ್ಯಭವನ)
* 159 ನೇ ವಿಧಿ: "ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಪ್ರಮಾಣವಚನ ಬೋಧಿಸುತ್ತಾರೆ."
* 160 ನೇ ವಿಧಿ: ರಾಜ್ಯಪಾಲರ ಹುದ್ದೆ ಖಾಲಿಯಾದಾಗ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಹಂಗಾಮಿ ರಾಜ್ಯಪಾಲರಾಗಿ ರಾಷ್ಟ್ರಪತಿಗಳ ಆದೇಶದ ಮೇರೆಗೆ ಕಾರ್ಯನಿರ್ವಹಿಸುತ್ತಾರೆ,
* 161 ನೇ ವಿಧಿ: "ಪ್ರಕರಣಗಳಿಗೆ ಕ್ಷಮಾದಾನ ನೀಡುವ ಅಧಿಕಾರ"
* 162 ನೇ ವಿಧಿ: "ರಾಜ್ಯಪಾಲರ ಅಧಿಕಾರಗಳು"
* 174 ನೇ ವಿಧಿ: "ಶಾಸಕಾಂಗದ ಅಧಿವೇಶನವನ್ನು ಕರೆಯುವ ಮತ್ತು ಮುಂದೂಡುವ ಅಧಿಕಾರವನ್ನು ಹೊಂದಿರುತ್ತಾರೆ",
* 175 ನೇ ವಿಧಿ: "ರಾಜ್ಯಪಾಲರು ಶಾಸಕಾಂಗದಲ್ಲಿ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವ ಅಧಿಕಾರ ಹೊಂದಿರುತ್ತಾರೆ",
* 192 ನೇ ವಿಧಿ: "ರಾಜ್ಯಪಾಲರು ರಾಜ್ಯ ಶಾಸಕರ ಅನರ್ಹತೆ ಬಗ್ಗೆ ಚುನಾವಣಾ ಆಯೋಗದ ಸಲಹೆಯಂತೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ",
* ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವ ಅಧಿಕಾರ ಹೊಂದಿರುತ್ತಾರೆ, ಮತ್ತು ಎಲ್ಲಾ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳಾಗಿರುತಾರೆ
* 200 ನೇ ವಿಧಿ: " ವಿಧಾನಮಂಡಲ ಪಾಸ್ ಮಾಡಿ ಅಂಗೀಕರಿಸಿದ ಸಹೀಗೆ ಕಳುಹಿಸಿದ ಮಸೂದೆಗಳನ್ನು ರಾಷ್ಟ್ರಪತಿಗಳಿಗೆ ಕಳಿಸುವ ಅಧಿಕಾರ ರಾಜ್ಯಪಾಲರಿಗೆ ಇದೆ.
* 213 ನೇ ವಿಧಿ: "ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರ"
* ರಾಜ್ಯ ವಿಧಾನಸಭೆಗೆ333ನೇ ವಿಧಿ: ಒಬ್ಬ ಆಂಗ್ಲೋ ಇಂಡಿಯನ್ನರನ್ನು ಮತ್ತು 171ನೇ ವಿಧಿ ರಾಜ್ಯ ವಿಧಾನಪರಿಷತ್ತಿಗೆ 1/6 ರಷ್ಟು ಸ್ಥಾನಗಳನ್ನು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ನಾಮಕರಣ ಮಾಡುತ್ತಾರೆ,

**✍ ರಾಜ್ಯಪಾಲ ವಿಶೇಷ ಅಂಶಗಳು**

* ರಾಜ್ಯದ ಮುಖ್ಯಸ್ಥ: ರಾಜ್ಯಪಾಲರು
* ರಾಜ್ಯದ ಪ್ರಥಮ ಪ್ರಜೆ: ರಾಜ್ಯಪಾಲರು
* ರಾಜ್ಯದ ಸಂವಿಧಾನಿಕ ಮುಖ್ಯಸ್ಥ: ರಾಜ್ಯಪಾಲರು
*ರಾಜ್ಯದಪ್ರಥಮರಾಜ್ಯಪಾಲ: ಜಯಚಾಮರಾಜಒಡೆಯರ್
*ಭಾರತದಮೊದಲ ಮಹಿಳಾ ರಾಜ್ಯಪಾಲರು: ಸರೋಜಿನಿ ನಾಯ್ಡು
* ಕರ್ನಾಟಕದ ಮೊದಲ ಪ್ರಥಮ ಮಹಿಳ ರಾಜ್ಯಪಾಲರು□ವಿಎಸ್‌ರಮಾದೇವಿ
*ಕರ್ನಾಟಕರಾಜ್ಯದದೀರ್ಘಾವಧಿರಾಜ್ಯಪಾಲ:ಖುರ್ಷಿದ್‌ಅಲಾಮ್‌ಖಾನ್
* ಪರಸ್ತುತರಾಜ್ಯದರಾಜ್ಯಪಾಲ: 19ನೇರಾಜ್ಯಪಾಲರಾಗಿಥಾವರ್‌ಚಂದ್‌ಗೆಹ್ಲೋಟ್
*ನಿರ್ಗಮಿತ ರಾಜ್ಯಪಾಲ:ವಾಜುಬಾಯಿವಾಲಾ

## ಟೆಲಿಕಾಂಇಲಾಖೆಯಿಂದವಂಚನೆಸಂದೇಶಗಳಿಗೆ10,000ರೂ ದಂಡ



*ವಂಚನೆಸಂದೇಶಗಳಿಗೆ10,000ರೂ.ದಂಡವಿಧಿಸಲುಟೆಲಿಕಾಂಇಲಾಖೆಪ್ರಸ್ತಾಪಿಸಿದೆ.

* ಪ್ರಸ್ತುತ ಟೆಲಿಮಾರ್ಕೆಟರ್‌ಗಳು 50 ಉಲ್ಲಂಘನೆಗಳ ಮಾಡಿದ ತದನಂತರದ ಪ್ರತಿ ಕರೆ ಹಾಗೂ ಎಸ್ ಎಂಎಸ್‌ಗೆ (SMS) ಟೆಲಿಕಾಂ ಇಲಾಖೆಯು 10,000 ರೂ. ದಂಡ ವಿಧಿಸುವದಾಗಿ ಪ್ರಸ್ತಾವನೆಯನ್ನು ನೀಡಿದೆ.

* ಪ್ರಸ್ತುತ ಟೆಲಿಮಾರ್ಕೆಟರ್‌ಗಳು 0 10 ಉಲ್ಲಂಘನೆಗಳಿಗೆ 1,000 ರೂ. ಮತ್ತು10 50 ಉಲ್ಲಂಘನೆಗಳಿಗೆತಲಾ5,000ರೂಇದರಜೊತೆಗೆ50ಕ್ಕೂಹೆಚ್ಚುಉಲ್ಲಂಘನೆಗಳಿಗೆತಲಾ 10,000ರೂ.ದಂಡ ವಿಧಿಸಲು ಟೆಲಿಕಾಂ ಇಲಾಖೆ ತೀರ್ಮಾನಿಸಿದೆ.

* 2018 ರ ಟೆಲಿಕಾಂ ಕಮರ್ಷಿಯಲ್ ಕಮ್ಯುನಿಕೇಷನ್ಸ್ ಗ್ರಾಹಕ ಆದ್ಯತೆ ನಿಯಮಗಳ ಅಡಿಯಲ್ಲಿ ಸ್ಲ್ಯಾಬ್‌ಗಳು0 100,100 1,000 ಮತ್ತು 1,000 ಕ್ಕೂ ಅಧಿಕ ಉಲ್ಲಂಘನೆಗಳಾಗಿವೆ.

* ಡಿಜಿಟಲ್ ಇಂಟೆಲಿಜೆನ್ಸ್ ಯುನಿಟ್ ಸಾಧನ ಮಟ್ಟದಲ್ಲಿ ಉಲ್ಲಂಘನೆಗಳನ್ನು ಪರಿಶೀಲಿಸಲು ಸಿಸ್ಟಮ್ ರಚಿತ ಸಂದೇಶವನ್ನು ಶಂಕಿತ ಸಂಖ್ಯೆಗಳಿಗೆ ಕಳುಹಿಸುತ್ತದೆ, ಒಂದು ವೇಳೆ ಮರು ಪರಿಶೀಲನೆ ಮಾಡದೆ ಇದ್ದ ಸಂಧರ್ಭದಲ್ಲಿ ಎಲ್ಲಾ ಸಂಖ್ಯೆಗಳನ್ನು ಸಂಪರ್ಕ ಕಡಿತಗೊಳಿಸಲಾಗುತ್ತದೆ ಹಾಗೂ ಶಂಕಿತ ಪಟ್ಟಿಗೆ ಸೇರಿಸಲಾಗುತ್ತದೆ, ಇದಾದ ನಂತರ ಶಂಕಿತ ಪಟ್ಟಿಯಲ್ಲಿರುವ ಐಎಂಇಐಗಳಿಗೆ 30 ದಿನಗಳ ಅವಧಿಗೆ ಯಾವುದೇ ಕರೆಗಳು, ಎಸ್‌ಎಂಎಸ್'ಗಳಿಗೆ ಅನುಮತಿಯನ್ನು ನೀಡಲಾಗುವದಿಲ್ಲ.

* ದೂರಸಂಪರ್ಕ ಇಲಾಖೆ ಒಂದು ಭಾರತ ಸರ್ಕಾರದ ಕಾರ್ಯನಿರ್ವಾಹಕ ಶಾಖೆಯ ಸಂವಹನ ಸಚಿವಾಲಯದ ಒಂದು ವಿಭಾಗವಾಗಿದೆ, ಹಾಗೂ ದೂರಸಂಪರ್ಕ ಸೇವೆಗಳ ಬೆಳವಣಿಗೆಯನ್ನು ವೇಗಗೊಳಿಸಲುಟೆಲಿಕಾಂಇಲಾಖೆಅಭಿವೃದ್ಧಿನೀತಿಗಳನ್ನುರೂಪಿಸುತ್ತಿದೆ.

## ನೇರ ಮಾರಾಟ ಕಂಪನಿಗಳನ್ನು ನಿಯಂತ್ರಿಸಲು ಕರಡು ಮಾನದಂಡಗಳುನ್ನುಸೂಚಿಸಿದಭಾರತಸರ್ಕಾರ



* ಭಾರತ ಸರ್ಕಾರವು ಭಾರತದಲ್ಲಿನ ಗ್ರಾಹಕರ ಹಿತಾಸಕ್ತಿ ಕಾಪಾಡಲು ಆಮ್ವೇ ಮತ್ತು ಟಪ್ಪರ್‌ವೇರ್‌ನಂತಹ ನೇರ ಮಾರಾಟ ಸಂಸ್ಥೆಗಳನ್ನು ನಿಯಂತ್ರಿಸುವ ಕರಡು ಮಾನದಂಡವನ್ನು ಸೂಚಿಸಿದೆ.

* ಪ್ರಸ್ತುತ ನೇರ ಮಾರಾಟ ಸಂಸ್ಥೆಗಳಿಗೆ ಪಿರಮಿಡ್ ಹಾಗೂ ಹಣ ಚಲಾವಣೆಯಲ್ಲಿರುವ ಯೋಜನೆಗಳಿಗೆ ಮಾನದಂಡಗಳ ಪ್ರಕಾರ ಅನುಮತಿ ನೀಡಲಾಗುವದಿಲ್ಲ ಎಂದು ಭಾರತ ಸರ್ಕಾರ ತಿಳಿಸಿದೆ.

* 2021 ರಲ್ಲಿ ಗ್ರಾಹಕ ಸಂರಕ್ಷಣೆ (ನೇರ ಮಾರಾಟ) ನಿಯಮಗಳನ್ನು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಆರಂಭಿಸಿದೆ.

*ಈಹಿಂದೇಕೇಂದ್ರಗ್ರಾಹಕವ್ಯವಹಾರಗಳಸಚಿವಾಲಯವುನೇರಮಾರಾಟಕಂಪನಿಗಳಿಗೆ 2016 ರಲ್ಲಿಮಾರ್ಗಸೂಚಿಗಳನ್ನುನಿಗದಿಪಡಿಸಿತ್ತು.

*ಈಹೊಸಕರಡುನಿಯಮಗಳುಉಲ್ಲಂಘನೆಗಳಿಗೆದಂಡವನ್ನು ಪ್ರಸ್ತಾಪಿಸುತ್ತವೆ, ಹಾಗೂ ನೇರ ಮಾರಾಟ ಮಾಡುವ ಕಂಪನಿಗಳಿಗೆ ಪಿರಮಿಡ್ ಯೋಜನೆ ಮತ್ತು ಹಣ ಚಲಾವಣೆಯಲ್ಲಿರುವ ಯೋಜನೆಯನ್ನು ನಿಷೇಧಿಸಿದೆ.

* ಪ್ರಸ್ತುತ ಇನ್ನು ಮುಂದೆ ನೇರಮಾರಾಟಗಾರರನ್ನು ನಿಯಂತ್ರಿಸಲು ಈ ಕರಡು ನಿಯಮವು ಗುರುತಿನ ಚೀಟಿ ಹಾಗೂ ಅನುಮೋದನೆಯಿಲ್ಲದೆ ಮಾರಾಟಗಾರರು ಗ್ರಾಹಕರ ಆವರಣಕ್ಕೆ ಭೇಟಿ ನೀಡುವದನ್ನು ನಿಷೇಧಿಸಲಾಗಿದೆ.

# 07-07-2021

## ಈಶಾನ್ಯ ಸಾರಿಗೆ ನಿಗಮ (NEKRTC) ಇದೀಗ ಕಲ್ಯಾಣ ಕರ್ನಾಟಕಸಾರಿಗೆನಿಗಮ



* ಕರ್ನಾಟಕ ರಾಜ್ಯ ಸರ್ಕಾರವು ಇದೀಗ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (NEKRTC) ವನ್ನು ಕಲ್ಯಾಣಕರ್ನಾಟಕಸಾರಿಗೆನಿಗಮಎಂದುಮರುನಾಮಕರಣಮಾಡಿದೆ.

*ಸಾರಿಗೆನಿಗಮಗಳಅಧಿನಿಯಮ 1950 ರ ಕಲಮ್ 3 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈಗಿನ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹೆಸರನ್ನು ಬದಲಾಯಿಸಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ ಎಂದು ಪ್ರಸ್ತುತ ರಾಜ್ಯದ ಉಪ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವಲಕ್ಷ್ಮಣ್‌ಸವದಿತಿಳಿಸಿದ್ದಾರೆ.

## ಚಿತ್ರರಂಗದ ಹಿರಿಯ ನಟ ದಿಲೀಪ್ ಕುಮಾರ್ ವಿಧಿವಶ



* ಹಿಂದಿ ಚಿತ್ರರಂಗದ ಹಿರಿಯ ನಟ ದಿಲೀಪ್ ಕುಮಾರ್ ಅವರು ತಮ್ಮ 98 ವರ್ಷ ವಯಸ್ಸಿನಲ್ಲಿ ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ.

* ಬಾಲಿವುಡ್‌ನ ದಿಲೀಪ್ ಕುಮಾರ್ ಅವರಿಗೆ "ಟ್ರಾಜಿಡಿ ಕಿಂಗ್" ಎಂದು ಕರೆಯಲಾಗುತಿತ್ತು, ಇವರು 6 ದಶಕಗಳ ಸಿನಿ ರಂಗದ ಜೀವನದಲ್ಲಿ 65 ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದಾರೆ.

* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಬಾಲಿವುಟ್ ಹಿರಿಯ ನಟ ದಿಲೀಪ್ ಕುಮಾರ್ ಅವರು ನಿಧನಕ್ಕೆ ಸಂತಾಪವನ್ನು ಸೂಚಿಸಿದ್ದಾರೆ.

* ಹಿರಿಯ ನಟ ದಿಲೀಪ್ ಕುಮಾರ್ ಅವರು 1998 ರಲ್ಲಿ ಕೊನೆಯ ಬಾರಿಗೆ "ಕಿಲಾ" ಸಿನೆಮಾದಲ್ಲಿ ನಟನೆಮಾಡಿ ಕಾಣಿಸಿಕೊಂಡಿದ್ದರು.

## ಇದೀಗ ಕಂದು ಬಣ್ಣದ ಹತ್ತಿಗೆ ಮಾರುಕಟ್ಟೆ



* ಪ್ರಸ್ತುತ 1995 ರಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿರುವ ದೇಸಿ ತಳಿಯಾಗಿರುವ ಬಣ್ಣದ ಹತ್ತಿಯು "ಡಿಡಿಸಿಸಿ 1"ಗೆ ಇದೀಗ ವಾಣಿಜ್ಯ ಬಳಕೆಗೆ ಮುಕ್ತವಾಗಿದೆ, ಹಾಗೂಈ ಕೃಷಿವಿಶ್ವವಿದ್ಯಾಲಯಖಾಸಗಿಕಂಪನಿಜೊತೆಗೆಒಪ್ಪಂದಕ್ಕೆಸಹಿಹಾಕಿದಬಗ್ಗೆಮಾಹಿತಿ ನೀಡಿದೆ.

* 25 ವರ್ಷಗಳ ಹಿಂದೆ ಹೆಬ್ಬಳ್ಳಿ ಫಾರ್ಮ್‌ನಲ್ಲಿ ಕೃಷಿ ವಿಜ್ಞಾನಿ ಡಾ.ಬಿ.ಎಂ.ಖಾದಿ ಅವರುಕಂದು ಬಣ್ಣದ ಹತ್ತಿ ತಳಿ ಅಭಿವೃದ್ಧಿಪಡಿಸಿದ್ದರು, ಈ ಹತ್ತಿ ತಳಿಯನ್ನು1999 ರಲ್ಲಿ ವಿಶ್ವವಿದ್ಯಾಲಯ ಬಿಡುಗಡೆಮಾಡಿತ್ತು ಆದರೆ ಈ ತಳಿ ಇಲ್ಲಿಯವರೆಗೆ ವಾಣಿಜ್ಯ ಬಳಕೆಗೆ ಮುಕ್ತವಾಗಿರಲಿಲ್ಲ ಎಂದು ತಿಳಿದು ಬಂದಿದೆ.

* ಇದೀಗ ಬೆಂಗಳೂರಿನ ರಿಜಿಸ್ಟ್ರೀ ಆಫ್ ಸ್ಯಾರೀಸ್ ಸಂಸ್ಥೆಯು ಭಾರತೀಯ ಕೃಷಿ ಅನುಸಂಧಾನ ಪರಿಷತ್ 'ನಿಂದ ಮಾನ್ಯತೆ ಪಡೆದ ಅಗ್ರಿ ಇನ್ನೋವೇಟಿವ್ ಇಂಡಿಯಾ ಸಂಸ್ಥೆ ಜೊತೆಗೆ ಈ ಕಂದು ಬಣ್ಣದ ಹತ್ತಿ ಬೆಳೆಯಲುಒಪ್ಪಂದಮಾಡಿಕೊಂಡಿದೆ.

* ಈ ಕಂದು ಬಣ್ಣದ ಹತ್ತಿಯು, ಬಿಳಿ ಹತ್ತಿ ತಳಿಗಿಂತ 1.3 ಪಟ್ಟು ಅಧಿಕ ಇಳುವರಿ ಹಾಗೂ ಕೀಟ, ರೋಗ ನಿರೋಧಕ ಗುಣವನ್ನು ಹೊಂದಿದೆ ಎಂದು ಹತ್ತಿ ವಿಭಾಗದ ಹಿರಿಯ ವಿಜ್ಞಾನಿ ಡಾ. ರಾಜೇಶ್ ಎಸ್. ಪಾಟೀಲ ಅವರು ವಿವರಣೆಯನ್ನುನೀಡಿದ್ದಾರೆ.

* ದಕ್ಷಿಣ ಭಾರತದಲ್ಲಿ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡುನಲ್ಲಿ ಕಪ್ಪು ಮಣ್ಣಿನ ಜಮೀನು ಮುಂಗಾರಿನಲ್ಲಿ ಈ ಕಂದು ಬಣ್ಣದ ಹತ್ತಿ ತಳಿ "ಡಿಡಿಸಿಸಿ 1" ಬೆಳೆಯಲು ಸೂಕ್ತ ಪ್ರದೇಶಗಳಾಗಿವೆ ಎಂದು ಹತ್ತಿ ವಿಜ್ಞಾನಿಗಳು ತಿಳಿಸಿದ್ದಾರೆ.

## ಮಹಾರಾಷ್ಟ್ರ ಸರ್ಕಾರವು 3 ಕೃಷಿ ಮಸೂದೆಗಳನ್ನು ಪರಿಚಯಿಸಿದೆ



* ಮಹಾರಾಷ್ಟ್ರ ರಾಜ್ಯದ ಶಿವಸೇನೆ ನೇತೃತ್ವದ ಸರ್ಕಾರವು ಇದೀಗ ವಿಧಾನಸಭೆಯಲ್ಲಿ ಕೃಷಿ, ಸಹಕಾರ, ಆಹಾರ ಮತ್ತು ನಾಗರಿಕ ಸರಬರಾಜಿಗೆ ಸಂಬಂಧಿಸಿದ 3 ತಿದ್ದುಪಡಿ ಮಸೂದೆಗಳನ್ನು ಪರಿಚಯಿಸಿದೆ.

* ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಹೊಸ ಕೃಷಿ ಕಾನೂನುಗಳಿಗೆ ಪ್ರತಿಯಾಗಿ ಈ ಕೃಷಿ ಮಸೂದೆಗಳನ್ನು ಜಾರಿಗೆ ತರಲು ಮಹಾರಾಷ್ಟ್ರ ಸರಕಾರವು ಉದ್ದೇಶಿಸಿದೆ.

* ಕೃಷಿ ಒಪ್ಪಂದವು ಸರಿಯಾದ ಸಮಯದಲ್ಲಿ ಬಾಕಿ ಪಾವತಿ, ರೈತರಿಗೆ ಕಿರುಕುಳ ನೀಡಿದರೆ ಮೂರು ವರ್ಷಗಳ ಜೈಲು ಶಿಕ್ಷೆ, ಹಾಗೂ 5 ಲಕ್ಷ ರೂ. ದಂಡ ವಿಧಿಸಲಾಗುವದು ಎಂದು ತಿಳಿಸಿದ್ದಾರೆ.

* ಕೃಷಿ ಉತ್ಪನ್ನಗಳ ಉತ್ಪಾದನೆ, ಪೂರೈಕೆ, ವಿತರಣೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಇದರ ಜೊತೆಗೆ ಅಗತ್ಯ ವಸ್ತುಗಳ ಮೇಲೆ ಸ್ಟಾಕ್ ಮಿತಿಗಳನ್ನು ಹೇರಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ನಿಬಂಧನೆಗಳು ಕೂಡ ಈ ಮಸೂದೆಗಳಲ್ಲಿ ಇರಲಿವೆ ಎಂದು ಮಹಾ ಸರ್ಕಾರ ತಿಳಿಸಿದೆ.

* ಮಹಾರಾಷ್ಟ್ರ ರಾಜ್ಯ ಸರ್ಕಾರದ ತಿದ್ದುಪಡಿ ಮಸೂದೆಗಳು: ಅಗತ್ಯ ಸರಕುಗಳು. ರೈತರ ಸಬಲೀಕರಣಮತ್ತುರಕ್ಷಣೆಮಸೂದೆ. ಬೆಲೆಖಾತರಿ.

* ಮಹಾರಾಷ್ಟ್ರ ರಾಜ್ಯ ಸರ್ಕಾರವು 2 ತಿಂಗಳ ಕಾಲ ಸಾರ್ವಜನಿಕವಾಗಿ ಈ ಕೃಷಿ ಮಸೂದೆಗಳ ಬಗ್ಗೆ ಏನಾದರು ಸಲಹೆಗಳು ಹಾಗೂ ಆಕ್ಷೇಪಣೆಗಳಿದ್ದರೆ ಚರ್ಚೆಗೆ ಅವಕಾಶ ನೀಡಲಾಗಿದೆ ಎಂದು ಮಹಾರಾಷ್ಟ್ರಸರ್ಕಾರತಿಳಿಸಿದೆ.

## ದೇಶದ ಮೊದಲ ಸೆಗಣಿ ಪೇಂಟ್ ಘಟಕ ಜೈಪುರದಲ್ಲಿ ಆರಂಭ



* ದೇಶದ ಮೊದಲ ಸೆಗಣಿ ಪೇಂಟ್ ಘಟಕ ಜೈಪುರದಲ್ಲಿ ಆರಂಭ, ಪ್ರಸ್ತುತ ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾಗಿರುವ ನಿತಿನ್ ಗಡ್ಕರಿ ಅವರು ಈ ಸೆಗಣಿ ಪೇಂಟ್'ಗೆ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದಾರೆ, ಈ ಮಾಹಿತಿಯನ್ನು ತಾವೇ ಹೇಳಿಕೊಂಡಿದ್ದಾರೆ.

* ಸೆಗಣಿಯಿಂದ ತಯಾರಿಸಲಾಗುವ ದೇಶದ ಏಕೈಕ ಹಾಗೂ ಮೊದಲ ಪೇಂಟ್ ತಯಾರಿಕ ಘಟಕವನ್ನು ಕೇಂದ್ರ ಸರಕಾರಿ ಸ್ವಾಮ್ಯದ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಅಡಿಯಲ್ಲಿರಾಜಸ್ಥಾನರಾಜ್ಯದರಾಜಧಾನಿಯಾಗಿರುವ ಜೈಪುರದಲ್ಲಿ ಉದ್ಘಾಟಿಸಿದರು.

* ಸೆಗಣಿಯಿಂದ ತಯಾರಿಸಲಾಗುವತ್ತಿರುವ ಈ ಹೊಸ ಪೇಂಟ್ ಬ್ಯಾಕ್ಟೀರಿಯಾ ಪ್ರತಿಬಂಧಕ ಗುಣವನ್ನು ಹೊಂದಿದೆ, ಹಾಗೂ ಪರಿಸರ ಸ್ನೇಹಿ, ವಿಷಕಾರಿಯಲ್ಲ, ವಾಸನೆ ರಹಿತ, ಕಡಿಮೆ ವೆಚ್ಚದಲ್ಲಿ ಲಭ್ಯವಾಗುವ ಪೇಂಟ್ ಇದಾಗಿದೆ ಎಂದು ತಿಳಿಸಿದ್ದಾರೆ.

## 8 ರಾಜ್ಯಗಳಿಗೆ ನೂತನ ರಾಜ್ಯಪಾಲರ ನೇಮಕ



* ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು 8 ರಾಜ್ಯಗಳಿಗೆ ನೂತನ ರಾಜ್ಯಪಾಲರುನ್ನು ನೇಮಕ ಮಾಡಿದ್ದಾರೆ, ಈ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ.

* ಎಂಟು ರಾಜ್ಯಗಳ ನೂತನ ರಾಜ್ಯಪಾಲರು: ಕರ್ನಾಟಕ ಥಾವರ್ ಚಂದ್ ಗೆಹ್ಲೋಟ್ ಗೋವಾ ಪಿ.ಎಸ್. ಶ್ರೀಧರನ್ ಪಿಳ್ಳೈ ತ್ರಿಪುರ ಸತ್ಯದೇವ್ ನಾರಾಯಣ್ ಆರ್ಯ ಜಾರ್ಖಂಡ್ ರಮೇಶ್ ಬೈಸ್ ಹರಿಯಾಣ ಬಂಡಾರು ದತ್ತಾತ್ರೇಯ ಮಿಜೋರಾಂ ಹರಿಬಾಬು ಕಂಭಂಪತಿ ಮಧ್ಯಪ್ರದೇಶ ಮಂಗುಭಾಯ್‌ಚಗನ್‌ಭಾಯ್‌ಪಟೇಲ್ ಹಿಮಾಚಲ ಪ್ರದೇಶ ರಾಜೇಂದ್ರನ್ ವಿಶ್ವನಾಥ್ ಅರ್ಲೇಕರ್

* ಕರ್ನಾಟಕ ರಾಜ್ಯದ ಹೊಸ ರಾಜ್ಯಪಾಲರ ಮಾಹಿತಿ: ಥಾವರ್ ಚಂದ್ ಗೆಹ್ಲೋಟ್ ಅವರು 1948 ರ ಮೇ 18 ರಂದು ಮಧ್ಯಪ್ರದೇಶ ರಾಜ್ಯದ ರುಪೆಟಾ ಎಂಬ ಗ್ರಾಮದಲ್ಲಿ ಜನಿಸಿದರು, ಇವರು 3 ಬಾರಿ ಮಧ್ಯಪ್ರದೇಶ ವಿಧಾನಸಭೆಯ ಸದಸ್ಯರಾಗಿ, ಹಾಗೂ 4 ಬಾರಿ ಶಾಜಾಪುರ ಲೋಕಸಭಾ ಕ್ಷೇತ್ರದ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ, ಮತ್ತೇ 2012 ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

* ಥಾವರ್ ಚಂದ್ ಗೆಹ್ಲೋಟ್ ಅವರು ಬಿಜೆಪಿ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಎಸ್.ಸಿ ಮೋರ್ಚಾ ಅಧ್ಯಕ್ಷ ಸ್ಥಾನ ಹೀಗೆ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

## ಭಾರತೀಯ ಸೇನೆ ಮುಖ್ಯಸ್ಥ ನರವಣೆ ಬ್ರಿಟನ್‌ನ ಸೇನಾ ಮುಖ್ಯಸ್ಥರಜೊತೆಚರ್ಚೆ



* ಬ್ರಿಟನ್‌ನ ಸೇನಾ ಮುಖ್ಯಸ್ಥ ಜನರಲ್ ಸರ್ ನಿಕೋಲಸ್ ಕಾರ್ಟರ್ ಅವರನ್ನು ಭಾರತೀಯ ಸೇನೆಯ ಮುಖ್ಯಸ್ಥರಾಗಿರುವ ಜನರಲ್ ಎಂ.ಎಂ.ನರವಣೆ ಅವರು ಭೇಟಿಯಾಗಿದ್ದಾರೆ, ಆ ಸಂಧರ್ಭದಲ್ಲಿ ಉಭಯ ದೇಶಗಳ ನಡುವಿನ ರಕ್ಷಣಾ ಸಹಕಾರದ ವಿಷಯದ ಬಗ್ಗೆ ಮಾತುಕತೆಯನ್ನು ನಡೆಸಿದ್ದಾರೆ ಎಂದು ಭಾರತೀಯ ಸೇನೆಟ್ವೀಟ್‌ಮೂಲಕಮಾಹಿತಿನೀಡಿದೆ.

* ಭಾರತೀಯ ಹೈಕಮಿಷನ್ ಜನರಲ್ ನರವಣೆ ಅವರು ಜುಲೈ 5 ರಂದು ಬ್ರಿಟನ್‌ಗೆ ಬಂದಿದ್ದಾರೆ ಎಂದು ತಿಳಿಸಿದೆ.

* ಭಾರತೀಯ ಸೇನೆಯ ಮುಖ್ಯಸ್ಥರಾಗಿರುವ ಜನರಲ್ ಎಂ.ಎಂ.ನರವಣೆ ಅವರು ಯುರೋಪ್ ಪ್ರವಾಸದ ಸಂಧರ್ಭದಲ್ಲಿ ಬ್ರಿಟನ್‌ನಲ್ಲಿ ಎರಡು ದಿನಗಳ ಪ್ರವಾಸವನ್ನು ಹಮ್ಮಿಕೊಂಡಿದ್ದರು, ಇದೇ ಸಂಧರ್ಭದಲ್ಲಿ ಬ್ರಿಟನ್‌ನ ರಕ್ಷಣಾ ಕಾರ್ಯದರ್ಶಿ ಬೆನ್ ವಾಲ್ಸೆ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ ಎಂದುಭಾರತೀಯಹೈಕಮಿಷನ್‌ತಿಳಿಸಿದೆ.

## ಜೂನ್ 2021 ರಲ್ಲಿ 92,849 ಕೋಟಿ ರೂ. GST ಆದಾಯಸಂಗ್ರಹ




* 2021 ರ ಜೂನ್'ನಲ್ಲಿ ಒಟ್ಟು GST ಆದಾಯ 92,849 ಕೋಟಿ ರೂ. ಸಂಗ್ರಹವಾಗಿದೆ, ಇದರಲ್ಲಿ ಸಿಜಿಎಸ್‌ಟಿ 16,424 ಕೋಟಿ ರೂ. ಎಸ್‌ಜಿಎಸ್‌ಟಿ 20,397 ಕೋಟಿರೂ.ಐಜಿಎಎಸ್‌ಟಿ49,079 ಕೋಟಿರೂ.ಆದಾಯಸಂಗ್ರಹವಾಗಿದೆ,ಹಾಗೂಸೆಸ್ 6,949 ಕೋಟಿ ರೂ. ಸಂಗ್ರಹಿಸಲಾಗಿದೆ ಎಂದು ವಿತ್ತ ಸಚಿವಾಲಯವು ಮಾಹಿತಿಯನ್ನು ನೀಡಿದೆ.

## ಮೀನುಗಾರರಿಗಾಗಿ "ಮತ್ಸ್ಯ ಸೇತು" ಅಪ್ಲಿಕೇಶನ್ ಪ್ರಾರಂಭ




* ಪ್ರಸ್ತುತ ಮೀನುಗಾರರಿಗಾಗಿ 'ಮತ್ಸ್ಯ ಸೇತು' ಎಂಬ ಮೊಬೈಲ್ ಅಪ್ಲಿಕೇಶನ್'ನ್ನು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ಗಿರಿರಾಜ್ ಸಿಂಗ್ ಅವರು ಬಿಡುಗಡೆ ಗೊಳಿಸಿದರು.

* ಭುವನೇಶ್ವರ ಐಸಿಎಆರ್ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಸಿಹಿನೀರಿನ ಅಕ್ವಾಕಲ್ಚರ್ ಈ 'ಮತ್ಸ್ಯ ಸೇತು' ಅಪ್ಲಿಕೇಶನ್'ನ್ನು ಅಭಿವೃದ್ಧಿಪಡಿಸಿದೆ, ಇದಕ್ಕೆ ಧನಸಹಾಯವನ್ನು ಹೈದರಾಬಾದ್'ನ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ನೀಡಿದೆ.

* ಈ 'ಮತ್ಸ್ಯ ಸೇತು' ಅಪ್ಲಿಕೇಶನ್ ವಿಷಯವಾರು ಸ್ವಯಂ ಕಲಿಕೆ ಆನ್‌ಲೈನ್ ಕೋರ್ಸ್ ಮಾಡ್ಯೂಲ್ ಗಳನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದ್ದಾರೆ, ಹಾಗೂ ಈ ಆಪ್'ನಲ್ಲಿ ಪ್ರಸಿದ್ಧ ಜಲಚರ ಸಾಕಣೆ, ಮರ್ರೆಲ್, ಕ್ಯಾಟ್‌ಫಿಶ್, ಸ್ಕ್ಯಾಂಪಿ, ಅಲಂಕಾರಿಕ ಮೀನು ಹಾಗೂ ಮುತ್ತು ಸಾಕಾಣಿಕೆ ಮುಂತಾದ ವಾಣಿಜ್ಯಿಕವಾಗಿ ಪ್ರಮುಖ ಮೀನುಗಳ ಸಂತಾನೋತ್ಪತ್ತಿ ಮತ್ತು ಬೆಳೆಯುವ ಸಂಸ್ಕೃತಿಯ ಬಗ್ಗೆ ಪ್ರಾಯೋಗಿಕ ಪ್ರದರ್ಶನಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಸಿಹಿನೀರಿನ ಜಲಚರ ಸಾಕಣೆ ತಂತ್ರಜ್ಞಾನಗಳನ್ನು ಪ್ರಸಾರ ಮಾಡುವ ಉದ್ದೇಶದಿಂದ ಭಾರತದಾದ್ಯಂತ ಇರುವ ಆಕ್ವಾ ರೈತರಿಗಾಗಿ ಈ ಆನ್‌ಲೈನ್ ಕೋರ್ಸ್ ಅಪ್ಲಿಕೇಶನ್'ನ್ನು ಆರಂಭಿಸಿದ್ದಾರೆ.

* ಜಲಚರಗಳ ಮೂಲಕ ಮೀನು ಉತ್ಪಾದಿಸುವ ಜಗತ್ತಿನ 2 ನೇ ಪ್ರಮುಖ ದೇಶ ಭಾರತವಾಗಿದೆ, ಹಾಗೂ ವಿಶ್ವದಾದ್ಯಂತ ಮೀನುಗಳನ್ನು ರಫ್ತು ಮಾಡುವ 4 ನೇ ಅತಿದೊಡ್ಡ ದೇಶ ಭಾರತವಾಗಿದೆ.

* ಭಾರತದಲ್ಲಿ 28 ದಶಲಕ್ಷ ಜನರಿಗೆ ಮೀನುಗಾರಿಕೆಮತ್ತು ಜಲಚರ ಸಾಕಣೆ ಉತ್ಪಾದನೆಯು ವಲಯವುಉದ್ಯೋಗವನ್ನುನೀಡಿದೆ.

## ಭಾರತದ ಮೊದಲ UPI ಆಧಾರಿತ ಕ್ಯಾಶ್‌ಲೆಸ್ ಪಾರ್ಕಿಂಗ್ ನ್ನು ಆರಂಭಿಸಿದದೆಹಲಿಮೆಟ್ರೋ



* ಭಾರತದ ಮೊದಲ ಫಾಸ್ಟ್ಯಾಗ್ ಅಥವಾ UPI ಆಧಾರಿತ ಪಾರ್ಕಿಂಗ್ ಸೌಲಭ್ಯವನ್ನು ದೆಹಲಿ ಮೆಟ್ರೋರೈಲು ನಿಗಮ 2021 ರ ಜುಲೈ 6 ರಂದು ಪ್ರಾರಂಭಿಸಿದೆ.

* ಈ UPI ಆಧಾರಿತ ಕ್ಯಾಶ್‌ಲೆಸ್ ಪಾರ್ಕಿಂಗ್'ನಿಂದಾಗಿ ಪ್ರವೇಶ ಮತ್ತು ಪಾವತಿಗಾಗಿ ಸಮಯವನ್ನು ಕಡಿಮೆ ಮಾಡಲು ಈ ಸೌಲಭ್ಯವನ್ನು ಆರಂಭಿಸಿದ್ದಾರೆ.

* ಈ ಯುಪಿಐ ಆಧಾರಿತ ಪಾರ್ಕಿಂಗ್ ಸೌಲಭ್ಯವನ್ನು ಕಾಶ್ಮೀರಿ ಗೇಟ್ ಮೆಟ್ರೋ ನಿಲ್ದಾಣದಲ್ಲಿ ದೆಹಲಿ ಮೆಟ್ರೋ ವ್ಯವಸ್ಥಾಪಕ ನಿರ್ದೇಶಕ ಡಾ.ಮಂಗು ಸಿಂಗ್ ಅವರು ಆರಂಭಿಸಿದರು.

* ಪ್ರಸ್ತುತ 4 ವೀಲರ್'ಗಳ ಪ್ರವೇಶ ಮತ್ತು ನಿರ್ಗಮನ ಪಾವತಿಯನ್ನು ಫಾಸ್ಟ್‌ಟ್ಯಾಗ್ ಮೂಲಕ ಮಾಡಬಹುದಾಗಿದೆ, ಈ ಸೌಲಭ್ಯವು ಫಾಸ್ಟ್ಯಾಗ್ ಹೊಂದಿರುವ ವಾಹನಗಳನ್ನು ಅದರ ಅಡಿಯಲ್ಲಿ ನಿಲ್ಲಿಸಲು ಮಾತ್ರ ಅವಕಾಶ ಕಲ್ಪಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

* 2 ವೀಲರ್'ಗಳ ಪ್ರವೇಶವನ್ನು ದೆಹಲಿ ಮೆಟ್ರೋ ಸ್ಮಾರ್ಟ್ ಕಾರ್ಡ್ ಬಳಸುವ ಮೂಲಕ ಮಾತ್ರ ಮಾಡಬಹುದು.

* ಸರ್ಕಾರದ ಡಿಜಿಟಲ್ ಇಂಡಿಯಾ ಉಪಕ್ರಮದ ಅಡಿಯಲ್ಲಿ ಈ ನಗದುರಹಿತ ಪಾರ್ಕಿಂಗ್ ಯೋಜನೆಯು ಒಂದು ಉತ್ತಮ ಹೆಜ್ಜೆಯಾಗಲಿದೆಎಂದುತಿಳಿಸಿದ್ದಾರೆ.

# 08-07-2021

## ಹೈಟಿ ದೇಶದ ಅಧ್ಯಕ್ಷನ ಹತ್ಯೆ



* ಹೈಟಿ ದೇಶದ ಅಧ್ಯಕ್ಷ ಜೊವೆನೆಲ್ ಮೊಯಿಸ್ ಅವರ ಹತ್ಯೆಯಾಗಿದೆ, ಈ ಹತ್ಯೆಗೆ ಸಂಬಂಧಿಸಿದ ನಾಲ್ಕು ಹಂತಕರನ್ನು ಹೈಟಿಯ ಪೊಲೀಸರು ಗುಂಡಿಟ್ಟು ಕೊಂದಿದ್ದಾರೆ, ಹಾಗೂ ಇನ್ನುಳಿದ ಆರೋಪಿಗಳನ್ನು ಬಂಧನಕ್ಕೆ ಒಳಪಡಿಸಿದ್ದಾರೆ ಎಂದು ಹೈಟಿಯ ಪೊಲೀಸ್ ಮುಖ್ಯಸ್ಥರು ಮಾಹಿತಿ ನೀಡಿದ್ದಾರೆ.

* ಹೈಟಿ ರಾಷ್ಟ್ರವು ಅಮೇರಿಕ ಖಂಡದಲ್ಲೇ ಅತ್ಯಂತ ಬಡ ರಾಷ್ಟ್ರವಾಗಿದೆ.

* 2017 ರಿಂದ ಜೊವೆನೆಲ್ ಮೊಯಿಸ್ ಅವರು ಹೈಟಿ ದೇಶದ ಅಧ್ಯಕ್ಷರಾಗಿ ಅಧಿಕಾರವನ್ನು ನಡೆಸುತ್ತಿದ್ದರು.

* ಈ ಹಿಂದೆ 2010 ರಲ್ಲಿ ಉಂಟಾದ ಭೂಕಂಪ ಹಾಗೂ 2016 ರಲ್ಲಿ ಉಂಟಾದ ಮ್ಯಾಥ್ಯೂ ಚಂಡಮಾರುತಗಳು ಈ ಹೈಟಿ ದೇಶವನ್ನು ಸಂಕಷ್ಟಕ್ಕೆ ಒಳಪಡಿಸಿದ್ದವು.

* ಜೊವೆನೆಲ್ ಮೊಯಿಸ್ ಅವರ ಅಧಿಕಾರ ಅವಧಿಯು ಫೆಬ್ರುವರಿ ತಿಂಗಳಿನಲ್ಲಿ ಅಂತ್ಯವಾದ ಹಿನ್ನಲೆಯಿಂದಾಗಿ ಇವರಿಗೆ ರಾಜೀನಾಮೆಯನ್ನು ನೀಡಿ ಎಂದು ಒತ್ತಡ ಹೇರಲಾಗಿತ್ತು.

## ಮಾಜಿ ಮುಖ್ಯ ಮಂತ್ರಿ ವೀರಭದ್ರ ಸಿಂಗ್ ವಿಧಿವಶ



* ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ವೀರಭದ್ರ ಸಿಂಗ್ ಅವರು ತಮ್ಮ 87 ನೇ ವರ್ಷ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ವೀರಭದ್ರ ಸಿಂಗ್ ಅವರು 9 ಬಾರಿ ಶಾಸಕರಾಗಿ ಮತ್ತು 5 ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

* ವೀರಭದ್ರ ಸಿಂಗ್ ಅವರು 6 ಬಾರಿ ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ, ಹಾಗೂ ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ 1998 ರಿಂದ 2003 ರವರೆಗೆ ಸೇವೆಸಲ್ಲಿಸಿದ್ದಾರೆ.

* ಮಾಜಿ ಮುಖ್ಯ ಮಂತ್ರಿ ವೀರಭದ್ರ ಸಿಂಗ್ ಅವರು ನಿಧನಕ್ಕೆ ಈಗಿನ ಹಿಮಾಚಲ ಮುಖ್ಯಮಂತ್ರಿ ಜೈರಾಂ ಠಾಕೂರ್, ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಸಂತಾಪ ಸೂಚಿಸಿದ್ದಾರೆ.

## ಮಂಗಳೂರು ಯಶವಂತಪುರ ರೈಲಿಗೆ ವಿಸ್ಟಾಡೋಮ್ ಬೋಗಿ




* ಪ್ರಸ್ತುತ ಮಂಗಳೂರು ಯಶವಂತಪುರ ನಡುವೆ ಸಂಚರಿಸುವ ವಿಶೇಷ ರೈಲಿಗೆ ಗಾಜಿನ ಛಾವಣಿಯನ್ನು ಹೊಂದಿರುವ ಆಕರ್ಷಕ ವಿಸ್ಟಾಡೋಮ್ ಬೋಗಿಗಳ ಸೇರ್ಪಡೆ ಮಾಡುತ್ತಿದ್ದು, ಈ ಚಿತ್ರದ ಮಾಹಿತಿಯನ್ನು ರೈಲ್ವೆ ಇಲಾಖೆ ಹಂಚಿಕೊಂಡಿದೆ.

* ಈ ಮಂಗಳೂರು ಯಶವಂತಪುರ ವಿಸ್ಟಾಡೋಮ್ ಬೋಗಿ ರೈಲು ತನ್ನ ಸಂಚಾರವನ್ನು ಇದೇ ಜುಲೈ. 11 ರಿಂದ ಪ್ರಾರಂಭವಾಗಲಿದೆ, ಈ ರೈಲಿನ ವಿಸ್ಟಾಡೋಮ್ ಬೋಗಿಗಳಿಗೆ ಇದೇ ಜುಲೈ. 7 ರಿಂದ ಬುಕ್ಕಿಂಗ್ ಆರಂಭವಾಗಿದೆ.

* ಈ ವಿಸ್ಟಾಡೋಮ್ ಬೋಗಿಯ ರೈಲಿನ ಮೂಲಕ ಪ್ರಯಾಣ ಬೆಳಸುವದರಿಂದ ಹಗಲಿನ ಸಮಯದಲ್ಲಿ ಪ್ರಕೃತಿ ಸೌಂದರ್ಯವನ್ನು ಸವಿಯಬಹುದಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

## ಕೋವಿಡ್ 19 ವೈರಸ್‌ನ ಹೊಸ ರೂಪಾಂತರ "ಲ್ಯಾಂಬ್ಡಾ"



* ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್ 19 ವೈರಸ್‌ನ ಹೊಸ ರೂಪಾಂತರ "ಲ್ಯಾಂಬ್ಡಾ" ಎಂಬ ತಳಿ ಪತ್ತೆಯಾಗಿದೆ ಎಂದು ತಿಳಿಸಿದೆ, ಈ ಕೋವಿಡ್ 19 ತಳಿಯ ಸೋಂಕಿನ ಪ್ರಸರಣ ಜಗತ್ತಿಗೆ ಹೊಸ ಅಪಾಯನುಂಟು ಮಾಡುವ ಸಾಧ್ಯತೆಗಳಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತ ಪಡಿಸಿದೆ.

* ಪ್ರಸ್ತುತ "ಲ್ಯಾಂಬ್ಡಾ" ಎಂಬ ಕೋವಿಡ್ 19 ತಳಿಯು ಅಮೆರಿಕ, ಬ್ರಿಟನ್, ಫ್ರಾನ್ಸ್, ಇಟಲಿ, ಜರ್ಮನಿ ಒಟ್ಟಾರೆ 31 ರಾಷ್ಟ್ರಗಳಲ್ಲಿ ಈ "ಲ್ಯಾಂಬ್ಡಾ" ತಳಿಯ ಸೋಂಕಿನ ಪ್ರಕರಣಗಳು ವರದಿಯಾಗಿವೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಬ್ರಿಟನ್‌ನ ಆರೋಗ್ಯ ಸಂಸ್ಥೆ 'ಪಬ್ಲಿಕ್ ಹೆಲ್ತ್ ಇಂಗ್ಲೆಂಡ್'ನ ವಿಜ್ಞಾನಿಗಳು ನೀಡಿರುವ ಮಾಹಿತಿ ಪ್ರಕಾರ ಈ ಲ್ಯಾಂಬ್ಡಾ ತಳಿಯ ಸೋಂಕು ತೀವ್ರವಾಗಿ ಪ್ರಸರಿಸಬಹುದಾಗಿದೆ, ಆದರೆ ಈ ವಿಷಯದ ಬಗ್ಗೆ ಯಾವುದೇ ಪುಷ್ಟೀಕರಿಸುವ ವೈಜ್ಞಾನಿಕ ಆಧಾರಗಳು ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

## ಒಲಿಂಪಿಯನ್ ಹಾಕಿಪಟು ಕೇಶವ್ ದತ್ ನಿಧನ



* ಭಾರತೀಯ ಹಾಕಿಯ ಸುವರ್ಣ ಯುಗದ ಹಾಕಿಪಟು ಕೇಶವ್ ದತ್ ಅವರು ಅನಾರೋಗ್ಯದ ಕಾರಣದಿಂದ ವಿಧಿವಶರಾಗಿದ್ದಾರೆ.

* ಕೇಶವ್ ದತ್ ಅವರು 2 ಬಾರಿಯ ಒಲಿಂಪಿಕ್ಸ್ ಸ್ವರ್ಣ ವಿಜೇತ ಹಾಕಿ ತಂಡದ ಸದಸ್ಯರಾಗಿದ್ದರು.

* ಕೇಶವ್ ದತ್ ಅವರು 1925 ರ ಡಿ. 29 ರಂದು ಲಾಹೋರ್‌ನಲ್ಲಿ ಜನಿಸಿದರು, ಹಾಗೂ ಇವರು ಹಾಫ್ಬ್ಯಾಕ್ ಆಟಗಾರನಾಗಿ ಜನಪ್ರಿಯತೆಯನ್ನು ಪಡೆದಿದ್ದರು.

* 1948 ರ ಲಂಡನ್ ಒಲಿಂಪಿಕ್ಸ್ ಮತ್ತು 1952 ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ಸ್ವರ್ಣ ವಿಜೇತ ಭಾರತ ತಂಡದ ಸದಸ್ಯ ಕೂಡ ಆಗಿದ್ದರು.

* ಕೇಶವ ದತ್ ಅವರು 1948 ರ ಒಲಿಂಪಿಕ್ಸ್‌ಗೂ ಮೊದಲ ಹಾಕಿ ದಂತಕತೆಯಾಗಿರುವ ಮೇಜರ್ ಧ್ಯಾನ್ ಚಂದ್ ನಾಯಕತ್ವದಲ್ಲಿ ಪೂರ್ವ ಆಫ್ರಿಕಾ ಪ್ರವಾಸದ ಭಾರತ ತಂಡದಲ್ಲಿದ್ದರು.

* ಕೇಶವ ದತ್ ಅವರು 2019 ರಲ್ಲಿ 'ಮೋಹನ್ ಬಗಾನ್ ರತ್ನ' ಗೌರವವನ್ನು ಪಡೆದುಕೊಂಡಿದ್ದರು.

* ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಹಾಗೂ ಹಾಕಿ ಇಂಡಿಯಾ ಅಧ್ಯಕ್ಷ ಗ್ಯಾನೇಂದ್ರೊ ನಿಂಗೋಂಬಮ್ ಅವರು ಕೇಶವ್ ದತ್ ಅವರು ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

## ಉತ್ತರ ಕೊರಿಯಾದಲ್ಲಿ ಆಹಾರದ ತೀವ್ರ ಕೊರತೆ



* ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯು ತಿಳಿಸಿರುವ ಮಾಹಿತಿಯ ಪ್ರಕಾರ ಉತ್ತರ ಕೊರಿಯಾ ರಾಷ್ಟ್ರವು ಈ ವರ್ಷ ಸರಿ ಸುಮಾರು 8,60,000 ಟನ್ ಆಹಾರ ಕೊರತೆಯನ್ನು ಅನುಭವಿಸುತ್ತಿದೆ ಎಂದು ತಿಳಿಸಿದೆ, ಹಾಗೂ ಈ ದೇಶವು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಆಹಾರ

ಸಮಸ್ಯೆಯನ್ನು ಎದುರಿಸುವ ಎಲ್ಲ ಸಾಧ್ಯತೆಗಳಿವೆ ಎಂದು ತಿಳಿಸಿದೆ.

* ಉತ್ತರ ಕೊರಿಯಾ ದೇಶವು ಇದೀಗ ತನ್ನ ಪರಮಾಣು ಶಸ್ತ್ರ ಹಾಗೂ ಕ್ಷಿಪಣಿ ಕಾರ್ಯಕ್ರಮಗಳಿಗಾಗಿ ಹಲವಾರು ಅಂತರಾಷ್ಟ್ರೀಯ ಆರ್ಥಿಕ ದಿಗ್ಬಂಧನಗಳನ್ನು ಅನುಭವಿಸುತ್ತಿದೆ.

* ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಹೊರೆಯನ್ನು ಹೇರುತ್ತಿದೆ, ಇದೀಗ ಉತ್ತರ ಕೊರಿಯಾ ದೇಶವು ತೀವ್ರ ಆಹಾರ ಕೊರತೆಯನ್ನು ಅನುಭವಿಸುತ್ತಿದ್ದೇವೆ ಎಂದುಒಪ್ಪಿಕೊಂಡಿದೆ.

## ಮೋದಿ ಸರ್ಕಾರಕ್ಕೆ ನೂತನ 43 ಸಚಿವರು ಸಂಪುಟ ಸೇರ್ಪಡೆ



* ಪ್ರಧಾನಿ ನರೇಂದ್ರ ಮೋದಿ ನೇತೃತ್ವ NDA 2.0 ಸರ್ಕಾರವು ಇದೀಗ ಸಚಿವ ಸಂಪುಟ ಪುನರ್ ರಚನೆಯನ್ನುಮಾಡಿದೆ,ಇದರಲ್ಲಿಒಟ್ಟಾರೆ43ಜನನೂತನಸಚಿವರಾಗಿಸಂಪುಟಸೇರಿಕೊಂಡಿದ್ದಾರೆ.

* ನರೇಂದ್ರ ಮೋದಿ ಸಚಿವ ಸಂಪುಟಕ್ಕೆ ಕರ್ನಾಟಕ ರಾಜ್ಯದಿಂದ 4 ಜನ ಸೇರ್ಪಡೆಯಾಗಿದ್ದಾರೆ, ಚಿತ್ರದುರ್ಗದ ಸಂಸದ: ಎ. ನಾರಾಯಣಸ್ವಾಮಿ, ಉಡುಪಿ ಚಿಕ್ಕಮಗಳೂರು ಸಂಸದೆ: ಶೋಭಾ ಕರಂದ್ಲಾಜೆ, ಬೀದರ್ ಸಂಸದ: ಭಗವಂತ್ ಖೂಬಾ ಮತ್ತು ರಾಜ್ಯಸಭಾ ಸದಸ್ಯ: ರಾಜೀವ್ ಚಂದ್ರಶೇಖರ್ ಅವರು ಇದೀಗ ಕೇಂದ್ರ ರಾಜ್ಯ ಖಾತೆ ಸಚಿವರಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು.

* ನೂತನ 43 ಸಚಿವರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

* ಹೊಸದಾಗಿ ಸಚಿವ ಸಂಪುಟಕ್ಕೆ ಸೇರ್ಪಡೆಯಾದ ನೂತನ ಸಚಿವರು : ನಾರಾಯಣ ತಾತು ರಾಣೆ, ಸರ್ಬಾನಂದ ಸೋನೊವಾಲ್, ಡಾ. ವಿರೇಂದ್ರ ಕುಮಾರ್, ಜ್ಯೋತಿರಾಧಿತ್ಯ ಸಿಂಧಿಯಾ, ರಾಮಚಂದ್ರ ಪ್ರಸಾದ್ ಸಿಂಗ್, ಅಶ್ವಿನ್ ವೈಷ್ಣವ್, ಪಶುಪತಿ ಕುಮಾರ್ ಪರಾಸ್, ಕಿರಣ್ ರಿಜಿಜು, ರಾಜ್ ಕುಮಾರ್ ಸಿಂಗ್, ಹರ್ದೀಪ್ ಸಿಂಗ್ ಪುರಿ, ಮನ್ಸೂಕ್ ಮಾಂಡವಿಯಾ, ಭೂಪೇಂದ್ರ ಯಾದವ್, ಪಿ ರೂಪಾಲ, ಜಿ ಕಿಶನ್ ರೆಡ್ಡಿ, ಅನುರಾಗ್ ಠಾಕೂರ್, ಪಂಕಜ್ ಸಿಂಗ್ ಚೌಧರಿ, ರಾಜೀವ್ ಚಂದ್ರಶೇಖರ್, ಶೋಭ ಕರಂದ್ಲಾಜೆ, ಎ ನಾರಾಯಣಸ್ವಾಮಿ, ಭಗವಂತ್ ಖೂಬಾ, ಅನುಪ್ರಿಯಾ ಸಿಂಗ್ ಪಟೇಲ್, ಸತ್ಯಾಪಾಲ್ ಸಿಂಗ್ ಭಗೇಲ್, ಭಾನುಪ್ರತಾಪ್ ಸಿಂಗ್ ವರ್ಮಾ, ದರ್ಶನಾ ವಿಕ್ರಮ ಜರ್ದೋಶಿ, ಮೀನಾಕ್ಷಿ ಲೇಖಿ, ಅನ್ನಪೂರ್ಣ ದೇವಿ, ಕುಶಾಲ್ ಕಿಶೋರ್, ಅಜಯ್ ಭಟ್ ಸೇರಿದಂತೆ ಒಟ್ಟಾರೆ 43 ನಾಯಕರುನೂತನಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

## ಅಸ್ಸಾಂನಲ್ಲಿ ಗ್ರೇವೆಲಿಯಾ ಬೊರೊ ಎಂಬ ಹೊಸ ಭೂಗತ ಜೇಡ ಪತ್ತೆ



* ಪಶ್ಚಿಮ ಅಸ್ಸಾಂ'ನ ಚಿರಾಂಗ್ ಮೀಸಲು ಅರಣ್ಯದ ಜಾರ್ಬರಿ ಶ್ರೇಣಿಯಲ್ಲಿ 2 ಜಾತಿಯ ಜೇಡಗಳುಪತ್ತೆಯಾಗಿವೆ, ಈ 2 ಜಾತಿಯ ಜೇಡಗಳು ಒಂದೇ ಜಾಗವನ್ನು ಹಂಚಿಕೊಳ್ಳುತ್ತಿವೆ.

* ಗ್ರೇವೆಲಿಯಾ ಬೊರೊ ಎಂಬ ಬಿಲ ಜೇಡ ಹೊಸದಾಗಿ ಪತ್ತೆಯಾಗಿದೆ, ಇದನ್ನು 129 ವರ್ಷಗಳ ಹಿಂದೆ ಸ್ವೀಡಿಷ್ ಅರಾಕ್ನಾಲಜಿಸ್ಟ್, ಟೋರ್ಡ್ ಟ್ಯಾಮೆರ್ಲಾನ್ ಟಿಯೋಡರ್ ಥೋರೆಲ್ ಅವರು ತಿಳಿಸಿದ ನಂತರ ಮೊದಲ ಬಾರಿಗೆ ದಾಖಲಿಸಲಾಗಿದೆ.

* ಬೋಡೋಲ್ಯಾಂಡ್ ಪ್ರಾದೇಶಿಕ ಪ್ರದೇಶದಿಂದ ಈ 2 ಜೇಡಗಳನ್ನು ಪತ್ತೆಹಚ್ಚಲಾಗಿದೆ.

* ಗ್ರೇವೆಲಿಯಾ ಬೊರೊ ನೆಮೆಸಿಡೆ ಕುಟುಂಬಕ್ಕೆ ಸೇರಿದೆ, ಹಾಗೂ ಡೆಕ್ಸಿಪ್ಪಸ್ ಕ್ಲೈನಿ ಸಾಲ್ಟಿಸಿಡೆ ಕುಟುಂಬಕ್ಕೆ ಸೇರಿದೆ ಇದು ಭೂಮಿಯ ಮೇಲಿನ ಎಲ್ಲಾ ಜೇಡಗಳ ಅತಿದೊಡ್ಡ ಜೇಡ ಕುಟುಂಬವಾಗಿದೆ.

* ವಿಷಪೂರಿತ ಹಾವನ್ನು ಪ್ರಸ್ತುತ ಮಿಜೋರಾಂ ವಿಶ್ವವಿದ್ಯಾಲಯದ ಸಂಶೋಧಕರ ತಂಡವು ಭಾರತದ ಹರ್ಪಿಟೋಫೂನಾಗೆ ಸೇರಿಸಿದೆ, ಹಾಗೂ ಇದು ಐಜಾಲ್'ನ ಟುಯಿಂಗ್‌ಹಲೆಂಗ್ ನದಿಪಾತ್ರದ ಒಣಗಿದ ಪ್ರದೇಶದಲ್ಲಿ ಕಂಡು ಬಂದಿದೆ.

* ಇದು ಭಾರತದ ಸ್ಟೋಲಿಜ್ಕಿಯಾ ಕುಲದ 3 ನೇ ಜಾತಿಯ ಹಾವಾಗಿದೆ, ಮಿಜೊ ಯೋಧನಾಗಿದ್ದ ವ್ಯಾನ್‌ನುಯೆಲಿಯಾನಾ ಅವರಿಗೆ ಗೌರವ ನೀಡುವದಕ್ಕಾಗಿ ಈ ಹಾವನ್ನು ಸ್ಟೋಲಿಜ್ಕಿಯಾ ವಾನ್ನುಯೆಲಿಯಾನೈಎಂದುಹೆಸರಿಸಲಾಗಿದೆ.

## ಭಾರತೀಯ ನೌಕಾ (INS) ತಬರ್ ಹಡಗು ಇಟಾಲಿಯನ್ ನೌಕಾಪಡೆಯೊಂದಿಗೆಮಿಲಿಟರಿವ್ಯಾಯಾಮ



* ಇತ್ತೀಚೆಗೆ ಭಾರತೀಯ ನೌಕಾ ಹಡಗು (INS) ತಬರ್ ಇಟಾಲಿಯನ್ ನೌಕಾಪಡೆಯೊಂದಿಗೆ ಮಿಲಿಟರಿವ್ಯಾಯಾಮದಲ್ಲಿ ಪಾಲ್ಗೊಂಡದ್ದವು.

* ಜುಲೈ. 3 ರಂದು INS ತಬಾರ್ ಹಾಗೂ ಇಟಾಲಿಯನ್ ನೌಕಾಪಡೆಗೆ ಜೊತೆಯಾಗಿ ಮೆಡಿಟರೇನಿಯನ್‌ನಲ್ಲಿ ನಿಯೋಜನೆಯ ಭಾಗವಾಗಿ ಪೋರ್ಟ್ ಆಫ್ ನೇಪಲ್ಸ್ ಪ್ರವೇಶಿಸಿವೆ.

* ಕಮಾಂಡಿಂಗ್ ಅಧಿಕಾರಿ ಕ್ಯಾಪ್ಟನ್ ಮಹೇಶ್ ಮಂಗೀಪುಡಿ ನೇಪಲ್ಸ್ ಪ್ರಾಧಿಕಾರದ ಪ್ರಾಧ್ಯಾಪಕರು, ಪ್ರಾದೇಶಿಕ ಇಟಾಲಿಯನ್ ನೌಕಾಪಡೆಯ ಪ್ರಧಾನ ಕಚೇರಿ ಹಾಗೂ ಕರಾವಳಿ ಕಾವಲು ಕೇಂದ್ರ ಕಚೇರಿಯ ಹಿರಿಯ ಅಧಿಕಾರಿಗಳು ಪರಸ್ಪರ ಭೇಟಿಯಾದರು.

* ಪ್ರಸ್ತುತ ಈ ಮಿಲಿಟರಿ ವ್ಯಾಯಾಮವು ವಾಯು ರಕ್ಷಣಾ ಕಾರ್ಯವಿಧಾನಗಳು, ಸಂವಹನ ಕಸರತ್ತುಗಳು,ಹಗಲುಮತ್ತುರಾತ್ರಿಯಹೊತ್ತಿಗೆಕ್ರಾಸ್‌ಡೆಕ್‌ಹೆಲೋಕಾರ್ಯಾಚರಣೆಗಳಂತಹಹಲವಾರು ನೌಕಾ ಕಾರ್ಯಾಚರಣೆಗಳನ್ನು ಜಂಟಿಯಾಗಿ ನಡೆಸಿದವು.

* ಪ್ರಸ್ತುತ ಭಾರತೀಯ ನೌಕಾಪಡೆಯ ತಲ್ವಾರ್ ದರ್ಜೆಯ ನೌಕಾಪಡೆಯ ಮೂರನೆಯದಾಗಿದೆ, ಇದನ್ನು 2004 ರ ಏಪ್ರಿಲ್. 19 ರಂದು ರಷ್ಯಾದ ಕಲಿನಿನ್ಗ್ರಾಡ್ನಲ್ಲಿ ನಿಯೋಜನೆ ಮಾಡಲಾಗಿತ್ತು, ಮತ್ತೇ ಇದು ತಲ್ವಾರ್ ತರಗತಿಯ ಹಡಗು ಹಾಗೂ ಸೂಪರ್ಸಾನಿಕ್ ಬ್ರಹ್ಮೋಸ್ ಹಡಗು ವಿರೋಧಿ ಕ್ರೂಸ್ ಕ್ಷಿಪಣಿಗಳಿಂದ ಶಸ್ತ್ರಸಜ್ಜಿತವಾದ ನೌಕೆ ಇದಾಗಿದೆ.

* ಈ ತಬರ್ ನೌಕೆಯನ್ನು ಮುಂಬೈನಲ್ಲಿನ ಪ್ರಧಾನ ಕಚೇರಿಯಾಗಿರುವ ಭಾರತೀಯ ನೌಕಾಪಡೆಯವೆಸ್ಟರ್ನ್‌ನೇವಲ್‌ಕಮಾಂಡ್‌ಗೆಹಡಗುನ್ನುನಿಯೋಜನೆಮಾಡಲಾಗಿದೆ.

## ವಿಶ್ವದ ಅತಿ ಎತ್ತರದ ಮರಳು ಕೋಟೆ (ಸ್ಯಾಂಡ್‌ಕ್ಯಾಸಲ್) ಡೆನ್ಮಾರ್ಕ್‌ನಲ್ಲಿ ನಿರ್ಮಾಣ



* ಡೆನ್ಮಾರ್ಕ್‌ನಲ್ಲಿ ವಿಶ್ವದ ಅತಿ ಎತ್ತರದ ಮರಳು ಕೋಟೆ (ಸ್ಯಾಂಡ್‌ಕ್ಯಾಸಲ್)ನ್ನು ನಿರ್ಮಾಣ ಮಾಡಲಾಗಿದೆ, ಅದು 21.16 ಮೀ. ಎತ್ತರವಿದೆ ಹಾಗೂ ಗಿನ್ನಿಸ್ ವಿಶ್ವ ದಾಖಲೆಯನ್ನು ಬರೆದಿದೆ.

* ಈ ಹಿಂದೆ 2019 ರಲ್ಲಿ ಡೆನ್ಮಾರ್ಕ್‌ನ ಹೊಸ ಸ್ಯಾಂಡ್‌ಕ್ಯಾಸಲ್'ನ್ನು ಜರ್ಮನಿ ಸ್ಥಾಪನೆ ಮಾಡಿತ್ತು, ಅದು 17.66 ಮೀ. ಎತ್ತರವಾಗಿತ್ತು, ಆದರೆ ಈ ಬಾರಿ ನಿರ್ಮಾಣ ಮಾಡಿರುವ ಸ್ಯಾಂಡ್ ಕ್ಯಾಸಲ್ ಮೊದಲಿನ ದಾಖಲೆಗಿಂತ 3.5 ಮೀ. ಎತ್ತರವಿದೆ.

* ಈ ಸ್ಯಾಂಡ್‌ಕ್ಯಾಸಲ್'ನ್ನು ತ್ರಿಕೋನ ಆಕಾರದಲ್ಲಿ ನಿರ್ಮಾಣ ಮಾಡಿದ್ದಾರೆ, ಇದು 4860 ಟನ್ ಮರಳಿನಿಂದ ತಯಾರಿಸಲಾಗಿದೆ, ಅಲ್ಲದೆ ಇದು ಪಿರಮಿಡ್'ನ್ನು ನೆನಪಿಸುತ್ತದೆ, ಪ್ರಸ್ತುತ ಈ ಸ್ಯಾಂಡ್‌ಕ್ಯಾಸಲ್ ಬ್ಲೋಖಸ್ ಎಂಬ ಸಣ್ಣ ಕಡಲತೀರದ ಹಳ್ಳಿಯಲ್ಲಿ ನಿರ್ಮಿಸಲಾಗಿದೆ, ಈ ಗ್ರಾಮವು ಪ್ರತಿವರ್ಷ ಸುಮಾರು 1 ಮಿಲಿಯನ್ ಪ್ರವಾಸಿಗರನ್ನು ಹೊಂದುವ ಜನಪ್ರಿಯ ಬೀಚ್ ಟೌನ್ ಇದಾಗಿದೆ.

* ಡೆನ್ಮಾರ್ಕ್ ಉತ್ತರ ಯುರೋಪಿನ ನಾರ್ಡಿಕ್ ದೇಶವಾಗಿದೆ, ಇದಲ್ಲದೆ ಡೆನ್ಮಾರ್ಕ್ ಅಭಿವೃದ್ಧಿ ಹೊಂದಿದದೇಶವಾಗಿದೆ.

# 09-07-2021

## ಮಲೇರಿಯಾ ರೋಗ ದಕ್ಷಿಣ ಕನ್ನಡ ಜಿಲ್ಲೆಗೆ 1 ನೇ ಸ್ಥಾನ



* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದ ನಡುವೆ ಇದೀಗ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಮತ್ತು ಡೆಂಗಿ ಜ್ವರದ ಪ್ರಕರಣಗಳು ಹೆಚ್ಚುತ್ತಿವೆ, ಹಾಗೂ ಜಿಲ್ಲೆಯ ಜನಗಳಿಗೆ ಆತಂಕ ಸೃಷ್ಟಿಸಿದೆ.

* ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯದ ಶೇ 80 ರಷ್ಟು ಮಲೇರಿಯಾ ಪ್ರಕರಣ ಇವೆ, ಹಾಗೂ ಈ ಜಿಲ್ಲೆಯೇ ರಾಜ್ಯದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ.

* ಈ ಹಿಂದಿನ ವರ್ಷ ಕರ್ನಾಟಕ ರಾಜ್ಯದಲ್ಲಿ ಒಟ್ಟು 1,701 ಮಲೇರಿಯಾ ಪ್ರಕರಣಗಳು ದಾಖಲಾಗಿದ್ದವು, ಅವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಸುಮಾರು 1,397 ಪ್ರಕರಣ ದಾಖಲಾಗಿದ್ದವು ಎಂದು ಆರೋಗ್ಯ ಇಲಾಖೆಯ ಮಾಹಿತಿ ನೀಡಿತ್ತು, ಇದೀಗ ಮತ್ತೇ ಮಲೇರಿಯಾ ಪ್ರಕರಣಗಳು ಹೆಚ್ಚಾಗುವ ಭೀತಿ ಇದೆ ಎಂದು ಆರೋಗ್ಯ ಇಲಾಖೆಯ ಕಳವಳವನ್ನು ವ್ಯಕ್ತಪಡಿಸಿದೆ.

* 2019 ರಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2,593 ಪ್ರಕರಣಗಳು ಪತ್ತೆಯಾಗಿದ್ದವು, ಅವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2,797 ಮಲೇರಿಯಾ ಪ್ರಕರಣಗಳು ದಾಖಲಾಗಿದ್ದವು, ಆರೋಗ್ಯ ಇಲಾಖೆ ಮತ್ತು ಮಂಗಳೂರು ಮಹಾನಗರ ಪಾಲಿಕೆಯು ಮಲೇರಿಯಾ ಮತ್ತು ಡೆಂಗಿರೋಗದಬಗ್ಗೆ ಜನರಲ್ಲಿ ಜಾಗೃತಿಮೂಡಿಸುವಕೆಲಸವನ್ನು ಆರಂಭಿಸಿದೆ.

## ಮೊದಲ ಝಿಕಾ ವೈರಸ್ ಪ್ರಕರಣ ಕೇರಳ ರಾಜ್ಯದಲ್ಲಿ ಪತ್ತೆ




* ಪ್ರಸ್ತುತ ಕೋವಿಡ್ 19 ಸೋಕಿನ ಪ್ರಕರಣಗಳ ಮಧ್ಯೆ ಇದೀಗ ಕೇರಳ ರಾಜ್ಯದಲ್ಲಿ 'ಝಿಕಾ' ಎಂಬ ವೈರಸ್ ಪತ್ತೆಯಾಗಿದೆ, ಹಾಗೂ ಇದು ಕೇರಳ ರಾಜ್ಯದ ಮೊದಲ ಪ್ರಕರಣವಾಗಿದೆ.

* 'ಝಿಕಾ' ವೈರಸ್ 24 ವರ್ಷದ ಗರ್ಭಿಣಿಯಲ್ಲಿ ಪತ್ತೆಯಾಗಿದೆ, ಇದು ಸೊಳ್ಳೆಯಿಂದ ಹರಡುವ ಕಾಯಿಲೆ ಇದಾಗಿದೆ ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರು ಮಾಹಿತಿ ನೀಡಿದ್ದಾರೆ.

* ಪ್ರಸ್ತುತ ಕೇರಳ ರಾಜ್ಯದಲ್ಲಿ ಇನ್ನೂ 13 ಶಂಕಿತ ಪ್ರಕರಣಗಳಿವೆ, ಆದರೆ ಕೇರಳ ರಾಜ್ಯವು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ದೃಢೀಕರಣಕ್ಕಾಗಿ ಕೇರಳ ಸರ್ಕಾರವು ಕಾಯುತ್ತಿದೆ.

*ಈಝಿಕಾವೈರಸ್‌ರೋಗಲಕ್ಷಣಗಳುಜ್ವರ,ಚರ್ಮದದದ್ದುಗಳುಮತ್ತುಕೀಲುನೋವು.

## ಟೆಲಿಗ್ರಾಮ್ ಚಾನೆಲ್ ಪ್ರಾರಂಭಿಸಿದ ಹೈಕೋರ್ಟ್



* ಹೈಕೋರ್ಟ್ ಹಾಗೂ ಜಿಲ್ಲಾ ನ್ಯಾಯಾಲಯಗಳ ಕಲಾಪಗಳ ಮಾಹಿತಿ ನೀಡುವ ಟೆಲಿಗ್ರಾಮ್ ಚಾನೆಲ್'ನ್ನು ಹೈಕೋರ್ಟ್ ಆರಂಭಿಸಿದೆ, ಪ್ರಸ್ತುತ ವರ್ಚುವಲ್ ಕೇಸ್ ಇನ್ಫರ್ಮೇಷನ್ ಸರ್ವೀಸ್ ಎಂಬಹೆಸರಿನಲ್ಲಿ ಟೆಲಿಗ್ರಾಮ್ ಚಾಟ್‌ಬಾಟ್'ನ್ನು ಹೈಕೋರ್ಟ್ ಅಭಿವೃದ್ಧಿಪಡಿಸಿದೆ.

* ಹೈಕೋರ್ಟ್ ಆರಂಭಿಸಿದ ಈ ಟೆಲಿಗ್ರಾಮ್ ಚಾಟ್‌ಬಾಟ್ ಚಾನೆಲ್'ನಲ್ಲಿ ಇ ನ್ಯಾಯಾಲಯದ ವಿಚಾರಣೆಯ ನೈಜ ಸಮಯ, ಪ್ರಕರಣಗಳ ಪಟ್ಟಿ, ವಿಚಾರಣೆಯ ಸ್ಥಿತಿ, ದೈನಂದಿನ ಆದೇಶಗಳು ಲಭ್ಯವಿರಲಿವೆ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ಈ ಚಾನೆಲ್'ನ ಉದ್ಘಾಟನೆಯನ್ನು ನೆರವೇರಿಸಿದರು.

* ಪ್ರಸ್ತುತ ಈ ಚಾನೆಲ್'ಗೆ ಹೈಕೋರ್ಟ್'ನ 6,500 ಸದಸ್ಯರು ಚಂದಾದಾರರಾಗಿದ್ದಾರೆ, ಹಾಗೂ 5000 ಕ್ಕೂ ಅಧಿಕ ಜಿಲ್ಲಾ ನ್ಯಾಯಾಲಯಗಳ ಸದಸ್ಯರು ಚಂದಾದಾರರಾಗಿದ್ದಾರೆ ಎಂದು ತಿಳಿದುಬಂದಿದೆ.

## ಕೇಂದ್ರದಿಂದ ಕೋವಿಡ್ 19 ಎದುರಿಸಲು 23,123 ಕೋಟಿ ರೂ.ಪ್ಯಾಕೇಜ್‌ಗೆಅನುಮೋದನೆ




* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗವನ್ನು ಎದುರಿಸಲು ಜೊತೆಗೆ ದೇಶದಲ್ಲಿನ ಆರೋಗ್ಯ ಸೇವೆಯ ಮೌಲಸೌಕರ್ಯವನ್ನು ಉತ್ತಮಗೊಳಿಸಲು, ಇದೀಗ 23,123 ಕೋಟಿ ರೂ. ಆರ್ಥಿಕ ಪ್ಯಾಕೇಜ್ ಗೆ ಕೇಂದ್ರ ಸಚಿವ ಸಂಪುಟ ಅನುಮೋದನೆಯನ್ನು ನೀಡಿದೆ.

* ಇತ್ತೀಚಿಗೆ ಕೇಂದ್ರ ಸರ್ಕಾರವು ನೂತನ ಕೇಂದ್ರ ಸಚಿವ ಸಂಪುಟವನ್ನು ರಚಿಸಿದೆ, ಕೇಂದ್ರದ ನೂತನ ಆರೋಗ್ಯ ಸಚಿವರಾಗಿರುವ ಮನ್ ಸುಖ್ ಮಾಂಡವಿಯಾ ಅವರು ಈ ಆರ್ಥಿಕ ಪ್ಯಾಕೇಜ್'ನ್ನು ಮುಂಬರುವ ಮಾರ್ಚ್. 2022 ರವರೆಗೆ ಕಾರ್ಯಗತಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

* ಕೇಂದ್ರ ಸರ್ಕಾರವು ಈ ಮೊದಲು ದೇಶಾದ್ಯಂತ ಆರೋಗ್ಯ ಕೇಂದ್ರಗಳು ಮತ್ತು ಕೋವಿಡ್ ಆಸ್ಪತ್ರೆಗಳ ನಿರ್ಮಾಣಕ್ಕಾಗಿ 15 ಸಾವಿರ ಕೋಟಿ ರೂ. ನೀಡಿದೆ ಎಂದು ಆರೋಗ್ಯ ಸಚಿವರಾಗಿರುವ ಮನ್ ಸುಖ್ ಮಾಂಡವಿಯಾ ಅವರು ತಿಳಿಸಿದರು.

* ಕೇಂದ್ರ ಸರ್ಕಾರದ ಈ ಪ್ಯಾಕೇಜ್'ನಲ್ಲಿ ದೇಶಾದ್ಯಂತ 736 ಜಿಲ್ಲೆಗಳಲ್ಲಿರುವ ಪ್ರಾಥಮಿಕ ಹಾಗೂ ಜಿಲ್ಲಾ ಆರೋಗ್ಯ ಕೇಂದ್ರಗಳನ್ನು ಪ್ರಸ್ತುತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಈ ಯೋಜನೆಯನ್ನು ಜಾರಿಗೊಳಿಸಲಿವೆ ಎಂದು ತಿಳಿಸಲಾಗಿದೆ.

* ಈ ಆರ್ಥಿಕ ಪ್ಯಾಕೇಜ್'ನಿಂದ ಸರಿ ಸುಮಾರು 2.4 ಲಕ್ಷ ಸಾಮಾನ್ಯ ಬೆಡ್, 20 ಸಾವಿರ ಐಸಿಯು ಬೆಡ್ ನಿರ್ಮಾಣ ಮಾಡಲಾಗುವದು, ಇವುಗಳಲ್ಲಿ ಶೇ. 20 ರಷ್ಟು ಬೆಡ್ಗಳನ್ನೂ ಮಕ್ಕಳಿಗಾಗಿಮೀಸಲಿಡಲಾಗುತ್ತದೆಎಂದುತಿಳಿಸಿದ್ದಾರೆ.

## ICC ಸಿಇಓ ಸ್ಥಾನಕ್ಕೆ ಮನು ಸಾಹ್ನಿ ರಾಜೀನಾಮೆ



* ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ICC)ಯ CEO ಸ್ಥಾನಕ್ಕೆ ಮನು ಸಾಹ್ನಿ ಅವರ ಒರಟು ವರ್ತನೆಯ ಕುರಿತು ಆಂತರಿಕ ತನಿಖೆ ನಡೆಸಿದ 4 ತಿಂಗಳುಗಳ ನಂತರ ತಮ್ಮ ಸಿಇಓ ಸ್ಥಾನಕ್ಕೆ ರಾಜೀನಾಮೆನೀಡಿದ್ದಾರೆ.

* ಮನು ಸಾಹ್ನಿ ಅವರು ಈ ಕ್ಷಣದಿಂದ ICC ಸಿಇಓ ಸ್ಥಾನವನ್ನು ತೊರೆಯಲಿದ್ದಾರೆ, ಪ್ರಸ್ತುತ ಹಂಗಾಮಿ ಸಿಇಓ ಆಗಿ ಜೆಫ್ ಅಲ್ಲಾರ್ಡಿಸ್ ಅವರು ಈ ಸಿಇಓ ಸ್ಥಾನದಲ್ಲಿ ಮುನ್ನಡೆಯಲಿದ್ದಾರೆ ಎಂದು ವಿಶ್ವ ಸಂಸ್ಥೆಯು ಹೇಳಿಕೆಯನ್ನು ನೀಡಿದೆ.

* ಪ್ರಸ್ತುತ ಮನು ಸಾಹ್ನಿ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಇರುವ ಒರಟು ವರ್ತನೆಗಾಗಿ ಇವರನ್ನು ಈ ಸ್ಥಾನದಿಂದ ಕೈ ಬಿಡಲಾಗಿದೆ ಎಂದು ತಿಳಿಸಿದೆ.

## ಕೋವಿಡ್ 19 ನ 2 DG ಔಷಧ ಉತ್ಪಾದನೆಯ ಪರವಾನಿಗೆ ಪಡೆದಮ್ಯಾನ್‌ಕೈಂಡ್‌ಸಂಸ್ಥೆ




* ಪ್ರಸ್ತುತ ಮ್ಯಾನ್‌ಕೈಂಡ್ ಫಾರ್ಮಾ ಔಷಧ ತಯಾರಿಕಾ ಸಂಸ್ಥೆಯು ಇದೀಗ ಕೋವಿಡ್ 19 ಸಾಂಕ್ರಾಮಿಕ ಸೋಂಕಿಗೆ ಭಾರತೀಯ DRDO ಸಂಸ್ಥೆ ಅಭಿವೃದ್ಧಿಪಡಿಸಿದ 2 ಡಿಜಿ (2 ಡಿಯಾಕ್ಸಿ ಡಿ ಗ್ಲೂಕೋಸ್) ಔಷಧ ತಯಾರಿಕೆ ಮತ್ತು ಮಾರುಕಟ್ಟೆಯ ಪರವಾನಿಗೆಯನ್ನು ಪಡೆದುಕೊಂಡಿದೆ.

* DRDO ಮತ್ತು ಹೈದರಾಬಾದ್'ನ ಡಾ. ರೆಡ್ಡೀಸ್ ಲ್ಯಾಬೊರೇಟರಿ ಜೊತೆಯಾಗಿ ಅಭಿವೃದ್ಧಿಪಡಿಸಿರುವ 2 DG ಔಷಧವು ಪೌಡರ್ ರೂಪದಲ್ಲಿ ಲಭ್ಯವಿರಲಿದೆ, ಈ 2 DG ಔಷಧದ ವೈದ್ಯಕೀಯ ಪ್ರಯೋಗವನ್ನು ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯಾರ್ ಮೆಡಿಸಿನ್ ಮತ್ತು ಅಲೈಡ್ ಸೈನ್ಸಸ್, DRDO ನಡೆಸಿವೆ.

* ಮ್ಯಾನ್‌ಕೈಂಡ್ ಫಾರ್ಮಾ ಔಷಧ ತಯಾರಿಕಾ ಸಂಸ್ಥೆಯು ಈ 2 DG ಔಷಧವನ್ನು ವಿಶಾಖಪಟ್ಟಣಂ ಮತ್ತು ಹಿಮಾಚಲ ಪ್ರದೇಶದ ತಮ್ಮ ಘಟಕಗಳಲ್ಲಿ ತಯಾರಿಮಾಡುತ್ತೇವೆ ಎಂದು ತಿಳಿಸಿದೆ.

* DRDO ಅಭಿವೃದ್ಧಿ ಪಡಿಸಿರುವ ಈ 2 DG ಔಷಧದ 2.34 ಗ್ರಾಂ ಪುಡಿಯ ಪ್ಯಾಕೆಟ್ ಗೆ 990 ರೂ ದರ ನಿಗದಿಪಡಿಸಿ ಮಾರಾಟಕ್ಕೆಸಿದ್ಧವಾಗಿತ್ತು.

## ಇರಾಕ್ ನಲ್ಲಿನ ಅಮೇರಿಕ ರಾಯಭಾರ ಕಚೇರಿ ಮೇಲೆ ರಾಕೆಟ್ ದಾಳಿ



* ಪ್ರಸ್ತುತ ಇರಾಕ್ ನಲ್ಲಿನ ಅಮೆರಿಕ ರಾಯಭಾರ ಕಚೇರಿಯನ್ನು ಗುರಿಯಾಗಿಸಿಕೊಂಡು 3 ರಾಕೆಟ್ ದಾಳಿಯಾಗಿದೆ ಎಂದು ಇರಾಕ್ ಸೇನೆ ಮಾಹಿತಿ ನೀಡಿದೆ.

* ಇರಾಕ್ ಹಾಗೂ ಸಿರಿಯಾದಲ್ಲಿನ ಅಮೆರಿಕ ನೆಲೆಯನ್ನು ಗುರಿಯಾಗಿಸಿ ಸರಣಿ ರಾಕೆಟ್ ಮತ್ತು ಡ್ರೋನ್ ದಾಳಿ ನಡೆಯುತ್ತಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಈ ಅಮೇರಿಕ ರಾಯಭಾರ ಕಚೇರಿಯ ಸೇನಾ ನೆಲೆಯ ಮೇಲಿನ ದಾಳಿಯ ಹೊಣೆಯನ್ನು ಯಾರೂ ಹೊತ್ತಿಲ್ಲ, ಆದರೆ ಇರಾನ್'ನ ಭಯೋತ್ಪಾದಕರು ದಾಳಿ ನಡೆಸಿರಬಹುದು ಎಂದು ಅನುಮಾನಿಸಲಾಗಿದೆ.

* ಅಮೇರಿಕ ರಾಷ್ಟ್ರವು ಇರಾಕ್ ನಲ್ಲಿ ಒಟ್ಟು 2,500 ರಷ್ಟು ಸೈನಿಕರ ನಿಯೋಜನೆಯನ್ನು ಮಾಡಿದೆ.

## ಕೇರ್ನ್ ಎನರ್ಜಿ ಸಂಸ್ಥೆಯಿಂದ ಪ್ಯಾರಿಸ್ ನಲ್ಲಿನ ಭಾರತ ಸರ್ಕಾರದ ಆಸ್ತಿ ಜಪ್ತಿ



* ಪ್ರಸ್ತುತ ಬ್ರಿಟನ್ ಮೂಲದ ಕೇರ್ನ್ ಎನರ್ಜಿ ಸಂಸ್ಥೆಯು ತೆರಿಗೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ಯಾರಿಸ್ 'ನಲ್ಲಿರುವ ಭಾರತ ಸರ್ಕಾರದ 20 ಆಸ್ತಿ ಮುಟ್ಟುಗೋಲುಮಾಡಲು ಫ್ರೆಂಚ್ ನ್ಯಾಯಾಲಯವು ಕೇರ್ನ್ ಎನರ್ಜಿ ಸಂಸ್ಥೆಗೆ ಆದೇಶ ನೀಡಿದೆ.

* ಪ್ರಸ್ತುತ ಫ್ರೆಂಚ್ ನ್ಯಾಯಾಲಯ ಕೇರ್ನ್ ಎನರ್ಜಿ ಸಂಸ್ಥೆಯು ಅರ್ಜಿಯನ್ನು ಪರಿಗಣಿಸಿ ಜೂನ್. 11 ರಂದು ಪ್ಯಾರಿಸ್‌ನಲ್ಲಿರುವ ಭಾರತಕ್ಕೆ ಸೇರಿದ ಆಸ್ತಿಯನ್ನು ವಶಪಡಿಸಿಕೊಳ್ಳಲು ಅನುಮತಿ ನೀಡಿದೆ.

* ಭಾರತ ಸರ್ಕಾರದ 2014 ರ ಭಾರತ ಬ್ರಿಟನ್ ದ್ವಿಪಕ್ಷೀಯ ಹೂಡಿಕೆ ಒಪ್ಪಂದವನ್ನು ಕೇರ್ನ್ ಎನರ್ಜಿ ಕಂಪನಿಗೆ ಅನಗತ್ಯವಾಗಿ ತೆರಿಗೆ ವಿಧಿಸುವ ಮೂಲಕ ಉಲ್ಲಂಘನೆ ಮಾಡಿದೆ ಎಂದು ಆರೋಪಿಸಿತ್ತು.

* ನ್ಯಾಯಮಂಡಳಿಯು ನೀಡಿರುವ ತೀರ್ಪಿನ ಪ್ರಕಾರ ಭಾರತ ಸರ್ಕಾರವು ಕೇರ್ನ್ ಸಂಸ್ಥೆಗೆ 1.2 ಬಿಲಿಯನ್ ಡಾಲರ್ ಮತ್ತು ಅದಕ್ಕೆ ಬಡ್ಡಿ ಸೇರಿಸಿ ಕೊಡುವಂತೆ ಸೂಚಿಸಿದೆ. ಆದರೆ ಭಾರತ ಸರಕಾರವು ಈ ತೀರ್ಪಿನ ನಂತರ ಕೂಡ ಹಣ ಪಾವತಿ ಮಾಡಿಲ್ಲ ಎಂದು ಕೇರ್ನ್ ಸಂಸ್ಥೆ ಆರೋಪಿಸಿ ಬೇರೆ ಬೇರೆ ದೇಶಗಳಲ್ಲಿನ ಭಾರತ ಸರ್ಕಾರದ ಆಸ್ತಿಯನ್ನು ಮುಟ್ಟುಗೋಲು ಪಡೆಯಲು ಮುಂದಾಗಿದೆ.

* ಪ್ರಸ್ತುತ ಕೇರ್ನ್ ಎನರ್ಜಿ ಸಂಸ್ಥೆಯು ಅಮೇರಿಕ, ಬ್ರಿಟನ್, ನೆದರ್ಲೆಂಡ್, ಕೆನಡಾ, ಫ್ರಾನ್ಸ್, ಸಿಂಗಪುರ, ಜಪಾನ್, ಕೇಮನ್ ಐಲೆಂಡ್ಸ್ ದೇಶಗಳಲ್ಲಿನ ನ್ಯಾಯಾಲಯಗಳ ಮನವಿ ಮಾಡಿಕೊಂಡು ಬೇರೆ ಬೇರೆ ದೇಶಗಳಲ್ಲಿನ ಭಾರತ ಸರ್ಕಾರದ 70 ಬಿಲಿಯನ್ ಡಾಲರ್ ಮೊತ್ತದ ಆಸ್ತಿ ವಶಪಡಿಸಿಕೊಳ್ಳಲು ಸಿದ್ಧವಾಗಿದೆ.

## GI ಪ್ರಮಾಣೀಕೃತ ಮಧುರೈ ಜಾಸ್ಮಿನ್ 'ಹೂ' ದುಬೈಗೆ ರಫ್ತು



* 2021 ರ ಜುಲೈ. 8 ರಂದು ತಮಿಳುನಾಡು ರಾಜ್ಯದಲ್ಲಿ ಬೆಳೆದಿರುವ ಹಾಗೂ ಭೌಗೋಳಿಕ ಸೂಚನೆಗಳ (GI) ಪ್ರಮಾಣೀಕೃತ ಪಡೆದ ಮಧುರೈ ಮಲ್ಲಿಗೆ ಹಾಗೂ ಇತರ ಸಾಂಪ್ರದಾಯಿಕ ಹೂ'ಗಳಾಗಿರುವ ಲಿಲಿ, ಬಟನ್ ರೋಸ್, ಚಮಂತಿ ಹಾಗೂ ಮಾರಿಗೋಲ್ಡ್'ನ್ನು ಯುನೈಟೆಡ್ ಸ್ಟೇಟ್ಸ್ ಮತ್ತು ಯುಎಇ'ಗೆ ರಫ್ತು ಮಾಡಲಾಗಿದೆ.

* ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು ತಮಿಳುನಾಡುರಾಜ್ಯದಲ್ಲಿ ಬೆಳೆದಿರುವ ಈ ಹೂವುಗಳನ್ನು ರಾಜ್ಯದ ನೀಲಕೋಟೈ, ದಿಂಡಿಗಲ್ ಮತ್ತು ಸತ್ಯಮಂಗಲಂನಿಂದ ನೋಂದಾಯಿತ ವ್ಯಾನ್‌ಗಾರ್ಡ್'ನಿಂದ ರಫ್ತು ಮಾಡಿದೆ.

* ಯುಎಸ್, ಯುಎಇ, ಸಿಂಗಾಪುರದೇಶಗಳಿಗೆ 2021 ರ ಆರ್ಥಿಕ ವರ್ಷದಲ್ಲಿ ಬೆಳೆದಿರುವ 66.28 ಕೋಟಿ ರೂ. ಮೌಲ್ಯದ ಮಲ್ಲಿಗೆ ಮತ್ತು ಇತರ ಸಾಂಪ್ರದಾಯಿಕ ಹೂವುಗಳನ್ನು ರಫ್ತು ಮಾಡಲಾಗಿದೆ.

* 66.28 ಕೋಟಿ ರೂ. ಮೌಲ್ಯದ ಹೂ'ಗಳಲ್ಲಿ 11.84 ಕೋಟಿ ರೂ. ಹೂವುಗಳನ್ನು ತಮಿಳುನಾಡು ರಾಜ್ಯದಿಂದ ರಫ್ತು ಮಾಡಲಾಗಿದೆ.

## ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆಪಡೆದ 2ನೇ ಭಾರತೀಯ ಗಾಲ್ಫ್ ಆಟಗಾರ ಉದಯನ್ ಮಾನೆ



* 2020 ರ ಟೋಕಿಯೊ ಒಲಿಂಪಿಕ್ಸ್'ಗೆ ಭಾರತೀಯ ಗಾಲ್ಫ್ ಆಟಗಾರ ಉದಯನ್ ಮಾನೆ ಅರ್ಹತೆಯನ್ನು ಪಡೆದುಕೊಂಡಿದ್ದಾರೆ, ಈ ಟೋಕಿಯೋ ಒಲಿಂಪಿಕ್ಸ್ 2021ರ ಜುಲೈ ಮತ್ತು ಆಗಸ್ಟ್ ತಿಂಗಳಲಿನಲ್ಲಿ ನಡೆಯಲಿದೆ.

* ಉದಯನ್ ಮಾನೆ ಅವರು ಪುರುಷರ ಗಾಲ್ಫ್ ಸ್ಪರ್ಧೆಯಲ್ಲಿ 60 ಆಟಗಾರರ ಕ್ಷೇತ್ರದಲ್ಲಿ ಅನಿರ್ಬನ್ ಲಾಹಿರಿ ಯವರನ್ನು ಸೇರಿ ಕೊಂಡರು, ಲಾಹಿರಿ ಅವರು ಸತತವಾಗಿ 2 ನೇ ಒಲಿಂಪಿಕ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ, ಈ ಇವರು 2016 ರ ರಿಯೊ ಒಲಿಂಪಿಕ್ಸ್'ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

* ಉದಯನ್ ಮಾನೆಯವರು ಭಾರತೀಯ ವೃತ್ತಿಪರಗಾಲ್ಫ್ ಆಟಗಾರ.

* ಟೋಕಿಯೊದಲ್ಲಿ ನಡೆಯುವ ಪುರುಷರ ಗಾಲ್ಫ್ ಸ್ಪರ್ಧೆಯಲ್ಲಿ 35 ರಾಷ್ಟ್ರಗಳ 60 ಆಟಗಾರರು ಪಾಲ್ಗೊಳ್ಳಲಿದ್ದಾರೆ.

* ಪ್ರಸ್ತುತ ಜಪಾನ್'ನ ಟೋಕಿಯೊದಲ್ಲಿ, ಟೋಕಿಯೊ ಒಲಿಂಪಿಕ್ಸ್ ಅಥವಾ 2020 ಬೇಸಿಗೆ ಒಲಿಂಪಿಕ್ಸ್ 2021 ರ ಜುಲೈ 23 ರಿಂದ ಆಗಸ್ಟ 8 ರವರೆಗೆ ನಡೆಯುತ್ತದೆ.

# 10-07-2021

## ಅಮೇರಿಕ ಸೇನೆಯು ಅಫ್ಘಾನಿಸ್ತಾನದಿಂದ ಆಗಸ್ಟ್. 31 ರೊಳಗ ಹಿಂದಕ್ಕೆ



* ಪ್ರಸ್ತುತ ಅಫ್ಘಾನಿಸ್ತಾನದಿಂದ ಅಮೇರಿಕ ದೇಶದ ಸೇನೆಯನ್ನು ಆಗಸ್ಟ್. 31 ರೊಳಗ ವಾಪಾಸ್ ಕರೆಸಿಕೊಳ್ಳುವ ನಿರ್ಧಾರವನ್ನು ಅಮೇರಿಕ ಅಧ್ಯಕ್ಷ ಜೋ ಬೈಡನ್ ಅವರು ಸ್ಪಷ್ಟ ಪಡಿಸಿದ್ದಾರೆ.

* ಪ್ರಸ್ತುತ ಈ ಹಿಂದೆ 2001 ರ ಸೆಪ್ಟೆಂಬರ್, 11 ರಂದು ನಡೆದ ಉಗ್ರರ ದಾಳಿಯ ನಂತರ ಅಂದರೆ ಸುಮಾರು 20 ವರ್ಷಗಳಿಂದ ಅಮೇರಿಕ ಸೇನೆ ಅಫ್ಘಾನಿಸ್ತಾನದಲ್ಲಿ ಹೋರಾಡುತ್ತಿದೆ ಎಂದು ಅಧ್ಯಕ್ಷ ಜೋಬೈಡನ್‌ಅವರುತಿಳಿಸಿದ್ದಾರೆ.

## ನೌಕಾಪಡೆಯ ಸುತ್ತಮುತ್ತ 3 ಕಿ.ಮೀ ವ್ಯಾಪ್ತಿಯಲ್ಲಿ ಡ್ರೋನ್ ಹಾರಾಟನಿಷೇಧ



* ಭಾರತೀಯ ನೌಕಾಪಡೆಯ 3 ಕಿ.ಮೀ ವ್ಯಾಪ್ತಿಯಲ್ಲಿನ ನೌಕಾ ನೆಲೆ, ನೌಕಾ ಘಟಕ ಹಾಗೂ ನೌಕಾದಳಕ್ಕೆ ಸೇರಿದ ಸ್ವತ್ತುಗಳ ಪರವಾನಿಗೆ ಇಲ್ಲದ ಡ್ರೋನ್ ಹಾಗೂ ಮಾನವರಹಿತ ವೈಮಾನಿಕ ವಾಹನಗಳು(UAV)ಹಾರಾಟಕ್ಕೆ ಭಾರತೀಯ ನೌಕಾಪಡೆ ನಿಷೇಧ ಹೇರಿ ಆದೇಶ ಹೊರಡಿಸಿದೆ.

*ಒಂದು ವೇಳೆ ನೌಕಾಪಡೆ ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಅವುಗಳನ್ನು ನಾಶಪಡಿಸಲಾಗುವುದು ಅಥವಾ ವಶಕ್ಕೆ ಪಡೆದುಕೊಳ್ಳಲಾಗುತ್ತದೆ, ಇದಲ್ಲದೆ ಭಾರತೀಯ ದಂಡ ಸಂಹಿತೆ 121,121ಎ,287,336,337ಮತ್ತು 338 ಸೆಕ್ಷನ್ ಅಡಿಯಲ್ಲಿ ಕ್ರಮ ಜರಿಗಿಸಲಾಗುವದು ಎಂದು ಭಾರತೀಯ ನೌಕಾಪಡೆ ತಿಳಿಸಿದೆ.

* ಇತ್ತೀಚಿಗೆ ಜಮ್ಮುವಿನ ಭಾರತೀಯ ವಾಯುನೆಲೆಯ ಮೇಲೆ ಡ್ರೋನ್ ದಾಳಿ ನಡೆದ ಹಿನ್ನಲೆಯಲ್ಲಿ ನೌಕಾಪಡೆಯು ಈ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

## ಆಫ್ರಿಕಾ ಮೂಲದ ಬಾಲಕಿ ಜೈಲಾ ಅವಂತ್ ಗಾರ್ಡ್‌ಗೆ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಚಾಂಪಿಯನ್ ಪಟ್ಟ



* 2021 ನೇ ಸಾಲಿನ ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ 14 ವರ್ಷ ವಯಸ್ಸಿನ ಆಫ್ರಿಕಾ ಮೂಲದ ವಿದ್ಯಾರ್ಥಿನಿ ಜೈಲಾ ಅವಂತ್ ಗಾರ್ಡ್ ಗೆಲುವು ದಾಖಲಿಸಿದ್ದಾರೆ.

* ಆಫ್ರಿಕಾ ಮೂಲದ ಸ್ಪರ್ಧಿಯು ಈ ಸ್ಪರ್ಧೆಯ 93 ವರ್ಷಗಳ ಇತಿಹಾಸದಲ್ಲೇ ಮೊದಲಬಾರಿಗೆ ಈ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

* ಭಾರತೀಯ ಅಮೆರಿಕನ್ನರು ಕೆಲವು ವರ್ಷಗಳಿಂದ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ ಹಿಡಿತವನ್ನು ಸಾಧಿಸುತ್ತಿದ್ದರು, ಆದರೆ ಈ ಬಾರಿ ಎರಡು ಹಾಗೂ ಮೂರನೇ ಸ್ಥಾನದಲ್ಲಿದ್ದಾರೆ.

* ಭಾರತೀಯ ಅಮೆರಿಕನ್ ಸ್ಯಾನ್‌ಫ್ರಾನ್ಸಿಸ್ಕೊದ ಸ್ಪರ್ಧಿ 12 ವರ್ಷದ ಚೈತ್ರಾ ತುಮ್ಮಲಾ 2 ನೇ ಸ್ಥಾನ ಹಾಗೂ ನ್ಯೂಯಾರ್ಕ್‌ನ 13 ವರ್ಷದ ಭಾವನಾ ಮದಿನಿ 3 ನೇ ಸ್ಥಾನ ಪಡೆದುಕೊಂಡಿದ್ದಾರೆ.

* ಈ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಚಾಂಪಿಯನ್ ಪಟ್ಟದ ಅಂತಿಮ ಸುತ್ತಿಗೆ ಒಟ್ಟು 11 ಜನ ಆಯ್ಕೆಯಾಗಿದ್ದರು. ಇವರಲ್ಲಿ ಅವಂತ್ ಗಾರ್ಡ್ 'ನ್ಯಾಷನಲ್ ಸ್ಪೆಲ್ಲಿಂಗ್ ಬೀ 2021 ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಈ ಪ್ರಶಸ್ತಿಯ ಪ್ರಥಮ ಬಹುಮಾನ 37 ಲಕ್ಷ ರೂ. ಆಗಿದೆ.

* 2021 ರ ಈ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಚಾಂಪಿಯನ್‌ಷಿಪ್ ಪ್ರಶಸ್ತಿಯನ್ನು ಫ್ಲಾರಿಡಾದ ಒರ್ಲ್ಯಾಂಡೊದಲ್ಲಿರುವ ಇಎಸ್‌ಪಿಎನ್ ವೈಡ್ ವರ್ಲ್ಡ್ ಆಫ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಪ್ರದಾನ ಮಾಡಲಾಗಿದೆ.

## ಬಾಂಗ್ಲಾದೇಶದ ಫುಡ್ ಫ್ಯಾಕ್ಟರಿಯಲ್ಲಿ ಅಗ್ನಿ ಅವಘಡ



* ಬಾಂಗ್ಲಾದೇಶದ ಫುಡ್ ಫ್ಯಾಕ್ಟರಿಯಲ್ಲಿ ಅಗ್ನಿ ದುರಂತ ಸಂಭವಿಸಿದೆ, ಈ ಅಗ್ನಿ ಅವಘಡದಲ್ಲಿ ಸದ್ಯ 52 ಜನರು ಸಾವನ್ನಪ್ಪಿದ್ದಾರೆ ಎಂದು ಅಲ್ಲಿನ ಪೊಲೀಸರು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಬಾಂಗ್ಲಾದೇಶದ ಢಾಕಾದ ರೂಪಗಂಜ್‌ನಲ್ಲಿರುವ ಹಾಶೆಮ್ ಫುಡ್ ಆಯಂಡ್ ಬೆವರೇಜ್ ಫ್ಯಾಕ್ಟರಿಯಲ್ಲಿ ಈ ಅಗ್ನಿ ದುರಂತ ನಡೆದಿದೆ.

* ಈ ಕಟ್ಟಡದ ಬೆಂಕಿ ನಿಯಂತ್ರಣಕ್ಕೆ ಬಂದ ನಂತರ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸುತ್ತವೆ ನಂತರ ನಿಖರ ಮಾಹಿತಿಯನ್ನು ನೀಡಲಾಗುತ್ತದೆ ಎಂದು ಅಗ್ನಿ ಶಾಮಕ ದಳದ ವಕ್ತಾರ ದೇಬಾಶಿಶ್ ಬರ್ಧನ್ ಅವರು ತಿಳಿಸಿದ್ದಾರೆ.

## ವಿಶ್ವದಾದ್ಯಂತ ಪ್ರತಿ ನಿಮಿಷ 11 ಮಂದಿ ಹಸಿವಿನಿಂದ ಸಾವು



* ಪ್ರಸ್ತುತ ಆಕ್ಸ್‌ಫ್ಯಾಮ್ ಸಂಸ್ಥೆಯ ವರದಿಯ ಪ್ರಕಾರ ಜಗತ್ತಿನಾದ್ಯಂತ ಪ್ರತಿ ನಿಮಿಷಕ್ಕೆ 11 ಜನ ಹಸಿವಿನಿಂದ ಸಾವನ್ನಪ್ಪಿದ್ದಾರೆ ಎಂದು ತಿಳಿಸಿದೆ.

* ಆಕ್ಸ್‌ಫ್ಯಾಮ್ ಸಂಸ್ಥೆಯು "ದ್ವಿಗುಣಗೊಳ್ಳುವ ಹಸಿವಿನ ವೈರಸ್" ಎಂಬ ಶೀರ್ಷಿಕೆ ಅಡಿಯಲ್ಲಿ ವರದಿಯನ್ನು ಪ್ರಕಟಿಸಿದೆ.

* ಪ್ರಸ್ತುತ ಕೋವಿಡ್ 19ನ ಸೋಂಕಿನಿಂದ ಪ್ರತಿ ನಿಮಿಷಕ್ಕೆ 7ಜನ ಮೃತಪಟ್ಟರೆ, ಹಸಿವಿನಿಂದ ಪ್ರತಿ ನಿಮಿಷಕ್ಕೆ 11 ಜನ ಮೃತರಾಗುತ್ತಿದ್ದಾರೆ ಎಂದು ವರದಿಯನ್ನು ಪ್ರಕಟಿಸಿದೆ.

* ಆಕ್ಸ್‌ಫ್ಯಾಮ್ ಅಮೆರಿಕ ಅಧ್ಯಕ್ಷ ಮತ್ತು ಸಿಇಒ ಅಬ್ಬಿ ಮ್ಯಾಕ್ಸ್‌ಮ್ಯಾನ್ ನೀಡಿರುವ ಮಾಹಿತಿಯ ಪ್ರಕಾರ, ಪ್ರಸ್ತುತ ಕೋವಿಡ್ 19 ನಿಂದ ಆರ್ಥಿಕ ಸಂಕಷ್ಟ ಎದುರಾಗಿದೆ, ಇದರಿಂದಾಗಿ ಆಹಾರ ಪದಾರ್ಥಗಳ ಬೆಲೆಯು ಶೇಕಡ 40 ರಷ್ಟು ಅಧಿಕವಾಗಿವೆ, ಇದುವೇ ಜನರು ಹಸಿವಿನಿಂದ ಬಳಲು ಪ್ರಮುಖ ಕಾರಣವಾಗಿದೆ ಎಂದಿದ್ದಾರೆ.

* ಪ್ರಸ್ತುತ ಹಸಿವಿನಿಂದ ಬಳಲುತ್ತಿರುವ ದೇಶಗಳು: ಅಫ್ಘಾನಿಸ್ತಾನ, ಇಥಿಯೊಪಿಯಾ, ದಕ್ಷಿಣ ಸುಡಾನ್, ಸಿರಿಯಾ, ಯೆಮೆನ್‌ನಲ್ಲಿ ಹಸಿವಿನ ಜನಸಂಖ್ಯೆ ಹೆಚ್ಚಿದೆ.

## ಭಾರತದಲ್ಲಿನ ಹವಾಮಾನ ಬದಲಾವಣೆಯಿಂದಾಗಿ ಪ್ರತಿವರ್ಷ 7.4 ಲಕ್ಷಮಂದಿಸಾವು



* ಪ್ರಸ್ತುತ ದಿ ಲ್ಯಾನ್ಸೆಟ್ ಪ್ಲಾನೆಟರಿ ಹೆಲ್ತ್ ಜರ್ನಲ್ ಅಧ್ಯಯನ ನಡೆಸಿ ಪ್ರಕಟಿಸಿರುವ ವರದಿಯ ಪ್ರಕಾರ ಪ್ರತಿ ವರ್ಷ ಭಾರತದಲ್ಲಿನ ಹವಾಮಾನ ಬದಲಾವಣೆಯಿಂದಾಗಿ ಸುಮಾರು 7.4 ಲಕ್ಷ ಸಾವುಗಳಾಗುತ್ತಿವೆ,ಇದಕ್ಕೆಗರಿಷ್ಟಅಥವಾಕನಿಷ್ಠಉಷ್ಣಾಂಶಕಾರಣವಾಗಿದೆಎಂದಿದ್ದಾರೆ.

* ಈ ಅಧ್ಯಯನವನ್ನು ಆಸ್ಟ್ರೇಲಿಯಾದ ಮೋನಶ್ ವಿಶ್ವ ವಿದ್ಯಾನಿಲಯದ ಸಂಶೋಧಕರ ನೇತೃತ್ವದಲ್ಲಿ ಅಂತರಾಷ್ಟ್ರೀಯ ತಜ್ಞರ ತಂಡವು ನಡೆಸಿದೆ, ವಾರ್ಷಿಕ 50 ಲಕ್ಷ ಅಧಿಕ ಸಾವುಗಳು ಹವಾಮಾನದಿಂದಾಗಿವೆ ಎಂದು ತಿಳಿಸಿದ್ದಾರೆ.

* 2000 ರಿಂದ 2019 ಅವಧಿಯಲ್ಲಿ ಹವಾಮಾನ ಬದಲಾವಣೆಯಿಂದ ಈ ಎಲ್ಲ ಸಾವುಗಳು ಸಂಭವಿಸಿವೆ ಎಂದು ಜುಲೈ. 7 ರಂದು ದಿ ಲ್ಯಾನ್ಸೆಟ್ ಪ್ಲಾನೆಟರಿ ಹೆಲ್ತ್ ಜರ್ನಲ್ ಅಧ್ಯಯನದ ವರದಿ ಪ್ರಕಟಿಸಿದೆ.

* ಭಾರತದಲ್ಲಿ ಪ್ರತಿ ವರ್ಷ ಅತಿಯಾದ ಕಡಿಮೆ ಉಷ್ಣಾಂಶದಿಂದ 6,55,400 ಸಾವುಗಳು ಮತ್ತು ಅಧಿಕ ಉಷ್ಣಾಂಶದಿಂದ 83,700 ಸಾವುಗಳು ಸಂಭವಿಸಿರುವ ಸಾಧ್ಯತೆಗಳಿವೆ ಎಂದಿದ್ದಾರೆ.

* ಶೇ 9.43 ಸಾವುಗಳು ಜಾಗತಿಕ ಹವಾಮಾನ ಕಾರಣದಿಂದ ಸಂಭವಿಸಿವೆ ಎಂಬ ವರದಿಯನ್ನುಪ್ರಕಟಿಸಿದೆ.

## ಭಾರತದ ನಂ.1 ಐಟಿ ಸಂಸ್ಥೆಯ ಹೊಸ ಮೈಲಿಗಲ್ಲು




* ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (TCS) ಭಾರತದಲ್ಲಿ ನಂ.1 ಸಾಫ್ಟ್ ವೇರ್ ರಫ್ತು ಸಂಸ್ಥೆ ಹಾಗೂ ವಿಶ್ವದ ನಂ.1 ಸಾಫ್ಟ್ ವೇರ್ ಸಂಸ್ಥೆಯಾಗಿದೆ, ಮತ್ತು ಇದು ಟಾಟಾ ಗ್ರೂಪ್ ಸಮೂಹದ ಸಂಸ್ಥೆ ಮತ್ತು ಅತಿ ಹೆಚ್ಚು ಉದ್ಯೋಗಿಗಳನ್ನು ಹೊಂದಿದ ಐಟಿ ಸಂಸ್ಥೆಯಾಗಿದೆ.

* TCS ಮೊದಲ ಬಾರಿ 100 ಬಿಲಿಯನ್ ಮಾರುಕಟ್ಟೆ ಮೌಲ್ಯ ಹೊಂದಿ 2019 ರ ಏಪ್ರಿಲ್'ನಲ್ಲಿ ಐಟಿ ಸಂಸ್ಥೆಗಳ ಪಟ್ಟಿಗೆ ಸೇರಿಕೊಂಡಿದೆ.

* ಪ್ರಸ್ತುತ TCS'ನಲ್ಲಿ ಒಟ್ಟು 509,058 ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ, ಹಾಗೂ ಇದೇ ಸಂಸ್ಥೆಯಲ್ಲಿ ಶೇ 36.2%ರಷ್ಟು ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು HR ಮಿಲಿಂದ್ ಲಕ್ಕಡ್ ಅವರು ತಿಳಿಸಿದ್ದಾರೆ.

* ಈ ಹಿಂದಿನ ತ್ರೈಮಾಸಿಕದಲ್ಲಿ 45,111 ಕೋಟಿ ರೂ. ಆದಾಯನ್ನು ಗಳಸಿದೆ, ಇದೇ ಸಂಧರ್ಭದಲ್ಲಿ 8.1 ಬಿಲಿಯನ್ಡಾಲರ್ಒಪ್ಪಂದಗಳನ್ನೂಮಾಡಿಕೊಂಡಿದೆ.

## ಫೆಡರಲ್ಬ್ಯಾಂಕ್ಸಿಇಒಅವರನ್ನುಮತ್ತೆನೇಮಕಮಾಡಲಾಗಿದೆ



* ಪ್ರಸ್ತುತ ಶ್ಯಾಮ್ ಶ್ರೀನಿವಾಸನ್ ಅವರನ್ನು ಫೆಡರಲ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(CEO)ಆಗಿ 3 ವರ್ಷಗಳ ಅವಧಿಗೆ ಮತ್ತೆ CEO ಆಗಿ ನೇಮಕ ಮಾಡಿದ್ದಾರೆ.

* ಪ್ರಸ್ತುತ ಶ್ಯಾಮ್ ಶ್ರೀನಿವಾಸನ್ ಅವರ ಅಧಿಕಾರ ಅವಧಿಯು ಇದೇ 2021 ರ ಸೆಪ್ಟೆಂಬರ್ 23 ರಿಂದ 2024 ರ ಸೆಪ್ಟೆಂಬರ್ 22 ರವರೆಗೆ ಇರಲಿದೆ ಎಂದಿದ್ದಾರೆ.

* ಶ್ಯಾಮ್ ಶ್ರೀನಿವಾಸನ್ ಅವರ ಮರು ನೇಮಕಕ್ಕೆ 2021 ರ ಜುಲೈ. 09 ರಂದು RBI ಅನುಮೋದನೆನೀಡಿದೆ.

* ಫೆಡರಲ್ ಬ್ಯಾಂಕ್ ಲಿಮಿಟೆಡ್ ಇದು ಖಾಸಗಿ ವಲಯದ ಪ್ರಮುಖ ಭಾರತೀಯ ವಾಣಿಜ್ಯ ಬ್ಯಾಂಕ್ ಆಗಿದೆ, ಹಾಗೂ ಇದು ಪ್ರಧಾನ ಕಚೇರಿಯನ್ನು ಕೊಚ್ಚಿಯ ಅಲುವಾದಲ್ಲಿ ಹೊಂದಿದೆ, ಹಾಗೂ ಬೇರೆ ಬೇರೆರಾಜ್ಯಗಳಲ್ಲಿಒಟ್ಟಾರೆ1,200ಕ್ಕೂಅಧಿಕಶಾಖೆಗಳನ್ನುಹೊಂದಿದೆ.

## ದೈತ್ಯ ಪಾಂಡಾ ಅಳಿವಿನಂಚಿನಲ್ಲಿರುವ ಪ್ರಭೇದವಲ್ಲ ಎಂದು ತಿಳಿಸಿದ ಚೀನಾ



* ದೈತ್ಯ ಪಾಂಡಾದ ಸ್ಥಿತಿಯನ್ನು 'ದುರ್ಬಲ'ಕ್ಕೆ ನವೀಕರಿಸಲಾಗಿದೆ ಎಂದು ಚೀನಾ ಸಂರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ, ಹಾಗೂ ಇದೀಗ 1,800 ದೈತ್ಯ ಪಾಂಡಾಗಳು ಕಾಡಿನಲ್ಲಿ ವಾಸಿಸುತ್ತಿವೆ ಎಂದಿದ್ದಾರೆ.

* ಇತ್ತೀಚಿಗೆ ಚೀನಾದಲ್ಲಿ ದೈತ್ಯ ಪಾಂಡಾ ಹಾಗೂ ಸೈಬೀರಿಯನ್ ಹುಲಿಗಳು, ಏಷ್ಯನ್ ಆನೆಗಳು ಮತ್ತು ಇತರ ಜಾತಿಗಳ ಸಂಖ್ಯೆಯೂ ಕ್ರಮೇಣ ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

* ಈ ಮೊದಲು ಜೈಂಟ್ ಪಾಂಡಾವನ್ನು 5 ವರ್ಷಗಳ ಕಾಲ 'ದುರ್ಬಲ' ಎಂದು ಪರಿಗಣಿಸಲಾಗಿತ್ತು, 2016 ರಲ್ಲಿ ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ ದೈತ್ಯ ಪಾಂಡಾಗಳನ್ನು ಅಳಿವಿನಂಚಿನಲ್ಲಿರುವ ಪ್ರಭೇದಗಳ ಪಟ್ಟಿಯಿಂದ ತಗೆದುಹಾಕಿತ್ತು, ಆ ಸಂಧರ್ಭದಲ್ಲಿ ಈ ನಿರ್ಧಾರವನ್ನುಚೀನಾದ ಅಧಿಕಾರಿಗಳು ಪ್ರಶ್ನೆ ಮಾಡಿದ್ದರು.

* ದೈತ್ಯ ಪಾಂಡವನ್ನು ಕರಡಿ ಎಂದೂ ಕರೆಯಲಾಗುತ್ತದೆ, ಇವುಗಳು ದಕ್ಷಿಣ ಮಧ್ಯ ಚೀನಾದ ಸ್ಥಳೀಯ ಪ್ರದೇಶದಲ್ಲಿವೆ, ದೈತ್ಯ ಪಾಂಡಾ ಎಂಬ ಹೆಸರನ್ನು ಕೆಂಪು ಪಾಂಡಾದಿಂದ ಪ್ರತ್ಯೇಕಿಸಲು ಬಳಕೆ ಮಾಡಲಾಗುತ್ತಿದೆ.

* ಜೈಂಟ್ ಪಾಂಡಾಗಳು ಮಧ್ಯ ಚೀನಾದ ಕೆಲವು ಪರ್ವತ ಶ್ರೇಣಿಗಳಲ್ಲಿ ವಾಸಿಸುತ್ತಿವೆ, 2007 ರ

ವರದಿಯ ಪ್ರಕಾರ, 239 ಪಾಂಡಾಗಳು ಚೀನಾದೊಳಗೆ ಮತ್ತು 27 ಹೊರಗಿನ ದೇಶಗಳಲ್ಲಿ ಸೆರೆಯಲ್ಲಿ ಇವೆ ಎಂದು ತಿಳಿಸಲಾಗಿತ್ತು.

## 2021 30 ಕ್ಕೆ ಜನಸಂಖ್ಯಾ ನಿಯಂತ್ರಣದ ಬಗ್ಗೆ ಹೊಸನೀತಿ ಆರಂಭಿಸಿದಉತ್ತರಪ್ರದೇಶಸರ್ಕಾರ



* 2021 30 ಕ್ಕೆ ಜನಸಂಖ್ಯಾ ನಿಯಂತ್ರಣ ವಿಷಯದ ಬಗ್ಗೆ ಉತ್ತರ ಪ್ರದೇಶ ಸರ್ಕಾರ ಹೊಸ ನೀತಿಯನ್ನು ಬಿಡುಗಡೆ ಮಾಡಲು ಸಿದ್ಧವಾಗಿದೆ, ಈ ನೀತಿಯನ್ನು ಜುಲೈ. 11 ರ ವಿಶ್ವ ಜನಸಂಖ್ಯಾ ದಿನಾಚರಣೆದಂದು ಬಿಡುಗಡೆ ಮಾಡಲು ಸಿದ್ಧವಾಗಿದೆ.

* ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿಆದಿತ್ಯನಾಥ್ ಅವರು ಜನರಿಗೆ ಉತ್ತಮ ಸೌಲಭ್ಯಗಳನ್ನು ನೀಡಲು ಜನಸಂಖ್ಯೆ ನಿಯಂತ್ರಣಕ್ಕೆ ಸಮುದಾಯ ಕೇಂದ್ರಿತ ವಿಧಾನವನ್ನು ಮಾಡಬೇಕಾಗಿದೆ ಎಂದು ಆಗ್ರಹಿಸಿದ್ದಾರೆ.

* ಉತ್ತರ ಪ್ರದೇಶ ರಾಜ್ಯದ ಸಮುದಾಯಗಳಲ್ಲಿ ಜನಸಂಖ್ಯೆಯ ಬಗ್ಗೆ ಜಾಗೃತಿ ಮೂಡಿಸಲು ಸಮುದಾಯ ಕೇಂದ್ರಿತ ವಿಧಾನದ ಅಗತ್ಯವಿದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ತಿಳಿಸಿದ್ದಾರೆ.

* 2011 ರ ಜನಗಣತಿಯ ಪ್ರಕಾರ ಭಾರತದ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯವಾಗಿದೆ ನಂತರದ ಸ್ಥಾನದಲ್ಲಿಮಹಾರಾಷ್ಟ್ರಮತ್ತುಬಿಹಾರರಾಜ್ಯಗಳಿವೆ.

* ಜನಸಂಖ್ಯಾ ನಿಯಂತ್ರಣದ ನೀತಿಯ ಉದ್ದೇಶಗಳು: ಜನಸಂಖ್ಯೆ ನಿಯಂತ್ರಣಕ್ಕೆ 5 ಹಂತದ ವಿಧಾನವನ್ನು ಅಳವಡಿಸಿಕೊಳ್ಳಲಾಗುವುದು. ಆರೋಗ್ಯವನ್ನು ಸುಧಾರಿಸುವತ್ತ ಗಮನ ಹರಿಸಲಿದೆ. ಕುಟುಂಬ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ಗರ್ಭನಿರೋಧಕ ಕ್ರಮಗಳ ಪ್ರವೇಶವನ್ನು ಹೆಚ್ಚಿಸಲು ಸರ್ಕಾರವು ಮುಂದಾಗಿದೆ, ಮತ್ತು ಸುರಕ್ಷಿತ ಗರ್ಭಪಾತಕ್ಕೆ ಸರ್ಕಾರವು ಉತ್ತಮವಾದ ವ್ಯವಸ್ಥೆಯನ್ನು ಒದಗಿಸಲಿದೆ. ಸುಧಾರಿತ ಆರೋಗ್ಯ ಸೌಲಭ್ಯಗಳ ಮೂಲಕ ಶಿಶು ಮತ್ತು ತಾಯಿಯ ಮರಣ ಪ್ರಮಾಣವನ್ನು ಕಡಿಮೆ ಮಾಡುವ ಪ್ರಯತ್ನಗಳನ್ನು ಸಹ ಮಾಡಲಾಗುತ್ತದೆ. ವೃದ್ಧರ ಆರೈಕೆ ಮತ್ತು 11 ರಿಂದ 19 ವರ್ಷ ವಯಸ್ಸಿನವರಿಗೆ ಶಿಕ್ಷಣ, ಆರೋಗ್ಯ ಮತ್ತು ಪೋಷಣೆಯ ಉತ್ತಮ ನಿರ್ವಹಣೆಗೆ ಒದಗಿಸಿಕೊಡಲಾಗುವದು. ಬೇರೆ ಬೇರೆ ಸಮುದಾಯಗಳಲ್ಲಿ ಜನಸಂಖ್ಯಾ ಸಮತೋಲನವನ್ನು ಕಾಪಾಡಿಕೊಳ್ಳಲು ಮತ್ತು ಸುಧಾರಿತ ಆರೋಗ್ಯ ಸೌಲಭ್ಯಗಳ ನೀಡಲು ಉತ್ತರ ಪ್ರದೇಶ ಸರ್ಕಾರವು ಮುಂದಾಗಿದೆ.

# 12-07-2021

## ಯೂರೋ ಕಪ್ ಫುಟ್ಬಾಲ್ 2ನೇ ಬಾರಿ ಚಾಂಪಿಯನ್ ಪಟ್ಟ ಪಡೆದ ಇಟಲಿ




* ಯೂರೋ ಕಪ್ ಫುಟ್ಬಾಲ್'ನ ಫೈನಲ್ ಪಂದ್ಯ ವೆಂಬ್ಲಿ ಸ್ಟೇಡಿಯಂನಲ್ಲಿ ಇಟಲಿ ಹಾಗೂ ಇಂಗ್ಲೆಂಡ್ ತಂಡಗಳ ಮಧ್ಯೆ ನಡೆಯಿತು, ಈ ಯೂರೋ ಕಪ್ ಫುಟ್ಬಾಲ್ ಫೈನಲ್'ನಲ್ಲಿ ಇಟಲಿ ತಂಡವುಇಂಗ್ಲೆಂಡ್ ತಂಡವನ್ನು 3 2 ಗೋಲುಗಳಿಂದ ಸೋಲಿಸಿ ಯುರೋಪಿಯನ್ ಫುಟ್‌ಬಾಲ್ ಚಾಂಪಿಯನ್‌ಶಿಪ್'ನಲ್ಲಿ ಜಯಶಾಲಿಯಾಗಿದೆ.

* ಪ್ರಸ್ತುತ ಇಟಲಿ ತಂಡವು ಯುರೋ 2020 ಪಂದ್ಯಾವಳಿಯನ್ನು ಎರಡನೇ ಬಾರಿ ಗೆದಿದ್ದೆ, ಇಟಲಿ ತಂಡವು 2000 ನೇ ಫೈನಲ್ ಪಂದ್ಯದಲ್ಲಿ ಫ್ರಾನ್ಸ್ ಹಾಗೂ 2012 ರಲ್ಲಿ ಫೈನಲ್ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಸೋಲು ಅನುಭವಿಸಿದೆ.

* ಇಟಲಿಯ ರಾಷ್ಟ್ರೀಯ ತಂಡದ ಗೋಲ್‌ಕೀಪರ್ ಆಗಿರುವ ಜಿಯಾನ್ಲುಯಿಗಿ ಡೊನರುಮ್ಮ ಅವರನ್ನುಈಟೂರ್ನಿಯಕ್ರೀಡಾಪಟುಎಂದು ಘೋಷಣೆ ಮಾಡಿದರು.

* ಈ ಯೂರೋ ಕಪ್ ಫುಟ್ಬಾಲ್'ನ ಫೈನಲ್ ಪಂದ್ಯವನ್ನು ವೆಂಬ್ಲಿ ಸ್ಟೇಡಿಯಂನಲ್ಲಿಒಟ್ಟು 67,173ಅಭಿಮಾನಿಗಳುವೀಕ್ಷಣೆಮಾಡಿದ್ದಾರೆ.

## 40 ರಾಷ್ಟ್ರಗಳಲ್ಲಿ ಟ್ರೇಡ್‌ಮಾರ್ಕ್ ನೋಂದಣಿಗೆ ಸಿದ್ಧವಾದ ಖಾದಿ

* ಪ್ರಸ್ತುತ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಇದೀಗ ಬೇರೆ ಬೇರೆ ದೇಶಗಳಿಗೆ ಉತ್ಪನ್ನಗಳನ್ನು ಕಳುಹಿಸಲು ಸಿದ್ಧವಾಗುತ್ತಿದೆ, ಈ ಕಾರಣದಿಂದಾಗಿ ಅಮೆರಿಕ, ಕತಾರ್, ಶ್ರೀಲಂಕಾ, ಜಪಾನ್, ಇಟಲಿ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಸಿಂಗಾಪುರ, ಬ್ರೆಜಿಲ್ ಒಳಗೊಂಡು ಒಟ್ಟಾರೆ 40 ರಾಷ್ಟ್ರಗಳಲ್ಲಿ ಟ್ರೇಡ್‌ಮಾರ್ಕ್ ನೋಂದಣಿ ಮಾಡಿಕೊಳ್ಳಲು ಸಿದ್ಧತೆಗಳನ್ನೂ ನಡೆಸುತ್ತಿದ್ದೆ.

* ಈ ಹಿಂದೆ ಜೂನ್. 28 ರಂದು ಭೂತಾನ್, ಯುಎಇ ಮತ್ತು ಮೆಕ್ಸಿಕೋ ರಾಷ್ಟ್ರಗಳಲ್ಲಿ ಹೆಸರನ್ನು ನೋಂದಾಯಿಸಿದೆ ಎಂದು MSME ಸಚಿವಾಲಯ ಮಾಹಿತಿಯನ್ನು ನೀಡಿದೆ, ಇದಲ್ಲದೇ ಜರ್ಮನಿ, ಯು.ಕೆ., ಆಸ್ಟ್ರೇಲಿಯಾ, ರಷ್ಯಾ, ಚೀನ ಮತ್ತು ಐರೋಪ್ಯ ಒಕ್ಕೂಟಗಳಲ್ಲಿ 'ಖಾದಿ' ಎಂಬ ಹೆಸರು ನೋಂದಣಿ ಆಗಿದೆ ಎಂದು ಸಚಿವಾಲಯ ತಿಳಿಸಿದೆ.

* ಈ ನೋಂದಣಿಯಲ್ಲಿ ಖಾದಿ ಫ್ಯಾಬ್ರಿಕ್ಸ್, ಖಾದಿ ರೆಡಿಮೇಡ್ ಹಾಗೂ ಗ್ರಾಮೀಣ ಕೈಗಾರಿಕೆಗಳ ಉತ್ಪನ್ನ ಸಾಬೂನು, ಸುಗಂಧ ಸೂಸುವ ಕಡ್ಡಿಗಳು ಹೀಗೆ ಹಲವು ಉತ್ಪನ್ನಗಳನ್ನು ನೋಂದಣಿ ಮಾಡಲಾಗಿದೆ ಎಂದುಸಚಿವಾಲಯವುಮಾಹಿತಿನೀಡಿದೆ.

## ವಿಂಬಲ್ಡನ್ ಬಾಲಕರ ಸಿಂಗಲ್ಸ್ ಪ್ರಶಸ್ತಿ ಪಡೆದ ಸಮೀರ್ ಬ್ಯಾನರ್ಜಿ



* ವಿಂಬಲ್ಡನ್ ಬಾಲಕರ ವಿಭಾಗದ ಸಿಂಗಲ್ಸ್ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಅಮೆರಿಕದ ಟೆನಿಸ್ ಆಟಗಾರ ಸಮೀರ್ ಬ್ಯಾನರ್ಜಿ ಅವರು ಪಡೆದುಕೊಂಡಿದ್ದಾರೆ, ಹಾಗೂ ಇವರು ಭಾರತೀಯ ಮೂಲದ ಅಮೆರಿಕದ ಟೆನಿಸ್ ಆಟಗಾರರಾಗಿದ್ದಾರೆ.

* ಪ್ರಸ್ತುತ ಜೂನಿಯರ್ ವಿಭಾಗದ ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿ ವಿಕ್ಟರ್ ಲಿಲೊವ್ ವಿರುದ್ಧ ಸಮೀರ್ ಬ್ಯಾನರ್ಜಿ ಜಯ ಸಾಧಿಸಿದರು.

* ಈ ಹಿಂದೆ ಸಮೀರ್ ಬ್ಯಾನರ್ಜಿ ಅವರು ಫ್ರೆಂಚ್ ಓಪನ್'ನ ಮೊದಲ ಸುತ್ತಿನಲ್ಲೇ ಸೋಲ ಅನುಭವಿಸಿದ್ದರು.

* 1954 ರಲ್ಲಿ ರಾಮನಾಥನ್ ಕೃಷ್ಣನ್ ಅವರು ಬಾಲಕರ ವಿಭಾಗದಲ್ಲಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಇವರಾಗಿದ್ದಾರೆ, ಮತ್ತೇ 1970 ರಲ್ಲಿ ರಾಮನಾಥನ್ ಅವರ ಮಗನಾದ ರಮೇಶ್ ಕೃಷ್ಣನ್ ಅವರು ವಿಂಬಲ್ಡನ್ ಜೂ. ಹಾಗೂ ಫ್ರೆಂಚ್ ಓಪನ್ ಜೂ. ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದರು.

## ದೇಶದ ಮೊದಲ ನೈಸರ್ಗಿಕ ಅನಿಲಎಲ್ ಎನ್ ಜಿ ಘಟಕ ಪ್ರಾರಂಭ



* ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಜುಲೈ. 11 ರಂದು ದೇಶದ ಮೊದಲ ಖಾಸಗಿ ದ್ರವೀಕೃತ ನೈಸರ್ಗಿಕ ಅನಿಲ ಎಲ್‌ಎನ್ ಜಿ ಘಟಕವನ್ನು ಮಹಾರಾಷ್ಟ್ರದ ನಾಗ್ಪುರದಲ್ಲಿ ಉದ್ಘಾಟಣೆ ಮಾಡಿದರು.

* ಈ ದ್ರವೀಕೃತ ನೈಸರ್ಗಿಕ ಅನಿಲ ಎಲ್‌ಎನ್ ಜಿ ಘಟಕವು ಸಾಗಣೆ ವೆಚ್ಚವನ್ನು ಕಡಿಮೆಗೊಳಿಸಲು ಶುದ್ಧ ಹಾಗೂ ವೆಚ್ಚಪರಿಣಾಮಕಾರಿ ಇಂಧನ ಘಟಕ ಇದಾಗಲಿದೆ ಎಂದಿದ್ದಾರೆ, ಹಾಗೂ ಇನ್ನು ಮುಂದೆ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯ ಕೂಡ ಈ ಘಟಕವು ಹೊಂದಿದೆ ಜೊತೆಗೆ ಮುಂದಿನ ದಿನಗಳಲ್ಲಿ ಸಾರಿಗೆ ವಲಯದಲ್ಲಿ ಕ್ರಾಂತಿ ತರುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ದ್ರವೀಕೃತ ನೈಸರ್ಗಿಕ ಅನಿಲ ಎಲ್‌ಎನ್ ಜಿ'ಯನ್ನು ಎಥನಾಲ್, ವಿದ್ಯುತ್, ಸಂಕುಚಿತ ನೈಸರ್ಗಿಕ ಅನಿಲ, ದ್ರವೀಕೃತ ನೈಸರ್ಗಿಕ ಅನಿಲ ಇಂಧನಗಳಿಗೆ ಪರ್ಯಾಯವಾಗಿ ಬಳಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ವಿಂಬಲ್ಡನ್ ಟೆನ್ನಿಸ್ ಟೂರ್ನಿ 20 ನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಪಡೆದ ನುವಾಕ್‌ಜಾಕೋವಿಚ್



* ಪ್ರಸ್ತುತ ವಿಂಬಲ್ಡನ್ ಟೆನ್ನಿಸ್ ಟೂರ್ನಿಯ ಫೈನಲ್ ಪಂದ್ಯವನ್ನು ಸರ್ಬಿಯಾದ ಟೆನಿಸ್ ಆಟಗಾರ ನುವಾಕ್ ಜಾಕೋವಿಚ್ ಅವರು 20 ನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಪಡೆಯುವ ಮೂಲಕ ಜಯ ಸಾಧಿಸಿದ್ದಾರೆ, ಇದು ಇವರ 6ನೇ ವಿಂಬಲ್ಡನ್ ಟೂರ್ನಿಯಾಗಿದೆ.

* ವಿಂಬಲ್ಡನ್ ಟೆನ್ನಿಸ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ನುವಾಕ್ ಜಾಕೋವಿಚ್ ಅವರು ಇಟಲಿಯ ಮ್ಯಾಟಿಯೊ ಬೆರೆಟ್ಟಿನಿ ಅವರನ್ನು 6 7,6 4,6 4,6 3ನೇರ ಸೆಟ್'ಗಳ ಅಂತರದಲ್ಲಿ ಸೋಲಿಸಿದ್ದಾರೆ.

* ನುವಾಕ್ ಜಾಕೋವಿಚ್ ಅವರು ಈ ವಿಂಬಲ್ಡನ್ ಟೆನ್ನಿಸ್ ಟೂರ್ನಿಯ ಫೈನಲ್ ಪಂದ್ಯದ ಮೂಲಕ 20 ಗ್ರ್ಯಾಂಡ್ ಸ್ಲಾಮ್ ಗೆದ್ದ ದಾಖಲೆಯನ್ನು ನಿರ್ಮಿಸಿದರು.

## ಪಾಚಿ, ಶಿಲೀಂಧ್ರಗಳ ಉದ್ಯಾನವನ ಡೆಹ್ರಾಡೂನ್'ನಲ್ಲಿ ಉದ್ಘಾಟನೆ



* ಪ್ರಸ್ತುತ ಉತ್ತರಾಖಂಡ ರಾಜ್ಯದ ಡೆಹ್ರಾಡೂನ್'ನಲ್ಲಿ ಪಾಚಿ, ಜರೀಗಿಡ ಹಾಗೂ ಶಿಲೀಂಧ್ರಗಳು ಮತ್ತು ಏಕಕೋಶೀಯ ಸಸ್ಯಗಳಿರುವ ದೇಶದ ಮೊದಲ ಉದ್ಯಾನ(ಕ್ರಿಪ್ಟೋಗ್ಯಾಮಿಕ್ ಗಾರ್ಡನ್ )ವನ್ನು ಡೆಹ್ರಾಡೂನ್ ಜಿಲ್ಲೆಯ ಚಕರಾತಾ ಪಟ್ಟಣದಲ್ಲಿ ಉದ್ಘಾಟಣೆ ಮಾಡಲಾಗಿದೆ.

* ಡೆಹ್ರಾಡೂನ್ ಜಿಲ್ಲೆಯ ಚಕರಾತಾ ಪಟ್ಟಣದ ದೇವವನದಲ್ಲಿ 50 ಪ್ರಭೇದಗಳಿಗೆ ಸೇರಿದ ಸಸ್ಯಗಳನ್ನು ಬೆಳೆಸಲಾಗಿದೆ, ಈ ಗಾರ್ಡನ್ 9 ಸಾವಿರ ಅಡಿ ಎತ್ತರದ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿದ್ದಾರೆ, ಇದನ್ನು ಸಾಮಾಜಿಕ ಕಾರ್ಯಕರ್ತ ಅನೂಪ್ ನೌತಿಯಾಲ್ ಉದ್ಘಾಟಿಣೆ ಮಾಡಿದ್ದಾರೆ.

* ಸಸ್ಯಶಾಸ್ತ್ರ ನೀಡಿರುವ ಮಾಹಿತಿಯ ಪ್ರಕಾರ ಈ ಪಾಚಿ, ಶಿಲೀಂಧ್ರ, ಜರೀಗಿಡಗಳು "ಕ್ರಿಪ್ಟೋಗ್ಯಾಮೆ" ಪ್ರಭೇದಕ್ಕೆ ಸೇರಿವೆ ಎನ್ನಲಾಗಿದೆ, ಇವುಗಳು ನಾಳ ರಹಿತ ಸಸ್ಯಗಳಾಗಿವೇ ಹಾಗೂ ಹೂ ಅಥವಾ ಬೀಜಗಳ ಮೂಲಕ ಸಂತಾನೋತ್ಪತ್ತಿ ನಡೆಸುವುದಿಲ್ಲ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ ಸಂಜೀವ್ ಚತುರ್ವೇದಿ ಮಾಹಿತಿ ನೀಡಿದ್ದಾರೆ.

* ಡೆಹ್ರಾಡೂನ್ ಜಿಲ್ಲೆಯ ಚಕರಾತಾ ಪಟ್ಟಣದ ದೇವವನವು ಇಂತಹ ಸಸ್ಯಗಳನ್ನು ಬೆಳೆಯಲು ಉತ್ತಮವಾದ ಪ್ರದೇಶವಾಗಿದೆ ಹಾಗೂ ಇಲ್ಲಿ ಮಾಲಿನ್ಯದ ಪ್ರಮಾಣವು ಕಡಿಮೆಯಿದೆ, ಈ ಕಾರಣದಿಂದಾಗಿ3ಎಕರೆ ಪ್ರದೇಶದ ಗಾರ್ಡನ್'ನಲ್ಲಿ ಸಸ್ಯಗಳನ್ನು ಬೆಳೆಸಲಾಗಿದೆ.

## ಭಾರತಕ್ಕೆ ಯುಎಸ್ ರಾಯಭಾರಿಯಾಗಿ ಎರಿಕ್ ಗಾರ್ಸೆಟಿ ನೇಮಕ



* ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಲಾಸ್ ಏಂಜಲೀಸ್ ಮೇಯರ್'ಆಗಿರುವ ಎರಿಕ್ ಗಾರ್ಸೆಟಿ ಅವರನ್ನು ಭಾರತಕ್ಕೆ ಹೊಸ ಯುಎಸ್ ರಾಯಭಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

* ಇದರೊಂದಿಗೆ ಬಾಂಗ್ಲಾದೇಶಕ್ಕೆ ಪೀಟರ್ ಡಿ ಹಾಸ್, ಮತ್ತು ಚಿಲಿ ದೇಶಕ್ಕೆ ಬೆರ್ನಡೆಟ್ ಮೀಹಾನ್ ಅವರನ್ನು ರಾಯಭಾರಿಯಾಗಿ ನೇಮಕ ಮಾಡಿದ್ದಾರೆ.

* ಎರಿಕ್ ಗಾರ್ಸೆಟ್ಟಿ ಅವರು 2013 ರಿಂದ ಲಾಸ್ ಏಂಜಲೀಸ್ ನಗರದ ಮೇಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ, ಮತ್ತು 12 ವರ್ಷ ಕೌನ್ಸಿಲ್ ಸದಸ್ಯರಾಗಿರುವ ಅನುಭವ ಹಾಗೂ ಲಾಸ್ ಏಂಜಲೀಸ್ ಮೆಟ್ರೋ ಸಾರಿಗೆಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ.

## ಆಯಶ್ಲಿ ಬಾರ್ಟಿಗೆ ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟ್ರೋಫಿ



* ವಿಂಬಲ್ಡನ್ ಟೆನಿಸ್ ಪಂದ್ಯಾವಳಿಯ ಮಹಿಳಾ ವಿಭಾಗದ ಸಿಂಗಲ್ಸ್ ಪ್ರಶಸ್ತಿ ಗೆದ್ದ ಆಸ್ಟ್ರೇಲಿಯಾದ ಆಯಶ್ಲಿ ಬಾರ್ಟಿ, ಇವರು ಫೈನಲ್ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೋವ ಅವರ ವಿರುದ್ಧ ಜಯ ಸಾಧಿಸಿದ್ದಾರೆ.

* ವಿಶ್ವ ಕ್ರಮಾಂಕದಲ್ಲಿ 1 ನೇ ಸ್ಥಾನದಲ್ಲಿರುವ ಆಯಶ್ಲಿ ಬಾರ್ಟಿ 41 ವರ್ಷಗಳ ನಂತರ ವಿಂಬಲ್ಡನ್ ಪ್ರಶಸ್ತಿ ಗೆದ್ದ ಆಸ್ಟ್ರೇಲಿಯಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆಪಾತ್ರರಾಗಿದ್ದಾರೆ.

## ರಾಷ್ಟ್ರೀಯ ಡಾಲ್ಫಿನ್ ಸಂಶೋಧನಾ ಕೇಂದ್ರ ಶೀಘ್ರವೇ ಪಾಟ್ನಾದಲ್ಲಿ



* ಶೀಘ್ರದಲ್ಲೇ ಬಿಹಾರ ರಾಜ್ಯದ ಪಾಟ್ನಾದಲ್ಲಿ ಬಹುನಿರೀಕ್ಷಿತ ರಾಷ್ಟ್ರೀಯ ಡಾಲ್ಫಿನ್ ಸಂಶೋಧನಾ ಕೇಂದ್ರ ಆರಂಭ, ಇದೀಗ ಈ ಸಂಶೋಧನಾ ಕೇಂದ್ರ ಸ್ಥಾಪನೆ ಪ್ರಕ್ರಿಯೆ ಪ್ರಾರಂಭವಾಗಿದೆ.

* ಪ್ರಸ್ತುತ ಅಳಿವಿನಂಚಿನಲ್ಲಿರುವ ಗಂಗಾ ನದಿ ಡಾಲ್ಫಿನ್ ಸಂರಕ್ಷಣೆಗಾಗಿ ಈ ಸಂಶೋಧನಾ ಕೇಂದ್ರವನ್ನು ತೆರೆಯಲಾಗುವದಾಗಿ ತಿಳಿಸಿದ್ದಾರೆ.

* ಗಂಗಾ ನದಿಯ ದಂಡೆಯ ಹತ್ತಿರವಿರುವ ಪಾಟ್ನಾ ವಿಶ್ವವಿದ್ಯಾಲಯದ ಆವರಣದಲ್ಲಿ 4,400 ಚದರ ಮೀ. ಪ್ರದೇಶದಲ್ಲಿ ಈ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವದು ಎಂದು ತಿಳಿಸಿದ್ದಾರೆ.

* ಈ ಹಿಂದೆ 2019 ರ ಡಿಸೆಂಬರ್'ನಲ್ಲಿ ಪ್ರಧಾನ ಮಂತ್ರಿ ನೇತೃತ್ವದ ರಾಷ್ಟ್ರೀಯ ಗಂಗಾ ಕೌನ್ಸಿಲ್'ನ ಮೊದಲ ಸಭೆಯಲ್ಲಿ ಪ್ರಾಜೆಕ್ಟ್ ಟೈಗರ್'ಗೆ ತಾತ್ವಿಕ ಅನುಮೋದನೆಯನ್ನು ಪಡೆದುಕೊಂಡಿತ್ತು, ಇದೀಗ ಇದರ ಮಾದರಿಯಲ್ಲಿ ಪ್ರಾಜೆಕ್ಟ್ ಡಾಲ್ಫಿನ್'ನ್ನು ಆರಂಭಿಸಲಾಗುತ್ತಿದೆ ಇದರಿಂದ ಗಂಗೆಟಿಕ್ ಡಾಲ್ಫಿನ್'ನ್ನು ಉಳಿಸಲು ಕೈಗೊಂಡಿರುವ 'ವಿಶೇಷ ಸಂರಕ್ಷಣಾ ಕಾರ್ಯಕ್ರಮ'ವಾಗಿದೆ, ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಈ ಯೋಜನೆಯನ್ನು ಜಾರಿಗೆ ತರಲಿದೆ.

* ಡಾಲ್ಫಿನ್'ಗಳುಭಾರತ,ನೇಪಾಳಹಾಗೂಬಾಂಗ್ಲಾದೇಶಗಳಲ್ಲಿಕಂಡುಬರುತ್ತವೆ,ಪ್ರಸ್ತುತಭಾರತದಲ್ಲಿ ಅಂದಾಜು 3,000 ಡಾಲ್ಫಿನ್'ಗಳಿವೆ ಅರ್ಧದಷ್ಟು ಬಿಹಾರ ರಾಜ್ಯದಲ್ಲಿವೆ.

* ಗಂಗಾ ನದಿ ಡಾಲ್ಫಿನ್ (ಗಂಗೆಟಿಕ್'ಡಾಲ್ಫಿನ್)ಭಾರತದರಾಷ್ಟ್ರೀಯಜಲವಾಸಿಪ್ರಾಣಿಯಾಗಿದೆ.

* ಪ್ರಪಂಚದಾದ್ಯಂತದ 4 ಸಿಹಿನೀರಿನ ಡಾಲ್ಫಿನ್ ಪ್ರಭೇದಗಳಿವೆ ಅವುಗಳಲ್ಲಿ ಗಂಗೆಟಿಕ್ ಡಾಲ್ಫಿನ್ ಕೂಡ ಒಂದಾಗಿದೆ, ಇನ್ನುಳಿದ 3 ಸಿಹಿನೀರಿನ ಡಾಲ್ಫಿನ್'ಗಳು ಚೀನಾದ ಯಾಂಗ್ಟ್ಜ಼ ನದಿಯಲ್ಲಿ (ಈ ಡಾಲ್ಫಿನ್'ಗಳು ಅಳಿದುಹೋಗಿವೆ),ಪಾಕಿಸ್ತಾನದಸಿಂಧೂನದಿಹಾಗೂದಕ್ಷಿಣಅಮೆರಿಕಾದಅಮೆಜಾನ್ ನದಿಯಲ್ಲಿಕಂಡುಬರುತ್ತವೆ.

## ವಿಶ್ವದ ಮೊದಲ ಕಾಂಜುಗೇಟ್ ಕೋವಿಡ್ 19 ಲಸಿಕೆಯನ್ನು ಅಭಿವೃದ್ಧಿಪಡಿಸಿದಕ್ಯೂಬಾ



* ಪ್ರಸ್ತುತ ಕ್ಯೂಬಾ ವಿಶ್ವದ ಮೊದಲ ಕಾಂಜುಗೇಟ್ ಕೋವಿಡ್ 19 ಲಸಿಕೆ ಸೊಬೆರಾನಾ 2'ನ್ನು ಅಭಿವೃದ್ಧಿಪಡಿಸಿದೆ.

* ಈ ಸೊಬೆರಾನಾ 2 ಲಸಿಕೆಯ ಕೋವಿಡ್ 19 ರೋಗಲಕ್ಷಣದ ಪ್ರಕರಣಗಳ ವಿರುದ್ಧ ಶೇಕಡಾ 91 ರಷ್ಟು ಹೋರಾಡುವಲ್ಲಿ ಪರಿಣಾಮಕಾರಿಯಾಗಿದೆ.

* ಕ್ಯೂಬಾ ಈ ಲಸಿಕೆಗೆ ಅನುಮೋದನೆಸಿಕ್ಕರೆಕೋವಿಡ್ 19ವಿರುದ್ಧಲಸಿಕೆತಯಾರಿಸಿಉತ್ಪಾದಿಸಿದ ಮೊದಲಲ್ಯಾಟಿನ್ ಅಮೆರಿಕನ್'ರಾಷ್ಟ್ರಎಂಬಹೆಗ್ಗಳಿಕೆಗೆಕ್ಯೂಬಾಗೆಸಲಲ್ಲಿದೆ.

* ಸೊಬೆರಾನಾ 2 ಲಸಿಕೆಯನ್ನು 3 ಡೋಸ್ ಕಟ್ಟುಪಾಡುಗಳಲ್ಲಿ ನಿಯಮಿತವಾಗಿ ನೀಡಲಾಗುತ್ತದೆ, ಇದನ್ನು 0 28 56ದಿನಗಳ ನಿಯಮಿತಕಟ್ಟುಪಾಡುಗಳಲ್ಲಿ ನೀಡಲಾಗುತ್ತದೆ.

*ಈಸೊಬೆರಾನಾಸರಣಿಯಮೂರುಲಸಿಕೆಗಳಲ್ಲಿಸೊಬೆರಾನಾ2ಕೂಡ ಒಂದಾಗಿದೆ, ಈ ಲಸಿಕೆಯನ್ನು ಫಿನ್ಲೆ ಇನ್ಸ್ಟಿಟ್ಯೂಟ್ ಸೆಂಟರ್ ಫಾರ್ ಮಾಲಿಕ್ಯುಲರ್ ಇಮ್ಯುನೊಲಾಜಿ ಹಾಗೂ ನ್ಯಾಷನಲ್ ಬಯೋಪ್ರೆಪರೇಷನ್ಸ್ ಸೆಂಟರ್ ಸಹಭಾಗಿತ್ತ್ವದಲ್ಲಿ ಅಭಿವೃದ್ಧಿಪಡಿಸಿದೆ.

* ಒಟ್ಟಾರೆ ಕ್ಯೂಬಾದಲ್ಲಿ ಇತರ ನಾಲ್ಕು ಲಸಿಕೆಗಳನ್ನು ಸಹ ತಯಾರಿಸಲಾಗುತ್ತಿದೆ.

* ಕ್ಯೂಬಾದಲ್ಲಿನ ಈ ಎಲ್ಲಾ 5 ಲಸಿಕೆಗಳು ಪ್ರೋಟೀನ್ ಲಸಿಕೆಗಳಾಗಿವೆ, ಹಾಗೂ ಈ ಎಲ್ಲ ಲಸಿಕೆಗಳನ್ನು SARS CoV 2 ವೈರಸ್‌ನಿಂದ ಪಡೆದ ಪ್ರೋಟೀನ್'ನ್ನು ಬಳಸಿ ಅಭಿವೃದ್ಧಿಪಡಿಸಲಾಗಿದೆ.

* ಪ್ರಸ್ತುತ ಕ್ಯೂಬಾ ದೇಶೀಯವಾಗಿ ಸೇವಿಸುವ 60 70 ಪ್ರತಿಶತದಷ್ಟು ಔಷಧಿಗಳನ್ನು ಉತ್ಪಾದಣೆ ಮಾಡುತ್ತದೆ, ಹಾಗೂ 11 ಲಸಿಕೆಗಳಿಂದ 13 ರೋಗಗಳಿಗೆ ಲಸಿಕೆ ನೀಡಲಾಗುತ್ತದೆ, ಇವುಗಳಲ್ಲಿ 8 ಲಸಿಕೆಗಳನ್ನು ಕ್ಯೂಬಾದಲ್ಲಿಯೇ ಉತ್ಪಾದಣೆ ಮಾಡಲಾಗುತ್ತದೆ.

# 13-07-2021

## ರಾಗಿಣಿ ದ್ವಿವೇದಿಗೆ 'ಲೆಜೆಂಡ್ ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿ



* ಕನ್ನಡ ಸಿನಿ ರಂಗದ ನಟಿ ರಾಗಿಣಿ ದ್ವಿವೇದಿ ಅವರ ಲೋಕೋಪಕಾರಿ ಕೆಲಸಗಳಿಗಾಗಿ ಇದೀಗ ಇವರಿಗೆ ಲೆಜೆಂಡ್'ದಾದಾಸಾಹೇಬ್'ಫಾಲ್ಕೆಪ್ರಶಸ್ತಿಲಭಿಸಿದೆ.

* ಪ್ರಸ್ತುತ ಕೋವಿಡ್ 19 ಪ್ರಾರಂಭದಿಂದ ಹಿಡಿದು ಇಲ್ಲಿಯವರೆಗೂ ರಾಗಿಣಿ ದ್ವಿವೇದಿ ಅವರು ಸಮಾಜ ಸೇವೆಗಳಲ್ಲಿ ಅತೀ ಹೆಚ್ಚಾಗಿ ಭಾಗಿಯಾಗಿದ್ದಾರೆ, ಊಟ ವಿತರಣೆ, ಕಿಟ್ ವಿತರಣೆ, ಮಾಸ್ಕ್, ಸ್ಯಾನಿಟೈಸರ್'ಗಳನ್ನೂ ಹಂಚುವ ಕೆಲಸ ಕಾರ್ಯಗಳಲ್ಲಿ ತಮ್ಮನು ತಾವು ತೊಡಗಿಸಿಕೊಂಡಿದ್ದಾರೆ,

ಇವರ ಈ ಲೋಕೋಪಕಾರಿ ಕೆಲಸವನ್ನು ಗುರುತಿಸಿ ಲೆಜೆಂಡ್ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ನೀಡಲಾಗಿದೆ.

* ಪ್ರಸ್ತುತ ಲೋಕೋಪಕಾರಿ ಕೆಲಸ ಕಾರ್ಯಗಳಿಗಾಗಿ ಈ ಅವಾರ್ಡ್ ಪಡೆದ ದಕ್ಷಿಣ ಭಾರತದ ಮೊದಲ ಮಹಿಳೆ ನಾನಾಗಿದ್ದೇನೆ ಎಂದು ರಾಗಿಣಿ ದ್ವಿವೇದಿ ಅವರು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಈ ಮಾಹಿತಿ ಹಂಚಿಕೊಂಡಿದ್ದಾರೆ, ಹಾಗೂ ಇದು ನನಗೆ ಅತ್ಯಂತ ಪ್ರತಿಷ್ಠಿತ ವಿಷಯವಾಗಿದೆ ಎಂದು ತಿಳಿಸಿದ್ದಾರೆ.

## ಲಿಯೋನೆಲ್ ಮೆಸ್ಸಿಯ ಅರ್ಜೆಂಟೀನಾ ತಂಡಕ್ಕೆ ಕೋಪಾ ಅಮೇರಿಕಾಪ್ರಶಸ್ತಿ



* ಇತ್ತೀಚಿಗೆ ನಡೆದ ಕೋಪಾ ಅಮೇರಿಕಾ ಫೈನಲ್ ಪಂದ್ಯದಲ್ಲಿ ಬ್ರೆಜಿಲ್ ತಂಡವನ್ನು ಲಿಯೋನೆಲ್ ಮೆಸ್ಸಿ ಅವರ ಅರ್ಜೆಂಟೀನಾ ತಂಡವು 1 0 ಗೋಲುಗಳ ಅಂತರದಿಂದ ಸೋಲಿಸಿದೆ, 28 ವರ್ಷಗಳಲ್ಲಿ ಅರ್ಜೆಂಟೀನಾದ ರಾಷ್ಟ್ರೀಯ ತಂಡದ ಮೊದಲ ಮತ್ತು ಪ್ರಮುಖ ಅಂತರರಾಷ್ಟ್ರೀಯ ಟ್ರೋಫಿ ಗೆದ್ದುಕೊಂಡಿದೆ.

* ಈ ಫೈನಲ್ ಪಂದ್ಯವು ಬ್ರೆಜಿಲ್ ಮತ್ತು ಅರ್ಜೆಂಟೀನಾ ತಂಡಗಳ ಮಧ್ಯೆ ರಿಯೊ ಡಿ ಜನ್ಯೆರೊದಮರಕಾನಾಕ್ರೀಡಾಂಗಣದಲ್ಲಿನಡೆದಿದೆ.

## ಕ್ರಿಸ್ಟಿಯಾನೊ ರೊನಾಲ್ಡೋಗೆ 'ಗೋಲ್ಡನ್ ಶೂ' ಪ್ರಶಸ್ತಿ



* ಕ್ರಿಸ್ಟಿಯಾನೊ ರೊನಾಲ್ಡೋ ಅವರಿಗೆ ಪ್ರಸಕ್ತ ಸಾಲಿನ ಯುರೋಪಿಯನ್ ಚಾಂಪಿಯನ್‌ಶಿಪ್'ನಲ್ಲಿ ಅತೀ ಹೆಚ್ಚು ಗೋಲು ಗಳಿಸಿದ್ದರಿಂದಾಗಿ ಪೋರ್ಚುಗಲ್'ನ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೋ ಅವರು ಮೊದಲ 'ಗೋಲ್ಡನ್ ಬೂಟ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

* ಇತ್ತೀಚಿಗೆ ಇಂಗ್ಲೆಂಡ್'ನಲ್ಲಿ ನಡೆದ ಯೂರೋ 2020 ಫೈನಲ್ ಪಂದ್ಯದ ನಂತರಟೂರ್ನಿಯಲ್ಲಿ ಹೆಚ್ಚು ಗೋಲು ಗಳಿಸಿದ ಆಟಗಾರರಿಗೆ ನೀಡಲಾಗುತ್ತದೆ, ಈ ಬಾರಿ "ಗೋಲ್ಡನ್ ಶೂ" ಪ್ರಶಸ್ತಿಗೆ ಕ್ರಿಸ್ಟಿಯಾನೊ ರೊನಾಲ್ಡೋ ಅವರ ಹೆಸರನ್ನು ಘೋಷಣೆ ಮಾಡಿದ್ದಾರೆ.

* ಕ್ರಿಸ್ಟಿಯಾನೊ ರೊನಾಲ್ಡೋ ಅವರು ಈ ಬಾರಿಯ ಯೂರೋ ಕಪ್ ಟೂರ್ನಿಯಲ್ಲಿ '14' ಗೋಲುಗಳನ್ನು ಗಳಸಿದ್ದಾರೆ.

* ಪ್ರಸ್ತುತ ಕ್ರಿಸ್ಟಿಯಾನೊ ರೊನಾಲ್ಡೊ ಅವರು 109 ಅಂತಾರಾಷ್ಟ್ರೀಯ ಗೋಲುಗಳನ್ನು ಗಳಿಸಿ ಇರಾನ್'ನ ಆಟಗಾರ ಅಲಿ ಡೇಯಿ ಸ್ಥಾಪಿಸಿದ ವಿಶ್ವ ದಾಖಲೆಗೆಸಮವಾಗಿದ್ದಾರೆ.

## ಅಸ್ಸಾಂನಲ್ಲಿ ಗೋಹತ್ಯೆ, ಗೋಮಾಂಸ ಸೇವನೆಗೆ ಮಸೂದೆ ಮಂಡನೆ



* ಅಸ್ಸಾಂ ರಾಜ್ಯದಲ್ಲಿ ಹಿಂದೂ, ಜೈನರು, ಸಿಖ್ಖರು ಮತ್ತು ಗೋಮಾಂಸ ಸೇವಿಸದ ಇತರೆ ಸಮುದಾಯದವರು ಪ್ರಾಬಲ್ಯ ಹೊಂದಿರುವ ಪ್ರದೇಶಗಳಲ್ಲಿ ಗೋಮಾಂಸ ಮಾರಾಟ ನಿಷೇಧಿಸಲು ಅಸ್ಸಾಂನ ಬಿಜೆಪಿ ಸರ್ಕಾರವು ಮುಂದಾಗಿದೆ.

* ಪ್ರಸ್ತುತ ಅಸ್ಸಾಂ ರಾಜ್ಯ ಸರ್ಕಾರವು 'ಜಾನುವಾರು ಸಂರಕ್ಷಣಾ ಕಾಯ್ದೆ 2021'ರ ಮಸೂದೆಯನ್ನು ಮಂಡನೆ ಮಾಡಿದೆ, ಈ ಮಸೂದೆಯ ಪ್ರಕಾರ ಇನ್ನು ಮುಂದೆ ದೇಗುಲ ಹಾಗೂ ಹಿಂದೂ ಧಾರ್ಮಿಕ ಸಂಸ್ಥೆಗಳ ಸುತ್ತ ಮುತ್ತ 5 ಕಿ.ಮೀ. ವ್ಯಾಪ್ತಿಯಲ್ಲಿ ಗೋಮಾಂಸ ಮಾರಾಟವನ್ನು ನಿಷೇಧಿಸಲಾಗುವದು ಎಂದು ಸರ್ಕಾರ ತಿಳಿಸಿದೆ, ಹಾಗೂ ಇದರ ಜೊತೆಯಲ್ಲಿ ಅಸ್ಸಾಂರಾಜ್ಯಸರ್ಕಾರದ ಪರವಾನಿಗೆ ಇಲ್ಲದೇ ಸುತ್ತ ಮುತ್ತಲಿನ ರಾಜ್ಯಗಳಿಂದ ಅಸ್ಸಾಂ ರಾಜ್ಯಕ್ಕೆ ಗೋಮಾಂಸ ಸಾಗಣೆಯನ್ನೂ ನಿರ್ಬಂಧಿಸಲು ಈ ಮಸೂದೆ ಅವಕಾಶ ನೀಡಲಿದೆ.

* ಅಸ್ಸಾಂ ನೆರೆಯ ರಾಜ್ಯಗಳು ಮಿಜೋರಾಂ, ನಾಗಾಲ್ಯಾಂಡ್, ಮೇಘಾಲಯ.

* ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಈ ಮಸೂದೆಯನ್ನು ಮಾಡಿಸಿದ್ದಾರೆ, ಈ ಮೊದಲಿನ ಹಾಲಿ 1950ರ ಕಾಯ್ದೆ ಬದಲು ಹೊಸ ಕಾಯ್ದೆ ತರುವುದು ಉದ್ದೇಶ ಇದಾಗಿದೆ ಎಂದಿದ್ದಾರೆ.

* ಹಾಲಿ 1950ರ ಕಾಯ್ದೆಯಡಿಲ್ಲಿ 14 ವರ್ಷ ಮೀರಿದ ಜಾನುವಾರುಗಳ ಹತ್ಯೆಗೆ ಅವಕಾಶ ನೀಡಲಾಗಿತ್ತು, ಇನ್ನು ಮುಂದೆ ಈ ಹೊಸ ಮಸೂದೆಯನ್ನು ನಿಯಮಗಳ ಉಲ್ಲಂಘನೆ ಮಾಡಿದರೆ 3 ರಿಂದ 5 ವರ್ಷ ಜೈಲು ಶಿಕ್ಷೆ, ಹಾಗೂ 3ಲಕ್ಷ ದಿಂದ 5ಲಕ್ಷವರೆಗೆ ದಂಡ ವಿಧಿಸಲಾಗುವದು ಎಂದುತಿಳಿಸಿದ್ದಾರೆ.

## ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲ 'ಕೃತ್ಯ ಸ್ಥಳ ಪರಿಶೀಲಾಅಧಿಕಾರಿ'ಹುದ್ದೆಸೃಷ್ಠಿ



* ಕರ್ನಾಟಕ ರಾಜ್ಯ ಸರ್ಕಾರದಿಂದ ಅಪರಾಧ ಕೃತ್ಯ ತಡೆಗೆ ಮುಂದಾಗಲು ಮಹತ್ವದ ಹೆಜ್ಜೆಯನ್ನು ಇಡುತ್ತಿದೆ, ಅದುವೇ ದೇಶದಲ್ಲಿಯೇ ಮೊಟ್ಟ ಮೊದಲ "ಕೃತ್ಯ ಸ್ಥಳ ಪರಿಶೀಲನಾ ಅಧಿಕಾರಿ" ಹುದ್ದೆಯನ್ನು ಸೃಷ್ಟಿ ಮಾಡಲಾಗಿದೆ ಎಂದು ರಾಜ್ಯ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾಹಿತಿ ನೀಡಿದ್ದಾರೆ.

* ಈ ಹುದ್ದೆಯಿಂದ ಅಪರಾಧ ಕೃತ್ಯ ನಡೆಡಿರುವ ಸ್ಥಳವನ್ನು ವೈಜ್ಞಾನಿಕವಾಗಿ ಪರಿಶೀಲನೆ ನಡೆಸಲು ಮತ್ತು ಸೂಕ್ಷ್ಮಾತಿಸೂಕ್ಷ್ಮ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಅಪರಾಧವನ್ನು ಪತ್ತೆ ಮಾಡಲು ಸಹಾಯಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

* ಈ ಹುದ್ದೆಯ ಕುರಿತು ರಾಜ್ಯ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ತಿಳಿಸಿರುವ ಪ್ರಕಾರ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ 'sceneofcrimeofficer'ಹುದ್ದೆಗಳ ಆದೇಶ ಪ್ರತಿಯನ್ನು ನೀಡಲಿದ್ದಾರೆ.

* ಈ ರೀತಿಯ ಹೊಸ ಪೊಲೀಸ್ ಹುದ್ದೆಗಳನ್ನು ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಅಪರಾಧ ಕೃತ್ಯಗಳ ತನಿಖೆಗೆ ಸೃಷ್ಟಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಮೊದಲ ಬಾರಿ 206 ಜನರ ನುರಿತ ಅಧಿಕಾರಿಗಳ ಹುದ್ದೆಗಳನ್ನು ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು ಮಂಜೂರು ಮಾಡಿ ಅಧಿಕೃತವಾಗಿ ಸರ್ಕಾರಿ ಆದೇಶವನ್ನು ರಾಜ್ಯ ಗೃಹ

ಇಲಾಖೆಗೆ ನೀಡಲಿದ್ದಾರೆ, ಹಾಗೂ ಇದೇ ಸಂಧರ್ಭದಲ್ಲಿ ಪೊಲೀಸರ ಮಕ್ಕಳಿಗೆ ಉತ್ತಮ ಗುಣಮಟ್ಟದಶಿಕ್ಷಣನೀಡುವಸಲುವಾಗಿವಿದ್ಯಾನಿಧಿ 2ಯೋಜನೆಗೆಚಾಲನೆ ನೀಡಲಿದ್ದಾರೆ.

## ಪ್ರಧಾನಿ ಮೋದಿಯಿಂದ ಪದ್ಮಾ ಪ್ರಶಸ್ತಿಗಾಗಿ ಜನರ ನಾಮನಿರ್ದೇಶನಆಹ್ವಾನ





* ಪ್ರಸ್ತುತ 2022ರ ಪದ್ಮ ಪ್ರಶಸ್ತಿಯ ನಾಮಪತ್ರ ಕಳುಹಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಜನರನ್ನು ಆಹ್ವಾನಿಸಿದ್ದಾರೆ. ಪ್ರತಿವರ್ಷ ಗಣರಾಜ್ಯೋತ್ಸವದದಿನದಂದು ಪದ್ಮಾ ಪ್ರಶಸ್ತಿಗಳನ್ನು ಘೋಷಣೆ ಮಾಡಲಾಗುತ್ತದೆ.

* 2020ರ ಹೊತ್ತಿಗೆ ಭಾರತ ದೇಶದ ಅತ್ಯುನ್ನತ ನಾಗರಿಕ ಗೌರವಗಳಾಗಿರುವ ಪದ್ಮಾ ಪ್ರಶಸ್ತಿಗಳುನ್ನು3123ಜನರುಸ್ವೀಕರಿಸಿದ್ದಾರೆ.

* ಈ ಪ್ರಶಸ್ತಿಗಳನ್ನು ಮೂರು ವಿಭಾಗಗಳಲ್ಲಿ ನೀಡಲಾಗುತ್ತದೆ: ಪದ್ಮವಿಭೂಷಣ ಈ ಪ್ರಶಸ್ತಿಯನ್ನು ಅಸಾಧಾರಣ ಮತ್ತು ವಿಶಿಷ್ಟ ಸೇವೆಗಾಗಿ ನೀಡಲಾಗುತ್ತದೆ. ಪದ್ಮಭೂಷಣ ಉನ್ನತ ಕ್ರಮಾಂಕದ ವಿಶಿಷ್ಟ ಸೇವೆಗಾಗಿ ನೀಡಲಾಗುತ್ತದೆ. ಪದ್ಮಶ್ರೀ ವಿಶೇಷಸೇವೆಯನ್ನುಗೌರವಿಸಲುಇದನ್ನುನೀಡಲಾಗುತ್ತದೆ.

* ಪ್ರಸ್ತುತ 1954ರಲ್ಲಿ ಪದ್ಮಾ ಪ್ರಶಸ್ತಿಗಳನ್ನು ಸ್ಥಾಪನೆ ಮಾಡಲಾಗಿದೆ, ಶಿಕ್ಷಣ, ಕಲೆ, ಸಾಹಿತ್ಯ, ಉದ್ಯಮ, ಕ್ರೀಡೆ, ವಿಜ್ಞಾನ, ಔಷದ, ಸಾಮಾಜಿಕ ಸೇವೆ ಮತ್ತು ಸಾರ್ವಜನಿಕ ವ್ಯವಹಾರಗಳಂತಹ ವಿವಿಧ ಕ್ಷೇತ್ರಗಳಲ್ಲಿ ಜನಗಳ ವಿಶಿಷ್ಟ ಕೊಡುಗೆಯನ್ನು ಗುರುತಿಸಲು ಭಾರತದ ನಾಗರಿಕರಿಗೆ ಈ ಪ್ರಶಸ್ತಿಗಳನ್ನುನೀಡಲಾಗುತ್ತದೆ.

## 100% ಮೊದಲ ಡೋಸ್ ಲಸಿಕೆ ಹಾಕಿದ ಕೇಂದ್ರಾಡಳಿತ ಪ್ರದೇಶ ಲಡಾಖ್




* ಪ್ರಸ್ತುತ ಲಡಾಖ್'ನ ಎಲ್ಲಾ ನಿವಾಸಿಗಳು ಹಾಗೂ ಅತಿಥಿ ಜನಸಂಖ್ಯೆಗೆ ಲಸಿಕೆ ಹಾಕಿದ ಮೊದಲ ಕೇಂದ್ರಾಡಳಿತ ಪ್ರದೇಶವಾಗಿದೆ, ಜೀವನೋಪಾಯವನ್ನು ಗಳಿಸುವ ವಲಸೆ ಕಾರ್ಮಿಕರು, ಹೋಟೆಲ್ ಕಾರ್ಮಿಕರೆಲ್ಲರಿಗೂ ಕೋವಿಡ್ 19 ಲಸಿಕೆಯ ಮೊದಲ ಡೋಸ್ ಹಾಕಲಾಗಿದೆ.

* ಲಡಾಖ್ ನೀಡಿರುವ ಮಾಹಿತಿಯ ಪ್ರಕಾರ ಎಲ್ಲಾ ಅರ್ಹ ವಯೋಮಾನದ ಜನ ಸಂಖ್ಯೆಗೆ ಅಂದರೆ ಒಟ್ಟು 89,404 ಜನರಿಗೆ ಕೋವಿಡ್ 19 ಲಸಿಕೆಯ ಮೊದಲ ಪ್ರಮಾಣವನ್ನು ನೀಡಲಾಗಿದೆ, ಅಲ್ಲದೇ 2ನೇ ಡೋಸ್ ಲಸಿಕೆಯನ್ನು ಸುಮಾರು 60,936 ಜನರಿಗೆ ನೀಡಲಾಗಿದೆ.

* ಈ ಕೇಂದ್ರಾಡಳಿತ ಪ್ರದೇಶದಲ್ಲಿ ವಾಸಿಸುತ್ತಿರುವ ಸುಮಾರು 6,821 ನೇಪಾಳದ ನಾಗರಿಕರಿಗೆ ಕೋವಿಡ್ 19ಲಸಿಕೆಯನ್ನುಹಾಕಲಾಗಿದೆ.

* ಲಡಾಖ್ ಭಾರತದ ಕೇಂದ್ರ ಪ್ರದೇಶವಾಗಿದೆ ಹಾಗೂ ಇದು ಕಾಶ್ಮೀರದ ದೊಡ್ಡ ಪ್ರದೇಶದ ಭಾಗವಾಗಿದೆ,ಇಷ್ಟೇ ಅಲ್ಲದೇ ಭಾರತ, ಪಾಕಿಸ್ತಾನ ಮತ್ತು ಚೀನಾ ನಡುವಿನ ವಿವಾದದ ಪ್ರದೇಶವಾಗಿದೆ.

* ಪ್ರಸ್ತುತ 'ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯ್ದೆ'ಯನ್ನು ಅಂಗೀಕರಿಸಿದ ನಂತರ ಲಡಾಖ್'ನ್ನು2019ರಅಕ್ಟೋಬರ್31ರಂದುಕೇಂದ್ರಪ್ರದೇಶವಾಗಿಸ್ಥಾಪನೆಮಾಡಲಾಗಿದೆ.

## ಕಳೆದ 50 ವರ್ಷಗಳಲ್ಲಿ ಇದೆ ಮೊದಲ ಬಾರಿಗೆ ಭಾರತ ಸೇಬು ಯುನೈಟೆಡ್‌ಕಿಂಗ್‌ಡಮ್‌ರಫ್ತು



* ಪ್ರಸ್ತುತ ಯುಕೆ ಮತ್ತು ಭಾರತದ ನಡುವಿನ ವ್ಯಾಪಾರ ಸಹಭಾಗಿತ್ವವನ್ನು ಬಲಪಡಿಸುವ ಸಲುವಾಗಿ ಯುನೈಟೆಡ್ ಕಿಂಗ್‌ಡಮ್ 50 ವರ್ಷಗಳಲ್ಲಿ ಮೊದಲ ಬಾರಿಗೆ ಸೇಬನ್ನು ಭಾರತಕ್ಕೆ ರಫ್ತು ಮಾಡಿದೆ.

* ಈ ಹಿಂದೆ 2021ರ ಮೇ ತಿಂಗಳಿನಲ್ಲಿ ಈ ಎರಡು ಉಭಯ ದೇಶಗಳ ಪ್ರಧಾನ ಮಂತ್ರಿಗಳು ಒಪ್ಪಿಗೆ ನೀಡಿರುವ ವರ್ಧಿತ ವ್ಯಾಪಾರ ಸಹಭಾಗಿತ್ವದ ಅಡಿಯಲ್ಲಿ ಈ ಸೇಬುಗಳನ್ನು ರಫ್ತು ಮಾಡಲಾಯಿತು.

* ಪ್ರಸ್ತುತ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು 30 ಪಚಾರಿಕವಾಗಿ ಒಪ್ಪಂದಕ್ಕೆ ಸಹಿ ಹಾಕಿದರು ಹಾಗೂ 2030ರ ಹೊತ್ತಿಗೆ ಯುನೈಟೆಡ್ ಕಿಂಗ್‌ಡಮ್ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ವ್ಯಾಪಾರವನ್ನು ದ್ವಿಗುಣಗೊಳಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಭಾರತವು ಯುನೈಟೆಡ್ ಕಿಂಗ್‌ಡಮ್'ನಲ್ಲಿ 2ನೇ ಅತಿದೊಡ್ಡ ಹೂಡಿಕೆದಾರವಾಗಿದೆ, ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ಜಿ 20 ಹೂಡಿಕೆದಾರರಲ್ಲಿ ಯುಕೆ 2ನೇ ಸ್ಥಾನದಲ್ಲಿದೆ.

## ಗುಜರಾತ್'ನ ಕಚ್ಚಿ ಹೊಸ ವರ್ಷ




* ಪ್ರತಿ ವರ್ಷ ಶುಲಾ ಪತ್ರದ 2ನೇ ದಿನ ಅಥವಾ ಆಶಾಡ ತಿಂಗಳಲ್ಲಿ ಚಂದ್ರನ ವ್ಯಾಕ್ಸಿಂಗ್ ಹಂತದಲ್ಲಿ ಕಚ್ಚಿ ಹೊಸ ವರ್ಷವನ್ನು ಆಚರಿಸಲಾಗುತ್ತದೆ, ಈ ವರ್ಷ ಕಚ್ಚಿ ಹೊಸ ವರ್ಷವನ್ನು 2021ರ ಜುಲೈ. 12ರಂದು ಆಚರಣೆ ಮಾಡಲಾಯಿತು.

* ಪ್ರಸ್ತುತ ಗುಜರಾತ್'ನ ಕಚ್ ಪ್ರದೇಶದಲ್ಲಿ ಈ ಹಿಂದೂ ಹೊಸ ವರ್ಷವನ್ನು ಆಚರಣೆ ಮಾಡಲಾಗುತ್ತದೆ, ಗುಜರಾತ್‌ನ ಇತರ ಪ್ರದೇಶಗಳಲ್ಲಿ ದೀಪಾವಳಿಯ ನಂತರದ ದಿನಗಳಲ್ಲಿ ಈ ಹಿಂದೂ ಹೊಸ ವರ್ಷವನ್ನು ಆಚರಣೆ ಮಾಡಲಾಗುತ್ತದೆ ಅದುವೇ ಕಾರ್ತಿಕ್ ಶುಕ್ಲ ಪಕ್ಷ 1.

* ಗುಜರಾತ್'ನ ಈ ಕಚ್ಚಿ ಹೊಸ ವರ್ಷವು ಸಾಂಪ್ರದಾಯಿಕವಾಗಿ ಮನೆಗಳಲ್ಲಿ ಆಚರಿಸಲಾಗುತ್ತದೆ.

* ಮಹಾರಾಷ್ಟ್ರದಲ್ಲಿ ಆಶಾಡಿ ಏಕಾದಶಿ ಉತ್ಸವ ಆಚರಿಸಲಾಗುವ ಒಂದು ಪ್ರಮುಖ ಧಾರ್ಮಿಕ ಹಬ್ಬವಾಗಿದೆ, ಸಾಮಾನ್ಯವಾಗಿ ಪಂಢರಪುರದಲ್ಲಿ ಈ ಹಬ್ಬವನ್ನು ನಡೆಸಲಾಗುತ್ತದೆ, ಪ್ರತಿವರ್ಷ ಆಶಾಡ ಶುಕ್ಲ ಪಕ್ಷದಲ್ಲಿಹಬ್ಬನಡೆಸಲಾಗುತ್ತದೆ.

# 14-07-2021

## ಭಾರತ ತಂಡದ ಕ್ರಿಕೆಟ್ ಆಟಗಾರ ಯಶಪಾಲ್ ಶರ್ಮಾ ನಿಧನ



* ಪ್ರಸ್ತುತ 1983ರಲ್ಲಿ ಭಾರತವು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಜಯ ಸಾಧಿಸಿತ್ತು, ಆ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಆಟವಾಡಿದ್ದ ಪ್ರಮುಖ ಆಟಗಾರ ಯಶಪಾಲ್ ಶರ್ಮಾ ಅವರು ತಮ್ಮ 66ನೇ ವಯಸ್ಸಿನಲ್ಲಿ ಹೃದಯಘಾತದಿಂದ ವಿಧಿವಶರಾಗಿದ್ದಾರೆ.

* ಮಾಜಿ ಕ್ರಿಕೆಟಿಗ ಯಶಪಾಲ್ ಶರ್ಮಾ ಅವರು 37 ಟೆಸ್ಟ್ ಪಂದ್ಯಗಳನ್ನು ಆಡಿ 1,606 ರನ್ ಗಳನ್ನು ಕಲೆಹಾಕಿದ್ದಾರೆ, ಹಾಗೂ 42 ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 883 ರನ್ 'ಗಳನ್ನೂಗಳಿಸಿದ್ದಾರೆ.

*ಯಶಪಾಲ್ ಶರ್ಮಾ ಅವರು 1983ರ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನವನ್ನು ನೀಡಿದ್ದರು.

## ಮೊದಲ ಬಾರಿಗೆ 13 ಭಾಷೆಗಳಲ್ಲಿ ನೀಟ್ ಪರೀಕ್ಷೆ



* ಇದೇ ಮೊದಲ ಬಾರಿಗೆ 13 ಭಾಷೆಗಳಲ್ಲಿ ವೈದ್ಯಕೀಯ ಶಿಕ್ಷಣ ಪ್ರವೇಶ ಪಡೆಯುದ್ದಕ್ಕಾಗಿ ಇರುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ನಡೆಯಲಿದೆ ಎಂದು ಕೇಂದ್ರ ಶಿಕ್ಷಣಸಚಿವಧರ್ಮೇಂದ್ರಪ್ರಧಾನ್ಅವರುತಿಳಿಸಿದ್ದಾರೆ.

* ಇದೇ ಸಂಧರ್ಭದಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಧ್ಯಪ್ರಾಚ್ಯದಲ್ಲಿರುವ ಭಾರತೀಯ ವಿದ್ಯಾರ್ಥಿ ಸಮುದಾಯಕ್ಕೆ ಅನುಕೂಲವಾಗುವಂತೆ ಕುವೈತ್‌ನಲ್ಲೂ ನೀಟ್ ಪರೀಕ್ಷಾ ಕೇಂದ್ರ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.

* 2021ರ ನೀಟ್ ಪರೀಕ್ಷಾ ನೋಂದಣಿ ಇದೀಗ ಪ್ರಾಂಭವಾಗಿದೆ, ಹಿಂದಿ, ಪಂಜಾಬಿ, ಅಸ್ಸಾಮಿ, ಬಂಗಾಲಿ, ಒಡಿಯಾ, ಗುಜರಾತಿ, ಮರಾಠಿ, ತೆಲುಗು, ಮಲೆಯಾಳಂ, ಕನ್ನಡ, ತಮಿಳು, ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಿಳಿಸಿದ್ದಾರೆ.
* ಈ ನೀಟ್ ಪರೀಕ್ಷೆಯನ್ನು ಸೆಪ್ಟಂಬರ್ 12ಕ್ಕೆ ನಡೆಸಲಾಗುತ್ತದೆಎಂದುತಿಳಿಸಿದ್ದಾರೆ.

## ಶೇರ್ ಬಹದ್ದೂರ್ ದೇವುಬಾ ನೇಪಾಳದ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ



* ನೇಪಾಳಿ ಕಾಂಗ್ರೆಸ್‌ನ ಮುಖ್ಯಸ್ಥ ಶೇರ್ ಬಹದ್ದೂರ್ ದೇವುಬಾ ಅವರು ಪ್ರಸ್ತುತ ನೇಪಾಳದ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

* ನೇಪಾಳ ಸುಪ್ರೀಂ ಕೋರ್ಟ್ ತೀರ್ಪು ನೀಡಿರುವ ಅನುಸಾರ ಪ್ರತಿಪಕ್ಷ ನಾಯಕರಾಗಿರುವ 75 ವರ್ಷದ ದೇವುಬಾ ಅವರನ್ನು ಪ್ರಧಾನ ಮಂತ್ರಿಯಾಗಿ ನೇಮಕ ಮಾಡಲು ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ನೋಟಿಸ್ ಹೊರಡಿಸಿದ್ದರು.

* ಶೇರ್ ಬಹದ್ದೂರ್ ದೇವುಬಾ ಅವರು 5ನೇ ಬಾರಿಗೆ ಪ್ರಧಾನ ಮಂತ್ರಿಯಾಗಿದ್ದರೆ, ಈ ಹಿಂದೆ ಸೆಪ್ಟೆಂಬರ್ 1995 ರಿಂದ ಮಾರ್ಚ್ 1997 ವರೆಗೆ, ಜುಲೈ 2001ರಿಂದ ಅಕ್ಟೋಬರ್ 2002ರ ವರೆಗೆ, ಜೂನ್ 2004ರಿಂದ ಫೆಬ್ರುವರಿ 2005ರ ವರೆಗೆ, ಜೂನ್ 2017 ರಿಂದ ಫೆಬ್ರುವರಿ 2018ರವರೆಗೆ 4 ಬಾರಿ ನೇಪಾಳದ ಪ್ರಧಾನ ಮಂತ್ರಿಯಾಗಿ ಸೇವೆಸಲ್ಲಿಸಿದ್ದಾರೆ.

## ಭಾರತೀಯ ದೀಪಕ್ ಕಾಬ್ರಾ ಟೋಕಿಯೊ ಒಲಿಂಪಿಕ್ಸ್'ನ ಜಿಮ್ನಾಸ್ಟಿಕ್ಸ್‌ನಿರ್ಣಾಯಕ



* ಟೋಕಿಯೊದಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನ ಜಿಮ್ನಾಸ್ಟಿಕ್ಸ್ ಸ್ಪರ್ಧೆಗೆ ಭಾರತದ ದೀಪಕ್ ಕಾಬ್ರಾ ಅವರು ನಿರ್ಣಾಯಕರಾಗಿ ಕಾರ್ಯವನ್ನು ನಿರ್ವಹಿಸಲಿದ್ದಾರೆ.

* ಈ ನಿರ್ಣಾಯಕ ಕಾರ್ಯಕ್ಕೆ ಆಯ್ಕೆಯಾದ ಮೊದಲ ಭಾರತೀಯರಾಗಿದ್ದಾರೆ, ಪ್ರಸ್ತುತ ಇವರು ಪುರುಷರ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್'ನಲ್ಲಿ ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಲಾಗಿದೆ.

* ದೀಪಕ್ ಕಾಬ್ರಾ ಅವರು ತಮ್ಮ 12ನೇ ವಯಸ್ಸಿನಲ್ಲಿ ಜಿಮ್ನಾಸ್ಟಿಕ್ಸ್ ಪ್ರಾರಂಭಿಸಿದ್ದರು, ಇವರು 2007ರಲ್ಲಿ ಗುವಾಹಟಿಯಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು, ಅಲ್ಲದೇ 2005ರಿಂದ 2009ರವರೆಗೆ ಗುಜರಾತ್ ರಾಜ್ಯದ ಚಾಂಪಿಯನ್ ಆಗಿಹೊರಹೊಮ್ಮಿದ್ದರು.

* 2010ರಲ್ಲಿ ಭಾರತದಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು, ಹಾಗೂ ಇದಲ್ಲದೇ 2014ರಲ್ಲಿ ಏಷ್ಯನ್ ಗೇಮ್ಸ್ ಮತ್ತು ಯೂತ್ ಒಲಿಂಪಿಕ್ಸ್‌ನಲ್ಲಿ ನಿರ್ಣಾಯಕರಾಗಿ ಕಾರ್ಯ ನಿರ್ವಹಿಸಿದ್ದಾರೆ, ಮತ್ತೇ 2018ರ ಏಷ್ಯನ್ ಮತ್ತು ಕಾಮನ್‌ವೆಲ್ತ್ ಕೂಟಗಳಲ್ಲಿ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ.

## 2026ರ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಆತಿಥ್ಯ ವಹಿಸಲಿರುವಭಾರತ



* ಪ್ರಸ್ತುತ ಭಾರತ ದೇಶವು 2026 ರ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಆತಿಥ್ಯ ವಹಿಸಲಿದೆ ಎಂದು BWF ಪ್ರಕಟಣೆ ಹೊರಡಿಸಿದೆ. 2023 ರ ಸುದೀರ್ಮನ್ ಕಪ್ ಟೂರ್ನಿಯ (ವಿಶ್ವ ಮಿಕ್ಸೆಡ್ ಡಬಲ್ಸ್ ಸ್ಪರ್ಧೆ) ಆತಿಥ್ಯವನ್ನು ಚೀನಾ ದೇಶ ವಹಿಸಲಿದೆ.

* ಭಾರತಕ್ಕೆ ಎರಡನೇ ಬಾರಿ ವರ್ಲ್ಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಆತಿಥ್ಯ ಲಭಿಸಿದೆ, ಈ

ಮೊದಲು 2009ರಲ್ಲಿ ಭಾರತವು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಕೂಟವನ್ನು ಹೈದರಾಬಾದ್ ನಲ್ಲಿ ನಡೆಸಿತ್ತು.

* ಭಾರತೀಯ ಬ್ಯಾಡ್ಮಿಂಟನ್ ಅಸೋಸಿಯೇಶನ್ ಅಧ್ಯಕ್ಷ ಹಿಮಂತ್ ಬಿಸ್ವ ಶರ್ಮ ಅವರು ಭಾರತಕ್ಕೆ ಲಭಿಸಿರುವ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಆತಿಥ್ಯದ ಬಗ್ಗೆ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

* ಭಾರತವು 2026 ರ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಕೂಟವನ್ನು ನಡೆಸುವ ಸ್ಥಳವನ್ನು ಮುಂದೆನಿರ್ಧರಿಸಲಾಗುವುದುಎಂದುತಿಳಿಸಿದೆ.

## ಟೋಕಿಯೊಒಲಿಂಪಿಕ್ಸ್‌ನಲ್ಲಿ ಭಾರತದ228ಕ್ರೀಡಾಪಟುಗಳುಬಾಗಿ




* ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ಗೆ 119 ಕ್ರೀಡಾಪಟುಗಳಲ್ಲಿ 67 ಪುರುಷರು ಹಾಗೂ 52 ಮಹಿಳಾ ಸ್ಪರ್ಧಿಗಳು 18 ಕ್ರೀಡಾ ವಿಭಾಗಗಳಲ್ಲಿ 130 ಕೋಟಿ ಭಾರತೀಯರನ್ನು ಪ್ರತಿನಿಧಿಸಲಿದ್ದಾರೆ.

* 2020 ಬೇಸಿಗೆ ಒಲಿಂಪಿಕ್ಸ್ ಅಂತರರಾಷ್ಟ್ರೀಯ ಬಹು ಕ್ರೀಡಾ ಕಾರ್ಯಕ್ರಮವು ಇದೇ ಜುಲೈ 23 ರಿಂದ ಆಗಸ್ಟ್ 8, 2021ರವರೆಗೆ ಜಪಾನ್‌ನ ಟೋಕಿಯೊದಲ್ಲಿ ನಡೆಯುತ್ತವೆ, ಈ ಮೊದಲು ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟವನ್ನು 2020ರಲ್ಲಿ ನಡೆಯಲು ನಿರ್ಧಾರವನ್ನು ಕೈಗೊಳ್ಳಲಾಗಿತ್ತು ಆದರೆ COVID 19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಈವೆಂಟ್ ಮುಂದೂಡಲ್ಪಟ್ಟಿತು, ಈ ಬಾರಿಯ ನಡೆಯುವ ತುರ್ತು ಪರಿಸ್ಥಿತಿಯಲ್ಲಿ ಯಾವುದೇ ಪ್ರೇಕ್ಷಕರಿಗೆ ಅನುಮತಿನೀಡಲಾಗಿಲ್ಲಎಂದುತಿಳಿಸಿದೆ.

* ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್ ಉದ್ದೇಶಗಳಿಗಾಗಿ ಈ ಈವೆಂಟ್ 2021ಕ್ಕೆ ಮರು ನಿಗದಿಪಡಿಸಿದೆ, ಆದರೆ ಟೋಕಿಯೋ 2020 ಹೆಸರನ್ನು ಬಳಸಲು ಉದ್ದೇಶಿಸಲಾಗಿದೆ.

*ಒಲಿಂಪಿಕ್ ಕ್ರೀಡಾಕೂಟವನ್ನು ಇದೇ ಮೊದಲ ಬಾರಿಗೆ ಮುಂದೂಡಿ ಮತ್ತು ಮರು ನಿಗದಿಪಡಿಸಿ ನಡೆಸಲಾಗುತ್ತಿದೆ ಆದರೆ ಇದುವರೆಗೆ ರದ್ದುಗೊಳಿಸಿಲ್ಲ.

* 2013ರಲ್ಲಿ ಅರ್ಜೆಂಟೀನಾದ ಬ್ಯೂನಸ್ ಐರಿಸ್ನಲ್ಲಿ ನಡೆದ 125 ನೇ ಐಒಸಿ ಅಧಿವೇಶನದಲ್ಲಿ ಟೋಕಿಯೊವನ್ನು ಆತಿಥೇಯ ನಗರವಾಗಿ ಆಯ್ಕೆ ಮಾಡಲಾಗಿದೆ.

* ಪ್ರಸ್ತುತ ಜಪಾನ್ ದೇಶವು 2ನೇ ಬಾರಿಗೆ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸುತ್ತಿದೆ, ಈ ಮೊದಲು 1964ರಲ್ಲಿ ಟೋಕಿಯೋ ಒಲಿಂಪಿಕ್ ಆಯೋಜಿಸಿತ್ತು.

* ಇದೀಗ ಬೇಸಿಗೆ ಕ್ರೀಡಾಕೂಟವನ್ನು 2 ಬಾರಿ ಆಯೋಜಿಸಿದ ಏಷ್ಯಾದ ಮೊದಲ ನಗರ ಎಂಬಹೆಗ್ಗಳಿಕೆಗೆಟೋಕಿಯೊಪಾತ್ರವಾಗಿದೆ.

## ನೇಪಾಳ ಹಾಗೂ ಭಾರತ ದೇಶಗಳ ಮಧ್ಯೆ ಲೋವರ್ ಅರುಣ್‌ಜಲವಿದ್ಯುತ್‌ಯೋಜನೆಯಒಪ್ಪಂದಕ್ಕೆಸಹಿ




* ಪೂರ್ವ ನೇಪಾಳದಲ್ಲಿ 679 ಮೆಗಾವ್ಯಾಟ್ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲು, ನೇಪಾಳ ಭಾರತದ ಸತ್ಲುಜ್ ಜಲ ವಿದ್ಯಾತ್ ನಿಗಮ್ (SJVN) ದೊಂದಿಗೆ ಪರಸ್ಪರ ಒಪ್ಪಿಕೊಂಡು 1.3 ಬಿಲಿಯನ್ USDಒಪ್ಪಂದ ಮಾಡಿಕೊಂಡಿದೆ.

* ಪ್ರಸ್ತುತ ಭಾರತವು ಕೈಗೆತ್ತಿಕೊಂಡ ನೇಪಾಳದ 2ನೇ ಮೆಗಾ ಉದ್ಯಮ ಇದಾಗಿದೆ, ಅಲ್ಲದೇ ಏಕೈಕಅತಿದೊಡ್ಡವಿದೇಶಿಹೂಡಿಕೆಯೋಜನೆಇದಾಗಿದೆ ಎಂದು ತಿಳಿಸಿದ್ದಾರೆ.

* ನೇಪಾಳದ ಹೂಡಿಕೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಶೀಲ್ ಭಟ್ಟ ಮತ್ತು ಕಠ್ಮಂಡುವಿನ ಎಸ್‌ಜೆವಿಎನ್ ನಂದ್ ಲಾಲ್ ಶರ್ಮಾ ಅವರ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು ಈ ಯೋಜನೆಯನ್ನು ಅಭಿವೃದ್ಧಿಪಡಿಸಲು ಸಹಿ ಹಾಕಿದ್ದಾರೆ.

* ಲೋವರ್ ಅರುಣ್ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್'ನ ಈ ಯೋಜನೆಯು 679 ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯವನ್ನು ಹೊಂದಿದೆ, ಈ ಯೋಜನೆಯು ಪ್ರಾಂತ್ಯ 1ರ ಸಂಖುವಸಭಾ ಮತ್ತು ಭೋಜ್‌ಪುರ ಜಿಲ್ಲೆಗಳಲ್ಲಿದೆ, ಈ ಜಲವಿದ್ಯುತ್ ಯೋಜನೆಯಿಂದಾಗಿ ಸುತ್ತಮುತ್ತಲಿನಲ್ಲಿ ವಾಸಿಸುವ ಜನರಿಗೆ ಸಹಾಯ ಮಾಡುವ ಉದ್ದೇಶದ ಈ ಯೋಜನೆಯದಾಗಿದೆ.

* ಅರುಣ್ ನದಿಯು ನೇಪಾಳದ ಮೂಲಕ ಹಾದುಹೋಗುವ ಅತಿದೊಡ್ಡ ಟ್ರಾನ್ಸ್ ಹಿಮಾಲಯನ್‌ನದಿಯಾಗಿದೆ.

## ಭೀಮ್ ಯುಪಿಐ(UPI) ಯನ್ನು ಭೂತಾನ್'ಗೆ ವಿಸ್ತರಿಸಿದ ಎನ್ ಪಿಸಿಐ(NPCI)




* ತ್ವರಿತ ಪ್ರತಿಕ್ರಿಯೆ (ಕ್ಯೂಆರ್) ಕೋಡ್‌ಗಾಗಿ ಭಾರತದ ಏಕೀಕೃತ ಪಾವತಿ ಇಂಟರ್ಫೇಸ್ (UPI)ಮಾನದಂಡಗಳನ್ನು ಅಳವಡಿಸಿಕೊಂಡ ಮೊದಲ ದೇಶ ಭೂತಾನ್.

* ಪ್ರಸ್ತುತ ಭೂತಾನ್'ನ ವ್ಯಾಪಾರಿ ಸ್ಥಳಗಳಲ್ಲಿ ಭೀಮ್ ಯುಪಿಐ ಸ್ವೀಕಾರವನ್ನು ಹೊಂದಿರುವ 2ನೇ ದೇಶವಾಗಿದೆ, ಮೊದಲ ದೇಶ ಸಿಂಗಾಪುರ.

* ಭೂತಾನ್‌ನಲ್ಲಿ ಭೀಮ್ ಯುಪಿಐ ಕ್ಯೂಆರ್ ಆಧಾರಿತ ಪಾವತಿಗಳನ್ನು ಕಾರ್ಯಗತಗೊಳಿಸಲು ಭೂತಾನ್‌ನ ರಾಯಲ್ ಮಾನಿಟರಿ ಅಥಾರಿಟಿಯೊಂದಿಗೆ ಸಹಯೋಗವನ್ನು ಎನ್‌ಪಿಸಿಐ (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾದ) ಅಂತರರಾಷ್ಟ್ರೀಯ ವಿಭಾಗವಾಗಿದೆ.

* ಪ್ರಸ್ತುತ ಭೂತಾನ್ ರುಪೇ ಕಾರ್ಡ್‌ಗಳನ್ನು ನೀಡುವ ಹಾಗೂ ಸ್ವೀಕರಿಸುವ, ಭೀಮ್ ಯುಪಿಐ ಸ್ವೀಕರಿಸುವ ಏಕೈಕ ದೇಶಆಗಲಿದೆ.

* 2020 21ರಲ್ಲಿ ಸುಮಾರು 41 ಲಕ್ಷ ಕೋಟಿ ಮೌಲ್ಯದ 22 ಬಿಲಿಯನ್ ಹಣಕಾಸು ವಹಿವಾಟುಗಳನ್ನು ಮಾಡಿದೆ, ಎನ್‌ಪಿಸಿಐ ಮತ್ತು ಆರ್‌ಎಂಎ ನಡುವಿನ ಈ ಸಹಯೋಗವು ಪ್ರತಿವರ್ಷ ಭಾರತದಿಂದಭೂತಾನ್‌ಗೆಪ್ರಯಾಣಿಸುವ200,000ಪ್ರವಾಸಿಗರಿಗೆಸಹಾಯಕಾರಿಯಾಗಲಿದೆ.

*ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾ ಮತ್ತು ಇಂಡಿಯನ್ ಬ್ಯಾಂಕುಗಳ ಸಂಘವು ಪಾವತಿ ಮತ್ತು ವಸಾಹತು ಮೂಲಸೌಕರ್ಯಗಳನ್ನು ರಚಿಸಲು ಈ ಎನ್‌ಪಿಸಿಐ'ಯನ್ನು ಆರಂಭಿಸಿವೆ.

* ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (NPCI) ಭಾರತೀಯ ಮೊಬೈಲ್ ಪಾವತಿ ಅಪ್ಲಿಕೇಶನ್ ಆಗಿರುವ ಭೀಮ್'ನ್ನು ಅಭಿವೃದ್ಧಿಪಡಿಸಿದೆ, ಹಾಗೂ ಇದು

ಯುಪಿಐ'ನ್ನು ಆಧರಿಸಿದೆ, ಮತ್ತು ಇದಕ್ಕೆ ಬಿ. ಆರ್. ಅಂಬೇಡ್ಕರ್ ಅವರ ಹೆಸರನ್ನು ಇಡಲಾಗಿದೆ.

* ಪ್ರಸ್ತುತ 2016ರ ಡಿಸೆಂಬರ್, 30ರಂದು ಭೀಮ್(BHIM)ನ್ನು ಆರಂಭಿಸಲಾಗಿದೆ, ಯುಪಿಐ ಬಳಸುವ ಎಲ್ಲಾ ಭಾರತೀಯ ಬ್ಯಾಂಕುಗಳನ್ನು ಈ ಅಪ್ಲಿಕೇಶನ್‌ಬೆಂಬಲಿಸುತ್ತದೆ.

### ಜುಲೈ 11 : ವಿಶ್ವ ಜನಸಂಖ್ಯಾ ದಿನ




* 2021ರ ಜುಲೈ .11ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಣೆ ಮಾಡಲಾಯಿತು, ಇದು 32ನೇ ವಿಶ್ವ ಜನಸಂಖ್ಯಾ ದಿನವಾಗಿದೆ.

* ಪ್ರತಿವರ್ಷವು ಜುಲೈ. 11ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ,ಈದಿನವೂ ಅಧಿಕಜನಸಂಖ್ಯೆಯಸಮಸ್ಯೆಗಳನ್ನುತೋರಿಸುತ್ತದೆ.

* 1989ರ ಜುಲೈ. 11ರಂದು ಮೊದಲ ವಿಶ್ವ ಜನಸಂಖ್ಯಾ ದಿನವನ್ನು ಆಚರಣೆ ಮಾಡಲಾಗಿದೆ, 1989ರಲ್ಲಿ ಈ ದಿನವನ್ನು ಯುನೈಟೆಡ್ ನೇಷನ್ಸ್ ಡೆವಲಪ್ಮೆಂಟ್ ಪ್ರೋಗ್ರಾಂನ ಆಡಳಿತ ಮಂಡಳಿ ಸ್ಥಾಪನ ಮಾಡಿದೆ.

### ಭಾರತದ ಅತಿದೊಡ್ಡ ಸೌರ ಉದ್ಯಾನವನ್ನು ರಾನ್ ಆಫ್ ಕಚ್‌ನಲ್ಲಿ NTPCಸ್ಥಾಪಿಸಲಿದೆ



* ಪ್ರಸ್ತುತ ಸರ್ಕಾರಿ ಸ್ವಾಮ್ಯದ NTPC ಲಿಮಿಟೆಡ್ ಭಾರತದ ಅತಿದೊಡ್ಡ ಸೌರ ಉದ್ಯಾನವನ್ನು ಗುಜರಾತ್‌ನ ರಾನ್ ಆಫ್ ಕಚ್‌ನಲ್ಲಿ ಸ್ಥಾಪನೆ ಮಾಡಲಿದೆ, ಹಾಗೂ ಈ ಸೌರ ಪಾರ್ಕ್ 4.75 ಗಿಗಾವಾಟ್ ಸಾಮರ್ಥ್ಯಹೊಂದಿರಲಿದೆಎಂದುತಿಳಿಸಿದ್ದಾರೆ.

* NTPC ನವೀಕರಿಸಬಹುದಾದ ಎನರ್ಜಿ ಲಿಮಿಟೆಡ್ ಈ ಪ್ರದೇಶದಲ್ಲಿ ಹಸಿರು ಹೈಡ್ರೋಜನ್ ಚಲನಶೀಲತೆ ಯೋಜನೆಯನ್ನು ಸ್ಥಾಪಿಸಲು ಕೇಂದ್ರಾಡಳಿತ ಭೂಪ್ರದೇಶವಾಗಿರುವ ಲಡಾಕ್ ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

* ಪ್ರಸ್ತುತ NTPC ಸುಮಾರು 2032ರ ವೇಳೆಗೆ 130 GW ವಿದ್ಯುತ್ ಉತ್ಪಾದಿಸಲು 2019 ಮತ್ತು 2024ರ ಮಧ್ಯೆ 1 ಟ್ರಿಲಿಯನ್ ಹೂಡಿಕೆ ಮಾಡಲು ಯೋಜಿಸಿದೆ.

* ಅಲ್ಟ್ರಾ ಮೆಗಾ ನವೀಕರಿಸಬಹುದಾದ ಇಂಧನ ಶಕ್ತಿ ಉದ್ಯಾನವನಗಳು: NTPC ಹಾಗೂ ಹಲವು ಸರ್ಕಾರಿ ಕಂಪನಿಗಳು ಗಾಳಿ ಮತ್ತು ಸೌರ ಸಂಪನ್ಮೂಲ ಸಮೃದ್ಧ ರಾಜ್ಯಗಳಾಗಿವೆ, ಅವುಗಳೇ ಜಮ್ಮು ಮತ್ತು ಕಾಶ್ಮೀರ, ಆಂಧ್ರಪ್ರದೇಶ, ಕರ್ನಾಟಕ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ,ತಮಿಳುನಾಡುಮತ್ತುತೆಲಂಗಾಣರಾಜ್ಯಗಳು.

## 15-07-2021

### ಯುಎಇ ರಾಯಭಾರ ಕಚೇರಿ ಇಸ್ರೇಲ್ ನಲ್ಲಿ ಆರಂಭ



* ಇಸ್ರೇಲ್ ಹಾಗೂ ಯುಎಇ ಉಭಯ ದೇಶಗಳ ನಡುವೆ ಅಧಿಕೃತ ರಾಜತಾಂತ್ರಿಕ ಸಲುವಾಗಿ ಸ್ಥಾಪಿಸುವುದಾಗಿ ಘೋಷಣೆ ಮಾಡಿತ್ತು, ಯುಎಇ ತನ್ನ ರಾಯಭಾರ ಕಚೇರಿಯನ್ನು ಇಸ್ರೇಲ್ ನಲ್ಲಿ ಆರಂಭಿಸಿದೆಎಂದು ವರದಿಯಾಗಿದೆ.

* ಇಸ್ರೇಲ್ ಗೆ ಮಾನ್ಯತೆ ನೀಡಿರುವ 3 ನೇ ಪ್ರಮುಖ ಅರಬ್ ದೇಶವಾಗಿದೆ, ಯುಎಇ ಈ ರಾಯಭಾರ ಕಚೇರಿ ಟೆಲ್‌ಅವೀವ್ನ ಸ್ಟಾಕ್ ಎಕ್ಸ್ಚೇಂಜ್ ಕಟ್ಟಡದಲ್ಲಿ ಆರಂಭಿಸಿ ಕಾರ್ಯನಿರ್ವಹಿಸಲಿದೆ.

* ಈ ಹಿಂದಿನ ತಿಂಗಳಿನಲ್ಲಿ ಯುಎಇಯಲ್ಲಿ ಇಸ್ರೇಲ್ ರಾಯಭಾರ ಕಚೇರಿ ಪ್ರಾರಂಬವಾಗಿತ್ತು, ಇಸ್ರೇಲ್ ಅಧ್ಯಕ್ಷ ಇಸಾಕ್ ಹೆರ್ಝೋಗ್ ಹಾಗೂ ಯುಇಎ ರಾಯಭಾರಿ ಮುಹಮ್ಮದ್ ಅಲ್ ಖಾಜಅವರುಉದ್ಘಾಟನಾಸಮಾರಂಭದಲ್ಲಿಭಾಗಿಯಾಗಿದ್ದರು.

* ಈ ರಾಯಭಾರ ಕಚೇರಿಯು ಉಭಯ ದೇಶಗಳ ನಡುವೆ ಅಭಿವೃದ್ಧಿಗೊಳ್ಳುತ್ತಿರುವ ಸಂಬಂಧಗಳಿಗೆ ಪ್ರಮುಖ ಹೆಜ್ಜೆಯಾಗಿದೆ, ಪ್ರಸ್ತುತ ಯುಎಇ ಮತ್ತು ಇಸ್ರೇಲ್ ಪ್ರಗತಿಶೀಲ ದೇಶಗಳಾಗಿವೆ.

* ಇಸ್ರೇಲ್ ಅಧ್ಯಕ್ಷ ಹೆರ್ಝೋಗ್ ಅವರು ನೀಡಿರುವ ಮಾಹಿತಿಯ ಪ್ರಕಾರ ಯುಎಇಯೊಂದಿಗಿನ ಐತಿಹಾಸಿಕ ಒಪ್ಪಂದವನ್ನು ಮಾಡಿಕೊಂಡಿವೆ, ಅಲ್ಲದೆ ಇಸ್ರೇಲ್ ರಾಷ್ಟ್ರದೊಂದಿಗೆ ಶಾಂತಿ ಬಯಸುವ ಬೇರೆ ಬೇರೆ ದೇಶಗಳಿಗೂ ರಾಯಭಾರ ಕಚೇರಿಯುನ್ನು ವಿಸ್ತರಣೆ ಮಾಡಲಾಗುವದುಎಂದುತಿಳಿಸಿದ್ದಾರೆ.

### ಕರ್ನಾಟಕ ರಾಜ್ಯದ ಕ್ರೀಡಾಪಟುಗಳು ಒಲಂಪಿಕ್ಸ್‌ನಲ್ಲಿ ಗೆದ್ದರೆ ರಾಜ್ಯದಿಂದನಗದುಬಹುಮಾನ



* ಕರ್ನಾಟಕದ ಕೆಲ ಕ್ರೀಡಾಪಟುಗಳು ಪ್ರಸ್ತುತ ಜುಲೈ 23 ರಿಂದ ಜಪಾನ್'ನ ಟೋಕಿಯೋದಲ್ಲಿ ನಡೆಯಲಿರುವ ಒಲಂಪಿಕ್ಸ್'ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

* ಪ್ರಸ್ತುತ ಕರ್ನಾಟಕ ರಾಜ್ಯದ ಕ್ರಿಡಾಪಟುಗಳು ಒಲಂಪಿಕ್ಸ್‌ನಲ್ಲಿ ಪಾಲ್ಗೊಂಡು ಚಿನ್ನ ಗೆದ್ದರೆ 5 ಕೋಟಿ ರೂ. ಬೆಳ್ಳಿಗೆ3 ಕೋಟಿ ರೂ. ಕಂಚಿಗೆ 2 ಕೋಟಿ ರೂ. ನಗದು ಬಹುಮಾನ ನೀಡುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ತಿಳಿಸಿದ್ದಾರೆ.

* ಒಲಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದಿಂದ ನಗದು ಪ್ರೋತ್ಸಾಹವನ್ನು ಈಗಾಗಲೇ 5 ಕ್ರೀಡಾಪಟುಗಳಿಗೆ ತಲಾ ಹತ್ತು ಲಕ್ಷ ನಗದು ಪ್ರೋತ್ಸಾಹ ಧನ ನೀಡಲಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ರಾಜ್ಯ ಸರ್ಕಾರದಿಂದ ಪ್ರೋತ್ಸಾಹ ಧನ ಪಡೆದಿರುವ ಕಿರ್ದಪಟುಗಳು: ಈಕ್ವೆಸ್ಟ್ರಿಯನ್ ಕ್ರೀಡಾಪಟು ಫೌವಾದ್ ಮಿರ್ಜಾ, ಹಾಕಿಆಟಗಾರಎಸ್ವಿಸುನೀಲ್,ಟೆನ್ನಿಸ್ಆಟಗಾರರೋಹನ್ ಬೋಪಣ್ಣ, ಈಜುಪಟು ಶ್ರೀಹರಿ ನಟರಾಜ್, ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಅವರಿಗೆ ಕಾರನಾಟಕ ರಾಜ್ಯ ಸರ್ಕಾರವು ನಗದು ಪ್ರೋತ್ಸಾಹ ಧನ ನೀಡಿಲಾಗಿದೆ ಎಂದು ಒಲಂಪಿಕ್ ಅಸೋಸಿಯೇಶನ್ ಅಧ್ಯಕ್ಷ ಗೋವಿಂದೇಗೌಡ ತಿಳಿಸಿದ್ದಾರೆ.

## ಹೊಸ ಗ್ರಾಹಕರಿಗೆ ಮಾಸ್ಟರ್‌ಕಾರ್ಡ್ ನಿಷೇಧಿಸಿದ ಆರ್‌ಬಿಐ(RBI)



* ಪ್ರಸ್ತುತ RBI ದೇಶಿಯ ಹೊಸ ಗ್ರಾಹಕರಿಗೆ ಮಾಸ್ಟರ್‌ಕಾರ್ಡ್ ವಿತರಿಸದಂತೆ ಸೂಚನೆ ನೀಡಿದೆ, ಪ್ರಸ್ತುತ ಪಾವತಿ ವ್ಯವಸ್ಥೆ ದತ್ತಾಂಶ ಸಂಗ್ರಹಣೆಯ ನಿರ್ದೇಶನಗಳನ್ನು ಅನುಸರಿಸದ ಕಾರಣದಿಂದಾಗಿ ಜುಲೈ 22 ರಿಂದಹೊಸದೇಶೀಯಗ್ರಾಹಕರಿಗೆಮಾಸ್ಟರ್‌ಕಾರ್ಡ್‌ನೀಡದಂತೆಆರ್‌ಬಿಐನಿರ್ಬಂಧಗಳನ್ನು ಹೇರಿದೆ,

* RBI ನ ಈ ಸೂಚನೆಯಿಂದಾಗಿ ಪ್ರಸ್ತುತ ಮಾಸ್ಟರ್‌ಕಾರ್ಡ್ ಹೊಂದಿರುವ ಗ್ರಾಹಕರಿಗೆ ಇದರಿಂದ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದೆ.

* RBI ಈ ಮಾಸ್ಟರ್‌ಕಾರ್ಡ್‌ಗೆ ಸಾಕಷ್ಟು ಕಾಲಾವಕಾಶ ನೀಡಿದರು ಪಾವತಿ ವ್ಯವಸ್ಥೆಯ ದತ್ತಾಂಶವನ್ನು ಸಂಗ್ರಹಿಸುವ ನಿರ್ದೇಶನಗಳಿಗೆ ಇದು ಅನುಗುಣವಾಗಿಲ್ಲ ನಡೆದುಕೊಂಡಿಲ್ಲ ಎಂದು ಆರ್‌ಬಿಐ ತಿಳಿಸಿದೆ.

* ಇದೀಗ RBI ಮಾಸ್ಟರ್‌ಕಾರ್ಡ್ ನ ಏಷ್ಯಾ / ಪೆಸಿಫಿಕ್ ಪಿಟಿ ಮೇಲೆ ನಿರ್ಬಂಧಗಳನ್ನು ಹೇರಿದೆ, ಹಾಗೂ ಇದೇ 2021ರ ಜುಲೈ 22ರಿಂದ ಹೊಸ ದೇಶೀಯ ಗ್ರಾಹಕರಿಗೆ ಮಾಸ್ಟರ್ ಕಾರ್ಡ್ ನೆಟ್‌ವರ್ಕ್ ಸೇವೆಗೆ ಅನುಮತಿ ನೀಡುವದಿಲ್ಲ ಎಂದು ತಿಳಿಸಿದೆ.

## ಪಿಯೂಷ್ ಗೋಯಲ್ ರಾಜ್ಯಸಭೆ ಸದನ ನಾಯಕರಾಗಿ ಆಯ್ಕೆ



* ಕೇಂದ್ರ ಸಚಿವ ಪಿಯೂಶ್ ಗೋಯಲ್ ರಾಜ್ಯ ಸಭೆಯಲ್ಲಿ ಆಡಳಿತಾರೂಢ ಬಿಜೆಪಿ ನಾಯಕರಾಗಿ ಆಯ್ಕೆಯಾಗಿದ್ದಾರೆ, ಈ ಮೊದಲು ಈ ಸ್ಥಾನವನ್ನು ಥಾವರ್ ಚಂದ್ ಗೆಹ್ಲೋಟ್ ಅಲಂಕರಿಸಿದ್ದರು.

* ಪ್ರಸ್ತುತ ಥಾವರ್ ಚಂದ್ ಗೆಹ್ಲೋಟ್ ಅವರು ಕರ್ನಾಟಕದ ರಾಜ್ಯಪಾಲರಾಗಿ ನೇಮಕಗೊಂಡ ಹಿನ್ನಲೆಯಿಂದಾಗಿ ಪಿಯೂಷ್ ಗೋಯಲ್ ಅವರನ್ನು ರಾಜ್ಯಸಭಾ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಪಿಯೂಷ್ ಗೋಯಲ್ ಅವರು 2010 ರಿಂದ ರಾಜ್ಯ ಸಭಾ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಹಾಗೂ ಈ ಮೊದಲು ಇವರು ಕೇಂದ್ರ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು, ಇದೇ ಜುಲೈ. 8 ರಂದು ವಾಣಿಜ್ಯ, ಕೈಗಾರಿಕೆ, ಆಹಾರ ಹಾಗೂ ಸಾರ್ವಜನಿಕಸರಬರಾಜು,ಜವಳಿ ಸಚಿವರಾಗಿಅಧಿಕಾರಸ್ವೀಕರಿಸಿದ್ದಾರೆ.

## ನಟ ಅಕ್ಷಯ್ ಕುಮಾರ್ ಭಾರತದ ಮೊದಲ ಕೋವಿಡ್ ಸೆಲ್ಫ್ ಕಿಟ್ ನ ರಾಯಭಾರಿ



* ಬಾಲಿವುಡ್ ನ ಹೆಸರಾಂತ ನಟರಾದ ಅಕ್ಷಯ್ ಕುಮಾರ್ ಅವರು ಭಾರತದ ಮೊದಲ ಕೋವಿಡ್ ಸೆಲ್ಫ್ ಕಿಟ್ ಕೋವಿಸೆಲ್ಫ್‌ನ ರಾಯಭಾರಿಯಾಗಿದ್ದಾರೆ.

* ಈ ಕೋವಿಡ್ ಸೆಲ್ಫ್ ಕಿಟ್ ಕೋವಿಸೆಲ್ಫ್‌ನ ಮೂಲಕ ಹೇಗೆ ಸ್ವಯಂ ಕೊರೊನಾ ಪರೀಕ್ಷೆಗೆ ಯಾವ ರೀತಿ ಒಳಗಾಗುವದು ಎಂದು ಜಾಹೀರಾತಿನ ಮೂಲಕ ನಟ ಅಕ್ಷಯ್ ಕುಮಾರ್ ಅವರು ವಿಸ್ತಾರವಾಗಿ ವಿವರಿಸಿದ್ದಾರೆ.

* ಅಕ್ಷಯ್ ಕುಮಾರ್ ಅವರು ತಮ್ಮ ಟ್ವೀಟ್ ಖಾತೆಯಲ್ಲಿ ಈ ಜಾಹೀರಾತಿನ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

* ಸರಿ ಸುಮಾರು 30 ಬ್ರಾಂಡ್‌ಗಳಿಗೆ ಬಾಲಿವುಡ್ ನಟ ಅಕ್ಷಯ್ ಕುಮಾರ್ ರಾಯಭಾರಿಯಾಗಿದ್ದಾರೆ ಎಂದು ವರದಿಯ ಮೂಲಕ ತಿಳಿದು ಬಂದಿದೆ, ಇದಲ್ಲದೇ ಹಲವು ಸಾಮಾಜಿಕ ಕಳಕಳಿ ಮೂಡಿಸುವ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಿರುತ್ತಾರೆ.

## 'ಮಾಸ್ಟರ್‌ಶೆಫ್ ಆಸ್ಟ್ರೇಲಿಯಾ' ಪ್ರಶಸ್ತಿ ಪಡೆದ ಜಸ್ಟಿನ್ ನಾರಾಯಣ್



* ಪ್ರಸ್ತುತ 13 ನೇ ಆವೃತ್ತಿಯ ಜನಪ್ರಿಯ ಟಿವಿ ಕುಕ್ಕಿಂಗ್ ಶೋ 'ಮಾಸ್ಟರ್‌ಶೆಫ್ ಆಸ್ಟ್ರೇಲಿಯಾ ಪ್ರಶಸ್ತಿಯನ್ನು ಭಾರತೀಯ ಮೂಲದ ಜಸ್ಟಿನ್ ನಾರಾಯಣ್ ಅವರು ಪಡೆದುಕೊಂಡಿದ್ದಾರೆ.

* ಜಸ್ಟಿನ್ ನಾರಾಯಣ್ ಅವರು ಮಾಸ್ಟರ್‌ಶೆಫ್ ಟ್ರೋಫಿ ಹಾಗೂ 250,000 ಯುಎಸ್ ಡಾಲರ್(1.86ಕೋಟಿ ರೂ.) ನಗದು ಬಹುಮಾನವನ್ನೂ ತಮ್ಮದಾಗಿಸಿಕೊಂಡಿದ್ದಾರೆ.

* "ಮಾಸ್ಟರ್‌ಶೆಫ್ ಆಸ್ಟ್ರೇಲಿಯಾದ" ಅಧಿಕೃತ ಇನ್‌ಸ್ಟಾಗ್ರಾಮ್'ನ ಪ್ರಮುಖ ಪುಟದಲ್ಲಿಯೂ ಈ ಜಸ್ಟಿನ್ ನಾರಾಯಣ್ ಅವರಗೆಲುವಿನಸುದ್ದಿಯನ್ನುಪ್ರಕಟಿಸಿದೆ.

## ಸೇವೆ ಸ್ಥಗಿತಗೊಳಿಸಲಿರುವ "ವಾಯ್ಸ್ ಆಫ್ ಅಮೆರಿಕ"ದ ಬಾಂಗ್ಲಾ ಬಾನುಲಿ



* "ವಾಯ್ಸ್ ಆಫ್ ಅಮೆರಿಕ" ಬಾಂಗ್ಲಾದೇಶ ಹಾಗೂ ಭಾರತದ ಮೂರು ರಾಜ್ಯಗಳಲ್ಲಿ ಸತತವಾಗಿ 63 ವರ್ಷಗಳಿಂದ "ಬಾನುಲಿ ಸೇವೆ"ಯನ್ನು ನೀಡಿತಿತ್ತು, ಆದರೆ ಇದೇ ಜುಲೈ 17

ರಿಂದ ತನ್ನ ಸೇವೆಯನ್ನು ಸ್ಥಗಿತಗೊಳಿಸುವದಾಗಿ ಪ್ರಕಟಣೆ ಹೊರಡಿಸಿದೆ.

* ವಾಯ್ಸ್ ಆಫ್ ಅಮೆರಿಕ ಬಾನುಲಿ ಸೇವೆಯನ್ನು FM ಹಾಗೂ ಶಾರ್ಟ್‌ವೇವ್ ಮೂಲಕ ಬಾಂಗ್ಲಾದೇಶ, ಭಾರತದ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ತ್ರಿಪುರಾ ಈ 3 ರಾಜ್ಯಗಳಲ್ಲಿ ಆರು ದಶಕಗಳಿಗಿಂತ ಅಧಿಕವಾಗಿ ರೇಡಿಯೊ ಪ್ರಸಾರವನ್ನು ಮಾಡುತಿತ್ತು.

* 1958 ರ ಜನೇವರಿಯಲ್ಲಿ ಅಂದರೆ ಬಾಂಗ್ಲಾದೇಶವು ಪೂರ್ವ ಪಾಕಿಸ್ತಾನವಾಗಿರುವ ಸಂಧರ್ಭದಲ್ಲಿ 'ವಾಯ್ಸ್ ಆಫ್ ಅಮೆರಿಕ' ರೇಡಿಯೊ ಪ್ರಸಾರವನ್ನು ಆರಂಭಿಸಿತ್ತು, ಆ ಸಮಯದಲ್ಲಿ ಇಲ್ಲೇ ಯಾವುದೇ ರೀತಿಯ ದೂರದರ್ಶನ ಹಾಗೂ ಖಾಸಗಿ ರೇಡಿಯೊ ಸ್ಟೇಷನ್ ಇರಲಿಲ್ಲವೆಂದು ವಿಒಎ ಉಸ್ತುವಾರಿಕಾರ್ಯಕ್ರಮನಿರ್ದೇಶಕಜಾನ್‌ಲಿಪ್ಪಮ್ಯಾನ್‌ಅವರುಮಾಹಿತಿನೀಡಿದ್ದಾರೆ.

## ದೆಹಲಿಸರ್ಕಾರ ಗೂಗಲ್‌ನಿಂದರಿಯಲ್ ಟೈಮ್‌ಬಸ್‌ಟ್ರ್ಯಾಕಿಂಗ್ ಸೇವೆಆರಂಭ



* ಪ್ರಸ್ತುತ ದೆಹಲಿ ಸರ್ಕಾರವು ಗೂಗಲ್ ಕಂಪನಿಯ ಸಹಯೋಗದೊಂದಿಗೆ ದೆಹಲಿಯ ಪ್ರಯಾಣಿಕರಿಗೆ ಬಸ್‌ಗಳ ನೈಜ ಸಮಯದ ಮಾಹಿತಿಯನ್ನು ಪಡೆಯಲು ಅನುವು ಮಾಡಿಕೊಡಲಿವೆ.

* ದೆಹಲಿ ನಗರದ ಬಸ್ ಗಳ ಆಗಮನದ ಹಾಗೂ ನಿರ್ಗಮನ ಸಮಯ ಹಾಗೂ ಅವುಗಳ ಮಾರ್ಗಗಳು ಒಳಗೊಂಡ ನೈಜ ಸಮಯದ ಮಾಹಿತಿಯನ್ನು ನೀಡಲು ಗೂಗಲ್ ಮತ್ತು ದೆಹಲಿ ಸಾರಿಗೆ ಸಚಿವಾಲಯದ ಮಧ್ಯೆ ಒಪ್ಪಂದವಾಗಿದೆ.

* ಪ್ರಸ್ತುತ ದೆಹಲಿಯ 3,000 ಬಸ್‌ಗಳ ನೈಜ ಸ್ಥಿತಿ ಲೈವ್ ಆಗಿವೆ, ಅತೀ ಶೀಘ್ರದಲ್ಲೇ ಹೆಚ್ಚಿನ ಡಿಟಿಸಿ(DTC) ಬಸ್‌ಗಳನ್ನು ಸಂಯೋಜಿಸಲಾಗುವುದು ಎಂದು ದೆಹಲಿ ಸರ್ಕಾರ ತಿಳಿಸಿದೆ.

* ಈ ಯೋಜನೆಯ ಮೂಲಕ ದೆಹಲಿ ಬಸ್‌ಗಳ ನೈಜ ಸ್ಥಳ ಹಾಗೂ ಸಮಯದ ಮಾಹಿತಿ ಸಿಗಲಿದೆ, ಹಾಗೂ ಪ್ರಯಾಣಿಕರಿಗೆ ಎಲ್ಲಾ ಮಾರ್ಗಗಳು, ಬಸ್ ನಿಲ್ದಾಣಗಳು, ಬಸ್ ಆಗಮನ ಮತ್ತು ನಿರ್ಗಮನ ಸಮಯದ ಜೊತೆಗೆ ಬಸ್ ಸಂಖ್ಯೆಗಳಮಾಹಿತಿಸಿಗಲಿದೆಎಂದುತಿಳಿಸಿದ್ದಾರೆ.

## ಸ್ಕಿಲ್ ಇಂಡಿಯಾ ಮಿಷನ್ ನ 6 ನೇ ವಾರ್ಷಿಕೋತ್ಸವ

Skill India

* 2021 ರ ಜುಲೈ. 15 ರಂದು ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಯುವ ಕೌಶಲ್ಯ ದಿನಾಚರಣೆ ಮತ್ತು ಸ್ಕಿಲ್ ಇಂಡಿಯಾ ಮಿಷನ್‌ನ 6 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ದೇಶವನ್ನುದ್ದೇಶಿಸಿಮಾತನಾಡಿದರು.

* ಶ್ರೀಯುತ ಪ್ರಧಾನ ಮಂತ್ರಿ ಮೋದಿ ಅವರು ಸ್ಕಿಲ್ ಇಂಡಿಯಾ ಮಿಷನ್'ನ 6ನೇ ವಾರ್ಷಿಕೋತ್ಸವದಲ್ಲಿ ಪ್ರಸ್ತುತ ಹೊಸ ಪೀಳಿಗೆಯ ಯುವಕರ ಕೌಶಲ್ಯ ಅಭಿವೃದ್ಧಿ ರಾಷ್ಟ್ರೀಯ ಅಗತ್ಯ ಮತ್ತು ಸ್ವಾವಲಂಬಿ ಭಾರತಕ್ಕೆ ಒಂದು ದೊಡ್ಡ ಅಡಿಪಾಯವಾಗಿದೆ ಎಂದು ತಿಳಿಸಿದರು, ಹಾಗೂ 1.25 ಕೋಟಿ ಯುವಕರಿಗೆ ಸ್ಕಿಲ್ ಇಂಡಿಯಾ ಮಿಷನ್ ಅಡಿಯಲ್ಲಿ ತರಬೇತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

* ಕೌಶಲ್ಯ ಅಭಿವೃದ್ಧಿಗಾಗಿ ಹೊಸದಾಗಿ 75 ಜೆಎಸ್‌ಎಸ್ (ಜನಶಿಕ್ಷಣ ಸಂಸ್ಥಾನ) ಹಾಗೂ ಜೆಎಸ್‌ಎಸ್‌ಗಾಗಿ ಪೋರ್ಟಲ್'ನ್ನು ಪಿಎಂ ಘೋಷಿಸಿದ್ದಾರೆ, ಈ ಪೋರ್ಟಲ್ ಕಡಿಮೆ ವೆಚ್ಚದಲ್ಲಿ ವೃತ್ತಿಪರ ಕೌಶಲ್ಯ ತರಬೇತಿಯನ್ನು ನೀಡಲು ಅನುಕೂಲವಾಗಲಿದೆ.

* ಜನ್ ಶಿಕ್ಷನ್ ಸಂಸ್ಥಾನ್ ಹಾಗೂ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗುವುದು, ಇದರ ಜೊತೆಯಲ್ಲಿ ದೇಶದ ಯುವಕರನ್ನು ಪರಿಗಣಿಸಿ ಸಂಯೋಜಿತ ಕಲಿಕಾ ಕೋರ್ಸ್‌ಗಳನ್ನು ಸಹ ಘೋಷಣೆ ಮಾಡಲಾಗುವದು ಎಂದು ತಿಳಿಸಿದ್ದಾರೆ.

* ಡೈರೆಕ್ಟರೇಟ್ ಜನರಲ್ ಆಫ್ ಟ್ರೈನಿಂಗ್ 57 ಉದ್ಯಮ ಹೊಸ ಕೋರ್ಸ್‌ಗಳ ಪಠ್ಯಕ್ರಮವನ್ನು ಆರಂಭಿಸುತ್ತದೆ, ಹಾಗೂ 2018 20 ರ ಡಿಜಿಟಿ ಶೈಕ್ಷಣಿಕ ಅಧಿವೇಶನದ ಟಾಪರ್‌ಗಳಿಗೆ ಗೌರವನ್ನು ನೀಡಲಾಗುವದು.

* ಭಾರತ ಸರ್ಕಾರವು ಸ್ಕಿಲ್ ಇಂಡಿಯಾ ಮಿಷನ್'ನಅಡಿಯಲ್ಲಿ ವಿವಿಧ ಉದ್ಯೋಗದ ವಿಭಾಗಗಳಲ್ಲಿ 40 ಕೋಟಿ ಭಾರತೀಯರಿಗೆ ತರಬೇತಿ ನೀಡಲು ಸ್ಕಿಲ್ ಇಂಡಿಯಾ ಮಿಷನ್ ಉಪಕ್ರಮವನ್ನು ಆರಂಭಿಸಿದೆ.

## ರಾಷ್ಟ್ರೀಯ ಆಯುಷ್ ಮಿಷನ್ ಮುಂದುವರಿಸಲು ಅನುಮೋದನೆ ನೀಡಿದ ಕ್ಯಾಬಿನೆಟ್



* ರಾಷ್ಟ್ರೀಯ ಆಯುಷ್ ಮಿಷನ್'ಮುಂದುವರೆಸಲು ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ, ಇದು ನ್ಯಾಮ್ ಕೇಂದ್ರ ಪ್ರಾಯೋಜಿತ ಯೋಜನೆ ಇದಾಗಿದೆ, 01 04 2021 ರಿಂದ 31 03 2026 ಕ್ಕೆ ವಿಸ್ತರಣೆ ಮಾಡಿದ್ದಾರೆ.

* 2014 ರ ಸೆಪ್ಟೆಂಬರ್. 15 ರಂದು ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯನ್ನು ಆರಂಭಿಸಲಾಗಿದೆ.

* ಈ ರಾಷ್ಟ್ರೀಯ ಆಯುಷ್ ಮಿಷನ್ ಕೇಂದ್ರ ಪ್ರಾಯೋಜಿತ ಯೋಜನೆ ಆಗಿದ್ದು, ಈ ಯೋಜನೆಯನ್ನುಆಯುಷ್‌ಸಚಿವಾಲಯಜಾರಿಗೊಳಿಸುತ್ತಿದೆ.

* ವೆಚ್ಚದಾಯಕ ಆಯುಷ್ ಸೇವೆಗಳನ್ನು ನೀಡಲು, ಆಯುಷ್ ಆಸ್ಪತ್ರೆ ಹಾಗೂ ಔಷಧಾಲಯಗಳನ್ನು ನವೀಕರಿಸುವ ಮೂಲಕ ಸಾರ್ವತ್ರಿಕ ಪ್ರವೇಶವನ್ನು ನೀಡಲು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಆಯುಷ್ ಸೌಲಭ್ಯಗಳನ್ನು ಸಹ ಪತ್ತೆ ಮಾಡುವ ಉದ್ದೇಶದಿಂದ ಈ ಯೋಜನೆ ಆರಂಭಿಸಲಾಗಿದೆ.

# 16-07-2021

## ಗಗನಯಾನ್ ರಾಕೆಟ್ ವಿಕಾಸ್ ಎಂಜಿನ್'ನ 3 ನೇ ಪರೀಕ್ಷೆ ಯಶಸ್ವಿಗೊಳಿಸಿದಇಸ್ರೋ



* ಮೊದಲ ಮಾನವ ಬಾಹ್ಯಾಕಾಶ ಕಾರ್ಯಾಚರಣೆ ಗಗನಯಾನದ ಕಾರ್ಯಾಚರಣೆಯಲ್ಲಿ ದ್ರವ ಇಂಧನ ಚಾಲಿತ ವಿಕಾಸ್ ಎಂಜಿನ್'ನ 3ನೇ ದೀರ್ಘಾವಧಿಯ ಬಿಸಿ ಪರೀಕ್ಷೆಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಯಶಸ್ವಿಯಾಗಿ ನಡೆಸಿ ಮತ್ತೊಂದು ಹೆಜ್ಜೆ ಮುಂದೆಯಿಟ್ಟಿದೆ.

* ಮಾನವ ರೇಟೆಡ್ ಜಿಯೋಸಿಂಕ್ರೋನಸ್ ಉಪಗ್ರಹ ಉಡಾವಣಾ ವಾಹನ ಎಂಕೆ 3 (GSLV ಎಂಕೆ 3) ನ ಕೋರ್ ಎಲ್ 110 ಲಿಕ್ವಿಡ್ ಸ್ಟೇಜ್'ಗಾಗಿ ಲಿಕ್ವಿಡ್ ಪ್ರೊಪೆಲ್ಲಂಟ್ ವಿಕಾಸ್ ಎಂಜಿನ್'ನ 3 ನೇ ದೀರ್ಘಾವಧಿಯ ಬಿಸಿ ಪರೀಕ್ಷೆ ಯಶಸ್ವಿಯಾಗಿ ಇಸ್ರೋ ನಡೆಸಿದೆ ಎಂದು ತಿಳಿಸಲಾಗಿದೆ.

* ಈ ಎಂಜಿನ್'ನ್ನು 240 ಸೆಕೆಂಡುಗಳ ಕಾಲ ಪರೀಕ್ಷೆ ಮಾಡಲು ತಮಿಳುನಾಡಿನ ಮಹೇಂದ್ರಗಿರಿಯ ಇಸ್ರೋ ಪ್ರೊಪಲ್ಷನ್ ಕಾಂಪ್ಲೆಕ್ಸ್ ಎಂಜಿನ್ ಪರೀಕ್ಷಾ ಕೇಂದ್ರದಲ್ಲಿ ಹಾರಿಸಲಾಯಿತು.

## ಪ್ರಧಾನಿ ಮೋದಿಯಿಂದ ವಾರಣಾಸಿಯಲ್ಲಿ 1,500 ಕೋಟಿ ರೂ.ಗಳ ಅಭಿವೃದ್ಧಿ ಯೋಜನೆಗೆ ಚಾಲನೆ



* ಪ್ರಧಾನಿ ನರೇಂದ್ರ ಮೋದಿ ಅವರು ವಾರಣಾಸಿಯಲ್ಲಿನ ಐಐಟಿ ಬಿಎಚ್‌ಯು ಮೈದಾನದಲ್ಲಿ ಸುಮಾರು 1,500 ಕೋಟಿ ರೂ. ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು, ಇದರ ಜೊತೆಯಲ್ಲಿ ಕೆಲ ಹೊಸ ಯೋಜನೆಗಳಿಗೆ ಶಂಕುಸ್ಥಾಪನೆಯನ್ನು ನೆರವೇರಿಸಿದರು.

* ವಾರಾಣಸಿಯು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭಾ ಕ್ಷೇತ್ರವಾಗಿದ್ದು, ಇಲ್ಲಿಗೆ ಆಗಮಿಸಿ ಬಿಎಚ್‌ಯು'ನಲ್ಲಿ 100 ಹಾಸಿಗೆಗಳ ವಿಭಾಗ ಹಾಗೂ ಗೋದೌಲಿಯಲ್ಲಿ ಬಹುಮಹಡಿ ಪಾರ್ಕಿಂಗ್ ಸ್ಥಳವನ್ನು ಉದ್ಘಾಟನೆ ಮಾಡಿದರು, ಮತ್ತು ಪ್ರವಾಸೋದ್ಯಮ ಅಭಿವೃದ್ಧಿಯ ಅಂಗವಾಗಿ ಗಂಗಾನದಿಯಲ್ಲಿ ರೋರೋ ದೋಣಿಗಳಿಗೆ ಚಾಲನೆಯನ್ನು ನೀಡಿದರು, ಅಂತಿಮವಾಗಿ ವಾರಾಣಸಿ ನಗರದಲ್ಲಿನ ಗಾಜಿಯಾಪುರ ಹೆದ್ದಾರಿ ಸಂಪರ್ಕಿಸುವ ತ್ರಿಪಥ ಮೇಲು ಸೇತುವೆಯನ್ನು ಉದ್ಘಾಟನೆ ಮಾಡಿದರು.

* ಶ್ರೀಯುತ ಪ್ರಧಾನಿ ಮೋದಿಯವರು ಸುಮಾರು 744 ಕೋಟಿ ರೂ. ಮೊತ್ತದ ಯೋಜನೆಗಳನ್ನು ಉದ್ಘಾಟನೆ ಮಾಡುವದರ ಜೊತೆಗೆ, ಸುಮಾರು 839 ಕೋಟಿ ರೂ. ಮೊತ್ತದ ಕೆಲ ಲೋಕೋಪಯೋಗಿ ಇಲಾಖೆಯ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

* ಈ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳು ಮುಕ್ತಾಯದ ನಂತರ ನರೇಂದ್ರ ಮೋದಿಯವರು ಜಪಾನ್ ಸರ್ಕಾರದ ನೆರವಿನಿಂದ ನಿರ್ಮಾಣ ಮಾಡಲಾಗಿರುವ ಅಂತರರಾಷ್ಟ್ರೀಯ ಸಹಕಾರ ಮತ್ತು ಸಮಾವೇಶ ಕೇಂದ್ರವಾಗಿರುವ "ರುದ್ರಾಕ್ಷ"ವನ್ನು ಉದ್ಘಾಟನೆ ಮಾಡಿದರು.

## ಭಾರತೀಯಪ್ರಜೆಸಾನಿಯಾಮಿರ್ಜಾಗೆದುಬೈಗೋಲ್ಡನ್‌ವೀಸಾ




* ಭಾರತೀಯ ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಅವರು ದುಬೈ ಗೋಲ್ಡನ್ ವೀಸಾ ಪಡೆದುಕೊಂಡಿದ್ದಾರೆ, ಈ ವೀಸಾದಿಂದಾಗಿ ಸಾನಿಯಾ ಮತ್ತು ಅವರ ಪತಿಯಾಗಿರುವ ಶೋಯಬ್ ಮಲಿಕ್ ಅವರು 10 ವರ್ಷಗಳ ಕಾಲ ಯುಎಇ ನಿವಾಸಿಯಾಗಬಹುದಾಗಿದೆ.

* ಸಾನಿಯಾ ಮಿರ್ಜಾ ಅವರು ಪತಿ ಪಾಕಿಸ್ತಾನದ ಕ್ರಿಕೆಟ್ ತಂಡದ ಮಾಜಿ ನಾಯಕರಾಗಿದ್ದಾರೆ. * ಈ ಮೊದಲು ದುಬೈ ಗೋಲ್ಡನ್ ವೀಸಾ ಬಾಲಿವುಡ್ ನಟರಾದ ಶಾರುಖ್ ಖಾನ್ ಹಾಗೂ ಸಂಜಯ್ ದತ್ ಅವರು ಪಡೆದುಕೊಂಡಿದ್ದಾರೆ, ಇದೀಗ ದುಬೈ ಗೋಲ್ಡನ್ ವೀಸಾ ಪಡೆದ 3 ನೇ ಭಾರತೀಯ ಪ್ರಜೇ ಸಾನಿಯಾಮಿರ್ಜಾಅವರಾಗಿದ್ದಾರೆ.

* ಪ್ರಸ್ತುತ ದುಬೈನಲ್ಲಿ ಟೆನಿಸ್ ಹಾಗೂ ಕ್ರಿಕೆಟ್ ತರಬೇತಿ ಅಕಾಡೆಮಿಯನ್ನು ಪ್ರಾರಂಭಿಸಲು ಸಾನಿಯಾ ಹಾಗೂಶೋಯಬ್‌ಅವರು ಮುಂದಾಗಿದ್ದಾರೆ.

* ಸಾನಿಯಾ ಮಿರ್ಜಾ ಅವರು ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳಾ ಡಬಲ್ಸ್ ವಿಭಾಗದಲ್ಲಿಅಂಕಿತಾರೈನಾಅವರೊಂದಿಗೆಆಟವಾಡಲಿದ್ದಾರೆ.

## ಕರ್ನಾಟಕ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆ ಬೆಂಗಳೂರಿನಲ್ಲಿ ಜಾರಿ



* ಸಾರ್ವಜನಿಕ ಸಾರಿಗೆ ಮತ್ತು ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯದ ಪ್ರಮುಖ ನಗರಗಳಲ್ಲಿ ಕರ್ನಾಟಕ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆ 2021 ನ್ನು ರಾಜ್ಯ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಚಾಲನೆ ನೀಡಿದರು.

* ಪ್ರಸ್ತುತ 2021 ರ ಈ ಕರ್ನಾಟಕ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆ ಜಾರಿತರುವದರಿಂದ ಸ್ವಯಂ ಉದ್ಯೋಗ,ಪರಿಸರಸ್ನೇಹಿವಾತಾವರಣಕ್ಕೆ ಉತ್ತೇಜನ ನೀಡಿದಂತಾಗುತ್ತದೆ, ಹಾಗೂ ಇಂಧನ

ಸಂರಕ್ಷಣೆ, ಸಾರ್ವಜನಿಕ ಸಾರಿಗೆಯನ್ನು ಬಲಪಡಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಸಿಎಂ BSY ತಿಳಿಸಿದ್ದಾರೆ.

* ಬೈಕ್ ಟ್ಯಾಕ್ಸಿ ಬಳಕೆ ಪ್ರಯಾಣಿಕರ ಸಂಚರಿವು ಮಾರ್ಗವು 10 ಕಿ.ಮೀ ಗಿಂತ ಹೆಚ್ಚಿಗೆ ಇರಬಾರದು, ಜೊತೆಗೆ ಬೈಕ್ ಟ್ಯಾಕ್ಸಿ ಸಂಚಾರದ ಮಾರ್ಗಕ್ಕೆ ಅವಕಾಶ ನೀಡಬೇಕು ಎಂಬುದನ್ನು ಪ್ರಾಧಿಕಾರವು ಕಾಲ ಕಾಲಕ್ಕೆ ನಿರ್ಣಯವನ್ನು ತಗೆದುಕೊಳ್ಳುತ್ತದೆ.

* ಈ ಯೋಜನೆಯಿಂದಾಗಿ ಬೆಂಗಳೂರಿನಲ್ಲಿನ ಸಂಚಾರ ದಟ್ಟಣೆಯಿಂದಾಗಿ ಸರಿಯಾದ ಸಮಯಕ್ಕೆ ನಿಗದಿತ ಪ್ರದೇಶವನ್ನು ತಲುಪುದಕ್ಕೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ, ಈ ಯೋಜನೆಯಿಂದ ಪ್ರಯಾಣದ ಸಮಯ ಉಳಿಯುತ್ತದೆ, ಹಾಗೂ ರೈಲ್ವೆ ನಿಲ್ದಾಣ, ಮೆಟ್ರೋ ನಿಲ್ದಾಣತಲುಪುವುದಕ್ಕೆಸಹಾಯಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

## 'ನಮ್ಮ ಮೆಟ್ರೊ'ದನೂತನವ್ಯವಸ್ಥಾಪಕನಿರ್ದೇಶಕಅಂಜುಂ ಪರ್ವೇಜ್



* IAS ಅಧಿಕಾರಿ ಅಂಜುಂ ಪರ್ವೇಜ್ ಅವರು "ನಮ್ಮ ಮೆಟ್ರೊ" (BMRCL)ದ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿನೇಮಕಗೊಂಡಿದ್ದಾರೆ.

* ಅಂಜುಂ ಪರ್ವೇಜ್ ಅವರು ಕರ್ನಾಟಕ ಕೇಡರ್'ನ 1994 ರ ಬ್ಯಾಚ್ ಅಧಿಕಾರಿಯಾಗಿದ್ದಾರೆ, ಈ ಮೊದಲು ಇವರು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು BMTC ಯ ವ್ಯವಸ್ಥಾಪಕ ನಿರ್ದೇಶಕರಾಗಿ, ಹಾಗೂ ಜಲಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

* ಪ್ರಸ್ತುತ ಇವರು BMRCL ನ 7 ನೇ ವ್ಯವಸ್ಥಾಪಕನಿರ್ದೇಶಕರಾಗಿನೇಮಕಗೊಂಡಿದ್ದಾರೆ.

## ಬಾಲಿವುಡ್‌ಹಿರಿಯನಟಿ'ಸುರೇಖಾಸಿಕ್ರಿ'ನಿಧನ



* ಬಾಲಿವುಡ್ ನ ಹಿರಿಯ ನಟಿ ಸುರೇಖಾ ಸಿಕ್ರಿ ಅವರು ತಮ್ಮ 75 ನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದ ವಿಧಿವಶರಾಗಿದ್ದಾರೆ.

* ರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ನಟಿ ಸುರೇಖಾ ಸಿಕ್ರಿ ಅವರು ಬಧಾಯಿ ಹೋ ಮತ್ತು ಬಾಲಿಕಾ ವಧು ಎಂಬ ಟಿವಿಶೋಗಳಲ್ಲಿ ಹೆಸರುಗಳಿಸಿದ್ದರು.

## ಹಿಮಾಚಲಪ್ರದೇಶದಕುಲ್ಲು ಎಂಬಲ್ಲಿ ಭಾರತದಮೊದಲಸನ್ಯಾಸಿ ಹಣ್ಣುಕೃಷಿಪ್ರಾರಂಭ



* ಚೀನಾದಿಂದ ಹಿಮಾಚಲ ಪ್ರದೇಶದ ಕುಲ್ಲು ಎಂಬಲ್ಲಿ 'ಸನ್ಯಾಸಿ ಹಣ್ಣು' ಕೃಷಿ ಪ್ರಾರಂಭವಾಗಿದೆ.

* ಈ ಹಣ್ಣನ್ನು ಹಿಮಾಚಲ ಪ್ರದೇಶದಲ್ಲಿ ಕ್ಷೇತ್ರ ಪ್ರಯೋಗಗಳಿಗಾಗಿ ಪ್ರಸ್ತುತ ಕೌನ್ಸಿಲ್ ಆಫ್ ಸೈಂಟಿಫಿಕ್ ರಿಸರ್ಚ್ ಅಂಡ್ ಇಂಡಸ್ಟ್ರಿಯಲ್ ಟೆಕ್ನಾಲಜಿ ಇನ್ಸ್ಟಿಟ್ಯೂಟ್ ಆಫ್ ಹಿಮಾಲಯನ್ ಬಯೋ ರಿಸೋರ್ಸ್ ಟೆಕ್ನಾಲಜಿ ಪರಿಚಯಿಸಿದೆ.

* ಸನ್ಯಾಸಿ ಹಣ್ಣು ನೈಸರ್ಗಿಕ ಸಿಹಿಕಾರಕ ಎಂದು ಹೆಸರುವಾಸಿ.

* ಈ ಸನ್ಯಾಸಿ ಹಣ್ಣಿನ ಬೀಜಗಳನ್ನು ಚೀನಾದಿಂದ ಆಮದು ಮಾಡಿಕೊಂಡು ಮನೆಯಲ್ಲಿ ಬೆಳೆದ 3 ವರ್ಷಗಳ ನಂತರ ಕ್ಷೇತ್ರ ಪ್ರಯೋಗಗಳುನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.

* ಹಿಮಾಚಲ ಪ್ರದೇಶದ ರೈಸನ್ ಗ್ರಾಮದ ರೈತನ ಹೊಲಗಳಲ್ಲಿ ಕ್ಷೇತ್ರ ಪ್ರಯೋಗಗಳಿಗಾಗಿ 50 ಮೊಳಕೆ ಗಿಡಗಳನ್ನು ನೆಡಲಾಯಿತು ಮತ್ತು ರೈತನೊಂದಿಗೆ 'ವಸ್ತು ವರ್ಗಾವಣೆ ಒಪ್ಪಂದ' ಸಹಿ ಮಾಡಿಕೊಳ್ಳಲಾಗಿದೆ ಎಂದಿದ್ದಾರೆ, ಈ ಹೊಸ ಬೆಳೆಯಿಂದಾಗಿ ಆರ್ಥಿಕ ಲಾಭ ಹೆಕ್ಟೇರಿಗೆ 3 ಲಕ್ಷದಿಂದ 3.5 ಲಕ್ಷ ರೂ. ಪಡೆಯಬಹುದಾಗಿದೆ.

* ಈ ಸನ್ಯಾಸಿ ಹಣ್ಣು ದೀರ್ಘಕಾಲಿಕ ಬೆಳೆಯಾಗಿದೆ, ಈ ಬೆಳೆ ಸರಿ ಸುಮಾರು 4 ರಿಂದ 5 ವರ್ಷಗಳ ಜೀವಿತಾವಧಿಯನ್ನು ಹೊಂದಿರಲಿದೆ, ಈ ಬೆಳೆ 8 ರಿಂದ 9 ತಿಂಗಳ ನಂತರ ಹಣ್ಣು ಬಿಡಲು ಪ್ರಾರಂಭಿಸುತ್ತದೆ.

* ಈ ಹಣ್ಣನ್ನು ಮೊದಲು ಬೌದ್ಧ ಸನ್ಯಾಸಿಗಳು ಬಳಸಿದ್ದರಿಂದ ಈ ಹೆಸರನ್ನು ಪಡೆದುಕೊಂಡಿದೆ.

## ಕೇಂದ್ರವುರಾಜ್ಯಗಳಿಂದಜಿಲ್ಲಾ ಖನಿಜನಿಧಿಗಳನಿಯಂತ್ರಣವನ್ನು ತಗೆದುಕೊಂಡಿದೆ



* ಕೇಂದ್ರ ಸರ್ಕಾರವು ಇದೀಗ ರಾಜ್ಯದಿಂದ ಜಿಲ್ಲಾ ಖನಿಜ ಪ್ರತಿಷ್ಠಾನ ( District Mineral Funds DMF) ನಿಧಿಯ ಸಂಪೂರ್ಣ ನಿಯಂತ್ರಣವನ್ನು ತಗೆದುಕೊಂಡಿದೆ.

* ಗಣಿ ಸಚಿವಾಲಯದ ಮಾಹಿತಿಯ ಪ್ರಕಾರ ಈ ಕ್ರಮವು ಅನಿವಾರ್ಯವಾಗಿದೆ ಎಂದಿದ್ದರು, ಪ್ರಸ್ತುತ DMF ನ ಹಣವನ್ನು ಖಜಾನೆಗೆ ಅಥವಾ ರಾಜ್ಯ ಮಟ್ಟದ ನಿಧಿಗಳ ಏಕೀಕೃತ ನಿಧಿಗೆ ಅಥವಾ ಮುಖ್ಯಮಂತ್ರಿಯ ಪರಿಹಾರ ನಿಧಿಗೆ ವರ್ಗಾಯಿಸುವ ನಿದರ್ಶನಗಳಿವೆ ಎಂದು ತಿಳಿಸಿದ್ದಾರೆ.

* ಜಿಲ್ಲಾ ಖನಿಜ ನಿಧಿಗಳು ಕಾಯ್ದೆ 2015 ರ ಪ್ರಕಾರ ಗಣಿಗಾರಿಕೆಗೆ ಸಂಬಂಧಿಸಿದ ಕಾರ್ಯಾಚರಣೆಗಳಿಂದ ಪೀಡಿತ ವ್ಯಕ್ತಿಗಳ ಆಸಕ್ತಿ ಮತ್ತು ಪ್ರಯೋಜನಗಳಿಗಾಗಿ ಎಲ್ಲಾ ಜಿಲ್ಲೆಗಳಲ್ಲಿ DMF ಗಳನ್ನು ಸ್ಥಾಪನೆ ಮಾಡಲು ರಾಜ್ಯ ಸರ್ಕಾರಗಳು ಕಡ್ಡಾಯವಾಗಿವೆ, ಹಾಗೂ ರಾಜ್ಯ ಸರ್ಕಾರಗಳಿಗೆ ರಾಯಧನವನ್ನು ಪಾವತಿಸುವುದರ ಹೊರತಾಗಿ ಗುತ್ತಿಗೆದಾರರು ಈ ಲಾಭರಹಿತ ಅಡಿಪಾಯಗಳಿಗೆ ನಿರ್ದಿಷ್ಟ ಶೇಕಡಾವಾರು ರಾಯಧನವನ್ನು ನೀಡುವದುಕಡ್ಡಾಯವಾಗಿದೆಎಂದುತಿಳಿಸಲಾಗಿದೆ.

*ಗಣಿಗಾರಿಕೆಗೆಸಂಬಂಧಿಸಿದಕಾರ್ಯಾಚರಣೆಗಳಿಂದಪೀಡಿತವ್ಯಕ್ತಿಗಳು ಮತ್ತು ಪ್ರದೇಶಗಳ ಕಲ್ಯಾಣಕ್ಕಾಗಿ DMF ಗಳು ಈ ಹಣವನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ.

* ಈ ಯೋಜನೆಯನ್ನು 'ಪ್ರಧಾನ್ ಮಂತ್ರಿ ಖಾನೀಜ್ ಕ್ಷೇತ್ರ ಕಲ್ಯಾಣ್ ಯೋಜನೆ' ಎಂದು ಬುಡಕಟ್ಟು ಜನಸಂಖ್ಯೆಯು ಪ್ರಧಾನ ಫಲಾನುಭವಿಗಳು ಕರೆಯುತ್ತಾರೆ.

## ಪಶುಸಂಗೋಪನೆ ಹಾಗೂ ಹೈನುಗಾರಿಕೆ ಯೋಜನೆಗಳ ಮರುಜೋಡಣೆ



* ಪ್ರಸ್ತುತ ಭಾರತ ಸರ್ಕಾರವು ಯೋಜನೆಗಳ ಹಲವಾರು ಅಂಶಗಳನ್ನು ಪರಿಷ್ಕರಿಸುವ ಮತ್ತು ಮರುರೂಪಿಸುವ ಮೂಲಕ ವಿಶೇಷ ಜಾನುವಾರು ವಲಯದ ಪ್ಯಾಕೇಜ್ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯು ಅನುಮೋದನೆ ನೀಡಿದೆ.

* 2021 22 ರಿಂದ ಜಾನುವಾರು ವಲಯದ ಪ್ಯಾಕೇಜ್'ನ್ನು ಮುಂದಿನ 5 ವರ್ಷಗಳವರೆಗೆ ಜಾರಿಗೆ ತರಲಾಗುತ್ತದೆ, ಇದರಿಂದಾಗಿ ಜಾನುವಾರು ಕ್ಷೇತ್ರದ ಬೆಳವಣಿಗೆಯನ್ನು ಹೆಚ್ಚಲಿದೆ ಹಾಗೂ ಜಾನುವಾರು ವಲಯದ 10 ಕೋಟಿ ರೈತರಿಗೆ ಪಶುಸಂಗೋಪನೆಯನ್ನು ಹೆಚ್ಚು ಸಂಭಾವನೆ ನೀಡಲಿದೆ ಎಂದು ತಿಳಿಸಿದ್ದಾರೆ.

* ಈ ಜಾನುವಾರು ವಲಯದ ಪ್ಯಾಕೇಜ್ 5 ವರ್ಷಗಳಲ್ಲಿ ರೂ .54,618 ಕೋಟಿ ಹೂಡಿಕೆಯನ್ನು ಹತೋಟಿಗೆ ತರಲು ಮುಂದಿನ 5 ವರ್ಷಗಳಲ್ಲಿ ಕೇಂದ್ರ ಸರ್ಕಾರದ ರೂ .9800 ಕೋಟಿಗಳ ಬೆಂಬಲವಾಗಿದೆ ಎಂದು ತಿಳಿಸಿದ್ದಾರೆ.

* ಪ್ಯಾಕೇಜ್'ನ ಯೋಜನೆಗಳನ್ನು 3 ವರ್ಗಗಳಾಗಿ ವಿಲೀನಗೊಳಿಸಲಾಗಿದೆ: ರಾಷ್ಟ್ರೀಯ ಗೋಕುಲ್ ಮಿಷನ್ ರಾಷ್ಟ್ರೀಯ ಜಾನುವಾರು ಮಿಷನ್ ಡೈರಿ ಡೆವಲಪ್‌ಮೆಂಟ್‌ಗಾಗಿ ರಾಷ್ಟ್ರೀಯ ಕಾರ್ಯಕ್ರಮ, ಹಾಗೂ ಜಾನುವಾರುಗಳ ಜನಗಣತಿ ಮತ್ತು ಸಮಗ್ರ ಮಾದರಿ ಸಮೀಕ್ಷೆ ಇವುಗಳು ಉಪ ಯೋಜನೆಗಳಾಗಿವೆ.

* ರಾಷ್ಟ್ರೀಯ ಗೋಕುಲ್ ಮಿಷನ್: ಗ್ರಾಮೀಣ ಬಡ ಜನರ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಲು ಅನುಕೂಲವಾಗಲಿದೆ, ಹಾಗೂ ಸ್ಥಳೀಯ ತಳಿಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಸಹಾಯವಾಗಲಿದೆ ಎಂದಿದ್ದಾರೆ.

* ರಾಷ್ಟ್ರೀಯ ಜಾನುವಾರು ಮಿಷನ್: 2014 15 ರ ಆರ್ಥಿಕವರ್ಷದಲ್ಲಿ ಆರಂಭಿಸಲಾಗಿದೆ,ಮತ್ತೇ 2019 ರ ಏಪ್ರಿಲ್ ತಿಂಗಳಿನಿಂದ ಈ ಯೋಜನೆಯನ್ನು "ರಾಷ್ಟ್ರೀಯ ಪಶುಧನ್ ವಿಕಾಸ್ ಯೋಜನೆ" ಎಂಬ ಶ್ವೇತ ಕ್ರಾಂತಿಯ ಉಪ ಯೋಜನೆಯಾಗಿ ಜಾರಿಗೆ ತರಲಾಗುತ್ತಿದೆ.

* ಡೈರಿ ಅಭಿವೃದ್ಧಿಗಾಗಿ ರಾಷ್ಟ್ರೀಯ ಕಾರ್ಯಕ್ರಮ ಯೋಜನೆ: 8900 ಬೃಹತ್ ಹಾಲು ಕೂಲರ್ ಗಳನ್ನು ಅಳವಡಿಸುವ ಗುರಿಯನ್ನು ಹೊಂದಿದೆ, ಇದರಿಂದಾಗಿ ಸುಮಾರು 8 ಲಕ್ಷ ಹಾಲು ಉತ್ಪಾದಕರಿಗೆ ಪ್ರಯೋಜನವನ್ನು ನೀಡಲಾಗುತ್ತದೆ.

* ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯಿಂದ ಹಣಕಾಸಿನ ನೆರವಿನೊಂದಿಗೆ ಹಾಲು ಉತ್ಪಾದಕರಿಗೆ ಪ್ರಯೋಜನಗಳನ್ನು ಪಡೆಯಬಹುದಾಗಿದೆಎಂದುತಿಳಿಸಿದ್ದಾರೆ.

## ‘ಫ್ಲೀಟ್ಸ್’ಸೇವೆಯನ್ನುಸ್ಥಗಿತಗೊಳಿಸುತ್ತಿರುವಟ್ವಿಟರ್



* 2021 ರ ಜುಲೈ. 14 ರಂದು ಟ್ವಿಟರ್ ಇಂಕ್ ತನ್ನ ಫ್ಲೀಟ್ಸ್ ವೈಶಿಷ್ಟ್ಯವನ್ನು ಸ್ಥಗಿತಗೊಳಿಸುವುದಾಗಿ ಘೋಷಣೆ ಮಾಡಿದೆ.

* ಟ್ವಿಟರ್ ಸಂಸ್ಥೆ ನೀಡಿರುವ ಮಾಹಿತಿಯ ಪ್ರಕಾರ ಮುಂಬರುವ ಆಗಸ್ಟ್ 3 ರ ನಂತರ ಈ ವೈಶಿಷ್ಟ್ಯವು ಲಭ್ಯವಿರುವುದಿಲ್ಲ ಎಂದು ತಿಳಿಸಿದೆ, ಪ್ರಸ್ತುತ ಈ ಫ್ಲೀಟ್ ಸೇವೆಯು ಹೆಚ್ಚಿನ ಬಳಕೆದಾರರನ್ನು ಆಕರ್ಷಿಸುವಲ್ಲಿ ವಿಫಲವಾಗಿರುವ ಹಿನ್ನಲೆಯಿಂದಾಗಿ ಟ್ವಿಟರ್ ಈ ವೈಶಿಷ್ಟ್ಯವನ್ನು ಸ್ಥಗಿತಗೊಳಿಸಲಾಗುವದುಎಂದುತಿಳಿಸಿದೆ.

* ಟ್ವಿಟರ್'ನ ಈ ಫ್ಲೀಟ್ ವೈಶಿಷ್ಟ್ಯವು ಇನ್‌ಸ್ಟಾಗ್ರಾಮ್‌ನ ಕಣ್ಮರೆಯಾಗುತ್ತಿರುವ ಕಥೆಗಳ ವೈಶಿಷ್ಟ್ಯಕ್ಕೆ ಹೋಲುವ ರೀತಿಯಲ್ಲಿದೆ.

* ಈ ಸೇವೆಯನ್ನು 2020 ರ ನವೆಂಬರ್'ನಲ್ಲಿ ಟ್ವೀಟ್‌ಗಳ ಮೂಲಕ ಸಾರ್ವಜನಿಕವಾಗಿ ಆಲೋಚನೆಗಳನ್ನು ಅಥವಾ ವಿಚಾರಗಳನ್ನು ಹಂಚಿಕೊಳ್ಳುವ ಜನರನ್ನು ಗುರಿಯಾಗಿಸುವ ಉದ್ದೇಶದಿಂದ ಆರಂಭಿಸಲಾಗಿತ್ತು.

* ಈ ಫ್ಲೀಟ್‌ಗಳು ಕ್ಷಣಿಕವಾದ ಆಲೋಚನೆಗಳನ್ನು ಹಂಚಿಕೊಳ್ಳುವ ಮಾರ್ಗವಾಗಿದೆ, 24 ಗಂಟೆಗಳ ನಂತರ ಈ ಫ್ಲೀಟ್‌ಗಳು ಕಣ್ಮರೆಯಾಗುತ್ತವೆ, ಇದರ ನಂತರವು ಜನರು ನೇರ ಸಂದೇಶಗಳೊಂದಿಗೆ ಫ್ಲೀಟ್ ಗಳಿಗೆ ಮಾತ್ರ ಪ್ರತಿಕ್ರಿಯಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

* ಟ್ವಿಟರ್ ಅಮೇರಿಕನ್ ಮೈಕ್ರೋಬ್ಲಾಗಿಂಗ್ ಮತ್ತು ಸಾಮಾಜಿಕ ನೆಟ್ವರ್ಕಿಂಗ್ ಸೇವೆಯಾಗಿದೆ, ಹಾಗೂ ವಿಶ್ವದಾದ್ಯಂತ 2 5ಕ್ಕೂ ಅಧಿಕ ಕಚೇರಿಗಳನ್ನು ಹೊಂದಿದೆ.

* ಪ್ರಸ್ತುತ ಟ್ವಿಟರ್'ನ್ನು 2006 ರ ಮಾರ್ಚ್'ನಲ್ಲಿ ಜ್ಯಾಕ್ ಡಾರ್ಸೆ, ನೋವಾ ಗ್ಲಾಸ್, ಬಿಜ್ ಸ್ಟೋನ್ ಮತ್ತು ಇವಾನ್ ವಿಲಿಯಮ್ಸ್ ರಚಿಸಿ2006ರಜುಲೈ'ನಲ್ಲಿಆರಂಭಿಸಿದ್ದಾರೆ.

# 17-07-2021

## ಜಸ್ಟ್ ಡಯಲ್ ಖರೀದಿಸಿದ ರಿಲಯನ್ಸ್

* ಜಸ್ಟ್ ಡಯಲ್ ಲಿಮಿಟೆಡ್‌ನ ಒಟ್ಟು 3,497 ಕೋಟಿ ರೂ. ಪಾಲನ್ನು ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ ಸ್ವಾಧೀನಪಡಿಸಿಕೊಳ್ಳುವುದಾಗಿ ಘೋಷಣೆ ಮಾಡಿದೆ, ಸರಿ ಸುಮಾರು ಶೇ.40.95 ರಲ್ಲಿ ಸ್ವಾಧೀನದ ನಿಯಮಗಳಿಗೆ ಅನುಗುಣವಾಗಿ ಪ್ರತಿಶತ ಶೇ.26 ಪಾಲನ್ನು ಸ್ವಾಧೀನಪಡಿಸಿಕೊಳ್ಳಲು ಮುಕ್ತ ಪ್ರಸ್ತಾಪವನ್ನು ನೀಡಲು ನಿರ್ಧರಿಸಲಾಗಿದೆ ಎಂದು ANI ಸುದ್ದಿ ಸಂಸ್ಥೆ ಮಾಹಿತಿಯನ್ನು ಪ್ರಕಟಿಸಿದೆ.

* ಜಸ್ಟ್ ಡಯಲ್ ನೀಡಿರುವ ಮಾಹಿತಿಯ ಪ್ರಕಾರ ಮುಖೇಶ್ ಅಂಬಾನಿಯ ರಿಲಯನ್ಸ್ ಇಂಡಸ್ಟ್ರೀಸ್ ರಿಟೇಲ್ ಆರ್ಮ್ ಆರ್‌ಆರ್‌ವಿಎಲ್‌ಗೆ ಆದ್ಯತೆಯ ಆಧಾರಗಳ ಮೇಲೆ ಷೇರುಗಳನ್ನು ನೀಡುವ ಮೂಲಕ 16 2,164.8 ಕೋಟಿ ಸಂಗ್ರಹಿಸಲು ಮಂಡಳಿ ಅನುಮೋದನೆ ನೀಡಿದೆ ಎಂದು ತಿಳಿಸಿದೆ.

* 'ಜಸ್ಟ್‌ಡಿಯಲ್ ಮತ್ತು ಮೊದಲ ತಲೆಮಾರಿನ ಉದ್ಯಮಿ ವಿಎಸ್‌ಎಸ್ ಮಣಿ' ಅವರೊಂದಿಗೆ ಪಾಲುದಾರರಾಗಲು ಮತ್ತು ಈ ವಹಿವಾಟಿನ ವಿಷಯದ ಬಗ್ಗೆ ರಿಲಯನ್ಸ್ ಉತ್ಸುಕವಾಗಿದೆ ಎಂದು ಇಶಾ ಅಂಬಾನಿ ಅವರುತಿಳಿಸಿದ್ದಾರೆ.

## ಪ್ರವಾಸಿ ಹಡಗು '20 ಎಂ ವಾರಣಾಸಿ ಫೆರಿ'ಗೆ ಪ್ರಧಾನಿ ಮೋದಿ ಚಾಲನೆ



* ಪ್ರಧಾನಿ ನರೇಂದ್ರ ಮೋದಿ ಅವರು ಪ್ರಸ್ತುತ ಉತ್ತರ ಪ್ರದೇಶ ರಾಜ್ಯಕ್ಕಾಗಿ ಗೋವಾ ಶಿಪ್ ಯಾರ್ಡ್ ವತಿಯಿಂದ ನಿರ್ಮಿಸಲಾಗಿರುವ ಪ್ರವಾಸಿ ಹಡಗಿನ ಓಡಾಟಕ್ಕೆ ವೀಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು.

* ಈ ಪ್ರವಾಸಿ ಹಡಗು ತನ್ನ ಸಂಚಾರವನ್ನು ಗಂಗಾ ನದಿಯ ರಾಜಘಾಟ್, ರವಿದಾಸ್ ಘಾಟ್ ಹಾಗೂ ಆಸಿ ಘಾಟ್‌ನಲ್ಲಿ ಆರಂಭಿಸಲಿದೆ.

* ಈ ಹಿಂದೆ '20 ಎಂ ವಾರಣಾಸಿ ಫೆರಿ' ಹಡಗನ್ನು ನಿರ್ಮಿಸಲು ಗೋವಾ ಶಿಪ್ ಯಾರ್ಡ್ ನೊಂದಿಗೆ ಉತ್ತರ ಪ್ರದೇಶ ರಾಜ್ಯವು ನಿರ್ಮಾಣ ನಿಗಮ್ ಕರಾರುನ್ನು 2019 ರ ಫೆಬ್ರುವರಿ. 14 ರಂದು ಮಾಡಿಕೊಂಡಿತ್ತು.

* ವಾರಣಾಸಿಯ ಪ್ರವಾಸಿ ಹಡಗು ಸುಮಾರು 80 ಪ್ರವಾಸಿಗರನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನುಹೊಂದಿದೆ.

## 20 ಲಕ್ಷ ಭಾರತೀಯ ವಾಟ್ಸ್‌ಆಯಪ್ ಖಾತೆಗಳಿಗೆ ನಿರ್ಬಂಧ

* ಭಾರತದ 20 ಲಕ್ಷಕ್ಕೂ ಹೆಚ್ಚು ವಾಟ್ಸ್‌ಆಯಪ್ ಖಾತೆಗಳನ್ನು ಮೇ ಮತ್ತು ಜೂನ್ ಅವಧಿಯಲ್ಲಿ ನಿರ್ಬಂಧಿಸಿರುವುದಾಗಿ ಸಂಸ್ಥೆ ತಿಳಿಸಿದೆ.

* ವಾಟ್ಸ್‌ಆಯಪ್ ಸಂಸ್ಥೆಯ ನಿಯಮಗಳ ಉಲ್ಲಂಘನೆಯ ಕಾರಣದಿಂದಾಗಿ ಸಂಸ್ಥೆ ನಿರ್ಬಂಧ ಹೇರಿದೆ ಎನ್ನಲಾಗಿದೆ.

* ಪ್ರಸ್ತುತ ಶೇಕಡಾ 95 ರಷ್ಟು ಖಾತೆಗಳು ಭಾರತದಲ್ಲಿ ನಿಗದಿಪಡಿಸಲಾಗಿರುವ ನಿಯಮ ಅಥವಾ ಫಾರ್ವರ್ಡ್ ಮಿತಿಯನ್ನು ಉಲ್ಲಂಘಿಸಿದ ಕಾರಣದಿಂದ ನಿರ್ಬಂಧ ಹೇರಲಾಗಿದೆ ಎಂದು ವಾಟ್ಸ್ ಆಯಪ್ ತಿಳಿಸಿದೆ.

* ಈ ವಾಟ್ಸ್‌ಆಯಪ್ ಸಂಸ್ಥೆಯ ನಿರ್ಬಂಧದ ಮಾಹಿತಿಯು ಅಂತರರಾಷ್ಟ್ರೀಯ 'BBC' ಸುದ್ದಿ ಮಾಧ್ಯಮ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

*ಪ್ರಸ್ತುತಮೇ15ಮತ್ತುಜೂನ್15ರನಡುವಿನಅವಧಿಯಲ್ಲಿ20ಲಕ್ಷಕ್ಕೂಹೆಚ್ಚು ಖಾತೆಗಳು ನಿರ್ಬಂಧಕ್ಕೆ ಒಳಗಾಗಿವೆ ಎಂದು ತಿಳಿಸಲಾಗಿದೆ.

* ಈ ವಾಟ್ಸ್‌ಆಯಪ್ ಸಂಸ್ಥೆಯ ಭಾರತದಲ್ಲಿ ಸುಮಾರು 40 ಕೋಟಿಗೂ ಅಧಿಕ ಬಳಕೆದಾರರನ್ನು ಹೊಂದಿದೆ.

* ಪ್ರಸ್ತುತ ಭಾರತದಲ್ಲಿನ ವಾಟ್ಸ್‌ಆಯಪ್ ಖಾತೆಗಳಿಂದ ಅನಗತ್ಯ ಸಂದೇಶಗಳು ಅಧಿಕ ಪ್ರಮಾಣದಲ್ಲಿ ರವಾನೆಯಾಗುವುದನ್ನು ತಡೆಯುವ ಕಾರಣದಿಂದ ಈ ನಿರ್ಬಂಧವನ್ನು ಹೇರಲಾಗಿದೆ ಎಂದು ಫೇಸ್‌ಬುಕ್ ಒಡೆತನದ ಮೆಸೆಜಿಂಗ್ ಆಯಪ್ ಮಾಹಿತಿ ನೀಡಿದೆ.

* ವಾಟ್ಸ್‌ಆಯಪ್ ಮೆಷಿನ್ ಲರ್ನಿಂಗ್ ತಂತ್ರಜ್ಞಾನದ ಮೂಲಕ ಪ್ರತಿ ತಿಂಗಳು ವಿಶ್ವದಾದ್ಯಂತ '8' ದಶಲಕ್ಷಖಾತೆಗಳಮೇಲೆನಿರ್ಬಂಧಹೇರುತ್ತದೆಎಂಬವರದಿಪ್ರಕಟವಾಗಿದೆ.

## ಶಿಯೋಮಿ ವಿಶ್ವದ 2 ನೇ ಅತಿದೊಡ್ಡ ಸ್ಮಾರ್ಟ್‌ಫೋನ್‌ತಯಾರಕ




* ಸದ್ಯದ ಪರಿಸ್ಥಿತಿಯಲ್ಲಿ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಎಲ್ಲಿಲ್ಲದ ಪೈಪೋಟಿ ನಡೆಯುತ್ತಿದೆ, ಪ್ರಸ್ತುತ ಚೀನಾ, ತೈವಾನ್, ದಕ್ಷಿಣ ಕೊರಿಯಾದ ಸ್ಮಾರ್ಟ್‌ಫೋನ್ ತಯಾರಿಕ ಕಂಪನಿಗಳ ನಡುವೆ ಎಲ್ಲಿಲ್ಲದ ಪೈಪೋಟಿ ನಡೆಯುತ್ತಿದೆ, ಇದರ ಮಧ್ಯ ಇದೀಗ ಚೀನಾದ ಪ್ರಮುಖ ಸ್ಮಾರ್ಟ್‌ಫೋನ್ ತಯಾರಕ ಕಂಪನಿಯಾಗಿರುವ ಶಿಯೋಮಿ ಇದೀಗ ಐಫೋನ್'ನ್ನು ಹಿಂದಿಕ್ಕಿದೆ.

* 2021 ರ ಎರಡನೇ ತ್ರೈಮಾಸಿಕದಲ್ಲಿ ಶಿಯೋಮಿ ಫೋನ್ ಮಾರಾಟದ ದೃಷ್ಟಿಯಿಂದ ಜಾಗತಿಕವಾಗಿ 2 ನೇ ಅತಿದೊಡ್ಡ ಸ್ಮಾರ್ಟ್‌ಫೋನ್ ತಯಾರಕ ಸಂಸ್ಥೆಯಾಗಿದೆ ಎಂದು ಕ್ಯಾನಲಿಸ್ ಇತ್ತೀಚಿಗೆ ವರದಿ ಮಾಡಿದೆ.

* ಸ್ಯಾಮ್‌ಸಂಗ್ ಸ್ಮಾರ್ಟ್‌ಫೋನ್ ತಯಾರಕ ದಕ್ಷಿಣ ಕೊರಿಯಾ ರಾಷ್ಟ್ರವು ಶೇಕಡಾ 19 ರಷ್ಟು ಮಾರುಕಟ್ಟೆ ಪಾಲನ್ನು ಹೊಂದಿದೆ, ಈಗಿನ 2ನೇ ಅತಿದೊಡ್ಡ ಸ್ಮಾರ್ಟ್‌ಫೋನ್ ತಯಾರಕ ಸಂಸ್ಥೆಶಿಯೋಮಿಶೇಕಡಾ17ರಷ್ಟುಮಾರುಕಟ್ಟೆಪಾಲನ್ನುಹೊಂದಿದೆ.

* ಪ್ರಸ್ತುತ ಶಿಯೋಮಿಯ ಸ್ಮಾರ್ಟ್ಫೋನ್ ಮಾರಾಟವು ಲ್ಯಾಟಿನ್ ಅಮೆರಿಕಾದಲ್ಲಿ ಶೇ. 300 ಕ್ಕಿಂತ ಹೆಚ್ಚಿದೆ, ಆಫ್ರಿಕಾದಲ್ಲಿ ಶೇ. 150 ರಷ್ಟಿದೆ ಹಾಗೂ ಪಶ್ಚಿಮ ಯುರೋಪಿನಲ್ಲಿ ಶೇ. 50 ರಷ್ಟಿದೆ.

## ಜಮ್ಮು ಕಾಶ್ಮೀರದಲ್ಲಿಗೋವು,ಒಂಟೆಹತ್ಯೆನಿಷೇಧ



*ಪ್ರಸ್ತುತಇದೇಜುಲೈ.21ರಂದುಆಚರಣೆಮಾಡಲಾಗುವಬಕ್ರೀದ್‌ಹಬ್ಬದಸಂದರ್ಭದಲ್ಲಿಜಮ್ಮು ಕಾಶ್ಮೀರದಾದ್ಯಂತ ಹಸು, ಕರು ಹಾಗೂ ಒಂಟೆಗಳ ಹತ್ಯೆಯನ್ನು ನಿಷೇಧಿಸಲಾಗಿದೆ ಎಂದು ಅಲ್ಲಿನ ಆಡಳಿತಆದೇಶಹೊರಡಿಸಿದೆ.

* ಈ ಆದೇಶವನ್ನು ಜಮ್ಮು ಕಾಶ್ಮೀರದ ಪ್ರಾಣಿ ಸಾಕಾಣಿಕೆ ಮತ್ತು ಮೀನುಗಾರಿಕೆ ಇಲಾಖೆಯ ಯೋಜನಾನಿರ್ದೇಶಕರುಹೊರಡಿಸಿದ್ದಾರೆ.

* ಪ್ರಸ್ತುತ ಜಮ್ಮು ಕಾಶ್ಮೀರದಾದ್ಯಂತ ಈ ಬಕ್ರೀದ್ ಹಬ್ಬದ ಸಮಯದಲ್ಲಿ ಹೆಚ್ಚಿನ ಪ್ರಮಾಣದ ಪ್ರಾಣಿಗಳು ಹತ್ಯೆಯಾಗುವ ಸಾಧ್ಯತೆ ಇದೆ ಎಂಬ ಕಾರಣದಿಂದ ಪ್ರಾಣಿ ಕಲ್ಯಾಣ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಮುಂದಾಗಿದೆ ಅಲ್ಲದೆ ಅಲ್ಲಿನ ಎಲ್ಲ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ತಿಳಿಸಿದೆ.

## ಅಮೆರಿಕದಿಂದ MRH 60 ಹೆಲಿಕಾಪ್ಟರ್ ಭಾರತೀಯ ನೌಕಾಪಡೆಗೆ



* ಇದೀಗ ಅಮೆರಿಕ ನೌಕಾಪಡೆಯು 2 'MRH 60' ಆರ್ ಮಲ್ಟಿ ರೋಲ್ ಹೆಲಿಕಾಪ್ಟರ್ ಗಳನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಿದೆ, ಇದರಿಂದಾಗಿ ಭಾರತ ಅಮೆರಿಕ ರಕ್ಷಣಾ ಸಂಬಂಧವು ಇನ್ನಷ್ಟು ಬಲಗೊಂಡಂತಾಗಿದೆ.

* ಪ್ರಸ್ತುತ ಭಾರತೀಯ ನೌಕಾಪಡೆಯು ಅಮೆರಿಕ ಸರ್ಕಾರದ ಮಿಲಿಟರಿ ಉಪಕರಣದ ಮಾರಾಟದ ಅಡಿಯಲ್ಲಿ 2.4 ಬಿಲಿಯನ್ ಡಾಲರ್ ವೆಚ್ಚದಲ್ಲಿ, ಅಮೇರಿಕದ ಲಾಕ್ಹೀಡ್ ಮಾರ್ಟಿನ್ ಕಂಪನಿ ತಯಾರಿಸುತ್ತಿರುವ 24 ಹೆಲಿಕಾಪ್ಟರ್‌ಗಳನ್ನು ಖರೀದಿ ಮಾಡುತಿದ್ದೆ.

* ಪ್ರಸ್ತುತ ಭಾರತ ಮತ್ತು ಅಮೆರಿಕದ ದ್ವಿಪಕ್ಷೀಯ ರಕ್ಷಣಾ ಸಂಬಂಧಗಳಲ್ಲಿ ಈ ಆಲ್ ವೆದರ್ ಮಲ್ಟಿ ರೋಲ್ ಹೆಲಿಕಾಪ್ಟರ್‌ಗಳು ಒಂದು ಪ್ರಮುಖ ಮೈಲಿಗಲ್ಲಾಗಿವೆ ಎಂದು ತಿಳಿಸಿದ್ದಾರೆ, ಸುಮಾರು 2 ವರ್ಷಗಳಲ್ಲಿ ದ್ವಿಪಕ್ಷೀಯ ರಕ್ಷಣಾ ವ್ಯಾಪಾರವು 20 ಬಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗಿದೆ ಎಂದು ತಿಳಿಸಲಾಗಿದೆ.

*MRH 60ಹೆಲಿಕಾಪ್ಟರ್ ಎಲ್ಲಾ ಹವಾಮಾನದಲ್ಲಿ ಬಳಸಬಹುದಾದ ಹೆಲಿಕಾಪ್ಟರ್ ಆಗಿದೆ. ಈ ಹೆಲಿಕಾಪ್ಟರ್ ಗಳ ಚಾಲನೆಯ ಭಾರತೀಯ ನೌಕಾಪಡೆಯ ಸಿಬ್ಬಂದಿಗಳ ಮೊದಲ ಬ್ಯಾಚ್ ಇದೀಗ ಅಮೆರಿಕದಲ್ಲಿ ತರಬೇತಿ ಪಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಅಮೆರಿಕಾ ಜರ್ಮನ್ ದ್ವಿಪಕ್ಷಿಯ ಒಪ್ಪಂದ



* ಇತ್ತೀಚಿಗೆ ದಿನಗಳಲ್ಲಿ ಚೀನಾ ಮತ್ತು ಅಮೇರಿಕ ದೇಶಗಳ ನಡುವಿನ ಸಂಬಂಧ ಹದಗೆಡುತ್ತಿದ್ದು, ಈ ಕಾರಣದಿಂದಾಗಿ ಅಮೇರಿಕ ರಾಷ್ಟ್ರವು ಜರ್ಮನಿ ರಾಷ್ಟ್ರದೊಂದಿಗೆ ಸಂಬಂಧ ಬೆಳೆಸಲು ಸಿದ್ಧವಾಗಿದೆ.

* ಅಮೆರಿಕಾದ ಅಧ್ಯಕ್ಷ ಜೋ ಬಿಡೇನ್ ಹಾಗೂ ಜರ್ಮನ್‌ನ ಏಂಜೆಲ್ ಮಾರ್ಕೆಲ್ ಅವರು ಶ್ವೇತಭವನದಲ್ಲಿ ದ್ವಿಪಕ್ಷಿಯ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಯನ್ನು ನಡೆಸಿದರು.

* ಇತ್ತೀಚಿನ ದಿನಗಳಲ್ಲಿ ಚೀನಾ ದೇಶವು ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿಲ್ಲ ಎಂದು ಅಮೇರಿಕ ಅಧ್ಯಕ ಜೋ ಬಿಡೆನ್ ಅವರು ಆರೋಪಿಸಿದ್ದಾರೆ, ಹಾಗೂ ಚೀನಾದಲ್ಲಿನ ಅಲ್ಪಸಂಖ್ಯಾತರನ್ನು ತೊಂದರೆ ಅನುಭವಿಸುವಂತೆ ಮಾಡುತ್ತಿದ್ದೆ ಎಂದು ಆರೋಪ ಮಾಡಿದ್ದಾರೆ.

* ದ್ವಿಪಕ್ಷೀಯ ಒಪ್ಪಂದದ ಸಭೆಯಿಂದಾಗಿ ಚೀನಾ ದೇಶದಿಂದ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಉಭಯ ದೇಶಗಳು ಚರ್ಚೆ ಮಾಡಿವೆ ಎಂದು ತಿಳಿದು ಬಂದಿದೆ, ಇದರ ಜೊತೆಯಲ್ಲಿ ಚೀನಾ ದೇಶದ ಉತ್ಪಾದನಾ ಮಾರುಕಟ್ಟೆಯನ್ನು ಆವರಿಕೊಳ್ಳಲು ಸಿದ್ಧವಾಗಿದ್ದೇವೆ ಎಂದು ತಿಳಿಸಿದ್ದಾರೆ.

* ಜರ್ಮನ್ ಮತ್ತು ಅಮೆರಿಕಾ ದೇಶಗಳು ಈ ದ್ವಿಪಕ್ಷಿಯ ಒಪ್ಪಂದದಿಂದ ಆರ್ಥಿಕ, ಹವಾಮಾನ ಬದಲಾವಣೆ, ರಕ್ಷಣೆ ಮತ್ತು ಸೇನಾ ಕ್ಷೇತ್ರದಲ್ಲಿ ಪರಸ್ಪರ ಒಪ್ಪಿಕೊಂಡು ಕೈಜೋಡಿಸಲಿವೆ, ಹಾಗೂ ಚೀನಾಕ್ಕಿಂತಲೂ ಉನ್ನತ ಮಟ್ಟದಲ್ಲಿ ವಹಿವಾಟು ನಡೆಸಲು ಸಿದ್ಧವಾಗಿದ್ದೇವೆ ಎಂದು ತಿಳಿಸಿದ್ದಾರೆ.

## ಕೇಂದ್ರದಿಂದ 50 ಸಾವಿರ ಶಿಕ್ಷಕರಿಗೆ ಶಾಲಾ ನಾವೀನ್ಯತೆ ರಾಯಭಾರಿ ತರಭೇತಿ ಕಾರ್ಯಕ್ರಮ ಆರಂಭ



* ಪ್ರಸ್ತುತ ಕೇದ್ರ ಸರ್ಕಾರವು ನಾವೀನ್ಯತೆ, ಉದ್ಯಮಶೀಲತೆ, ಐಪಿಆರ್, ವಿನ್ಯಾಸ ಚಿಂತನೆ, ಉತ್ಪನ್ನ ಅಭಿವೃದ್ಧಿ ಹಾಗೂ ಕಲ್ಪನೆ ಉತ್ಪಾದನೆ ಕುರಿತು ಸುಮಾರು 50,000 ಶಾಲಾ ಶಿಕ್ಷಕರಿಗೆ ಶಾಲಾ ನಾವೀನ್ಯತೆ ರಾಯಭಾರಿ ತರಬೇತಿ ಕಾರ್ಯಕ್ರಮವನ್ನು ಆರಂಭಿಸಿದೆ.

* ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರು ಈ ನಾವಿನ್ಯತೆ ರಾಯಭಾರಿ ತರಭೇತಿ ಕಾರ್ಯಕ್ರಮವನ್ನು ಜಂಟಿಯಾಗಿ ಆರಂಭಿಸಿದರು.

* ದೇಶಾದ್ಯಂತದ ಶಾಲಾ ಶಿಕ್ಷಕರು ಮತ್ತು ದೇಶದ ಶೈಕ್ಷಣಿಕ ಮಂಡಳಿಗಳಿಗಾಗಿ ಶಿಕ್ಷಣ ಸಚಿವಾಲಯದ ಇನ್ನೋವೇಶನ್ ಸೆಲ್ ಈ ನಾವಿನ್ಯತೆ ರಾಯಭಾರಿ ತರಭೇತಿ ಕಾರ್ಯಕ್ರಮವನ್ನು ಪರಿಕಲ್ಪನೆಯನ್ನು ಆರಂಭಿಸಿದೆ.

* ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಹಾಗೂ ಸಿಬಿಎಸ್ಇ(CBSE)ಸಹಯೋಗದೊಂದಿಗೆ ಶಿಕ್ಷಣ ಸಚಿವಾಲಯದ ಇನ್ನೋವೇಶನ್ ಸೆಲ್ ಜಂಟಿಯಾಗಿ ಈ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದ್ದೆ.

* ಪ್ರಸ್ತುತ ಸಿಬಿಎಸ್ಇ ಮತ್ತು ಏಕಲವ್ಯ ಮಾದರಿ ವಸತಿ ಶಾಲೆಗಳ 50,000 ಶಾಲಾ ಶಿಕ್ಷಕರಿಗೆ ಈ ಶಾಲಾ ನಾವೀನ್ಯತೆ ರಾಯಭಾರಿ ತರಬೇತಿ ಕಾರ್ಯಕ್ರಮವು ತರಬೇತಿ ನೀಡಲಿದೆ ಎಂದು ತಿಳಿಸಿದ್ದಾರೆ.

## ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ಗೆ ಹೊಸ ಹೆಸರು ನೇಮಕ




* ಪ್ರಸ್ತುತ 'ಜಮ್ಮು ಮತ್ತು ಕಾಶ್ಮೀರದ UT ಯ ಸಾಮಾನ್ಯ ಹೈಕೋರ್ಟ್ ಮತ್ತು ಲಡಾಖ್ UT' ನಾಮಕರಣವನ್ನು 2021 ರ ಜುಲೈ. 16 ರಂದು ಕಾನೂನು ಸಚಿವಾಲಯದಲ್ಲಿ ನ್ಯಾಯಾಂಗ ಇಲಾಖೆಯು ಸೂಚಿಸಿದ ಆದೇಶದ ಮೇರೆಗೆ "ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್" ಎಂದು ಹೆಸರು ಬದಲಾವಣೆ ಮಾಡಲಾಗಿದೆ.

* ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ಈ ಹೆಸರು ಬದಲಾವಣೆಯ 2021 ರ 'ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಆದೇಶಕ್ಕೆ' ಸಹಿ ಹಾಕಿದರು.

* ಈ ಮೊದಲು ಪಂಜಾಬ್, ಹರಿಯಾಣ ಮತ್ತು ಚಂಡೀಗಢ ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯನ್ನು ಹೊಂದಿರುವ 'ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್'ನಲ್ಲಿ ಅನುಸರಿಸಲಾಗಿರುವ ಹೆಸರಿನ ಮಾದರಿಯನ್ನು ಇಲ್ಲಿಯೂ ಕೂಡ ಬಳಸಲಾಗಿದೆ.

* ಪ್ರಸ್ತುತ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕೇಂದ್ರ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರ ಮತ್ತು ಕೇಂದ್ರ ಪ್ರಾಂತ್ಯದ ಲಡಾಖ್ ಆಗಿ ಮರುಸಂಘಟಿಸಲು 2019 ರ ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದ್ದಾರೆ.

* ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯ್ದೆ 2019 ರ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಪುನರ್ನಿರ್ಮಿಸುವ ನಿಬಂಧನೆಗಳಿವೆ, ಹಾಗೂ 1947 ರಿಂದ ಭಾರತ, ಪಾಕಿಸ್ತಾನ ಮತ್ತು ಚೀನಾ ನಡುವೆ ವಿವಾದದ ವಿಷಯವಾದ ಪ್ರದೇಶವಾಗಿದೆ, ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಎಂಬ 2ಕೇಂದ್ರಾಡಳಿತ ಪ್ರದೇಶಗಳಾಗಿ, ಈ ಕಾಯ್ದೆಯನ್ನು 2019 ರ ಅಕ್ಟೋಬರ್31 ರಂದು ಜಾರಿಗೆ ತರಲಾಯಿತು.

* ಪ್ರಸ್ತುತ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯ್ದೆಯನ್ನು 2019 ರ ಆಗಸ್ಟ್. 5 ರಂದು ಪರಿಚಯಿಸಿದರು ಹಾಗೂ ಅಂಗೀಕರಿಸಿದರು, ಮತ್ತೇ ಅದೇ 2019 ರ ಆಗಸ್ಟ್. 6 ರಂದು ಲೋಕಸಭೆಯು ಕೂಡ ಅಂಗೀಕರಿಸಿತು, ಇದಲ್ಲದೇ ಅದೇ ಆಗಸ್ಟ್. 9 ರಂದು ರಾಷ್ಟ್ರಪತಿಯವರ ಒಪ್ಪಿಗೆಯನ್ನು ಪಡೆದುಕೊಳ್ಳಲಾಯಿತು, ನಂತರ ಈ ಮಸೂದೆ ಅನ್ವಯ ಅಧ್ಯಕ್ಷೀಯ ಆದೇಶದ ಮೇರೆಗೆ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನುರದ್ದುಪಡಿಸುವ 370 ನೇ ವಿಧಿ ನೀಡಲಾಯಿತು.

* ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್ ಇದನ್ನು ಜಮ್ಮು ಮತ್ತು ಕಾಶ್ಮೀರದ ಮಹಾರಾಜರು ನೀಡಿದ ಪತ್ರಗಳ ಪೇಟೆಂಟ್ ಆಧಾರದಮೇಲೆ 1928 ರ ಮಾರ್ಚ್. 26 ರಂದು ಸ್ಥಾಪನೆ ಮಾಡಲಾಗಿದೆ, ಈ ಹೈಕೋರ್ಟ್ 13 ಶಾಶ್ವತ ನ್ಯಾಯಾಧೀಶರು ಹಾಗೂ 4 ಹೆಚ್ಚುವರಿ ನ್ಯಾಯಾಧೀಶರುನ್ನು ಒಳಗೊಂಡಿದೆ.

* 2021 ರ ಜನವರಿ 4 ರಿಂದ ನ್ಯಾಯಮೂರ್ತಿ ಪಂಕಜ್ ಮಿಥಾಲ್ ಅವರು ಈ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ.

## IIT ಹೈದರಾಬಾದ್'ನಿಂದ COVID 19 ಪರೀಕ್ಷಾ ಕಿಟ್ ಅಭಿವೃದ್ಧಿ

* ಭಾರತದ ಮೊದಲ ಕ್ಷಿಪ್ರ ಎಲೆಕ್ಟ್ರಾನಿಕ್ ಮತ್ತು ಕೃತಕ ಬುದ್ಧಿಮತ್ತೆ ಚಾಲಿತ COVID 19 ಪರೀಕ್ಷೆಯ "ಕೋವಿಹೋಮ್" ಕಿಟ್'ನ್ನು IIT ಹೈದರಾಬಾದ್'ನ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

* ರೋಗಲಕ್ಷಣವಿರುವ ರೋಗಿಗಳಿಗೆ ಈ "ಕೋವಿಹೋಮ್" ಕಿಟ್'ನ್ನು ಬಳಸಿ 30 ನಿಮಿಷಗಳಲ್ಲಿ ಫಲಿತಾಂಶ ಪಡೆಯಬಹುದು ಎಂದು ತಿಳಿಸಿದ್ದಾರೆ, ಹಾಗೂ ಈ ಪರೀಕ್ಷೆಗೆ ಆರ್‌ಟಿ ಪಿಸಿಆರ್‌ಪರೀಕ್ಷೆಯ ಅವಶ್ಯಕತೆಇರುವದಿಲ್ಲ ಎಂದಿದ್ದಾರೆ.

*ಆರ್ಟಿ ಪಿಸಿಆರ್ ವಿಧಾನದ ಮೂಲಕ ಸಕಾರಾತ್ಮಕತೆ ಅಥವಾ ನಕಾರಾತ್ಮಕತೆಗಾಗಿ ಮಾದರಿಗಳನ್ನು ದೃಢಪಡಿಸಲಾಗಿದೆ, ಈ ಕಿಟ್ 94.2% ದಕ್ಷತೆ, 91.3% ಸಂವೇದನೆ, ಹಾಗೂ 98.2% ನಿರ್ದಿಷ್ಟತೆಯುನ್ನು ಹೊಂದಿದೆ ಎಂದು ವರದಿಯನ್ನು ದೃಢಪಡಿಸಿದೆ.

* IIT ಹೈದರಾಬಾದ್ ಅಭಿವೃದ್ಧಿ ಪಡಿಸಿರುವ ಟೆಸ್ಟ್ ಕಿಟ್'ನ ಬೆಲೆ 400 ರೂ. ಇರಲಿದೆ ಎಂದು ತಿಳಿಸಿದ್ದಾರೆ.

# 19-07-2021

## ಕೇಂದ್ರಸರ್ಕಾರದಿಂದ 'ಪಿಎಂ ಕಿಸಾನ್ ಟ್ರ್ಯಾಕ್ಟರ್' ಯೋಜನೆ ಜಾರಿ



* ಕೇಂದ್ರದಲ್ಲಿನ ಮೋದಿ ಸರ್ಕಾರವು ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ರೈತರಿಗಾಗಿ ಹಲವಾರು ಯೋಜನೆಗಳನ್ನೂ ರಚಿಸಿ ಜಾರಿಗೊಳಿಸಿದೆ, ಸದ್ಯ ಇದೀಗ ಕೇಂದ್ರ ಸರ್ಕಾರವು ರೈತರಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಜಾರಿಗೊಳಿಸಿದೆ, ಅದುವೇ ಪಿಎಂ ಕಿಸಾನ್ ಟ್ರ್ಯಾಕ್ಟರ್ ಯೋಜನೆ, ಈ ಯೋಜನೆಯ ಅಡಿಯಲ್ಲಿ ಟ್ರ್ಯಾಕ್ಟರ್ ಖರೀದಿಸುವ ರೈತರಿಗೆ ಸರ್ಕಾರ ಶೇಕಡ 50ರಷ್ಟು ಸಬ್ಸಿಡಿ ನೀಡಲಿದೆ ಎಂದು ತಿಳಿಸಿದ್ದಾರೆ.

* ಈ ಪಿಎಂ ಕಿಸಾನ್ ಟ್ರ್ಯಾಕ್ಟರ್ ಯೋಜನೆಯಡಿಲ್ಲಿ ಟ್ರ್ಯಾಕ್ಟರ್ ಖರೀದಿಗೆ ಸಹಾಯಧನವಾಗಿ ಶೇಕಡ 50 ರಷ್ಟು ಸಬ್ಸಿಡಿ ಒದಗಿಸಿಕೊಡಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ, ಹಾಗೂ ಈ ಯೋಜನೆಯಿಂದ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ಉದ್ದೇಶವಿದೇ ಎಂದು ಕೇಂದ್ರ ಸರ್ಕಾರವು ಈ ಪ್ರಧಾನಮಂತ್ರಿ ಕಿಸಾನ್ ಟ್ರ್ಯಾಕ್ಟರ್ ಯೋಜನೆ ಜಾರಿ ಮಾಡಿದೆ.

* ಪ್ರಸ್ತುತ ರೈತರು ಯಾವುದೇ ಕಂಪನಿಯ ಟ್ರ್ಯಾಕ್ಟರ್'ಗಳನ್ನು ಅರ್ಧ ಬೆಲೆಗೆ ಖರೀದಿಸಬಹುದಾಗಿದೆ, ಹಾಗೂ ಇನ್ನ ಉಳಿದ ಹಣವನ್ನು ಸರ್ಕಾರ ಸಬ್ಸಿಡಿ ರೂಪದಲ್ಲಿ ನೀಡುತ್ತದೆ ಎಂದು ತಿಳಿಸಲಾಗಿದೆ.

## ಐಸಿಸಿ(ICC) ಸದಸ್ಯತ್ವ ಪಡೆದುಕೊಂಡ ಮೂರೂ ದೇಶಗಳು




* ಇತ್ತೀಚಿಗೆ ನಡೆದ ICCಯ 78 ನೇ ವಾರ್ಷಿಕ ಸಾಮಾನ್ಯ ವರ್ಚುವಲ್ ಸಭೆಯಲ್ಲಿ 3 ರಾಷ್ಟ್ರಗಳಿಗೆ ಮಾನ್ಯತೆ ನೀಡಲು ತೀರ್ಮಾನ ಕೈಗೊಳ್ಳಲಾಗಿದೆ ಐಸಿಸಿ ತಿಳಿಸಿದೆ.

* ಪ್ರಸ್ತುತ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಸದಸ್ಯತ್ವವನ್ನು ಮಂಗೋಲಿಯ, ತಜಿಕಿಸ್ತಾನ ಹಾಗೂ ಸ್ವಿಟ್ಜರ್ಲೆಂಡ್ ದೇಶಗಳುಪಡೆದುಕೊಂಡಿವೆ.

* ಏಷ್ಯಾ ವಲಯದಿಂದ ಮಂಗೋಲಿಯ ಮತ್ತು ತಜಿಕಿಸ್ತಾನ ರಾಷ್ಟ್ರಗಳು 22 ಮತ್ತು 23 ನೇ ಸದಸ್ಯರಾಗಿ ಸೇರಿಸಲಾಗಿದೆ, ಮತ್ತು ಯುರೋಪ್‌ನಿಂದ 35 ನೇ ಸದಸ್ಯ ರಾಷ್ಟ್ರವಾಗಿ ಸ್ವಿಟ್ಜರ್ಲೆಂಡ್‌ಗೆ ಮಾನ್ಯತೆ ನೀಡಲಾಗಿದೆ ಎಂದು ಐಸಿಸಿ ತಿಳಿಸಿದೆ.

* ಒಟ್ಟಾರೆ ಇದೀಗ 'ಐಸಿಸಿ'ಯಲ್ಲಿ 106ಸದಸ್ಯಹಾಗೂ94ಸಹಸದಸ್ಯರಾಷ್ಟ್ರಗಳಿವೆ.

* ಮಂಗೋಲಿಯನ್ ಕ್ರಿಕೆಟ್ ಸಂಸ್ಥೆಯು 2007ರಲ್ಲಿ ಸ್ಥಾಪನೆಯಾಗಿದೆ, ಹಾಗೂ ಅಧಿಕೃತ ರಾಷ್ಟ್ರೀಯಆಡಳಿತಾಧಿಕಾರಿಯನ್ನು 2018 ರಲ್ಲಿ ಪಡೆದುಕೊಂಡಿದೆ.

* 2014 ರಲ್ಲಿ ಸ್ವಿಟ್ಜರ್ಲೆಂಡ್'ನಲ್ಲಿ ಕ್ರಿಕೆಟ್ ಸಂಸ್ಥೆಯನ್ನು ಉದ್ಘಾಟಣೆ ಮಾಡಲಾಗಿದೆ.

* 2011 ರಲ್ಲಿ ತಜಿಕಿಸ್ತಾನದಲ್ಲಿ ಕ್ರಿಕೆಟ್ ಫೆಡರೇಷನ್‌ಪ್ರಾರಂಭಿಸಲಾಗಿದೆ.

## ಸಂಸತ್ತಿನಮುಂಗಾರುಅಧಿವೇಶನಆರಂಭ



* ಸಂಸತ್ತಿನ ಮುಂಗಾರು ಅಧಿವೇಶನವು ಇಂದಿನಿಂದ ಆರಂಭವಾಗಲಿದೆ, ಪ್ರಸ್ತುತ ಈ ಅಧಿವೇಶನದಲ್ಲಿ ಸದ್ಯ ರಾಷ್ಟ್ರದಲ್ಲಿನ ಸಮಸ್ಯೆಗಳಾಗಿರುವ ಇಂಧನ ಬೆಲೆ ಏರಿಕೆ, ಕೊರೊನಾ ನಿರ್ವಹಣೆ, ರೈತರ ಪ್ರತಿಭಟನೆ, ಲಸಿಕೆಯ ಕೊರತೆ ವಿಚಾರಗಳನ್ನು ಚರ್ಚೆ ಮಾಡುವ ಎಲ್ಲ ಸಾಧ್ಯತೆಗಳಿವೆ ಎನ್ನಲಾಗಿದೆ.

* ಪ್ರಸ್ತುತ 17 ನೇ ಲೋಕಸಭೆಯ ಮುಂಗಾರು ಅಧಿವೇಶನ ಇವತ್ತಿನಿಂದ ಅಂದರೆ ಜುಲೈ 19 ರಿಂದ ಪ್ರಾರಂಭವಾಗಿ ಆಗಸ್ಟ 13 ರಂದು ಮುಕ್ತಾಯಗೊಳ್ಳಲಿದೆ.

* ಈ ಬಾರಿಯ ಮುಂಗಾರು ಅಧಿವೇಶನದಲ್ಲಿ 17 ಹೊಸ ವಿಧೇಯಕಗಳನ್ನು ಮಂಡಿಸಿ, ಅನುಮೋದನೆ ಪಡೆಯಲು ಸರಕಾರ ಸಿದ್ಧವಾಗಿದೆ, ಈ ಅಧಿವೇಶನವು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಏಕಕಾಲಕ್ಕೆ ಕಲಾಪ ನಡೆಯಲಿದೆ ಒಟ್ಟಾರೆ 19 ಕಲಾಪಗಳು ನಡೆಯಲಿವೆಎಂದುತಿಳಿಸಿದ್ದಾರೆ.

## ಚೀನಾದಲ್ಲಿ'ಮೊದಲಮಂಕಿಬಿವೈರಸ್'ನಸಾವು



* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗವು ಇಡೀ ಜಗತ್ತನ್ನೇ ಆವರಿಸಿಕೊಂಡಿದೆ, ಇದರ ಮಧ್ಯೆ ಇದೀಗ ಚೀನಾ ದೇಶದಲ್ಲಿ ಮಂಕಿ ಬಿ ವೈರಸ್'ನಿಂದಾಗಿ ಮೊದಲ ಸಾವಿನ ಪ್ರಕರಣ ವರದಿಯಾಗಿದೆ.

* ಪ್ರಸ್ತುತ ಚೀನಾ ದೇಶದ ಗ್ಲೋಬಲ್ ಟೈಮ್ಸ್ ನೀಡಿರುವ ವರದಿ ಪ್ರಕಾರ, ಬೀಜಿಂಗ್ ಮೂಲದ ಪ್ರಾಣಿ ವೈದ್ಯ 'ಮಂಕಿ ಬಿ' ವೈರಸ್‌ನಿಂದ ಸಾವನ್ನಪ್ಪಿದ್ದರೆ ಎಂದು ತಿಳಿಸಿದೆ, ಹಾಗೂ ಈ 'ಮಂಕಿಬಿ' ಸೋಂಕಿನಿಂದ ಮೊದಲ ಸಾವು ಚೀನಾದಲ್ಲಿ ಸಂಭವಿಸಿದೆ.

* ಪ್ರಸ್ತುತ ಚೀನಾ ದೇಶದ ಸಸ್ತನಿಗಳ ಸಂಶೋಧನಾ ಕೇಂದ್ರದಲ್ಲಿ ಈ ಹಿಂದೆ ಮಾರ್ಚ್ ತಿಂಗಳಲ್ಲಿ 2 ಮೃತ ಮಂಗಗಳ ದೇಹವನ್ನು ಪರೀಕ್ಷಿಸಲಾಗಿದೆ, ನಂತರ ಅಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದ 53 ವರ್ಷ ವಯಸ್ಸಿನ ಪುರುಷ ವೈದ್ಯನಿಗೆ ಒಂದು ತಿಂಗಳ ಬಳಿಕ ವಾಕರಿಕೆ ಮತ್ತು ವಾಂತಿ ಶುರುವಾಗಿ ಈ 'ಮಂಕಿ ಬಿ' ಸೋಂಕಿನಿಂದ ಸಾವಿಗೀಡಾಗಿದ್ದಾರೆ ಎಂದು ಚೀನಾದ ರೋಗ ನಿಯಂತ್ರಣ ಹಾಗೂ ಪ್ರತಿಬಂಧ ಕೇಂದ್ರವು ಮಾಹಿತಿಯನ್ನು ದೃಢಪಡಿಸಿದೆ.

## ಕರ್ನಾಟಕರಾಜ್ಯಪ್ರವಾಸೋದ್ಯಮನಿಗಮದಅಧ್ಯಕ್ಷರಾಗಿಕಾಪು ಸಿದ್ದಲಿಂಗಸ್ವಾಮಿನೇಮಕ



* ಕಾಪು ಸಿದ್ದಲಿಂಗಸ್ವಾಮಿ ಅವರನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

* ಈ ಮೊದಲು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರುತಿ ಅವರಿಂದ ಈ ಅಧ್ಯಕ್ಷ ಸ್ಥಾನವನ್ನು ಹಿಂಪಡೆದುಕೊಂಡು,ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನವರಾಗಿರುವ ಕಾಪು ಸಿದ್ದಲಿಂಗಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

* ಮುಖ್ಯ ಮಂತ್ರಿ ಯಡಿಯೂರಪ್ಪನವರ ಆಪ್ತ ಸಹಾಯಕರಾಗಿ ಕಾಪು ಸಿದ್ದಲಿಂಗಸ್ವಾಮಿ ಕಾರ್ಯನಿರ್ವಹಿಸಿದ್ದಾರೆ.

## ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ದೆಹಲಿಯಲ್ಲಿ 'ಕನ್ವರ್ ಯಾತ್ರೆ'ರದ್ದು



* ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರವು ಕೋವಿಡ್ 19 ಹಿನ್ನೆಲೆಯಲ್ಲಿಯಿಂದಾಗಿ ರಾಷ್ಟ್ರ ರಾಜಧಾನಿಯಲ್ಲಿ ಕನ್ವರ್ ಯಾತ್ರೆಯನ್ನ ರದ್ದುಗೊಳಿಸಿದೆ.

* ಇತ್ತೀಚಿಗೆ ಉತ್ತರಾಖಂಡ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಈ ವರ್ಷ ಕನ್ವರ್ ಯಾತ್ರೆಯನ್ನ ರದ್ದುಗೊಳಿಸಿವೆ, ಇದೀಗ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೂಡ ಈ ಕನ್ವರ್ ಯಾತ್ರೆಯನ್ನ ರದ್ದುಗೊಳಿಸಲಾಗಿದೆ ಎಂದು ಘೋಷಣೆ ಮಾಡಿದ್ದಾರೆ.

* ಉತ್ತರ ಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಈ ವರ್ಷದ ಕನ್ವರ್ ಯಾತ್ರೆಯನ್ನು ರದ್ದುಗೊಳಿಸಿದೆ.

* ಕನ್ವರ್ ಯಾತ್ರಾ ಹಿನ್ನಲೆ: ಕನ್ವರ್ ಯಾತ್ರಾ ಎಂಬುದು ಶಿವನ ಭಕ್ತರ ವಾರ್ಷಿಕ ತೀರ್ಥಯಾತ್ರೆಯಾಗಿದೆ, ಇದನ್ನು 'ಕಾನ್ವಾರಿಯಸ್' ಅಥವಾ 'ಭೋಲೆ' ಎಂದು ಕರೆಯಲಾಗುತ್ತದೆ, ಪ್ರಸ್ತುತ ಹಿಂದೂ ತೀರ್ಥಯಾತ್ರೆಯ ಸ್ಥಳಗಳಾದ ಹರಿದ್ವಾರ, ಗೌಮುಖ್ ಮತ್ತು ಗಂಗೋಂಡ್ರಿ ಮತ್ತು ಗಂಗಾ ನದಿಯ ಪವಿತ್ರ ನೀರನ್ನು ತರಲು ಬಿಹಾರದ ಸುಲ್ತಂಗಂಜ್'ನ ಲಕ್ಷಾಂತರ ಭಾಗವಹಿಸುವವರು, ಹಾಗೂ ಈ ಗಂಗಾ ನದಿಯ ಪವಿತ್ರ ನೀರನ್ನು ಸಂಗ್ರಹಿಸಿ ನೂರಾರು ಮೈಲುಗಳಷ್ಟು ದೂರದಲ್ಲಿನ ಸ್ಥಳೀಯ ಶಿವಾ ದೇಗುಲಗಳಲ್ಲಿ ಅಥವಾ ಮೀರತ್‌ಪುರನ ಮಹಾದೇವ ಮತ್ತು ಆಗರ್ನಾಥ ದೇವಾಲಯದಂತಹ ದೇವಾಲಯಗಳು ಹಾಗೂ ಜಾರ್ಖಂಡ್'ನ ಕಾಶಿ ವಿಶ್ವನಾಥ್, ಬೈದ್ಯನಾಥ್ ಮತ್ತು ದಿಯೋಘರ್ ನಲ್ಲಿನ ದೇವಾಲಯಗಳಿಗೆ ಅರ್ಪಣೆ ಮಾಡುತ್ತಾರೆ.

* 1980 ರ ದಶಕದ ಉತ್ತರಾರ್ಧದಲ್ಲಿ ಜನಪ್ರಿಯತೆ ಪಡೆಯಲು ಆರಂಭಿಸಿರುವ ಯಾತ್ರೆಯು ಕೆಲವು ಸಂತರು ಮತ್ತು ಹಿರಿಯ ಭಕ್ತರು ಕೈಗೊಂಡ ಸಣ್ಣ ವ್ಯವಹಾರ ಇದಾಗಿತ್ತು, ಆದರೆ ಇದೀಗ ಹರಿದ್ವಾರಕ್ಕೆ ಕನ್ವಾರ್ ತೀರ್ಥಯಾತ್ರೆ ಭಾರತದ ಅತಿದೊಡ್ಡ ವಾರ್ಷಿಕ ಧಾರ್ಮಿಕ ಸಭೆಯಾಗಿ ಬೆಳೆದಿದೆ.

* 2010 ಮತ್ತು 2011 ರಲ್ಲಿ ಅಂದಾಜು 12 ಮಿಲಿಯನ್ ಜನ ಈ ಕನ್ವರ್ ಯಾತ್ರೆಯಲ್ಲಿ ಭಾಗವಹಿಸಿದ್ದರು.

## 16 ಯೂರೋಪಿಯನ್ ರಾಷ್ಟ್ರಗಳು ಕೋವಿಶೀಲ್ಡ್ ಲಸಿಕೆಯನ್ನು ಗುರುತಿಸಿವೆ



* ಪ್ರಸ್ತುತ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಿಇಒ (CEO) ಆದರ್ ಪೂನವಾಲ್ಲಾ ಅವರು ಟ್ವೀಟ್ ಮಾಡಿ ಮಾಹಿತಿ ನೀಡಿರುವ ಪ್ರಕಾರ, ಒಟ್ಟಾರೆ 16 ಯುರೋಪಿಯನ್ ರಾಷ್ಟ್ರಗಳು ಇದೀಗ ಕೋವಿಶೀಲ್ಡ್ ಲಸಿಕೆಯನ್ನು ಅಂತರರಾಷ್ಟ್ರೀಯ ಪ್ರಯಾಣಿಕರ ಪ್ರವೇಶಕ್ಕಾಗಿ ಗುರುತಿಸಿವೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಭಾರತೀಯ ಸರ್ಕಾರವು ಕೋವಿಶೀಲ್ಡ್ ಮತ್ತು ಕೊವಾಕ್ಸಿನ್ ಎರಡು ಲಸಿಕೆಗಳನ್ನು ಗುರುತಿಸಲು ಯುರೋಪಿಯನ್ ಯೂನಿಯನ್ ಸದಸ್ಯ ರಾಷ್ಟ್ರಗಳನ್ನು ಒತ್ತಾಯಿಸುತ್ತಿದೆ.

* ಕೋವಿಶೀಲ್ಡ್ ಲಸಿಕೆಯನ್ನು ಸ್ವೀಕರಿಸುವ 16 ದೇಶಗಳು: ಆಸ್ಟ್ರಿಯಾ, ಬೆಲ್ಜಿಯಂ, ಬಲ್ಗೇರಿಯಾ, ಫಿನ್ಲ್ಯಾಂಡ್, ಜರ್ಮನಿ, ಗ್ರೀಸ್, ಹಂಗೇರಿ, ಐಸ್ಲ್ಯಾಂಡ್, ಐರ್ಲೆಂಡ್, ಲಾಟ್ವಿಯಾ, ನೆದರ್ಲ್ಯಾಂಡ್ಸ್, ಸ್ಲೊವೇನಿಯಾ, ಸ್ಪೇನ್, ಸ್ವೀಡನ್, ಸ್ವಿಟ್ಜರ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು, ಈ 16 ದೇಶಗಳಲ್ಲಿ 13 ಮಂದಿ ಇಯು ಸದಸ್ಯ ದೇಶಗಳಿವೆ.

* ಅಂತರಾಷ್ಟ್ರೀಯ ಪ್ರವೇಶಕ್ಕೆ ಗುರುತಿಸುವಿಕೆ ಎಂದರೆ '2' ಡೋಸ್ ಕೋವಿಶೀಲ್ಡ್ ಲಸಿಕೆಯನ್ನು ತಗೆದುಕೊಂಡಿರುವ ಭಾರತೀಯ ಪ್ರಜೆಗಳಿಗೆ ಯುರೋಪಿಯನ್ ದೇಶಗಳಿಗೆ ಪ್ರಯಾಣಿಸಲು ಅವಕಾಶವಿರುತ್ತದೆಎಂದರ್ಥ.

## ಮಾಜಿಸಂಸದಜಿ.ಮಾದೇಗೌಡನಿಧನ



* ಮಾಜಿ ಸಂಸದ, ರೈತ ಹಿತರಕ್ಷಣೆ ವೇದಿಕೆ ಅಧ್ಯಕ್ಷ, ಹಿರಿಯ ಹೋರಾಟಗಾರರಾಗಿರುವ ಜಿ.ಮಾದೇಗೌಡ ಅವರು ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ.

* ಮಾಜಿ ಸಂಸದ ಜಿ.ಮಾದೇಗೌಡ ಅವರು ಆರ್. ಗುಂಡೂರಾವ್ ಅವರ ಮಂತ್ರಿ ಮಂಡಲ ಅಂದರೆ 1980 ರ ದಶಕದಲ್ಲಿ ಅರಣ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

* ಮಾಜಿ ಸಂಸದ ಜಿ.ಮಾದೇಗೌಡ ಅವರು ಮಂಡ್ಯದ ಕಿರುಗಾವಲು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು, ಒಟ್ಟಾರೆ ಇವರು '2' ಬಾರಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ 1989 ಮತ್ತು 1991ರಲ್ಲಿ ಆಯ್ಕೆಯಾಗಿದ್ದರು.

* ಜಿ.ಮಾದೇಗೌಡ ಅವರು ಕಾವೇರಿ ರಕ್ಷಣೆ, ರೈತರ ಹಿತಕ್ಕಾಗಿ ಹೋರಾಟಗಳಲ್ಲಿ ಶ್ರಮಿಸಿದ್ದರು.

## ಹೊಸ ಅಧ್ಯಯನದಿಂದ ಟಿಪ್ಪು ಜನ್ಮದಿನ ಬದಲು



* ಇತಿಹಾಸ ತಜ್ಞ, ಸಂಶೋಧಕ ನಿಧಿನ್ ಓಲಿಕಾರ್ ಅವರು ನಡೆಸಿರುವ ಸಂಶೋಧನೆಯ ಹಾಗೂ ಹುಡುಕಾಟದ ಪ್ರತಿ ಫಲವಾಗಿ ಟಿಪ್ಪು ಸುಲ್ತಾನ್ ಜನ್ಮದಿನ 1751 ರ ಡಿಸೆಂಬರ್. 1 ಎಂದು ದೃಢಪಟ್ಟಿದೆ.

* ಇಲ್ಲಿಯವರೆಗೆ ಟಿಪ್ಪು ಜನ್ಮದಿನವನ್ನು 1750 ರ ನವೆಂಬರ್. 20 ಎಂದು ತಿಳಿಯಲಾಗಿತ್ತು, ಪ್ರಸ್ತುತ ನಿಧಿನ್ ಓಲಿಕಾರ್ ಅವರು ಲಂಡನ್ ಮ್ಯೂಸಿಯಂನ ಅಧಿಕೃತ ಪತ್ರಗಳ ಸಮಗ್ರ ಅಧ್ಯಯನವನ್ನು ನಡೆಸಿದ್ದಾರೆ, ಈ ಸಂಶೋಧನೆಯಲ್ಲಿ ಮುಖ್ಯವಾಗಿರುವ 3 ದಾಖಲೆಗಳನ್ನೂ ಸಲ್ಲಿಸಿದ್ದಾರೆ.

* ಪ್ರಸ್ತುತ ಮಂಗಳೂರು ಹಾಗೂ ಗೋವಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯಾಗಿರುವ ಇತಿಹಾಸ ತಜ್ಞ ಪ್ರೊ.ಶೇಖ್ ಅಲಿ ಅವರು ಈ ದಾಖಲೆಗಳನ್ನೂ ಅನುಮೋದಿಸಿದ್ದಾರೆ, ಹಾಗೂ ಅಧ್ಯಯನ ನಡೆಸಿರುವ ಸಂಪೂರ್ಣ ವಿವರಗಳನ್ನು ಒಳಗೊಂಡಿರುವ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ, ಹಾಗೂ ಮುಂಬರುವ ದಿನಗಳಲ್ಲಿ ಟಿಪ್ಪು ಜನ್ಮದಿನವನ್ನು 1751 ರ ಡಿಸೆಂಬರ್. 1 ಆಗಬೇಕು ಎಂದು ವಿನಂತಿ ಮಾಡಿದ್ದಾರೆ.

* ನಿಧಿನ್ ಓಲಿಕಾರ್ ಅವರು ಲಂಡನ್‌ಗೆ ಹೋದ ಸಂಧರ್ಭದಲ್ಲಿ ಅಲ್ಲಿರುವಂಥಹ ಬ್ರಿಟಿಷ್ ಗ್ರಂಥಾಲಯದಲ್ಲಿ ಟಿಪ್ಪು ಸುಲ್ತಾನ್'ಗೆ ಸಂಬಂಧಿಸಿದ ಪರ್ಶಿಯನ್ ಭಾಷೆಯಲ್ಲಿನ 'ಫತೇ ಉಲ್ ಮುಜಾಹಿದ್ದೀನ್' ಹಸ್ತಪ್ರತಿಕ್ಕೆ ಇವರಿಗೆ ದೊರಕಿದೆ, ಈ ಹಸ್ತಪ್ರತಿಕ್ಕೆಯು ಟಿಪ್ಪು ಸುಲ್ತಾನ್ ಅವರೇ ಬರೆಸಿರುವ ಕೈಪಿಡಿಯಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತಲಂಡನ್‌ಬ್ರಿಟಿಷ್‌ಗ್ರಂಥಾಲಯದಲ್ಲಿಲಭಿಸಿರುವಈಕೈಪಿಡಿಯಲ್ಲಿಜಕ್ರಿಮಾಸದ14ನೇದಿನ1165 ಇಜ್ರಿ ದಿನ ಸೂರ್ಯೋದಯವಾದ 10 ಗಂಟೆಗಳ ನಂತರ ನನ್ನ ಜನ್ಮದಿನ ಆಚರಿಸಬೇಕು, ಹಾಗೂ ಮೈಸೂರು ಸಂಸ್ಥಾನದ ಸಮಸ್ತ ಪ್ರಜೆಗಳು ಈ ಜನ್ಮದಿನ ಆಚರಣೆಯಲ್ಲಿ ಪಾಲ್ಗೊಳ್ಳಬೇಕು ಎಂದು ಉಲ್ಲೇಖಿಸಲಾಗಿದೆಎಂದುತಿಳಿಸಿದ್ದಾರೆ.

## ಭಾರತ ಮತ್ತು ನೇಪಾಳ ನಡುವೆ ರೈಲಿನ ಪ್ರಯೋಗ ಯಶಸ್ವಿ



* ಭಾರತದ ಜಯನಗರ ಮತ್ತು ನೇಪಾಳದ ಕುರ್ತಾ ನಗರಗಳ ಮಧ್ಯೆ 2021 ರ ಜುಲೈ. 18 ರಂದು ರೈಲು ಸಂಚಾರದ ಪ್ರಯೋಗವನ್ನು ಯಶಸ್ವಿಗೊಳಿಸಲಾಗಿದೆ.

* ಈ ಎರಡು ದೇಶಗಳ ನಡುವಿನ ಮೊದಲ ರೈಲು ವಿಭಾಗದ ಮಾರ್ಗವಾಗಿದೆ, ಈ ರೈಲು ಮಾರ್ಗ ನೇಪಾಳದ ಮಹೋತ್ತಾರಿ ಜಿಲ್ಲೆಯ ಕುರ್ತಾ ನಗರದಿಂದ ಭಾರತದ ಬಿಹಾರ ರಾಜ್ಯದ ಮಧುಬನಿ ಜಿಲ್ಲೆಯ ಜಯನಗರಕ್ಕೆ ಹೊಂದಿಕೊಂಡು ಸಂಪರ್ಕ ಬೆಳೆಸಲಿದೆ.

* ಈ ರೈಲುಮಾರ್ಗ ನಿರ್ಮಾಣದ ವಿಭಾಗಕ್ಕೆ ಒಟ್ಟಾರೆ619ಕೋಟಿ ವೆಚ್ಚವಾಗಿದೆ, ಈರೈಲು ಮಾರ್ಗಕ್ಕೆ ಧನಸಹಾಯನ್ನು ಭಾರತ ಸರ್ಕಾರದಿಂದ ಪಡೆಯಲಾಗಿದೆ, ಹಾಗೂ ಇದನ್ನು ಭಾರತ ನೇಪಾಳ ಸ್ನೇಹ ರೈಲು ಯೋಜನೆ ಅಡಿಯಲ್ಲಿ ಐಆರ್ಕಾನ್ ಜಯನಗರ ಕುರ್ತಾ ರೈಲ್ವೆ ಸ್ಥಾಪನೆ ಮಾಡಿದೆ.

* ಶೀಘ್ರದಲ್ಲೇ ಈ ವಿಭಾಗದ ರೈಲು ಸಂಚಾರ ಆರಂಭವಾಗಲಿದೆ ಎಂದು ಪೂರ್ವ ಕೇಂದ್ರ ರೈಲ್ವೆಯ ಮುಖ್ಯಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿರುವ ರಾಜೇಶ್ ಕುಮಾರ್ ಅವರು ತಿಳಿಸಿದ್ದಾರೆ. ಉಳಿದಿರುವ 34 ಕಿ.ಮೀ ರೈಲು ಮಾರ್ಗವನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗುವುದು.

* ಇರ್ಕಾನ್ (IRCON) ಇಂಟರ್ನ್ಯಾಷನಲ್ ಅಥವಾ ಇಂಡಿಯನ್ ರೈಲ್ವೆ ಕನ್ಸ್ಟ್ರಕ್ಷನ್ (constraction) ಲಿಮಿಟೆಡ್ ಎನ್ನುವದು ಭಾರತೀಯ ರೈಲ್ವೆಯ ಅಂಗಸಂಸ್ಥೆಯಾಗಿದೆ ಹಾಗೂ ನಿರ್ಮಾಣ ಮತ್ತು ಎಂಜಿನಿಯರಿಂಗ್ ವಿಭಾಗದ ನಿಗಮ ಇದಾಗಿದೆ.

* ಭಾರತೀಯ ರೈಲ್ವೆಯ ಈ ಅಂಗಸಂಸ್ಥೆ1976 ರಲ್ಲಿ ಸ್ಥಾಪನೆ ಮಾಡಲಾಗಿದೆ, ಈ ಇರ್ಕಾನ್ ಭಾರತದಲ್ಲಿ 1650 ಕ್ಕೂ ಅಧಿಕ ಮೂಲಸೌಕರ್ಯ ಯೋಜನೆಗಳನ್ನು ಪೂರೈಸಿದೆ.

*ಪ್ರಸ್ತುತಎಂ.ಕೆ.ಸಿಂಗ್ಅವರುಇರ್ಕಾನ್ಅಂಗಸಂಸ್ಥೆಯಅಧ್ಯಕ್ಷರಾಗಿದ್ದಾರೆ.

# 20-07-2021

## ನೂತನ 10 ವಂದೇ ಭಾರತ್ ರೈಲುಗಳು 2022 ರಿಂದ ಆರಂಭ



* 2022ರ ಆಗಸ್ಟ್ ನಲ್ಲಿ 75 ನೇ ವರ್ಷದ ಸ್ವಾತಂತ್ರೋತ್ಸವದ ಸಂದರ್ಭದಲ್ಲಿ ಸುಮಾರು 40 ನಗರಗಳನ್ನು ಸಂಪರ್ಕಿಸುವ 10 ನೂತನ ವಂದೇ ಭಾರತ್ ರೈಲುಗಳನ್ನು ಪ್ರಾರಂಭಿಸಲು ರೈಲ್ವೆ ಇಲಾಖೆ ಸಿದ್ಧವಾಗಿದೆ.

* ವಂದೇ ಭರತ್' ಗೆ ಉತ್ತೇಜನ ನೀಡಲು ಸ್ವದೇಶಿ ಸೆಮಿಸ್ಪೀಡ್ ರೈಲು ವ್ಯವಸ್ಥೆಯನ್ನು ಒದಗಿಸಲು ಭಾರತೀಯ ರೈಲ್ವೆ ಸಿದ್ಧವಾಗಿದೆ ಎಂದು ನೂತನ ರೈಲ್ವೆ ಸಚಿವ ಅಶ್ವಿನಿವೈಷ್ಣವ ಅವರು ತಿಳಿಸಿದ್ದಾರೆ.

* ಪ್ರಸ್ತುತ 44 ಸ್ವದೇಶಿ ವಂದೇ ಭಾರತ್ ರೈಲುಗಳಿಗೆ ವಿದ್ಯುತ್ ವ್ಯವಸ್ಥೆಗಳನ್ನು ಒದಗಿಸಲು ಹೈದರಾಬಾದ್'ನ ಮೇಧಾ ಇಂಜಿನಿಯರಿಂಗ್ ಸಂಸ್ಥೆಯು ಗುತ್ತಿಗೆಯನ್ನು ಪಡೆದುಕೊಂಡಿದೆ.

* ಮುಂದಿನ ವರ್ಷದ ಮಾರ್ಚ್ ವೇಳೆಗೆ ಎಲ್ಲ ಟ್ರಯಲ್ಗಳನ್ನು ಪೂರೈಸಿ ಕನಿಷ್ಠ ಎರಡು ಮೂಲಮಾದರಿಗಳನ್ನು ಪೂರೈಸುವಂತೆ ರೈಲ್ವೆ ಇಲಾಖೆಯು ಆ ಸಂಸ್ಥೆಗೆ ಸೂಚಿಸಿದೆ, ಹಾಗೂ ಈ 2022 ಡಿಸೆಂಬರ್ ಅಥವಾ 2023 ರ ಆರಂಭದಲ್ಲಿ ಈ ರೈಲುಗಳನ್ನು ಮೊದಲ ಕಾರ್ಯಾಚರಣೆಯನ್ನು ಆರಂಭಿಸಲು ಉದ್ದೇಶಿಸಲಾಗಿದೆ.

* ವಂದೇ ಭಾರತ್ ದೇಶದ ಸ್ವಂತ ನಿರ್ಮಾಣದ ಸೆಮಿ ಹೈಸ್ಪೀಡ್ ರೈಲು ಆಗಿದೆ, ಇದು 16 ಬೋಗಿಗಳನ್ನು ಒಳಗೊಂಡಿರಲಿದೆ, ಅಲ್ಲದೇ ಸಂಪೂರ್ಣವಾಗಿ ವಿದ್ಯುತ್ಚಾಲಿತ ರೈಲಾಗಿರುತ್ತದೆ.

## ಕಾರವಾರ ನೌಕಾನೆಲೆ ಮೇಲೆ ಡ್ರೋನ್ ಹಾರಾಟ ನಿಷೇಧ



* ಪ್ರಸ್ತುತ ರಕ್ಷಣಾ ಸಚಿವಾಲಯದ ಸೂಚನೆಯ ಪ್ರಕಾರ ಕಾರವಾರ ನೌಕಾನೆಲೆ ಹಾಗೂ ಶಸ್ತ್ರಾಗಾರ ವಲಯದ ವಜ್ರ ಕೋಶದ ಮೇಲೆ ಡ್ರೋನ್ ಹಾರಾಟವನ್ನು ನಿಷೇಧಿಸಿ ನೋ ಫ್ಲೈಯಿಂಗ್ ಝೋನ್ ಎಂದು ಡೈರೆಕ್ಟರ್ ಜನರಲ್ ಸಿವಿಲ್ ಏವಿಯೇಶನ್ ಅಧಿಕೃತ ಆದೇಶವನ್ನು ಹೊರಡಿಸಿದೆ.

* ಪ್ರಸ್ತುತ ಕಾರವಾರ ನೌಕಾನೆಲೆಯ 3 ಕಿ.ಮೀ .ವ್ಯಾಪ್ತಿಯಲ್ಲಿ ಮತ್ತು ವಜ್ರಕೋಶದ ಪ್ರದೇಶದ ಮೇಲೆ ಡ್ರೋನ್ ಹಾರಾಟಹಾಗೂಮಾನವರಹಿತವಿಮಾನಹಾರಿಸುವುದರಮೇಲೆ ನಿರ್ಬಂಧವನ್ನುಹೇರಿದೆ.

* ಈ ಡ್ರೋನ್ ಹಾರಾಟ ನಿಷೇಧ ಸಂಬಂಧ ಸಿವಿಲ್ ಏವಿಯೇಶನ್'ಗೆ ಕರ್ನಾಟಕ ನೇವಲ್ ಬೇಸ್ ಕಮಾಂಡರ್'ನಿಂದ ಪತ್ರ ಬರೆಯಲಾಗಿತ್ತು, ಇದನ್ನು ಪರಿಗಣಿಸಿದ ರಕ್ಷಣಾ ಸಚಿವಾಲಯ ನೋ ಫ್ಲೇಯಿಂಗ್ ಝೋನ್ ಬಗ್ಗೆ ನೋಟಿಫೀಕೇಶನ್ಮತ್ತುಅಧಿಕೃತಆದೇಶಹೊರಡಿಸಿ ಪ್ರಕಟಣೆನೀಡಿದೆ.

## ಹೈಪರ್ಸಾನಿಕ್ಕ್ಷಿಪಣಿಪರೀಕ್ಷೆಯಶಸ್ವಿಗೊಳಿಸಿದರಷ್ಯಾ



* ಪ್ರಸ್ತುತ ಹೊಸ ಜಿರ್ಕಾನ್ ಹೈಪರ್ಸಾನಿಕ್ ಕ್ರೂಸ್ ಕ್ಷಿಪಣಿಯ ಮತ್ತೊಂದು ಪರೀಕ್ಷಾರ್ಥ ಉಡಾವಣೆಯನ್ನು ರಷ್ಯಾ ಸೇನೆಯು ಯಶಸ್ವಿಯಾಗಿಸಿದೆ.

* ಈ ಕ್ರೂಸ್ ಕ್ಷಿಪಣಿಯನ್ನು ರಷ್ಯಾದ ಉತ್ತರದ ಶ್ವೇತ ಸಾಗರದಲ್ಲಿನ ಅಡ್ಮಿರಲ್ ಗ್ರೋಪ್ಕೋವ್ ಯುದ್ಧ ನೌಕೆಯಿಂದ ಉಡಾಯಿಸಲಾಗಿದೆ, ಈ ಕ್ಷಿಪಣಿಯ ಸುಮಾರು 350 ಕಿ.ಮೀ. ದೂರದಲ್ಲಿನ ಗುರಿಯನ್ನು ಬೇಧಿಸಿ ಯಶಸ್ವಿಯಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

* ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಿಳಿಸಿರುವ ಮಾಹಿತಿಯ ಪ್ರಕಾರ, ರಷ್ಯಾದ ಈ ಹೊಸ ಜಿರ್ಕಾನ್ ಕ್ಷಿಪಣಿ 1,000 ಕಿ. ಮೀ. (ಸುಮಾರು 620 ಮೈಲಿ) ದೂರವನ್ನು ಕ್ರಮಿಸುವ ಸಾಮರ್ಥ್ಯವನ್ನು ಹೊಂದಿದೆ, ಅಂದರೆ ಶಬ್ದದ ಒಂಬತ್ತು ಪಟ್ಟು ವೇಗದಲ್ಲಿ ಹಾರುವ ಸಾಮರ್ಥ್ಯ ಹೊಂದಿದೆಎಂದಿದ್ದಾರೆ.

## ಪ್ರಧಾನಿ ಮೋದಿಯವರ 'ಮನ್ ಕಿ ಬಾತ್' ಕಾರ್ಯಕ್ರಮದ ಆದಾಯ



* ಪ್ರಸ್ತುತ 2014ರಲ್ಲಿ ಭಾರತೀಯ ಪ್ರಧಾನಿ ನರೇಂದ್ರ ಮೋದಿಯವರ 'ಮನ್ ಕಿ ಬಾತ್' ಮಾಸಿಕ(ತಿಂಗಳ) ರೇಡಿಯೋ ಕಾರ್ಯಕ್ರಮ ಆರಂಭಿಸಿದ್ದಾರೆ, ಈ ಕಾರ್ಯಕ್ರಮವು ಒಟ್ಟಾರೆ ಇಲ್ಲಿಯವರೆಗೆ 30.80 ಕೋಟಿ ರೂ.ಗಳಷ್ಟು ಆದಾಯವನ್ನು ಗಳಿಸಿದೆ.

* 2017 18 ನೇ ಸಾಲಿನಲ್ಲಿ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮವು 10.64 ಕೋಟಿ ರೂ.ಗಳನ್ನು ಗಳಿಸಿದೆಎಂದುರಾಜ್ಯಸಭೆಗೆಮಾಹಿತಿನೀಡಿದ್ದಾರೆ.

* ಪ್ರಸ್ತುತ ಪ್ರಧಾನಿ ಮೋದಿಯವರ ಈ 'ಮನ್ ಕಿ ಬಾತ್' ಕಾರ್ಯಕ್ರಮವನ್ನು ಆಲ್ ಇಂಡಿಯಾ ರೇಡಿಯೋ ಹಾಗೂ ದೂರದರ್ಶನದ ವಿವಿಧ ಚಾನೆಲ್‌ಗಳ ಮೂಲಕ ಪ್ರತಿ ತಿಂಗಳ ಕೊನೆಯ ಭಾನುವಾರ ಬೆಳಿಗ್ಗೆ 11 ಗಂಟೆಗೆ ಪ್ರಸಾರವಾಗುತ್ತದೆ.

* ಪ್ರಸಾರ್ ಭಾರತಿ 'ಮನ್ ಕಿ ಬಾತ್' ಕಾರ್ಯಕ್ರಮದ 78 ಸಂಚಿಕೆಗಳನ್ನು ತನ್ನ ಅಖಿಲ ಭಾರತ ರೇಡಿಯೋ ಹಾಗೂ ದೂರದರ್ಶನ ಜಾಲತಾಣದಲ್ಲಿ ಹಾಗೂ ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಇಲ್ಲಿಯವರೆಗೆ ಪ್ರಸಾರ ಮಾಡಿದೆ' ಎಂದು ಮಾಹಿತಿ ಮತ್ತು ಪ್ರಸಾರ ಸಚಿವರಾಗಿರುವ ಅನುರಾಗ್ ಠಾಕೂರ್ ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ, ಹಾಗೂ ಸುಮಾರು 91 ಖಾಸಗಿ ಉಪಗ್ರಹ ಟಿವಿ ಚಾನೆಲ್‌ಗಳು ಈ ಕಾರ್ಯಕ್ರಮವನ್ನು ದೇಶಾದ್ಯಂತ ಕೇಬಲ್ ಮತ್ತು DTH ಪ್ಲಾಟ್‌ಫಾರ್ಮ್‌ಗಳಲ್ಲಿ ಪ್ರಸಾರ ಮಾಡುತ್ತವೆ ಎಂದು ತಿಳಿಸಿದ್ದಾರೆ.

*ಈ'ಮನ್‌ಕಿಬಾತ್'ಕಾರ್ಯಕ್ರಮವು: 2014 15ರಲ್ಲಿ1.16ಕೋಟಿರೂ. 2015 16ರಲ್ಲಿ2.81ಕೋಟಿರೂ. 2016 17ರಲ್ಲಿ5.14ಕೋಟಿರೂ. 2017 18ರಲ್ಲಿ 10.64 ಕೋಟಿ ರೂ. 2018 19ರಲ್ಲಿ 7.47 ಕೋಟಿ ರೂ. 2019 20ರಲ್ಲಿ 2.56 ಕೋಟಿ ರೂ. 2020 21ರಲ್ಲಿ 1.02 ಕೋಟಿ ರೂಗಳಿಸಿದೆ.

## ಮಹಿಳೆಯರ ರಕ್ಷಣೆಗಾಗಿ 'ಪಿಂಕ್ ಪ್ರೊಟೆಕ್ಷನ್' ಯೋಜನೆ ಆರಂಭಿಸಿದಕೇರಳರಾಜ್ಯ




* ಕೇರಳ ರಾಜ್ಯ ಸರ್ಕಾರವು ಕೋವಿಡ್ 19 ಲಾಕ್‌ಡೌನ್ ಸಮಯ ಹಾಗೂ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಅತೀಯಾಗಿ ಹೆಚ್ಚುತ್ತಿರುವ ದೌರ್ಜನ್ಯ ತಡೆಯುವ ಸಲುವಾಗಿ ಸಾರ್ವಜನಿಕ, ಖಾಸಗಿ ಮತ್ತು ಸೈಬರ್ ತಾಣಗಳಲ್ಲಿ ಮಹಿಳೆಯರು ಅವರಿಗಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಮಗ್ರ ಯೋಜನೆಯೊಂದನ್ನುಪ್ರಾರಂಭಿಸಿದೆ.

* ಕೇರಳ ರಾಜ್ಯ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ 'ಪಿಂಕ್ ಪ್ರೊಟೆಕ್ಷನ್' ಎಂಬ ಯೋಜನೆಗೆ ಚಾಲನೆ ನೀಡಿದರು, ಹಾಗೂ ರಾಜ್ಯ ಸರ್ಕಾರವು 10 ಕಾರುಗಳು, ಬುಲೆಟ್‌ಗಳು ಮತ್ತು 20 ಬೈಸಿಕಲ್‌ಗಳು ಸೇರಿ 40 ದ್ವಿಚಕ್ರ ವಾಹನಗಳನ್ನು ಈ ಯೋಜನೆಗಾಗಿ ಮೀಸಲಿಟ್ಟಿದೆ ಎಂದು ತಿಳಿಸಿದ್ದಾರೆ.

* ಈ 'ಪಿಂಕ್ ಪ್ರೊಟೆಕ್ಷನ್' ಯೋಜನೆಯಿಂದಾಗಿ ವರದಕ್ಷಿಣೆಯ ಕಿರುಕುಳ, ದೌರ್ಜನ್ಯ, ಜಾಲತಾಣಗಳ ಮೂಲಕ ದೌರ್ಜನ್ಯ ಎಸಗುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯ ವಿರುದ್ಧ ದೌರ್ಜನ್ಯ ನಡೆಯುತ್ತಿರುವ ಪ್ರಕರಣಗಳನ್ನು ತಡೆಯುಲು ಈ ಯೋಜನೆಯನ್ನುಆರಂಭಿಸಿದ್ದಾರೆ.

## ನಟಿ ಶೃತಿ ಕರ್ನಾಟಕ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾಗಿನೇಮಕ



* ಕರ್ನಾಟಕ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರನ್ನಾಗಿ ಚಲನಚಿತ್ರ ನಟಿ ಶೃತಿ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ, ಈ ಮೊದಲು ಇವರು ರಾಜ್ಯಪ್ರವಾಸೋದ್ಯಮಅಭಿವೃದ್ಧಿನಿಗಮದಅಧ್ಯಕ್ಷರಾಗಿದ್ದರು.

## ದೇಶದ ಅತೀ ದೊಡ್ಡ ಚಾರ್ಜಿಂಗ್ ಲಾಟ್ ಮುಂಬಯಿ ನಗರದಲ್ಲಿ



* ಭಾರತದಲ್ಲಿ ಮುಂಬರುವ ದಿನಗಳಲ್ಲಿ ವಿದ್ಯುತ್ ವಾಹನಗಳ ಯುಗ ಪ್ರಾರಂಭವಾಗಲಿದೆ, ಪ್ರಸ್ತುತ ದೇಶದಲ್ಲೇ ಅತೀ ದೊಡ್ಡದಾದ ಎಲೆಕ್ಟ್ರಿಕ್ ವಾಹನಗಳ ವಿದ್ಯುತ್ ಚಾರ್ಜಿಂಗ್ ಕೇಂದ್ರವನ್ನು ಮುಂಬಯಿ ಮೂಲದ ಮಂಗೇತಾ ಕಂಪೆನಿಯು ಮುಂಬಯಿ ನಗರದಲ್ಲಿ ಆರಂಭಿಸಿದೆ.

* ಈ ವಿದ್ಯುತ್ ಚಾರ್ಜಿಂಗ್ ಕೇಂದ್ರದಲ್ಲಿ 21 ಚಾರ್ಜಿಂಗ್ ಪಾಯಿಂಟ್‌ಗಳು ಇವೆ, ಅವುಗಳಲ್ಲಿ 4 ಡಿ.ಸಿ. ಚಾರ್ಜರ್ ಗಳಿವೆ ಇವುಗಳು ಪ್ರತಿಯೊಂದು 5 KW ನಿಂದ 50 KW ಸಾಮರ್ಥ್ಯ ಹೊಂದಿವೆ, ಇನ್ನು ಉಳಿದಿರುವ ಚಾರ್ಜಿಂಗ್ ಪಾಯಿಂಟ್‌ಗಳು ಎ.ಸಿ. ಚಾರ್ಜರ್‌ಗಳಾಗಿವೆ ಪ್ರತೀ ಚಾರ್ಜರ್ 3.5 ಕಿ.ವ್ಯಾಟ್‌ನಿಂದ 7.5 ಕಿ.ವ್ಯಾಟ್ ಸಾಮರ್ಥ್ಯ ಹೊಂದಿವೆ, ಪ್ರಸ್ತುತ ಒಂದು ಕಾರಿನ ಬ್ಯಾಟರಿ ಚಾರ್ಜ್‌ಗೆ ಒಂದು ರಾತ್ರಿ ಪೂರ್ತಿ ಬೇಕಾಗುತ್ತದೆ ಎಂದು ತಿಳಿಸಿದೆ.

* ಒಂದು ವೇಳೆ ವಿದ್ಯುತ್ ಸಮಸ್ಯೆಗಳಾದರೆ ಪವರ್ ಬ್ಯಾಕ್‌ಅಪ್‌ಗಾಗಿ 40 KW ವಿದ್ಯುತ್ ಔಟ್‌ಪುಟ್ ನೀಡುವ ಡೀಸೆಲ್ ಜನರೇಟರ್ ಅಳವಡಿಸಲಾಗಿದೆ ಎಂದು ತಿಳಿಸಿದ್ದಾರೆ.

* ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ನಾಲ್ಕು ಚಕ್ರಗಳ ವಾಹನಗಳಿಗೆ ಸೂಕ್ತವೆಂದುತಿಳಿಸಿದ್ದಾರೆ.

## ವಿಶ್ವದ 5 ನೇ ಅತಿದೊಡ್ಡ ವಿದೇಶೀ ವಿನಿಮಯ ಮೀಸಲು ಹೊಂದಿರುವ ಭಾರತ




* 2021ರ ಜೂನ್. 25 ರ ಅವಧಿಗೆ ಭಾರತ ದೇಶವು ಜಪಾನ್, ಚೀನಾ, ರಷ್ಯಾ ಮತ್ತು ಸ್ವಿಟ್ಜರ್ಲೆಂಡ್‌ಗಳನ್ನು ಮೀರಿ ವಿಶ್ವದ 5 ನೇ ಅತಿದೊಡ್ಡ ವಿದೇಶಿ ವಿನಿಮಯ ಮೀಸಲು ಹೊಂದಿ $

608.99 ಬಿಲಿಯನ್ ಗಳಿಸಿದೆ, ಎಂಬ ಮಾಹಿತಿಯನ್ನು ಎಂಒಎಸ್ ಫೈನಾನ್ಸ್‌ನ ಪಂಕಜ್ ಚೌಧರಿ ಅವರು 2021ರ ಜುಲೈ. 20 ರಂದು ಲೋಕಸಭೆಯಲ್ಲಿ ತಿಳಿಸಿದ್ದಾರೆ.

* 2020 21 ರ ವರ್ಷದಲ್ಲಿ ಭಾರತದ ಬಂಡವಾಳ ಮತ್ತು ಚಾಲ್ತಿ ಖಾತೆಗಳಲ್ಲಿ ಮಿತಿಮೀರಿದೆ, ಇದರಿಂದಾಗಿ ದೇಶದ ವಿದೇಶಿ ವಿನಿಮಯ ಸಂಗ್ರಹದಲ್ಲಿ ಅಧಿಕಲಾಭವನ್ನುಗಳಿಸಿದೆ.

## ಭಾರತ ಸರ್ಕಾರವು ರಾಷ್ಟ್ರೀಯ ಲಾಜಿಸ್ಟಿಕ್ಸ್ ಎಕ್ಸಲೆನ್ಸ್ ಪ್ರಶಸ್ತಿಗಳನ್ನು ಪ್ರಕಟಿಸಿದೆ



* ಪ್ರಸ್ತುತ ಭಾರತ ಸರ್ಕಾರವು ರಾಷ್ಟ್ರೀಯ ಲಾಜಿಸ್ಟಿಕ್ಸ್ ಎಕ್ಸಲೆನ್ಸ್ ಎಂಬ ಹೊಸ ವರ್ಗದ ಪ್ರಶಸ್ತಿಗಳನ್ನು ಬಿಡುಗಡೆ ಮಾಡಲಾಗುತ್ತದೆ ಎಂದು 2021 ರ ಜುಲೈ.19 ರಂದು ಘೋಷಣೆ ಮಾಡಿದೆ, ಈ ಪ್ರಶಸ್ತಿಗಳಿಂದ ಲಾಜಿಸ್ಟಿಕ್ಸ್ ಕ್ಷೇತ್ರದ ಗಮನ ಸೆಳೆಯಲಾಗುತ್ತದೆ ಎಂದು ತಿಳಿಸಿದೆ.

*ಎರಡು ವಿಭಾಗಗಳಾಗಿ ಈ ಪ್ರಶಸ್ತಿಗಳನ್ನು ವಿಂಗಡಿಸಲಾಗಿದೆ, ಮೊದಲ ವರ್ಗವು ಸೇವಾ ಪೂರೈಕೆದಾರರು ಹಾಗೂ ಲಾಜಿಸ್ಟಿಕ್ಸ್ ಮೂಲಸೌಕರ್ಯಗಳನ್ನು ಒಳಗೊಂಡಿರಲಿದೆ, ಎರಡನೇ ವರ್ಗವನ್ನು ವಿವಿಧ ಬಳಕೆದಾರ ಕೈಗಾರಿಕೆಗಳಿಗೆ ನೀಡಲಾಗುತ್ತದೆ ಎಂದು ಭಾರತ ಸರ್ಕಾರ ತಿಳಿಸಿದೆ.

* ಭಾರತ ಸರ್ಕಾರವು ಈ ಪ್ರಶಸ್ತಿ ನೀಡುವ ಮೂಲಕ, ದತ್ತು ಡಿಜಿಟಲೀಕರಣ ಮತ್ತು ತಂತ್ರಜ್ಞಾನ, ಕಾರ್ಯಾಚರಣೆಯ ಸುಸ್ಥಿರ ಅಭ್ಯಾಸಗಳು ಹಾಗೂ ಉತ್ತಮ ಗ್ರಾಹಕ ಸೇವೆಯನ್ನು ಸಾಧಿಸಿದ ಲಾಜಿಸ್ಟಿಕ್ಸ್ ಸೇವಾ ಪೂರೈಕೆದಾರರಿಗೆ ಬೆಳಕು ನೀಡುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ಆರಂಭಿಸಿದೆ.

* ಈ ಪ್ರಶಸ್ತಿಗಳನ್ನು ಪಡೆದವರನ್ನು ಇದೇ 31ರಂದು ಘೋಷಣೆ ಮಾಡಲಾಗುತ್ತದೆ ಎಂದು ಭಾರತ ಸರ್ಕಾರ ತಿಳಿಸಿದೆ.

## ಭಾರತೀಯ ತೈಲ ಸಚಿವಾಲಯವು 7 ಹೊಸ ಕಂಪನಿಗಳಿಗೆ ವಾಹನಇಂಧನಗಳನ್ನುಮಾರಾಟಮಾಡಲುಅನುಮತಿನೀಡಿದೆ




* ಪ್ರಸ್ತುತ ದೇಶದಲ್ಲಿ ವಾಹನ ಇಂಧನಗಳನ್ನು ಮಾರಾಟ ಮಾಡಲು ಏಳು ಕಂಪನಿಗಳಿಗೆ ಭಾರತೀಯ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಅನುಮತಿ ನೀಡಿದೆ.

* 2019 ರ ವರ್ಷದಲ್ಲಿ ಈ ಹೊಸ ಅನುಮೋದನೆಗಳು ಪರಿಷ್ಕರಿಸಲ್ಪಟ್ಟ ಸಾರಿಗೆ ಇಂಧನಗಳಿಗೆ ಅಧಿಕಾರ ನೀಡುವ ಮಾರ್ಗಸೂಚಿಗಳ ಅಡಿಯಲ್ಲಿ ಬರಲಿವೆ ಎಂದು ಸರ್ಕಾರ ತಿಳಿಸಿದೆ.

* ರಿಲಯನ್ಸ್ ಇಂಡಸ್ಟ್ರೀಸ್ ಗೆ, ಮತ್ತು ಆರ್‌ಬಿಎಂಎಲ್ ಸೊಲ್ಯೂಷನ್ಸ್ ಇಂಡಿಯಾ, ಹಾಗೂ ಚೆನ್ನೈ ಮೂಲದ ಐಎಂಸಿ ಸಹ ಸ್ವಯಂ ಇಂಧನಗಳನ್ನು ಮಾರಾಟ ಮಾಡಲು ಅನುಮತಿಯನ್ನು ಪಡೆದುಕೊಂಡಿದೆ.

* ಅಸ್ಸಾಂ ರಾಜ್ಯ ಸರ್ಕಾರದ, ಅಸ್ಸಾಂ ಗ್ಯಾಸ್ ಕಂಪನಿಯು ಇಂಧನ ಚಿಲ್ಲರೆ ವ್ಯಾಪಾರಕ್ಕಾಗಿ ತೈಲ ಸಚಿವಾಲಯದಿಂದ ಅನುಮೋದನೆ ಪಡೆದುಕೊಂಡಿದೆ.

* ಆನ್‌ಸೈಟ್ ಎನರ್ಜಿ ಸಹ ವಾಹನ ಇಂಧನಗಳನ್ನು ಮಾರಾಟ ಮಾಡುವ ಅಧಿಕಾರವನ್ನು ಪಡೆದಿದೆ, ಹಾಗೂ ಮನಸ್ ಆಗ್ರೋ ಇಂಡಸ್ಟ್ರೀಸ್ ಮತ್ತು ಇನ್ಫ್ರಾಸ್ಟ್ರಕ್ಚರ್ ಮತ್ತು ಎಂ ಕೆ ಅಗ್ರೋಟೆಕ್ ಸಹ ಇಂಧನ ಚಿಲ್ಲರೆ ವ್ಯಾಪಾರ ಅಧಿಕಾರವನ್ನು ಪಡೆದಿವೆ.

* ಪ್ರಸ್ತುತ ಭಾರತೀಯ ಪೆಟ್ರೋಲಿಯಂ ಸಚಿವಾಲಯವು ಕನಿಷ್ಠ 250 ಕೋಟಿ ರೂ. ನಿವ್ವಳ ಲಾಭದಮೌಲ್ಯವನ್ನು ಹೊಂದಿರುವ ಕಂಪನಿಗಳಿಗೆ ಅನುಮತಿ ನೀಡಿದೆ.

# 21-07-2021

## ಜಲಾಂತರ್ಗಾಮಿಗಳ ನಿರ್ಮಾಣದ ಅವಕಾಶ ಪಡೆದ ಎಲ್ ಆಯಂಡ್ ಟಿ(L&T;)



* ಕೇಂದ್ರ ಸರ್ಕಾರವು ಆತ್ಮನಿರ್ಭರ ಭಾರತಕ್ಕೆ ಉತ್ತೇಜನ ನೀಡಲು '6' ಜಲಾಂತರ್ಗಾಮಿಗಳನ್ನು (ಸಬ್ ಮರೀನ್)ನಿರ್ಮಿಸಲು2ಸಂಸ್ಥೆಗಳಿಗೆಪ್ರಸ್ತಾವನೆಸಲ್ಲಿಸಲುಅವಕಾಶವನ್ನುದೊರಕಿಸಿದೆ.

* ಕೇಂದ್ರ ಸರ್ಕಾರದ ಈ ಸಬ್‌ಮರೀನ್ ನಿರ್ಮಾಣದ ಈ ಯೋಜನೆಯು 40 ಸಾವಿರ ಕೋಟಿ ರೂ. ವೆಚ್ಚದಾಗಿದೆ, ಇತ್ತೀಚಿಗೆ ಕೇಂದ್ರ ಸರ್ಕಾರವು ಈ ಯೋಜನೆಗೆ ಅನುಮೋದನೆ ನೀಡಿದೆ.

* ಜಲಾಂತರ್ಗಾಮಿಗಳ ನಿರ್ಮಾಣದ ಅವಕಾಶವನ್ನು ಮಡ್‌ಗಾಂವ್ ಹಡಗು ನಿರ್ಮಾಣ ಕಟ್ಟೆ (ಎಂಡಿಎಲ್) ಹಾಗೂ ಲಾರ್ಸನ್ ಮತ್ತು ಟೂಬ್ರೋ(ಎಲ್ ಆಯಂಡ್ ಟಿ) ಸಂಸ್ಥೆಗಳಿಗೆ ನೀಡಿದೆ, ಈ ಸಬ್‌ಮರೀನ್‌ಗಳು ಸಹಭಾಗಿತ್ವದಲ್ಲಿ ನಿರ್ಮಿಸಲಾಗುತ್ತದೆಎಂದುತಿಳಿಸಿದ್ದಾರೆ.

## ಟೋಕಿಯೋಒಲಿಂಪಿಕ್ಸ್‌ನಧ್ಯೇಯವಾಕ್ಯಪರಿಷ್ಕರಣೆ




* ಪ್ರಸ್ತುತ ಈ ಬಾರಿ ಟೋಕಿಯೋದಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್'ಗೆ 'ವೇಗವಾಗಿ, ಎತ್ತರಕ್ಕೆ, ಶಕ್ತಿಶಾಲಿಯಾಗಿ' ಎಂಬ ಧ್ಯೇಯವಾಕ್ಯವನ್ನು ಪರಿಷ್ಕರಿಸಲಾಗಿದೆ ಎಂದು ತಿಳಿಸಲಾಗಿತ್ತು, ಇದೀಗ ಈ ಧ್ಯೇಯವಾಕ್ಯಕ್ಕೆ "ಜೊತೆಯಾಗಿ" ಎಂಬ ಮತ್ತೊಂದು ಪದವನ್ನು ಸೇರ್ಪಡೆಮಾಡಿದ್ದಾರೆ, ಈ ಮಾಹಿತಿಯನ್ನು ಇತ್ತೀಚಿಗೆ ನಡೆದ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧಿವೇಶನದಲ್ಲಿ ತಿಳಿಸಿದ್ದಾರೆ.

* ಪ್ರಸ್ತುತ "ವೇಗವಾಗಿ, ಎತ್ತರಕ್ಕೆ, ಶಕ್ತಿಶಾಲಿಯಾಗಿ, ಜೊತೆಯಾಗಿ" ಇದು ಈ ಬಾರಿಯ ಟೋಕಿಯೊ ಒಲಿಂಪಿಕ್ಸ್'ನ ಧ್ಯೇಯವಾಕ್ಯವಾಗಿದೆ.

* ಈ ಬಾರಿಯ ಟೋಕಿಯೊ ಒಲಿಂಪಿಕ್ಸ್ ನ ಧ್ಯೇಯವಾಕ್ಯಕ್ಕೆ ಜೊತೆಯಾಗಿ ಎಂಬ ಪದವನ್ನು ಸೇರಿಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷ ಥಾಮಸ್ ಬಾಕ್ ಅವರು ಏಪ್ರಿಲ್‌ನಲ್ಲಿ ಪ್ರಸ್ತಾವವನ್ನು ಮಾಡಿದ್ದರು, ಸಮಿತಿಯ ಕಾರ್ಯಕಾರಿ ಮಂಡಳಿಯು ಈ ಪ್ರಸ್ತಾವನೆಗೆ ಅನುಮೋದನೆ ನೀಡಿತ್ತು.

* ಈ ಬಾರಿಯ ಧ್ಯೇಯವಾಕ್ಯವನ್ನು, 1894 ರಲ್ಲಿ ನಡೆದ ಒಲಿಂಪಿಕ್ ಚಳವಳಿಯಲ್ಲಿ ಆಧುನಿಕ ಒಲಿಂಪಿಕ್ಸ್‌ನ ಸಂಸ್ಥಾಪಕ ಎಂದು ಪ್ರಸಿದ್ಧಿಯಾಗಿರುವ ಪಿಯರೆ ಡಿ ಕೌಬಾರ್ಟಿನ್ ಅವರ ಮನವಿಯ ಮೇರೆಗೆ ಅಂಗೀಕರಿಸಲಾಗಿದೆಎಂದುತಿಳಿಸಿದ್ದಾರೆ.

## DRDO ದಿಂದ ಬೀಟಾ ಟೈಟಾನಿಯಂ ಮಿಶ್ರ ಲೋಹ ಅಭಿವೃದ್ಧಿ




* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(DRDO) ದೇಶೀಯವಾಗಿ ಬೀಟಾ ಟೈಟಾನಿಯಂ ಮಿಶ್ರಲೋಹವನ್ನು ಅಭಿವೃದ್ಧಿಪಡಿಸಿದೆ.

* DRDO ಅಭಿವೃದ್ಧಿಪಡಿಸಿದ ಈ ಮಿಶ್ರ ಲೋಹವನ್ನು ಏರೋಸ್ಪೇಸ್ ಅಪ್ಲಿಕೇಷನ್‌ಗಳಿಗೆ ಬಳಕೆ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ 15 ಕ್ಕೂ ಹೆಚ್ಚು ಉಕ್ಕಿನ ಘಟಕಗಳನ್ನು ಕೇಂದ್ರ ಸಚಿವಾಲಯದ ಏರೋನಾಟಿಕ್ ಡೆವಲಪ್ ಮೆಂಟ್ ಏಜೆನ್ಸಿ ಗುರುತಿಸಿದೆ, ಹಾಗೂ ಮುಂದಿನ ದಿನಗಳಲ್ಲಿ ಬೀಟಾ ಟೈಟಾನಿಯಂ ಮಿಶ್ರಲೋಹ ತಯಾರಿಕೆಗೆಬದಲಾವಣೆಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬೀಟಾ ಟೈಟಾನಿಯಂ ಮಿಶ್ರಲೋಹವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿದ DRDO'ಗೆ ಅಭಿನಂದನೆ ತಿಳಿಸಿದ್ದಾರೆ.

* ಈ ಬೀಟಾ ಟೈಟಾನಿಯಂ ಮಿಶ್ರಲೋಹ ಅತ್ಯುತ್ತಮ ತುಕ್ಕು ನಿರೋಧಕ ಗುಣ ಹಾಗೂದೀರ್ಘ ಬಾಳಿಕೆಯ ಸಾಮರ್ಥ್ಯ ಹೊಂದಿದೆ, ಅಲ್ಲದೇ ಉಕ್ಕುಗಳಿಗೆ ಹೋಲಿಸಿದರೆ ಈ ಮಿಶ್ರ ಲೋಹವುಉತ್ತಮವಾಗಿದೆ.

## ಚೀನಾದಲ್ಲಿ ಗಂಟೆಗೆ 600 ಕಿಮೀ. ವೇಗದಲ್ಲಿ ಚಲಿಸುವ ರೈಲಿನ ಪರೀಕ್ಷಾರ್ಥಚಾಲನೆ



*ಚೀನಾದೇಶವು ಗಂಟೆಗೆ 600 ಕಿಮೀ. ವೇಗದಲ್ಲಿ ಚಲಿಸುವ ರೈಲನ್ನು ಅಭಿವೃದ್ಧಿ ಪಡಿಸಿದೆ, ಈ ಹೊಸ ಮ್ಯಾಗ್ಲೆವ್ ರೈಲಿನ ಪರೀಕ್ಷಾರ್ಥ ಚಾಲನೆಯನ್ನು ನಡೆಸಲಾಗಿದೆ ಎಂದು ಚೀನಾ ಸರ್ಕಾರಿ ಮಾಧ್ಯಮವು ಮಾಹಿತಿ ನೀಡಿದೆ.

* ಚೀನಾ ದೇಶವು ಈ ರೈಲನ್ನು ಕರಾವಳಿ ನಗರಿ ಕಿಂಗ್ಡೋದಲ್ಲಿ ನಿರ್ಮಾಣ ಮಾಡಿದೆ ಎಂದು ತಿಳಿಸಿದ್ದಾರೆ.

* 'ಲೆವಿಟೇಟ್ಸ್ ಮ್ಯಾಗ್ಲೆವ್ ರೈಲು' ವಿದ್ಯುತ್ ಕಾಂತೀಯ ಬಲದಿಂದ ಚಲಿಸುವ ರೈಲಾಗಿದೆ, ಪ್ರಸ್ತುತ ಚೀನಾದಲ್ಲಿಬಳಕೆಮಾಡುತ್ತಿರುವರೈಲುಗಳಪೈಕಿಗರಿಷ್ಠವೇಗದರೈಲುಇದಾಗಿದೆಎಂದುತಿಳಿಸಿದ್ದಾರೆ.

*ಚೀನಾದೇಶವುಸರಿಸುಮಾರು 2ದಶಕಗಳಿಂದ ಸೀಮಿತ ಪ್ರದೇಶಗಳಲ್ಲಿ ವಿದ್ಯುತ್ ಕಾಂತೀಯ ಬಲದಿಂದ ಚಲಿಸುವ ರೈಲುಗಳನ್ನು ಬಳಸುತ್ತಿದೆ.

## ಕರ್ನಾಟಕದ ರಾಜ್ಯದ GST ಪರಿಹಾರ ಬಾಕಿ ಮೊತ್ತ 12,702 ಕೋಟಿರೂ.




* ಕೇಂದ್ರ ಸರ್ಕಾರವು ಬೇರೆ ಬೇರೆ ರಾಜ್ಯಗಳಿಗೆ ನೀಡಬೇಕಾಗಿರುವ ಜಿಎಸ್‌ಟಿ ಪರಿಹಾರ ಮೊತ್ತದಲ್ಲಿ ಕರ್ನಾಟಕಕ್ಕೆ 12,702 ಕೋಟಿ ರೂ. ಬಾಕಿ ಉಳಿಸಿಕೊಂಡಿದೆ.

* ಕೇಂದ್ರ ಸರ್ಕಾರವು 2020 21 ನೇ ಹಣಕಾಸು ವರ್ಷದ ರಾಜ್ಯಗಳಿಗೆ ನೀಡಬೇಕಾಗಿರುವ GST ಪರಿಹಾರದ ಬಾಕಿ ಮೊತ್ತವು ಒಟ್ಟು 81,179 ಕೋಟಿ ರೂ.ಗಳಷ್ಟಿದೆ, ಇದಲ್ಲದೇ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ಮೇ ಅವಧಿಯಲ್ಲಿನ ಬಾಕಿ ಮೊತ್ತವು 55,345 ಕೋಟಿ ರೂ. ಇದೇ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ವರದಿ ನೀಡಿದ್ದಾರೆ.

* ಈ ಹಿಂದಿನ ಹಣಕಾಸು ವರ್ಷದಲ್ಲಿನ 91 ಸಾವಿರ ಕೋಟಿ ರೂ. GST ಪರಿಹಾರ ಮೊತ್ತವನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* 2020 21 ಕ್ಕೆ ಯಾವ ರಾಜ್ಯಗಳಿಗೆ ಎಷ್ಟು ಬಾಕಿ ಮೊತ್ತ: ಮಹಾರಾಷ್ಟ್ರ: 15,138 ಕೋಟಿ ರೂ. ಕರ್ನಾಟಕ: 7,202 ಕೋಟಿ ರೂ. ಉತ್ತರಪ್ರದೇಶ: 7,109 ಕೋಟಿ ರೂ. ಗುಜರಾತ್: 6,583 ಕೋಟಿ ರೂ. ತಮಿಳುನಾಡು: 6,155 ಕೋಟಿ ರೂ. ದೆಹಲಿ: 5,190 ಕೋಟಿ ರೂ. ಪಶ್ಚಿಮ ಬಂಗಾಳ: 3,911 ಕೋಟಿ ರೂ. ಪಂಜಾಬ್: 3,752ಕೋಟಿ ರೂ.

* 2021 ರ ಏಪ್ರಿಲ್ ಮೇ ಅವಧಿಗೆ ಬಾಕಿ ಮೊತ್ತ: ಮಹಾರಾಷ್ಟ್ರ: 7,995 ಕೋಟಿ ರೂ. ಕರ್ನಾಟಕ:5,500ಕೋಟಿರೂ.ಗುಜರಾತ್:3,603ಕೋಟಿರೂ.

## ದೇಶದ ಮೊದಲ ಹೈಡ್ರೋಜನ್ ಇಂಧನ ಸ್ಥಾವರ ಸ್ಥಾಪಿಸಿದ ಇಂಡಿಯನ್‌ಆಯಿಲ್‌ಕಂಪನಿ



* ಇಂಡಿಯನ್ ಆಯಿಲ್ ಕಂಪನಿಯು ದೇಶದಲ್ಲಿಯೇ ಅತೀ ದೊಡ್ಡ ಸರಕಾರಿ ಸ್ವಾಮ್ಯದ ತೈಲ ಕಂಪನಿಯಾಗಿದೆ. ಇದೀಗ ಈ ಕಂಪನಿಯು ದೇಶದ ಪ್ರಪ್ರಥಮ 'ಹಸುರು ಹೈಡ್ರೋಜನ್' ಇಂಧನ ಘಟಕವನ್ನು ಉತ್ತರ ಪ್ರದೇಶ ರಾಜ್ಯದ ಮಥುರಾದಲ್ಲಿ ಸ್ಥಾಪನೆ ಮಾಡಲಿದೆ.

* ಮುಂದಿನ 10 ವರ್ಷಗಳಲ್ಲಿ ಪೆಟ್ರೋಕೆಮಿಕಲ್‌ಗಳು, ಹೈಡ್ರೋಜನ್ ಮತ್ತು ವಿದ್ಯುತ್ ಚಾಲಿತ ವಾಹನಗಳ ಯುಗ ಆರಂಭವಾಗಲಿದೆ ಈ ಕಾರಣದಿಂದ ನಿರ್ಧಾರ ತಗೆದುಕೊಳ್ಳಲಾಗುತ್ತಿದೆ ಎಂದು ಅಧ್ಯಕ್ಷ ಶ್ರೀಕಾಂತ್ ಮಾಧವವೈದ್ಯಅವರುಹೇಳಿದ್ದಾರೆ.

## ಅಮೇರಿಕವಿದೇಶಾಂಗಸಚಿವಭಾರತಕ್ಕೆಭೇಟಿ



* ಇದೇ ಜುಲೈ 27 ರಂದು ಅಮೇರಿಕದ ವಿದೇಶಾಂಗ ಸಚಿವರಾದ ಆಂಟನಿ ಬ್ಲಿಂಕನ್ ಅವರು ಭಾರತಕ್ಕೆ ಆಗಮಿಸಲಿದ್ದಾರೆ, ಹಾಗೂ ಇಲ್ಲಿ ಭಾರತೀಯ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರನ್ನು ಭೇಟಿಯಾಗಲಿದ್ದಾರೆ, ಇದರ ಜೊತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಭೇಟಿಯಾಗುವ ಸಾಧ್ಯತೆಗಳಿವೆ ಎಂದು ಬ್ಲಿಂಕನ್ ಅವರು ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

* ಭಾರತ, ಜಪಾನ್, ಆಸ್ಟ್ರೇಲಿಯಾ ಮತ್ತು ಅಮೇರಿಕ ನಾಯಕರ ಶೃಂಗಸಭೆಯು ಈ ವರ್ಷದ ಕೊನೆಯಲ್ಲಿ ವಾಷಿಂಗ್ಟನ್‌ನಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ, ಈ ಹಿನ್ನಲೆಯಿಂದಾಗಿ ಬ್ಲಿಂಕನ್ ಅವರು ಭಾರತಕ್ಕೆಭೇಟಿನೀಡುತ್ತಿದ್ದಾರೆಎಂದುತಿಳಿಸಲಾಗಿದೆ.

## ವಿಶ್ವಚೆಸ್‌ದಿನಆಚರಣೆ



* ಪ್ರತಿ ವರ್ಷವೂ ಜುಲೈ. 20 ರಂದು ಅಂತರರಾಷ್ಟ್ರೀಯ ಚೆಸ್ ದಿನವನ್ನು ಆಚರಣೆ ಮಾಡಲಾಗುತ್ತದೆ.

* 1924 ರಲ್ಲಿ ಅಂತರರಾಷ್ಟ್ರೀಯ ಚೆಸ್ ಫೆಡರೇಶನ್ ಈ ದಿನವನ್ನು ಪ್ಯಾರಿಸ್'ನಲ್ಲಿ ಸ್ಥಾಪನೆ ದಿನಾಂಕವನ್ನು ಸೂಚಿಸಿದೆ.

* ಭಾರತದಲ್ಲಿ ಚೆಸ್'ನ್ನು 5ನೇ ಶತಮಾನದಲ್ಲಿ ಕಂಡುಹಿಡಿಯಲಾಗಿದೆ, ಹಾಗೂ ಇದಕ್ಕೆ 'ಚತುರಂಗ' ಎಂದು ನಾಮಕರಣ ಮಾಡಲಾಯಿತು, ಈ ಚೆಸ್ ಆಟವು ಜಾಗತಿಕವಾಗಿ ಆಡುವ ಅತ್ಯಂತ ಜನಪ್ರಿಯ ಆಟವಾಗಿದೆ.

* ಈ ವರ್ಷ FIDE'ಯ ವಿಶ್ವ ಚೆಸ್ ದಿನದ 97 ನೇ ವಾರ್ಷಿಕೋತ್ಸವವನ್ನು ಸೂಚಿಸಲಿದೆ, ಪ್ಯಾರಿಸ್'ನಲ್ಲಿ ನಡೆದಿರುವ 8ನೇ ಬೇಸಿಗೆ ಒಲಿಂಪಿಕ್ ಕ್ರೀಡಾಕೂಟದಲ್ಲಿ 1924 ರ ಜುಲೈ 20 ರಂದು FIDE'ನ್ನು ಸ್ಥಾಪನೆ ಮಾಡಲಾಗಿದೆ.

* 1966 ರ ಜುಲೈ. 20 ರಂದು ಅಂತರರಾಷ್ಟ್ರೀಯ ಚೆಸ್ ದಿನ ಆರಂಭವಾಗಿದೆ, ಹಾಗೂ 2019 ರ ಡಿಸೆಂಬರ್. 12 ರಂದು ಯುಎನ್ ಸಾಮಾನ್ಯ ಸಭೆಯು ಜುಲೈ 20 ನ್ನು ವಿಶ್ವ ಚೆಸ್ ದಿನವೆಂದು ಘೋಷಿಸಿತ್ತು.

## IIT ರೋಪರ್ ನಿಂದ ಮೊದಲ ಆಕ್ಸಿಜನ್ 'ಆಮ್ಲೆಕ್ಸ್' ಸಾಧನ ಅಭಿವೃದ್ಧಿ



* ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಪಂಜಾಬ್ ರಾಜ್ಯದ ರೋಪರ್ IIT ಯ ಸಂಶೋಧಕರು ಆಮ್ಲಜನಕ ಪಡಿತರ ಸಾಧನ 'ಆಮ್ಲೆಕ್ಸ್'ನ್ನು ಅಭಿವೃದ್ಧಿಪಡಿಸಿದ್ದಾರೆ.

* ಈ ಆಮ್ಲಜನಕ ಸಾಧನವು ಸಿಲಿಂಡರ್ ಹಾಗೂ ರೋಗಿಯಿಂದ ಆಮ್ಲಜನಕದ ಹರಿವನ್ನು ನಿಯಂತ್ರಿಸುವ ಮೂಲಕ ಆಮ್ಲಜನಕ ವ್ಯರ್ಥವಾಗುವದನ್ನು ತಡೆಯುವಲ್ಲಿ ಸಹಾಯಕಾರಿಯಾಗಲಿದೆ.

* ಈ ಆಮ್ಲಜನಕದ 'ಆಮ್ಲೆಕ್ಸ್' ಸಾಧನದಿಂದ ಸಿಲಿಂಡರ್'ನಲ್ಲಿನ ಆಮ್ಲಜನಕ ಉಳಿತಾಯವಾಗಲಿದೆ, ಹಾಗೂ ರೋಗಿ ಹಾಗೂ ಆಸ್ಪತ್ರೆಗಳಿಗೆಈಸಾಧನವುಉಪಯೋಗವಾಗಲಿದೆಎಂದುತಿಳಿಸಿದ್ದಾರೆ.

# 22-07-2021

## ಆಸ್ಟ್ರೇಲಿಯಾದಬ್ರಿಸ್ಬೇನ್‌ನಲ್ಲಿ2032ರಒಲಿಂಪಿಕ್ಸ್




* ಪ್ರಸ್ತುತ ಆಸ್ಟ್ರೇಲಿಯಾದ ಬ್ರಿಸ್ಬೇನ್ ನಗರವು 2032 ರ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸಲಿದೆ, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸಭೆಯಲ್ಲಿ ಈ ಆಯ್ಕೆಯ ಮಾಹಿತಿಯನ್ನು ಪ್ರಕಟಿಸಿದೆ.

* ಆಸ್ಟ್ರೇಲಿಯಾ ಸುಮಾರು 32 ವರ್ಷಗಳ ಬಳಿಕ ಒಲಿಂಪಿಕ್ಸ್ ಕ್ರೀಡಾಕೂಟವನ್ನು ನಡೆಸುತ್ತಿದೆ, ಈ ಹಿಂದೆ 1956 ರಲ್ಲಿ ಮೆಲ್ಬರ್ನ್‌ನಲ್ಲಿ ಹಾಗೂ 2000 ರಲ್ಲಿ ಸಿಡ್ನಿಯಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟ ನಡೆಸಲಾಗಿತ್ತು.

*ಆಸ್ಟ್ರೇಲಿಯಾದ ಬ್ರಿಸ್ಬೇನ್ ನಗರ 72 5 ಮತಗಳಿಂದ ಒಲಿಂಪಿಕ್ಸ್ ಬಿಡ್'ನ್ನು ಪಡೆದುಕೊಂಡಿದೆ, ಎಂದು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ತಿಳಿಸಿದ್ದಾರೆ.

* 2024 ರ ಒಲಿಂಪಿಕ್ಸ್ ನ ಕ್ರೀಡಾಕೂಟವನ್ನು ಪ್ಯಾರಿಸ್ ಆಯೋಜಿಸಲಿದೆ, ಹಾಗೂ 2028 ರ ಒಲಿಂಪಿಕ್ಸ್'ನ ಕ್ರೀಡಾಕೂಟವನ್ನು ಲಾಸ್ ಎಂಜಲೀಸ್ ಆಯೋಜಿಸಲಿದೆ.

* 2032 ರ ಒಲಿಂಪಿಕ್ಸ್ ನ ಕ್ರೀಡಾಕೂಟದ ಆತಿಥ್ಯವನ್ನು ಆಸ್ಟ್ರೇಲಿಯಾದ ಬ್ರಿಸ್ಬೇನ್ ನಗರವು ಆಯೋಜಿಸಲಿದೆ.

* ಈ ಹಿಂದೆ 1900 ರಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್‌ನ್ನುಆಡಿಸಲಾಗಿತ್ತು.

## ಭಾರತೀಯ BSF ಮತ್ತು ಪಾಕ್ ಸೈನಿಕರಿಂದ 2019 ರ ನಂತರ ಮೊದಲಬಾರಿಗೆಸಿಹಿತಿನಿಸುವಿನಿಮಯ



* ಪ್ರಸ್ತುತ ಭಾರತೀಯ ಗಡಿ ಭದ್ರತಾ ಪಡೆ(BSF) ಹಾಗೂ ಪಾಕಿಸ್ತಾನ ಸೈನಿಕರು 2019 ರ ನಂತರ ಇದೇ ಮೊದಲ ಬಾರಿಗೆ ಬಕ್ರಿದ್ ಹಬ್ಬದ ಪ್ರಯುಕ್ತ ಗಡಿ ಭಾಗಗಳಲ್ಲಿ ಸಿಹಿತಿಂಡಿಗಳನ್ನು ಪರಸ್ಪರ ಹಂಚಿಕೊಂಡರು.

* ಈ ಹಿಂದೆ ನರೇಂದ್ರ ಮೋದಿ ಆಡಳಿತದ ಕೇಂದ್ರ ಸರ್ಕಾರವು 2019 ರ ಆಗಸ್ಟ್ 5 ರಂದು ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿರುವ ವಿಶೇಷ ಸ್ಥಾನಮಾನವನ್ನು ಆರ್ಟಿಕಲ್ 370 ರದ್ದುಪಡಿಸಿತ್ತು, ಆ ಸಮಯದಿಂದ ಪಾಕಿಸ್ತಾನ ರಾಷ್ಟ್ರದ ಸೈನಿಕರು ವಿನಿಮಯ ಮಾಡಿಕೊಳ್ಳುವದನ್ನು ನಿಲ್ಲಿಸಿದ್ದರು.

* ಪ್ರಸ್ತುತ ಭಾರತೀಯ ರಾಜಸ್ಥಾನ ಹಾಗೂ ಪಂಜಾಬ್‌ನ ಅಮೃತಸರ ಜಿಲ್ಲೆಯ ಜೆಸಿಪಿ(ಜಂಟಿ ಚೆಕ್ ಪೋಸ್ಟ್) ಹಾಗೂ ಪಾಕಿಸ್ತಾನದ ವಾಗಾ ಗಡಿ ಪ್ರದೇಶದಲ್ಲಿ ಈ ಬಕ್ರಿದ್ ಹಬ್ಬದ ಸಂದರ್ಭದಲ್ಲಿ BSF ಹಾಗೂ ಪಾಕಿಸ್ತಾನ ಸೈನಿಕರ ಮಧ್ಯೆ ಸಿಹಿತಿಂಡಿಗಳ ವಿನಿಮಯ ನಡೆದಿದೆ ಎಂದು ಬಿಎಸ್‌ಎಫ್ ಹಿರಿಯಅಧಿಕಾರಿಮಾಹಿತಿನೀಡಿದರು.

## ದೇಶೀಯವಾಗಿ ನಿರ್ಮಿತ ಮ್ಯಾನ್ ಪೋರ್ಟಬಲ್ ಆಂಟಿ ಟ್ಯಾಂಕ್ ಗೈಡೆಡ್‌ಕ್ಷಿಪಣಿಯಪರೀಕ್ಷೆಯಶಸ್ವಿ



* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಆತ್ಮನಿರ್ಭರ್ ಭಾರತ' ಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಹಾಗೂ ಭಾರತೀಯ ಸೇನೆಯನ್ನು ಮತ್ತಷ್ಟು ಬಲಪಡಿಸುವದರ ಜೊತೆಗೆ ದೇಶೀಯವಾಗಿ ಮ್ಯಾನ್ ಪೋರ್ಟಬಲ್ ಆಂಟಿ ಟ್ಯಾಂಕ್ ಗೈಡೆಡ್ ಕ್ಷಿಪಣಿಯನ್ನ ಅಭಿವೃದ್ಧಿಪಡಿಸಿ, ಅದರ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ.

* ಪ್ರಸ್ತುತ ಈ ಕ್ಷಿಪಣಿಯನ್ನ ಥರ್ಮಲ್ ಸೈಟ್ ನೊಂದಿಗೆ ಸಂಯೋಜಿಸಲಾದ ಮ್ಯಾನ್ ಪೋರ್ಟಬಲ್ ಲಾಂಚರ್ ಬಳಸಿ ಉಡಾವಣೆ ಮಾಡಿದ್ದಾರೆ, ಹಾಗೂ ಈ ಕ್ಷಿಪಣಿಯು ನೇರ ದಾಳಿಯ ಗುರಿಯನ್ನ ನಿಖರವಾಗಿ ನಾಶಪಡಿಸಿದೆ ಎಂದು ತಿಳಿಸಿದ್ದಾರೆ.

* ಈ ಮ್ಯಾನ್ ಪೋರ್ಟಬಲ್ ಕ್ಷಿಪಣಿಯು 15 KG ಗಿಂತ ಕಡಿಮೆ ಹೊಂದಿದೆ, ಹಾಗೂ ಗರಿಷ್ಠ 2.5 ಕಿ.ಮೀ. ವ್ಯಾಪ್ತಿಯನ್ನು ತಲುಪುವ ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದ್ದಾರೆ.

## 'ತೃತೀಯ ಲಿಂಗಿ'ಗಳಿಗೆ ಶೇ.1 ರಷ್ಟು ಮೀಸಲಾತಿ ನೀಡಿದ ಕರ್ನಾಟಕರಾಜ್ಯ



* ಪ್ರಸ್ತುತ ಕರ್ನಾಟಕ ರಾಜ್ಯವು ತನ್ನ ಎಲ್ಲ ಸರ್ಕಾರಿ ಸೇವೆಗಳಲ್ಲಿ ಶೇ.1ರಷ್ಟು ಮೀಸಲಾತಿಯನ್ನು 'ತೃತೀಯ ಲಿಂಗಿ'ಸಮುದಾಯಕ್ಕೆ ನೀಡಿದೆ.

* ಪ್ರಸ್ತುತ 'ತೃತೀಯ ಲಿಂಗಿ'ಗಳಿಗೆ ಮೀಸಲಾತಿಯನ್ನು ನೀಡಿದ ಕರ್ನಾಟಕವು ದೇಶದ ಮೊದಲ ರಾಜ್ಯವಾಗಿದೆ, 1977 ರ ಕರ್ನಾಟಕ ನಾಗರಿಕ ಸೇವಾ ನೇಮಕಾತಿ ನಿಯಮದ ತಿದ್ದುಪಡಿ ಮಾಡಿದ ನಂತರ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.

* ಈ ಹಿಂದೆ ಜುಲೈ. 6 ರಂದು ಹೊರಡಿಸಲಾಗಿರುವ ಅಂತಿಮ ಅಧಿಸೂಚನೆಯು ಪ್ರಕಾರ ಎಲ್ಲಾ ಸಾಮಾನ್ಯ ಮತ್ತು ತೃತೀಯ ಲಿಂಗದ ಮೀಸಲು ವರ್ಗಗಳಲ್ಲಿ ಶೇ.1 ರಷ್ಟು ಮೀಸಲಾತಿಯನ್ನ ನಿರ್ದಿಷ್ಟ ಪಡಿಸಲಾಗುತ್ತದೆ, ಹಾಗೂ ರಾಜ್ಯದ ಸರ್ಕಾರಿ ಉದ್ಯೋಗಗಳಿಗೆ ಅರ್ಜಿಗಳನ್ನ ಆಹ್ವಾನಿಸುವ ಅಧಿಸೂಚನೆ ಪ್ರಕಟವಾದ ಎಲ್ಲ ಸಂಧರ್ಭದಲ್ಲಿ ತೃತೀಯ ಲಿಂಗದ ಅಂಕಣವನ್ನ ಪುರುಷ ಮತ್ತು ಮಹಿಳಾ ಅಂಕಣಗಳೊಂದಿಗೆಸೇರಿಸಬೇಕುಎಂದುಅಧಿಸೂಚನೆಹೊಡಿಸಲಾಗಿದೆ.

## ನೂತನಪ್ರಧಾನಿಯಾಗಿಹೆನ್ರಿಅಧಿಕಾರಸ್ವೀಕಾರ



* ಪ್ರಸ್ತುತ ಏರಿಯಲ್ ಹೆನ್ರಿ ಅವರು ಹೈಟಿ ದೇಶದ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕಾರ ಮಾಡಿದರು.

* ಹೆನ್ರಿ ಅವರು ಈ ಮೊದಲು ಸಂಪುಟದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

* ಈ ಹಿಂದಿನ ಹೈಟಿ ದೇಶದ ಪ್ರಧಾನಿ ಜೊವೆನೆಲ್ ಮೊಯಿಸ್ ಅವರನ್ನು ಜುಲೈ 7 ರಂದು ಹತ್ಯೆ ಮಾಡಲಾಗಿತ್ತು, ನಂತರ ಇಲ್ಲಿಯವರೆಗೆ ಕ್ಲಾಡ್ ಜೋಸೆಫ್ ಅವರು ಹಂಗಾಮಿ ಪ್ರಧಾನಿಯಾಗಿ ಅಧಿಕಾರವನ್ನು ನಡೆಸುತಿದ್ದರು.

## ದೂರದರ್ಶನ ಹಾಗೂ ಡಿಡಿ ಸ್ಪೋರ್ಟ್ಸ್ ನಲ್ಲಿ ಟೋಕಿಯೊ ಒಲಿಂಪಿಕ್ಸ್




* ಈ ಬಾರಿ ಟೋಕಿಯೊದಲ್ಲಿ ನಡೆಯುವ ಒಲಿಂಪಿಕ್ಸ್ ನ ಕ್ರೀಡೆಗಳು ಡಿಡಿ ಸ್ಪೋರ್ಟ್ಸ್'ನಲ್ಲಿ ನೇರ ಪ್ರಸಾರಗಳಿವೆ, ಇದರ ಜೊತೆಯಲ್ಲಿ ದೂರದರ್ಶನ ಹಾಗೂ ಆಲ್ ಇಂಡಿಯಾ ರೇಡಿಯೋದಲ್ಲಿ ಒಲಿಂಪಿಕ್ಸ್ ನ ವಿಶೇಷ ಕಾರ್ಯಕ್ರಮಗಳು ಪ್ರಸಾರವಾಗಲಿವೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೇಳಿಕೆ ನೀಡಿದೆ.

* ಪ್ರಸ್ತುತ ಭಾರತವು ಪಾಲ್ಗೊಳ್ಳುವ ಎಲ್ಲ ಕ್ರೀಡಾ ಸ್ಪರ್ಧೆಗಳ ನೇರ ಪ್ರಸಾರವನ್ನು ಬೆಳಗ್ಗೆ 5 ರಿಂದ ಸಂಜೆ 7 ಗಂಟೆ ವರೆಗೆ ಡಿಡಿ ಸ್ಪೋರ್ಟ್ಸ್'ನಲ್ಲಿ ವೀಕ್ಷಿಸಲು ಲಭ್ಯವಿರಲಿವೆ.

### ಉಚಿತವೈಫೈನೀಡಲುಸಿದ್ದವಾದಉತ್ತರಪ್ರದೇಶಸರ್ಕಾರ



* ಉತ್ತರ ಪ್ರದೇಶ ರಾಜ್ಯ ಸರ್ಕಾರವು ರಾಜ್ಯದ 17 ನಗರಗಳ ಪೈಕಿ 217 ಸ್ಥಳಗಳಲ್ಲಿ ಉಚಿತ ವೈಫೈ ನೀಡಲು ಮುಂದಾಗಿದೆ, ಕೆಲವೇ ತಿಂಗಳುಗಳಲ್ಲಿ ಉತ್ತರ ಪ್ರದೇಶ ರಾಜ್ಯದಲ್ಲಿ ಚುನಾವಣೆಗಳು ನಡೆಯಲಿವೆ ಈ ಕಾರಣದಿಂದ ವ್ಯವಸ್ಥೆಯನ್ನು ಆರಂಭಿಸಲು ಸಿದ್ಧವಾಗಿದೆ.

* ಪ್ರಸ್ತುತ ಉತ್ತರ ಪ್ರದೇಶ ರಾಜ್ಯದ ಲಖನೌ, ಕಾನ್ಪುರ, ಆಗ್ರಾ, ಆಲಿಗರ್, ವಾರಣಾಸಿ, ಪ್ರಯಾಗ್ ರಾಜ್, ಝಾನ್ಸಿ, ಬರೇಲಿ, ಸಹರನ್ಪುರ, ಮೊರಾದಾಬಾದ್, ಗೋರಕ್ಪುರ, ಅಯೋಧ್ಯೆ, ಮೀರತ್,ಗಾಜಿಯಾಬಾದ್,ಈಎಲ್ಲನಗರಗಳಲ್ಲಿಉಚಿತವೈಫೈವ್ಯವಸ್ಥೆಯನ್ನುಜನರಿಗೆಒದಗಿಸಿದೆ.

### ಲಿಥುವೇನಿಯಾದಲ್ಲಿತೈವಾನ್‌ನಮೊದಲಕಚೇರಿ



* ಪ್ರಸ್ತುತ ತೈವಾನ್ ನ ಸರ್ಕಾರವು ಯುರೋಪಿನ, ಬಾಲ್ಟಿಕ್ ರಾಷ್ಟ್ರವಾದ ಲಿಥುವೇನಿಯಾದಲ್ಲಿ 'ತೈವಾನ್' ಎಂಬ ಹೆಸರನ್ನು ಬಳಸಿಕೊಂಡು ತನ್ನ ಮೊದಲ ಕಚೇರಿಯನ್ನು ಸ್ಥಾಪಿಸಲಿದೆ.

* ಇತ್ತೀಚಿಗೆ ಬೀಜಿಂಗ್‌ನಿಂದ ಹೆಚ್ಚುತ್ತಿರುವ ಒತ್ತಡದಿಂದ ತೈವಾನ್ ಸರ್ಕಾರವು ಜಗತ್ತಿನಾದ್ಯಂತ ತನ್ನ ರಾಜತಾಂತ್ರಿಕಯನ್ನು ಬಲಪಡಿಸಲು ಈ ನಿರ್ಧಾರವನ್ನು ಕೈಗೊಂಡಿದೆ, ಈ ಮಾಹಿತಿಯನ್ನು ತೈವಾನ್‌ನ ವಿದೇಶಾಂಗ ಸಚಿವ ಜೋಸೆಫ್ ಅವರು ತಿಳಿಸಿದ್ದಾರೆ.

* ತೈವಾನ್ ಪೂರ್ವ ಏಷ್ಯಾದ ದೇಶವಾಗಿದೆ, ಹಾಗೂ ತೈಪೆ ಇದರ ರಾಜಧಾನಿಯಾಗಿದೆ.

* ಪ್ರಸ್ತುತ ಚೀನಾ ದೇಶವು ತನ್ನ ಏಕ ನೀತಿಯ ಅಡಿಯಲ್ಲಿ ತೈವಾನ್ ಚೀನಾದ ಪ್ರಾಂತ್ಯವೆಂದು ಹೇಳಿಕೊಂಡಿದೆ, ಹಾಗೂ ಅಧಿಕೃತವಾಗಿ ಚೀನಾ ಗಣರಾಜ್ಯ ಎಂದು ಕರೆಯುತ್ತಾರೆ.

### 11ನೇಮೆಕಾಂಗ್ ಗಂಗಾಸಹಕಾರಸಭೆ



* ಪ್ರಸ್ತುತಇದೇ2021ರಜುಲೈ.21ರಂದು,11ನೇಮೆಕಾಂಗ್ ಗಂಗಾಸಹಕಾರಸಭೆಜರುಗಿದೆ.


* ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರು ಕೊರೊನಾವೈರಸ್ ಸಾಂಕ್ರಾಮಿಕ ರೋಗವನ್ನು ಪರಿಣಾಮಕಾರಿಯಾಗಿ ಎದುರಿಸಲು "ಸಾಮೂಹಿಕ ಮತ್ತು ಸಹಕಾರಿ" ಪ್ರತಿಕ್ರಿಯೆಗೆ ಈ ಸಭೆಯಲ್ಲಿ ವಿನಂತಿಸಿದ್ದಾರೆ, ಹಾಗೂ ಈ ಸಭೆಯಲ್ಲಿ ಆರ್ಥಿಕ, ಡಿಜಿಟಲ್ ಮತ್ತು ಜನರಿಂದ ಜನರ ಸಂಪರ್ಕದ ಮೂಲಕ ಈ ಪ್ರದೇಶದಲ್ಲಿ ಉತ್ತಮ ಸಂಪರ್ಕವನ್ನು ಉತ್ತೇಜಿಸಲು ಭಾರತ ಇಚ್ಛಿಸಿದೆ ಎಂದು ತಿಳಿಸಿದ್ದಾರೆ.

* ಭಾರತವು ಮೆಕಾಂಗ್ ದೇಶಗಳೊಂದಿಗೆ ಸಹಕಾರದ ಹೊಸ ಕ್ಷೇತ್ರಗಳನ್ನು ಗುರುತಿಸಲು ಇಚ್ಛಿಸಿದೆ, ಇದರಿಂದಾಗಿ ಎರಡು ದೇಶಗಳ ಸಹಭಾಗಿತ್ವವನ್ನು ಉತ್ತಮವಾಗಲಿದೆ ಎಂದಿದ್ದಾರೆ.

* ಈ ಹಿಂದೆ 2000 ರಲ್ಲಿ ಪ್ರವಾಸೋದ್ಯಮ, ಸಂಪರ್ಕ ಮತ್ತು ಸಂಸ್ಕೃತಿ ಮತ್ತು ಇತರ ಶ್ರೇಣಿಯ ಕ್ಷೇತ್ರಗಳಲ್ಲಿ ಸಹಕಾರವನ್ನು ಉತ್ತೇಜಿಸಲು ಎಂಜಿಸಿ ಉಪಕ್ರಮವನ್ನು ಆರಂಭಿಸಿದ್ದಾರೆ.

* 2000 ರಲ್ಲಿ ಆರಂಭಿಸಿರುವ ಈ ಎಂಜಿಸಿ ಉಪಕ್ರಮವು '6' ದೇಶಗಳನ್ನು ಒಳಗೊಂಡಿದೆ, ಅವುಗಳು: ಭಾರತ, ಮ್ಯಾನ್ಮಾರ್, ಕಾಂಬೋಡಿಯಾ, ಲಾವೋಸ್, ಥೈಲ್ಯಾಂಡ್ ಮತ್ತು ವಿಯೆಟ್ನಾಂದೇಶಗಳು.

### ಆಂಧ್ರಪ್ರದೇಶದ ಮೂರು ಸ್ಮಾರಕಗಳನ್ನು ಆದರ್ಶ ಸ್ಮಾರಕ್ ಎಂದು ಗುರುತಿಸಲಾದೆ




* ಆಂಧ್ರಪ್ರದೇಶ ರಾಜ್ಯದ ಮೂರು ಸ್ಮಾರಕಗಳನ್ನು ಆದರ್ಶ ಸ್ಮಾರಕ್ ಯೋಜನೆ ಅಡಿಯಲ್ಲಿ ಗುರುತಿಸಲಾಗಿದೆ, ಹಾಗೂ ಈ ಸ್ಮಾರಕಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವದು ಹಾಗೂ ಸ್ಮಾರಕಗಳನ್ನು ಪ್ರವಾಸಿ ತಾಣಗಳಾಗಿ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಕೇಂದ್ರ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಅಭಿವೃದ್ಧಿ ಸಚಿವರಾದ ಜಿ ಕಿಶನ್ ರೆಡ್ಡಿ ಅವರು ಈ ಆದರ್ಶ ಸ್ಮಾರಕ್ ಯೋಜನೆಯನ್ನು ಪ್ರಕಟಿಸಿದ್ದಾರೆ.

* ಪ್ರಸ್ತುತ ಶ್ರೀಕಾಕುಲಂನ ಸಾಲಿಹುಂಡಂನಲ್ಲಿನ ಬೌದ್ಧ ಅವಶೇಷಗಳು, ಗುಂಟೂರಿನ ನಾಗಾರ್ಜುನಕೊಂಡ ಸ್ಮಾರಕಗಳು ಹಾಗೂ ಅನಂತಪುರದ ವೀರಭದ್ರ ದೇವಸ್ಥಾನಗಳನ್ನು ಆದರ್ಶ ಸ್ಮಾರಕ್ ಯೋಜನೆ ಅಡಿಯಲ್ಲಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* 2014 ರಲ್ಲಿ ಆದರ್ಶ ಸ್ಮಾರಕ್ ಯೋಜನೆಯನ್ನು ಸಂಸ್ಕೃತಿ ಸಚಿವಾಲಯವು ಆರಂಭಿಸಿದೆ, ಈ ಯೋಜನೆ ಅಡಿಯಲ್ಲಿ ದೇಶದಲ್ಲಿನ 100 ಸ್ಮಾರಕಗಳನ್ನು ನಿರ್ವಹಣೆ ಹಾಗೂ ಅಭಿವೃದ್ಧಿಪಡಿಸಲುಕೈಗೊಂಡಿರುವಯೋಜನೆಇದಾಗಿದೆ.

## 23-07-2021

### ಶೀಘ್ರವೇ'ಆರ್‌ಬಿಐ'ನಿಂದಡಿಜಿಟಲ್‌ಕರೆನ್ಸಿ



* ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್ (RBI) ಡಿಜಿಟಲ್ ಕರೆನ್ಸಿಯ ಸಗಟು ಮತ್ತು ಚಿಲ್ಲರೆ ವ್ಯಾಪಾರ

ವಲಯಗಳಿಗೆ ಶೀಘ್ರವಾಗಿ ಬದಲಾವಣೆಯಾಗಲಿದೆ, RBI ಹಂತ ಹಂತವಾಗಿ ಚಲಾವಣೆ ತರಲು ಸಕಲಸಿದ್ಧತೆಗಳನ್ನು ಕೈಗೊಳ್ಳುತ್ತಿದೆ ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರವಿಶಂಕರ್ ಹೇಳಿದರು.

* RBI ಅಲ್ಲದೇ ವಿಶ್ವದ ಕೆಲ ಕೇಂದ್ರೀಯ ಬ್ಯಾಂಕ್‌ಗಳು ತಮ್ಮದೇ ಆಗಿರುವ ಡಿಜಿಟಲ್ ಕರೆನ್ಸಿಯನ್ನು ರೂಪಿಸಿ ಕೊಳ್ಳುತ್ತಿವೆ ಎಂದು ತಿಳಿಸಿದ್ದಾರೆ, ಎಂದೂ ಅವರು ಹೇಳಿದ್ದಾರೆ.

* ಪ್ರಸ್ತುತ ಕೇಂದ್ರೀಯ ಬ್ಯಾಂಕ್‌ಗಳ ವರ್ಚುವಲ್ ಕರೆನ್ಸಿಗಳ ಮೌಲ್ಯದಲ್ಲಿ ಭಾರಿ ಅಸ್ಥಿರತೆ ಕಾಣುವ ಹಿನ್ನಲೆಯಿಂದ ಗ್ರಾಹಕರನ್ನು ರಕ್ಷಿಸಲು ಡಿಜಿಟಲ್ ಕರೆನ್ಸಿ ಹೊಂದುವ ಅಗತ್ಯವಿದೇ ಎಂದು ಆರ್‌ಬಿಐ ಡೆಪ್ಯುಟಿಗವರ್ನರ್‌ಟಿ.ರವಿಶಂಕರ್‌ತಿಳಿಸಿದ್ದಾರೆ.

## ಕೇಂದ್ರ ಸಂಪುಟದಲ್ಲಿ ಲಡಾಖ್‌ನಲ್ಲಿ ಕೇಂದ್ರೀಯ ವಿವಿ ಸ್ಥಾಪನೆಗೆ ಅನುಮೋದನೆ



* ಭಾರತೀಯ ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯದ ಸ್ಥಾಪನೆಗೆ ಕೇಂದ್ರ ಸಂಪುಟವು ಅನುಮತಿಯನ್ನು ನೀಡಿದೆ, ಈ ವಿಶ್ವವಿದ್ಯಾಲಯವು ಸುಮಾರು 750 ಕೋಟಿ ರೂ. ವೆಚ್ಚದಲ್ಲಿ ಸ್ಥಾಪನೆಯಾಗಲಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ ಠಾಕೂರ್ ತಿಳಿಸಿದ್ದಾರೆ.

## ಪೆಗಾಸಸ್ ಸಾಫ್ಟ್‌ವೇರ್ ತಯಾರಕ ಎನ್‌ಎಸ್‌ಒ ಪರಿಶೀಲಿಸಲು ಆಯೋಗ ನೇಮಿಸಿದಇಸ್ರೇಲ್




* ಇತ್ತೀಚಿಗೆ ಕೆಲವು ದಿನಗಳಿಂದ ಸುದ್ದಿಯಲ್ಲಿರುವ 'ಪೆಗಾಸಸ್' ಎನ್ನುವದು ಗೂಢಚಾರ ಕುತಂತ್ರವಾಶವಾಗಿದೆ, ಹಾಗೂ ಇದೊಂದು ಇಸ್ರೇಲ್ ಮೂಲದ NSO ಸಂಸ್ಥೆ ಯಾಗಿದೆ.

* ಪ್ರಸ್ತುತ ಇಸ್ರೇಲ್ ದೇಶವು ಎನ್‌ಎಸ್‌ಒ ಗ್ರೂಪ್'ನ ವಿವಾದಾತ್ಮಕ ಪೆಗಾಸಸ್ ಮೊಬೈಲ್ ಬೇಹುಗಾರಿಕೆ ಸಾಫ್ಟ್ ವೇರ್ ದುರುಪಯೋಗ ಮಾಡಿಕೊಳ್ಳಗಿದೆ ಎಂಬ ಆರೋಪಗಳನ್ನು ಪರಿಶೀಲನೇ ಮಾಡಲು ಆಯೋಗವನ್ನು ರಚಿಸಿದೆ ಎಂದು ಸಂಸತ್ತಿನ ವಿದೇಶಾಂಗ ಮತ್ತು ರಕ್ಷಣಾ ಸಮಿತಿಯ ಮುಖ್ಯಸ್ಥರು ತಿಳಿಸಿದ್ದಾರೆ.

* ಪ್ರಸ್ತುತ ರಕ್ಷಣೆಗೆ ಸೇರಿದಂತೆ ಕೆಲ ಗುಂಪುಗಳನ್ನು ಒಳಗೊಂಡ ವಿಮರ್ಶೆ ಆಯೋಗವನ್ನು ನೇಮಿಸಲಾಗಿದೆ' ಎಂದು ಶಾಸಕ ರಾಮ್ ಬೆನ್ ಬರಾಕ್ ಆರ್ಮಿ ರೇಡಿಯೊಗೆ ಮಾಹಿತಿಯನ್ನು ನೀಡಿದ್ದಾರೆ.

* ಇದೀಗ ದೇಶದ 14 ಮುಖ್ಯಸ್ಥರ ಮೇಲೆ ಅಂದರೆ ಪತ್ರಕರ್ತರು, ಮಾನವ ಹಕ್ಕುಗಳ ಹೋರಾಟಗಾರರು ಹಾಗೂ ಸಾಮೂಹಿಕ ಬೇಹುಗಾರಿಕೆ ಪೆಗಾಸಸ್'ನ್ನು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

## ಟೋಕಿಯೋಒಲಿಂಪಿಕ್ಸ್‌ಗೆ4ಹೊಸಕ್ರೀಡೆಸೇರ್ಪಡೆ



* ಪ್ರಸ್ತುತ ಜಪಾನ್'ನ ಟೋಕಿಯೋದಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ನಲ್ಲಿ 4 ಹೊಸ ಕ್ರೀಡೆಗಳನ್ನು ಸೇರ್ಪಡೆಮಾಡಲಾಗುತ್ತಿದೆ.

* ಪ್ರಸ್ತುತ ಜಪಾನ್ ರಾಷ್ಟ್ರದಲ್ಲಿ ಅತೀ ಹೆಚ್ಚು ಪ್ರಸಿದ್ಧಿಯಾಗಿರುವ ಕರಾಟೆ ಈ ಬಾರಿಯ ಒಲಿಂಪಿಕ್ಸ್ ಗೆ ಸೇರ್ಪಡೆಯಾಗುತ್ತಿದೆ, ಇದರ ಜೊತೆಯಲ್ಲಿ ಸರ್ಫಿಂಗ್, ಸ್ಕೇಟ್ ಬೋರ್ಡಿಂಗ್ ಹಾಗೂ ಸ್ಪೋರ್ಟ್ ಕ್ಲೈಂಬಿಂಗ್ ಸ್ಪರ್ಧೆಗಳನ್ನು ಪರಿಚಯಿಸಿ ಸೇರ್ಪಡೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಕರಾಟೆಯನ್ನು ಒಲಿಂಪಿಕ್ಸ್ ಗೆ ಸೇರಿಸಲು 1970 ರಿಂದ ಪ್ರಯತ್ನ ನಡೆಯುತ್ತಿದೆ, ಇದೀಗ ಈ ಬಾರಿಯಟೋಕಿಯೋಒಲಿಂಪಿಕ್ಸ್'ಗೆಸೇರ್ಪಡೆ ಮಾಡಲಾಗುತ್ತಿದೆ.

* ಈ ಬಾರಿಯ ಟೋಕಿಯೋ ಒಲಿಂಪಿಕ್ಸ್'ನಲ್ಲಿ 3X3 ಬಾಸ್ಕೆಟ್ ಬಾಲ್, ಫ್ರೀ ಸ್ಟೈಲ್ ಬಿಎಂಎಕ್ಸ್, ಮ್ಯಾಡಿಸನ್ ಸೈಕ್ಲಿಂಗ್ ಸ್ಪರ್ಧೆಗಳನ್ನು ನಡೆಸಲು ಸಿದ್ಧವಾಗಿದೆ ಎಂದುತಿಳಿಸಿದ್ದಾರೆ.

## ಕೇರಳವಿವಿಯಪ್ರವೇಶದಲ್ಲಿಟ್ರಾನ್ಸ್‌ಜಂಡರ್‌ವಯಸ್ಸಿನಮಿತಿಯನ್ನು ತೆಗೆದುಹಾಕಲಾಗಿದೆ



* ಕೇರಳ ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ಅದರ ಅಂಗಸಂಸ್ಥೆ ಶಾಲಾ ಕಾಲೇಜುಗಳಲ್ಲಿ ಲಭ್ಯವಿರುವ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯಲು ಇಚ್ಛಿಸುವ ಕೇರಳ ರಾಜ್ಯದ ಟ್ರಾನ್ಸ್‌ಜಂಡರ್ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚಿನ ವಯಸ್ಸಿನ ಮಿತಿಯನ್ನು ತೆಗೆದುಹಾಕಿದ್ದಾರೆ.

* ಪ್ರಸ್ತುತ ಕೇರಳ ರಾಜ್ಯದ ಟ್ರಾನ್ಸ್‌ಜಂಡರ್ ವಿದ್ಯಾರ್ಥಿಗಳನ್ನು ವಿವಿಧಸ್ನಾತಕೋತ್ತರ ಹಾಗೂ ಪದವಿಪೂರ್ವ ಶೈಕ್ಷಣಿಕ ವಿದ್ಯಾಭಾಸ ಮುಂದುವರಿಸಲು ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ವಯಸ್ಸಿನ ಮಿತಿಯನ್ನು ತೆಗೆದುಹಾಕುವನಿರ್ಧಾರವನ್ನುಕೈಗೊಳ್ಳಲಾಗಿದೆಎಂದು ತಿಳಿಸಿದ್ದಾರೆ.

* ಕೇರಳ ರಾಜ್ಯವು ಈ ಹಿಂದೆ 2015 ರಲ್ಲಿ ಟ್ರಾನ್ಸ್‌ಜಂಡರ್ ವ್ಯಾಪ್ತಿಯನ್ನು ಘೋಷಿಸಿದಭಾರತದ ಮೊದಲರಾಜ್ಯವಾಗಿದೆ.

## ಮುಂಬರುವಒಲಂಪಿಕ್ಸ್‌ಕ್ರೀಡಾಕೂಟಗಳಆಯೋಜನೆ



ಮುಂಬರುವ ಭವಿಷ್ಯದ ಒಲಂಪಿಕ್ಸ್ ಕ್ರೀಡಾಕೂಟಗಳ ಆಯೋಜನೆಯು

* 2024 ರ ಒಲಿಂಪಿಕ್ಸ್ ನ ಕ್ರೀಡಾಕೂಟವನ್ನು ಪ್ಯಾರಿಸ್ ಆಯೋಜಿಸಲಿದೆ.

* 2028 ರ ಒಲಿಂಪಿಕ್ಸ್ ನ ಕ್ರೀಡಾಕೂಟವನ್ನು ಲಾಸ್ ಎಂಜಲೀಸ್ ಆಯೋಜಿಸಲಿದೆ.

* 2032 ರ ಒಲಿಂಪಿಕ್ಸ್ ನ ಕ್ರೀಡಾಕೂಟದ ಆತಿಥ್ಯವನ್ನು ಆಸ್ಟ್ರೇಲಿಯಾದ ಬ್ರಿಸ್ಬೇನ್ ನಗರವು ಆಯೋಜಿಸಲಿದೆ.

## COVID 19 ನಿಂದ ಅನಾಥ ಮಕ್ಕಳನ್ನು ನೋಂದಾಯಿಸಲು ಪೋರ್ಟಲ್'ನ್ನು ಪ್ರಕಟಿಸಿದ ಕೇಂದ್ರ ಸರ್ಕಾರ



* ಪ್ರಸ್ತುತ ಕೇಂದ್ರ ಸರ್ಕಾರವು COVID 19 ಹಿನ್ನಲೆಯಿಂದ ಅನಾಥವಾಗಿರುವ ಮಗುವಿನ ವಿವರಗಳನ್ನು ವೆಬ್ ಪೋರ್ಟಲ್ ಮೂಲಕ ಸರ್ಕಾರದ ಜೊತೆಗೆ ಹಂಚಿಕೊಳ್ಳಬಹುದು ಹಾಗೂ PM CARES ಯೋಜನೆಯಡಿ ಮಗುವಿಗೆ ಪ್ರಯೋಜನಗಳನ್ನು ಪಡೆಯುವ ಹಕ್ಕನ್ನು ಪಡೆಯಬಹುದು.

* ಪ್ರಸ್ತುತ www.pmcaresforchildren.in ಈ ವೆಬ್‌ಸೈಟ್ ಮೂಲಕ ಮಾಹಿತಿಯನ್ನು ಸರ್ಕಾರದ ಜೊತೆಗೆ ಹಂಚಿಕೊಳ್ಳಬಹುದಾಗಿದೆ.

* ಕೇಂದ್ರ ಸರ್ಕಾರವು ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 2021 ರ ಜುಲೈ.15ರಂದುಈಪೋರ್ಟಲ್'ನ್ನುಪರಿಚಯಿಸಿದೆ.

* ಪ್ರತಿ ಮಗುವಿಗೆ ಅವನು ಅಥವಾ ಅವಳು 18 ವರ್ಷ ತುಂಬಿದಾಗ 10 ಲಕ್ಷ ರೂಪಾಯಿಗಳ ಕಾರ್ಪಸ್ ಯೋಜನೆಯಡಿಯಲ್ಲಿ ನೀಡಲಾಗುವುದು, ಹಾಗೂ ಮುಂದಿನ 5 ವರ್ಷಗಳವರೆಗೆ ಆ ಮಗುವಿನ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡಲು ಮಾಸಿಕ ಸ್ಟೈಫಂಡ್ ನೀಡಲಾಗುವುದು ಎಂದು ತಿಳಿಸಿದ್ದಾರೆ.

## ಆಮ್ಸ್ಟರ್‌ಡ್ಯಾಮ್(Amsterdam)ನಲ್ಲಿ ವಿಶ್ವದ ಮೊದಲ 3D ಮುದ್ರಿತಉಕ್ಕಿನಸೇತುವೆಪ್ರಾರಂಭ



* ನೆದರ್ಲ್ಯಾಂಡ್ಸ್ ರಾಜಧಾನಿ ಯಾಗಿರುವ ಆಮ್ಸ್ಟರ್‌ಡ್ಯಾಮ್ (Amsterdam)ನ ಔಡೆಝಿಜ್ಡ್ಸ್ ಅಚರ್‌ಬರ್ಗ್ವಾಲ್ ಕಾಲುವೆಯಲ್ಲಿ, ವಿಶ್ವದ ಮೊದಲ 3 ಡಿ ಮುದ್ರಿತ ಉಕ್ಕಿನ ಪಾದಚಾರಿ ಸೇತುವೆಯನ್ನು ನೆದರ್ಲೆಂಡ್ಸ್‌ನ ರಾಣಿ ಮೆಕ್ಸಿಮಾ ಅವರು ಅನಾವರಣಗೊಳಿಸಿದ್ದಾರೆ.

*ಪ್ರಸ್ತುತ 3ಡಿ ಮೆಟಲ್ ಪ್ರಿಂಟಿಂಗ್ ಕಂಪನಿ ಎಂಎಕ್ಸ್ ಈ ಸೇತುವೆಯನ್ನು ನಿರ್ಮಿಸಿದೆ.

* ಈ ಸೇತುವೆಯನ್ನು 2018 ರಲ್ಲಿ ಡಚ್ ವಿನ್ಯಾಸ ವಾರದಲ್ಲಿ ಮೊದಲು ಅನಾವರಣ ಮಾಡಲಾಯಿತು.

## ವಿಶ್ವ'ದುರ್ಬಲX'(FragileX)ದಿನ

* ವಿಶ್ವ ದುರ್ಬಲ (Fragile X) ಎಕ್ಸ್ ಜಾಗೃತಿ ದಿನವನ್ನು ಜುಲೈ. 22ರಂದು ಆಯೋಜಿಸಲಾಗಿದೆ.

* ವಿಶ್ವ ಫ್ರ್ಯಾಜಿಲ್(ದುರ್ಬಲ) ಎಕ್ಸ್ ದಿನವು ಫ್ರ್ಯಾಜಿಲ್ ಎಕ್ಸ್'ನಿಂದ ಪ್ರಭಾವಿತರಾಗಿರುವ ಕುಟುಂಬಗಳು ಆಚರಿಸುತ್ತವೆ ಹಾಗೂ ಗುಣಪಡಿಸುವ ಸಂಶೋಧನೆಯ ಪ್ರಗತಿಯನ್ನು ತೋರಿಸುತ್ತವೆ.

* ಸ್ಮಾರಕ ಹಾಗೂ ಪ್ರಪಂಚದಾದ್ಯಂತದ ಇರುವ ಹೆಗ್ಗುರುತುಗಳನ್ನು ವಿಶ್ವ ದುರ್ಬಲವಾದ ಎಕ್ಸ್ ದಿನ ತೋರಿಸುತ್ತವೆ.

* ಪ್ರಸ್ತುತ ಫ್ರಾಕ್ಸ್ ರಿಸರ್ಚ್ ಫೌಂಡೇಶನ್ ಪರಿಣಾಮಕಾರಿ ಚಿಕಿತ್ಸೆ ಹಾಗೂ ಗುಣಪಡಿಸುವಿಕೆಯ ಪ್ರಗತಿ ಸಾಧಿಸುವ ಸಂಧರ್ಭದಲ್ಲಿ ಫ್ರ್ಯಾಕ್ಸಾ ಎಕ್ಸ್ ಜಾಗೃತಿ ಮೂಡಿಸಲು ಜಗತ್ತಿನ ವಿವಿಧ ಸಮುದಾಯಗಳೊಂದಿಗೆ ಜೊತೆಯಾಗಿ ಈ ವಿಶ್ವ ಫ್ರ್ಯಾಜಿಲ್ ಎಕ್ಸ್ ದಿನವನ್ನು ಆರಂಭಿಸಿದೆ.

* ಪ್ರಸ್ತುತ ಫ್ರ್ಯಾಜಿಲ್ ಎಕ್ಸ್ ಸಿಂಡ್ರೋಮ್ ಎಂಬುವದು ಪೋಷಕರಿಂದ ಮಕ್ಕಳಿಗೆ ಆನುವಂಶಿಯವಾಗಿ ಬರುವ ಕಾಯಿಲೆಯಾಗಿದೆ, ಈ ಸಿಂಡ್ರೋಮ್ ಅಭಿವೃದ್ಧಿ ಹಾಗೂ ಬೌದ್ಧಿಕ ವಿಕಲಾಂಗತೆಗೆ ಕಾರಣವಾಗುತ್ತದೆ.

* ಈ ಕಾಯಿಲೆಯಿಂದಾಗಿ ಭಾರತದಲ್ಲಿ ಸರಿ ಸುಮಾರು 4,00,000 ವ್ಯಕ್ತಿಗಳು ಬಳಲುತ್ತಿದ್ದಾರೆ ಎಂದುತಿಳಿದುಬಂದಿದೆ.

## ಯುನೆಸ್ಕೋ 'ಐತಿಹಾಸಿಕ ನಗರ ಭೂ ದೃಶ್ಯ ಯೋಜನೆ' ಅಡಿಯಲ್ಲಿಮಧ್ಯಪ್ರದೇಶರಾಜ್ಯಆಯ್ಕೆ



* ಯುನೆಸ್ಕೋ 'ಐತಿಹಾಸಿಕ ನಗರ ಭೂ ದೃಶ್ಯ ಯೋಜನೆ' ಅಡಿಯಲ್ಲಿ ಮಧ್ಯಪ್ರದೇಶ ರಾಜ್ಯದಓರ್ಚಾ ಮತ್ತು ಗ್ವಾಲಿಯರ್ ನಗರಗಳನ್ನು ಆಯ್ಕೆ ಮಾಡಿದೆ.

* ಪ್ರಸ್ತುತ ಯುನೆಸ್ಕೋ ಈ ಯೋಜನೆಯನ್ನು 2011ರಲ್ಲಿ ಆರಂಭಿಸಿದೆ.

* ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ ಅವರು ವರ್ಚುವಲ್ ಸಭೆಯ ಮೂಲಕ ಓರ್ಚಾ ಮತ್ತು ಗ್ವಾಲಿಯರ್ ನಗರಗಳಿಗಾಗಿ ಯುನೆಸ್ಕೋದ ಐತಿಹಾಸಿಕ ನಗರ ಭೂದೃಶ್ಯ ಯೋಜನೆಯನ್ನು ಆರಂಭಿಸಿದರು.

* ಯುನೆಸ್ಕೋದ ಐತಿಹಾಸಿಕ ನಗರ ಭೂದೃಶ್ಯ ಯೋಜನೆಯಲ್ಲಿ ಭಾರತದ ವಾರಣಾಸಿ ಮತ್ತು ಅಜ್ಮೀರ್ ನಗರ ಸೇರಿ ದಕ್ಷಿಣ ಏಷ್ಯಾದ 6 ನಗರಗಳನ್ನು ಒಳಗೊಂಡಿತ್ತು, ಇದೀಗ ಗ್ವಾಲಿಯರ್ ಹಾಗೂ ಓರ್ಚಾವನ್ನು ದಕ್ಷಿಣ ಏಷ್ಯಾದ 7 ಮತ್ತು 8 ನೇ ನಗರಗಳಾಗಿ ಸೇರ್ಪಡೆಯಾಗಿವೆ.

* ಈ ಯೋಜನೆಯಿಂದಾಗಿ ನಗರಗಳ ಇತಿಹಾಸ, ಸಂಸ್ಕೃತಿ, ಸಂಪ್ರದಾಯಗಳು, ಪ್ರಕೃತಿ ಮತ್ತು ಪರಂಪರೆಯ ಸಂಪೂರ್ಣ ಕಾಳಜಿಯನ್ನು ಸುಸ್ಥಿರವಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಯುನೆಸ್ಕೋ ತಿಳಿಸಿದೆ.

## ರಾಷ್ಟ್ರೀಯ ಪ್ರಸಾರ ದಿನ




* ದೇಶಾದ್ಯಂತ ವಾರ್ಷಿಕವಾಗಿ ರಾಷ್ಟ್ರೀಯ ಪ್ರಸಾರ ದಿನವನ್ನು ಜುಲೈ. 23 ರಂದು ಆಚರಣೆ ಮಾಡಲಾಗುತ್ತದೆ.

* ಭಾರತೀಯ ಪ್ರಸಾರ ಕಂಪನಿ 1927 ರಲ್ಲಿ ಬಾಂಬೆ ನಿಲ್ದಾಣದಿಂದ ರೇಡಿಯೋ ಪ್ರಸಾರವನ್ನು ಆರಂಭಿಸಿದ.

* 1923 ರ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತದಲ್ಲಿ ರೇಡಿಯೊ ಕ್ಲಬ್ ಆಫ್ ಬಾಂಬೆಯ ಉಪಕ್ರಮದಡಿಯಲ್ಲಿ ರೇಡಿಯೋ ಪ್ರಸಾರ ಸೇವೆಗಳು ಆರಂಭಿಸಲಾಗಿದೆ, ಮತ್ತೇ ಬ್ರಿಟಿಷ್ ಸರ್ಕಾರವು 1930 ರಲ್ಲಿ ರೇಡಿಯೋ ಪ್ರಸಾರವನ್ನು ವಹಿಸಿಕೊಂಡು, ಭಾರತೀಯ ರಾಜ್ಯ ಪ್ರಸಾರ ಸೇವೆಯನ್ನು ಆರಂಭಿಸಿದರು.

* ಬ್ರಿಟಿಷ್ ಸರ್ಕಾರವು ದೇಶದಲ್ಲಿ ಅಂದರೆ ಕಲ್ಕತ್ತಾ ಹಾಗೂ ಬಾಂಬೆ ನಗರಗಳಲ್ಲಿ ಎರಡು ರೇಡಿಯೊ ಕೇಂದ್ರಗಳನ್ನು ನಿರ್ವಹಿಸಲು ಅನುಮತಿ ನೀಡಿತು.

* ಐಬಿಸಿಯನ್ನು 1932 ರಲ್ಲಿ ಶಾಶ್ವತವಾಗಿ ಭಾರತೀಯ ರಾಜ್ಯ ಪ್ರಸಾರ ಸೇವೆ ಎಂದು ಮರುನಾಮಕರಣ ಮಾಡಿತ್ತು, ತದನಂತರ 1936 ರ ಜೂನ್. 8 ರಂದು ಇಂಡಿಯನ್ ಸ್ಟೇಟ್ ಬ್ರಾಡ್ಕಾಸ್ಟಿಂಗ್ ಸರ್ವಿಸ್'ನ್ನು ಆಲ್ ಇಂಡಿಯಾ ರೇಡಿಯೋ ಎಂದು ಬದಲಾವಣೆ ಮಾಡಲಾಯಿತು, ಮತ್ತೇ 1957 ರಲ್ಲಿ ಆಕಾಶವಾಣಿ ಎಂದು ನಾಮಕರಣ ಮಾಡಲಾಯಿತು.

* ಪ್ರಸಾರ್ ಭಾರತಿ ಭಾರತದ ಅತಿದೊಡ್ಡ ಸಾರ್ವಜನಿಕ ಪ್ರಸಾರ ಸಂಸ್ಥೆಯಾಗಿದೆ, ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಒಡೆತನದಲ್ಲಿದೆ, ಅಖಿಲ ಭಾರತ ರೇಡಿಯೊದ ಸೇವೆಯು ದೇಶದಲ್ಲಿ 414 ಕೇಂದ್ರಗಳನ್ನು ಹೊಂದಿದೆ.

* ಈ ಆಕಾಶವಾಣಿಯು 23 ಭಾಷೆಗಳು ಹಾಗೂ 146 ಉಪಭಾಷೆಗಳಲ್ಲಿ ಪ್ರಸಾರವಾಗುತ್ತದೆ.

# 24-07-2021

## ಮೇರಿ ಕೋಮ್, ಮನ್ ಪ್ರೀತ್ ಸಿಂಗ್, ಭಾರತೀಯ ದಳವನ್ನು ಟೋಕಿಯೋ ಒಲಂಪಿಕ್ಸ್ ಉದ್ಘಾಟನಾ ಸಮಾರಂಭದ ಪರೇಡ್'ನಲ್ಲಿ ಮುನ್ನಡೆಸಿದ್ದಾರೆ.



* ಮೇರಿ ಕೋಮ್, ಮನ್ ಪ್ರೀತ್ ಸಿಂಗ್ ಅವರು ಈ ಬಾರಿಯ ಟೋಕಿಯೋ ಒಲಂಪಿಕ್ಸ್ ಉದ್ಘಾಟನಾ ಸಮಾರಂಭದ ಪರೇಡ್'ನಲ್ಲಿ ಭಾರತೀಯ ದಳವನ್ನು ಮುನ್ನಡೆಸಿದ್ದಾರೆ.

* ಮೇರಿ ಕೋಮ್ ಅವರು ಬಾಕ್ಸಿಂಗ್ ವಿಭಾಗದವರು, ಹಾಗೂ ಮನ್ ಪ್ರೀತ್ ಸಿಂಗ್ ಅವರು ಪುರುಷರ ಹಾಕಿ ವಿಭಾಗದ ನಾಯಕರಾಗಿದ್ದಾರೆ.

* ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಭಾರತೀಯ ಕ್ರೀಡಾಪಟುಗಳ ತಂಡವು ಒಲಂಪಿಕ್ಸ್ ಕ್ರೀಡಾಂಗಣ ತಲುಪಿದ ನಂತರ ಭಾರತದ ಧ್ವಜವನ್ನು ಪ್ರದರ್ಶಿಸಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡಿದರು.

* ಈ ಟೋಕಿಯೋ ಒಲಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ 25 ಭಾರತೀಯ ಸದಸ್ಯರನ್ನು ಒಳಗೊಂಡಿರುವ ತಂಡವು ಪಾಲ್ಗೊಂಡಿತ್ತು.

## ರಾಜಸ್ಥಾನ ಸರ್ಕಾರವು ಜೋದ್‌ಪುರದ 5 ಖಾಸಗಿ ಆಸ್ಪತ್ರೆಗಳಿಗೆ ದಂಡ ವಿಧಿಸಿದೆ



*ರಾಜಸ್ಥಾನ ಸರ್ಕಾರ ತನ್ನ ರಾಜ್ಯದ ಜೋದ್‌ಪುರ ನಗರದ 5 ಖಾಸಗಿ ಆಸ್ಪತ್ರೆಗಳಿಗೆ 10 ಲಕ್ಷ ರೂ. ದಂಡ ವಿಧಿಸಿದೆ.

* ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ಸರ್ಕಾರವು ಪ್ರಸ್ತುತ ರಾಜ್ಯದಲ್ಲಿ ಹಲವಾರು ಯೋಜನೆಗಳು ಜಾರಿಗೆ ತಂದಿದೆ, ಅದರಲ್ಲಿ ಒಂದಾದ 'ಮುಖ್ಯಮಂತ್ರಿ ಚಿರಂಜೀವಿ ಸ್ವಾಸ್ಥ್ಯ ಬಿಮಾ ಯೋಜನೆ'ಯ ಅಡಿಯಲ್ಲಿ ರೋಗಿಗಳಿಗೆ ಸೌಲಭ್ಯ ಒದಗಿಸಿಕೊಡಲು ವಿಫಲವಾದ ಕಾರಣದಿಂದಾಗಿ ಜೋಧ್‌ಪುರದ 5 ಖಾಸಗಿ ಆಸ್ಪತ್ರೆಗಳಿಗೆ ದಂಡ ವಿಧಿಸಲಾಗಿದೆ.

* ಜೋಧ್‌ಪುರದ ಈ ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಅಕ್ರಮವಾಗಿ ಹಣವನ್ನು ವಸೂಲಿ ಮಾಡಿದ್ದಾರೆ, ಈ ಕಾರಣದಿಂದಾಗಿ 10 ಲಕ್ಷ ರೂ.ಗಳನ್ನು ಮರುಪಾವತಿಸಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ.

* ರಾಜಸ್ಥಾನದ ಜೋಧ್‌ಪುರದ 5 ಖಾಸಗಿ ಆಸ್ಪತ್ರೆಗಳು ಕೋವಿಡ್ 19 ಸಂದರ್ಭದಲ್ಲಿ 'ಮುಖ್ಯಮಂತ್ರಿ ಚಿರಂಜೀವಿ ಸ್ವಾಸ್ಥ್ಯ ಬಿಮಾ ಯೋಜನೆ'ಯ ಅನುಕೂಲಗಳನ್ನು ಜನಸಾಮಾನ್ಯರಿಗೆ ನೀಡದೆ ಅಕ್ರಮವಾಗಿ ಹಣವನ್ನು ದೋಚಿದ್ದಾರೆ ಎಂದು ಸುಮಾರು 150 ರೋಗಿಗಳು 'ಸಂಪರ್ಕ' ವೇದಿಕೆ ಮೂಲಕ ರಾಜ್ಯ ಸರ್ಕಾರಕ್ಕೆ ದೂರು ನೀಡಿದ್ದರು.

## ಕೇರಳ ರಾಜ್ಯ ಸರ್ಕಾರವು 'ವರದಕ್ಷಿಣೆ ಪಡೆದಿಲ್ಲ' ಎಂಬ ಪ್ರಮಾಣಪತ್ರ ಸಲ್ಲಿಸಲುಸರ್ಕಾರಿನೌಕರರಿಗೆಸೂಚಿಸಿದೆ



* ಕೇರಳ ರಾಜ್ಯದ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯು, ಸರ್ಕಾರಿ ನೌಕರರಿಗೆ ವರದಕ್ಷಿಣೆ ತೆಗೆದುಕೊಂಡಿಲ್ಲ ಎಂಬ ಅಫಿಡ್‌ವಿಟ್ (ಪ್ರಮಾಣಪತ್ರ) ಸಲ್ಲಿಸಲು ಸೂಚನೆ ನೀಡಿದೆ.

* ಪ್ರಸ್ತುತ ಕೇರಳ ರಾಜ್ಯದಲ್ಲಿ ಇತ್ತೀಚೆಗೆ ವರದಕ್ಷಿಣೆ ಸಾವು ಮತ್ತು ಕಿರುಕುಳಗಳು ಅತೀ ಹೆಚ್ಚಾಗಿ ನಡೆಯುತ್ತಿವೆ ಈ ಕಾರಣದಿಂದ ಸರ್ಕಾರವು ವರದಕ್ಷಿಣೆಯನ್ನು ತಡೆಗಟ್ಟುವ ಹಿನ್ನಲೆಯಿಂದಾಗಿ ಈ ನಿರ್ಧಾರವನ್ನು ಕೈಗೊಂಡಿದೆ.

* ಇತ್ತೀಚಿಗೆ ಕೇರಳ ರಾಜ್ಯದ ರಾಜ್ಯಪಾಲ ಆರಿಫ್ ಮೊಹಮ್ಮದ್ ಅವರು ವರದಕ್ಷಿಣೆ ವಿರುದ್ಧ ಜಾಗೃತಿ ಮೂಡಿಸಲು ಒಂದು ದಿನದ ಉಪವಾಸ ಸತ್ಯಾಗ್ರಹವನ್ನು ಮಾಡಿದ್ದರು.

## ಸಾಕ್ಷರತಾಪರೀಕ್ಷೆ ಬರೆದಶತಾಯುಷಿ ಭಾಗೀರಥಿಅಮ್ಮ ನಿಧನ



* ಕೇರಳ ರಾಜ್ಯದ 'ಹಿರಿಯ ವಿದ್ಯಾರ್ಥಿ' ಎಂಬ ಖ್ಯಾತಿಗೆ ಪಾತ್ರರಾಗಿರುವ ಭಾಗೀರಥಿ ಅಮ್ಮ ವಿಧಿವಶರಾಗಿದ್ದಾರೆ.

* ಪ್ರಸ್ತುತ ಭಾಗೀರಥಿ ಅಮ್ಮನವರು ತಮ್ಮ 105 ನೇ ವಯಸ್ಸಿನಲ್ಲಿ ಸಾಕ್ಷರತಾ ಪರೀಕ್ಷೆಯನ್ನು ಬರೆದು ಉತ್ತೀರ್ಣರಾಗಿ ಭಾರತೀಯ ಪ್ರಧಾನಿ ನರೇಂದ್ರ ಮೋದಿಯವರಿಂದ ಮೆಚ್ಚುಗೆಯನ್ನು ಪಡೆದಿದ್ದರು, ಹಾಗೂ "ನಾರಿಶಕ್ತಿ" ಪ್ರಶಸ್ತಿಯನ್ನು ಕೂಡಪಡೆದುಕೊಂಡಿದ್ದಾರೆ.

* ಈ ಹಿಂದೆ 2019 ರಲ್ಲಿ ಕೇರಳ ರಾಜ್ಯದ ಕೊಲ್ಲಂ ಜಿಲ್ಲೆಯ ಶತಾಯುಷಿ ಭಾಗೀರಥಿ ಅಮ್ಮ ಕೇರಳ ರಾಜ್ಯ ಸಾಕ್ಷರತಾ ಮಿಷನ್ ನಡೆಸಿರುವ 4 ನೇ ತರಗತಿಯ ತತ್ಸಮಾನ ಪರೀಕ್ಷೆಯಲ್ಲಿ 275 ಅಂಕಗಳಿಗೆ 205 ಅಂಕಗಳನ್ನು ಪಡೆದು ಉತ್ತೀರ್ಣರಾಗಿ ಮೈಲಿಗಲ್ಲನ್ನು ಸೃಷ್ಟಿಸಿದ್ದಾರೆ.

* ಭಾಗೀರಥಿ ಅಮ್ಮನವರು ಪರಿಸರ, ಗಣಿತ ಮತ್ತು ಮಲಯಾಳಂ ವಿಷಯಗಳ ಪತ್ರಿಕೆಗಳಿಗೆ ಉತ್ತರಿಸಲು3ದಿನಸಮಯತಗೆದುಕೊಂಡಿದ್ದರುಎಂದುತಿಳಿಸಿದ್ದಾರೆ.

## ಕೇಂದ್ರೀಯ 12 ವಿ.ವಿಗಳಿಗೆ ಕುಲಪತಿಗಳ ನೇಮಕಕ್ಕೆ ಅನುಮೋದನೆ



* ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಕರ್ನಾಟಕ ರಾಜ್ಯದ ಕಲಬುರ್ಗಿ(ಗುಲ್ಬರ್ಗ)ದಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಒಳಗೊಂಡಂತೆ ಒಟ್ಟಾರೆ ದೇಶದ 12 ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕ ಮಾಡಲು ಅನುಮೋದನೆ ನೀಡಿದ್ದಾರೆ.

* ಇತ್ತೀಚಿಗೆ ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು, ಜಾರ್ಖಂಡ್, ತಮಿಳುನಾಡು, ಮತ್ತು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡಲಾಗಿದೆ ಎಂದು ಶಿಕ್ಷಣ ಸಚಿವಾಲಯ ಮಾಹಿತಿಯನ್ನು ಪ್ರಕಟಿಸಿದೆ.

* ಪ್ರಸ್ತುತ ಭಾರತ ದೇಶದ 22 ಕೇಂದ್ರೀಯ ವಿಶ್ವವಿದ್ಯಾಲಯಗಳ ಕುಲಪತಿಗಳ ಹುದ್ದೆಗಳು ಖಾಲಿ ಇವೆ, ಅದರಲ್ಲಿ 12 ವಿಶ್ವವಿದ್ಯಾಲಯಗಳಿಗೆ ಕುಲಪತಿ ನೇಮಕಾತಿ ಕೆಲಸ ಪೂರ್ಣವಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ.

## ಒಡಿಶಾ ತೀರದಲ್ಲಿ ಆಕಾಶ್ ಕ್ಷಿಪಣಿ ಪರೀಕ್ಷಾ ಹಾರಾಟ ಯಶಸ್ವಿ



* ಒಡಿಶಾ ತೀರದ ಭುವನೇಶ್ವರದಲ್ಲಿ ಹೊಸ ತಲೆಮಾರಿನ ಮೇಲ್ಮೈಯಿಂದ ಗಾಳಿ ಕ್ಷಿಪಣಿ ಆಕಾಶ್ (AKASH NG)ನ ಪರೀಕ್ಷಾ ಹಾರಾಟವನ್ನು ಒಡಿಶಾ ಕರಾವಳಿಯ ರಕ್ಷಣಾ ಕೇಂದ್ರದಿಂದ ಯಶಸ್ವಿಯಾಗಿನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

* ಪ್ರಸ್ತುತ ಮಾನವರಹಿತ ವೈಮಾನಿಕ ವಾಹನವನ್ನು ಹಾರಿಸಿದ ಕೆಲ ನಿಮಿಷಗಳಲ್ಲಿ, ಸ್ವದೇಶಿ ನಿರ್ಮಿತ ಆಕಾಶ್ ಕ್ಷಿಪಣಿಯನ್ನು ಆಂತರಿಕ ಪರೀಕ್ಷಾ ಕೇಂದ್ರದಿಂದ ಉಡಾವಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಈ ಆಕಾಶ್ ಎನ್‌ಜಿ ಕ್ಷಿಪಣಿಯು ರೇಡಿಯೊ ಫ್ರೀಕ್ವೆನ್ಸಿ ಅನ್ವೇಷಕ, ಲಾಂಚರ್, ಮಲ್ಟಿ ಫಂಕ್ಷನ್ ರಾಡಾರ್ ಮತ್ತು ಕಮಾಂಡ್, ಕಂಟ್ರೋಲ್ ಮತ್ತು ಸಂವಹನ ವ್ಯವಸ್ಥೆಯನ್ನು ಹೊಂದಿದೆ.

* ಈ ಆಕಾಶ್ ಎನ್‌ಜಿ ಕ್ಷಿಪಣಿಯು ವ್ಯವಸ್ಥೆಯು ಪತ್ತೆಹಚ್ಚಲು(ಹುಡುಕಲು) ಹಾಗೂ ಬೆಂಕಿಯ ನಿಯಂತ್ರಣಕ್ಕೆ ಸಕ್ರಿಯ ಎಲೆಕ್ಟ್ರಾನಿಕ್ ಸ್ಕ್ಯಾನ್ ಮಾಡಿದ ಬಹು ಕಾರ್ಯ ರಾಡಾರ್‌ನ್ನು ಹೊಂದಿದೆ ಎಂದು ಭಾರತೀಯ ವಾಯುಪಡೆಯಅಧಿಕಾರಿಗಳುತಿಳಿಸಿದ್ದಾರೆ.

## ಮೀರಾಬಾಯಿ ಚಾನುಗೆ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಬೆಳ್ಳಿ ಪದಕ



* ಮೀರಾಬಾಯಿ ಚಾನು ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ನಲ್ಲಿ 49 ಕೆಜಿ ವೇಟ್ ಲಿಫ್ಟಿಂಗ್'ನಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ, ಭಾರತದ ಪದಕ ಬೇಟೆ ಈ ಒಲಿಂಪಿಕ್ಸ್'ನಲ್ಲಿ ಆರಂಭವಾಗಿದೆ.

* ಮೀರಾಬಾಯಿ ಚಾನು ಮಹಿಳೆಯರ 49 ಕೆಜಿ ವೇಟ್ ಲಿಫ್ಟಿಂಗ್ ವಿಭಾಗದಲ್ಲಿ 202 ಕೆಜಿ ಭಾರ ಎತ್ತಿದ ನಂತರ ಬೆಳ್ಳಿ ಪಡೆದುಕೊಂಡಿದ್ದಾರೆ.

* ಪ್ರಸ್ತುತ ಟೋಕಿಯೊದಲ್ಲಿ ಆರಂಭವಾಗಿರುವ ಒಲಿಂಪಿಕ್ಸ್ 2020 ರಲ್ಲಿ ಮೀರಾಬಾಯಿ ಚಾನು ಭಾರತದ ಪರ ಮೊದಲ ಪದಕವನ್ನು ಜಯಿಸಿದ್ದಾರೆ.

## ಶೂಟರ್ ಸೌರಭ್ ಚೌಧರಿ ಫೈನಲ್ ಗೆ ಪಾದಾರ್ಪಣೆ



* ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಶೂಟರ್ ಸೌರಭ್ ಚೌಧರಿ ಪುರುಷರ 10 ಮೀ. ಏರ್ ಪಿಸ್ತೂಲ್'ನ ವಿಭಾಗದಲ್ಲಿ ಫೈನಲ್ ಗೆ ಪ್ರವೇಶವನ್ನು ಪಡೆದುಕೊಂಡಿದ್ದಾರೆ.

* ಶೂಟರ್ ಸೌರಭ್ ಚೌಧರಿ ಅವರು ಫೈನಲ್ ಸುತ್ತಿನಲ್ಲೂ ಇದೇ ರೀತಿಯ ಉತ್ತಮ ಪ್ರದರ್ಶನ ನೀಡಿದರೆ ಚಿನ್ನ ಗೆದ್ದು ಇತಿಹಾಸ ಸೃಷ್ಟಿಸಲಿದ್ದಾರೆ.

## ಮೊದಲ ಪಂದ್ಯದಲ್ಲೇ ಸೋಲ ಅನುಭವಿಸಿದ ಸಾಯಿ ಪ್ರಣೀತ್



* ಭಾರತೀಯ ಬ್ಯಾಡ್ಮಿಂಟನ್ ಪಟು ಸಾಯಿ ಪ್ರಣೀತ್ ಅವರು ಮೊದಲನೇ ಪಂದ್ಯದಲ್ಲೇ ಸೋಲ ಅನುಭವಿಸಿದ್ದಾರೆ, ಇವರು ಇದೇ ಮೊದಲ ಬಾರಿಗೆ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ.

* ಬ್ಯಾಡ್ಮಿಂಟನ್ ಪಟು ಸಾಯಿ ಪ್ರಣೀತ್ ಅವರು ಇಸ್ರೇಲ್'ನ ಮಿಶಾ ಝಿಲ್ಬರ್'ಮನ್ ವಿರುದ್ಧ ಸೋಲು ಕಂಡಿದ್ದಾರೆ.

## ಟೋಕಿಯೋ ಒಲಂಪಿಕ್ಸ್ ನಲ್ಲಿ ಭಾರತಕ್ಕೆ ಮೊದಲ ಪದಕ



* 2021 ರ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಮೊದಲ ಪದಕ ತಂದು ಕೊಟ್ಟ ಮಹಿಳಾ ಕ್ರೀಡಾ ಪಟು ಮೀರಾಬಾಯಿ ಚಾನು.

* ಟೋಕಿಯೋ ಒಲಿಂಪಿಕ್ಸ್‌ನಲ್ಲಿ 49 ಕೆಜಿ ವಿಭಾಗದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಸಿದ ಮೀರಾಬಾಯಿ ಚಾನು ಅವರಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.

## ಟೋಕಿಯೊ ಒಲಿಂಪಿಕ್ಸ್ ನಲ್ಲಿ ಮೊದಲ ಚಿನ್ನ ಗೆದ್ದ ಚೀನಾದ



## ಮಹಿಳಾ ಶೂಟರ್

* ಟೋಕಿಯೊ ಒಲಿಂಪಿಕ್ ಕ್ರೀಡಾಕೂಟದಲ್ಲಿ ಚೀನಾದ ಯಾಂಗ್ ಚಿಯಾನ್ ಅವರು ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

* ರಷ್ಯಾ ದೇಶ ದ್ವಿತೀಯ ಸ್ಥಾನ ಹಾಗೂ ತೃತೀಯ ಸ್ಥಾನವನ್ನು ಸ್ವಿಜರ್ಲ್ಯಾಂಡ್ ಪಡೆದುಕೊಂಡಿವೆ.

* ಭಾರತದ ಅಪೂರ್ವಿ ಚಂಡೇಲಾ ಹಾಗೂ ಇಳಾವನ್ನಿಲ ವಾಳರಿವನ್ ಅವರಿಬ್ಬರೂ ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಸೋಲ ಅನುಭವಿಸಿದ್ದಾರೆ.

## ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯ ಗಳಿಸಿದ ಭಾರತ ಹಾಕಿ ತಂಡ



* ಭಾರತದ ಪುರುಷರ ಹಾಕಿ ತಂಡವು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನ್ಯೂಜಿಲೆಂಡ್ ಹಾಕಿ ತಂಡದ ವಿರುದ್ಧ 3 2 ಗೋಲುಗಳ ಅಂತರದಲ್ಲಿ ಜಯ ಸಾಧಿಸಿದೆ.

* 'ಎ' ಗುಂಪಿನಲ್ಲಿ ನಡೆದ ಪಂದ್ಯದಲ್ಲಿ ಮನ್‌ಪ್ರೀತ್ ಸಿಂಗ್ ಅವರ ಹಾಕಿ ತಂಡವು ಗೆಲುವು ದಾಖಲಿಸಿದೆ.

* ಭಾರತದ ಹಾಕಿ ತಂಡವು ಮುಂದಿನ ಪಂದ್ಯವನ್ನು ಆಸ್ಟ್ರೇಲಿಯಾ ತಂಡದ ವಿರುದ್ಧ ಆಡಲಿದೆ.

# 26-07-2021

## ಇಂಡಿಯನ್ ಅಥ್ಲೀಟ್ ಅಸೋಸಿಯೇಷನ್ನಿಂದ ಒಲಿಂಪಿಕ್ಸ್ ಕೋಚ್ ಗಳಿಗೆ ನಗದು ಹಣ ಘೋಷಣೆ




* ಪ್ರಸ್ತುತ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತೀಯ ಅಥ್ಲೀಟ್‌ಗಳಿಗೆ ಪದಕ ಗೆಲ್ಲಲು ತರಬೇತಿ ನೀಡಿದ ಕೋಚ್'ಗೆ ಇಂಡಿಯನ್ ಅಥ್ಲೀಟ್ ಅಸೋಸಿಯೇಷನ್ ನಗದು ಹಣ ನೀಡುವುದಾಗಿ ಘೋಷಣೆ ಮಾಡಿದೆ.

* ಈ ಬಾರಿಯ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತೀಯ ಕ್ರೀಡಾಪಟು ಚಿನ್ನದ ಪದಕವನ್ನು ಪಡೆದುಕೊಂಡರೆ ಕೋಚ್'ಗೆ 12.05 ಲಕ್ಷ ರೂ. ಹಾಗೂ ಬೆಳ್ಳಿ ಮತ್ತು ಕಂಚಿನ ಪದಕ ಪಡೆದುಕೊಂಡರೆ 10 ಮತ್ತು 7.05 ಲಕ್ಷ ರೂ. ನೀಡಲಾಗುವದು ಎಂದು ಇಂಡಿಯನ್ ಅಥ್ಲೀಟ್‌ಅಸೋಸಿಯೇಷನ್ ತಿಳಿಸಿದೆ.

* ಈಗಾಗಲೇ ಮಹಿಳಾ ವೇಟ್ ಲಿಫ್ಟರ್ ಮೀರಾಬಾಯಿ ಚಾನು ಅವರು ಭಾರತಕ್ಕೆ ಮೊದಲ ಬೆಳ್ಳಿ ಪದಕ ತಂದುಕೊಟ್ಟಿದ್ದಾರೆ, ಇವರ ಕೋಚ್ ವಿಜಯ್ ಶರ್ಮಾ 10 ಲಕ್ಷ ರೂ.ನಗದು ಪಡೆಯಲು ಅರ್ಹರಾಗಿದ್ದಾರೆ ಎಂದು ಇಂಡಿಯನ್ ಅಥ್ಲೀಟ್ ಅಸೋಸಿಯೇಷನ್ ನಿರ್ದೇಶಕ ರಾಜೀವ್ ಮೆಹ್ತಾತಿಳಿಸಿದ್ದಾರೆ.

## ಬಾಕ್ಸರ್ ವಿಕಾಸ್ ಕ್ರಿಶನ್'ಗೆ ಒಲಿಂಪಿಕ್ಸ್ ನಲ್ಲಿ ಸೋಲು



* ಭಾರತೀಯ ಬಾಕ್ಸರ್ ಪಟು ವಿಕಾಸ್ ಕ್ರಿಶನ್ ಪುರುಷರ ವೆಲ್ಟರ್ ವೇಟ್ 69 KG ವಿಭಾಗದ 32 ನೇ ಸುತ್ತಿನ ಸ್ಪರ್ಧೆಯಲ್ಲಿ 0 5 ಅಂತರದಿಂದ ಸೋಲನುಭವಿಸಿ ಟೋಕಿಯೊ ಒಲಿಂಪಿಕ್ಸ್ ನಿಂದ ಹೊರಗುಳಿದಿದ್ದಾರೆ.

* ವಿಕಾಸ್ ಕ್ರಿಶನ್ ಅವರು ಸೆವೊನ್ರಟ್ಸ್ ಕ್ವಿನ್ಸಿ ಮೆನ್ಸಾ ಒಕಾಜಾವಾ ವಿರುದ್ಧ ಸೋಲುಕಂಡಿದ್ದಾರೆ.

## ಟೋಕಿಯೊ ಒಲಂಪಿಕ್ಸ್ ನಲ್ಲಿ ಭಾರತದ ಪುರುಷರ ಹಾಕಿ ತಂಡವು ಆಸ್ಟ್ರೇಲಿಯಾವಿರುದ್ಧಸೋಲು



* ಭಾರತದ ಪುರುಷರ ಹಾಕಿ ತಂಡವು ಟೋಕಿಯೊ ಒಲಂಪಿಕ್ಸ್ ನಲ್ಲಿ ಆಸ್ಟ್ರೇಲಿಯಾ ಹಾಕಿ ತಂಡದ ವಿರುದ್ಧ ಸೋಲು ಅನುಭವಿಸಿದೆ, ಈ ಮೊದಲು ಭಾರತ ತಂಡವು ಮೊದಲ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ತಂಡದ ವಿರುದ್ಧ ಜಯಸಾದಿಸಿತ್ತು.

* ಆಸ್ಟ್ರೇಲಿಯಾ ಹಾಕಿ ತಂಡವು ವಿಶ್ವದ ನಂಬರ್ 01 ತಂಡವಾಗಿದೆ, ಈ ತಂಡವುಭಾರತದವಿರುದ್ಧ 1 7ಗೋಲುಗಳಿಂದಜಯಸಾಧಿಸಿದೆ.

## ಪ್ರಿಯಾ ಮಲಿಕ್‌ಗೆ ವಿಶ್ವ ಕೆಡೆಟ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ



* ಭಾರತದ ಕುಸ್ತಿಪಟು ಪ್ರಿಯಾ ಮಲಿಕ್ ಅವರು ಮಹಿಳೆಯರ 73 ಕೆ.ಜಿ. ವಿಭಾಗದಲ್ಲಿ ಯೋರಪಿಯನ್ ದೇಶ ಹಂಗೇರಿಯಲ್ಲಿ ನಡೆದ ವಿಶ್ವ ಕೆಡೆಟ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಭಾರತದ ಕುಸ್ತಿಪಟು ಪ್ರಿಯಾ ಮಲಿಕ್ ಅವರು ಈ ಚಿನ್ನವನ್ನು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಡೆದುಕೊಂಡಿಲ್ಲ, ಬದಲಾಗಿ ಯೋರಪಿಯನ್ ದೇಶ ಹಂಗೇರಿಯಲ್ಲಿ ನಡೆದ ವಿಶ್ವ ಕೆಡೆಟ್‌ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿಪಡೆದುಕೊಂಡಿದ್ದಾರೆ.

## ಭಾರತದಏಕೈಕಜಿಮ್ನಾಸ್ಟ್‌ಸ್ಪರ್ಧಿಪ್ರಣತಿಟೋಕಿಯೊಒಲಿಂಪಿಕ್ಸ್‌ನ ಫೈನಲ್‌ಅರ್ಹತೆವಿಫಲ




* ಭಾರತದ ಏಕೈಕ ಜಿಮ್ನಾಸ್ಟ್ ಪಟು ಪ್ರಣತಿ ನಾಯಕ್ ಅವರು ಈ ಬಾರಿಯ ಟೋಕಿಯೊ ಒಲಿಂಪಿಕ್ಸ್ ನಲ್ಲಿ ನಡೆದ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ಆಲ್ ರೌಂಡ್ ಫೈನಲ್ಸ್‌ಗೆ ಅರ್ಹತೆಯನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ.

* ಈ ಬಾರಿಯ ಟೋಕಿಯೊ ಒಲಿಂಪಿಕ್ಸ್'ನಲ್ಲಿ ನಡೆಯಲಿರುವ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ ಆಲ್ ರೌಂಡ್‌ಫೈನಲ್ಸ್‌ಗೆಅಗ್ರ24ಜಿಮ್ನಾಸ್ಟ್‌ಗಳುಜುಲೈ29ರಂದುಅರ್ಹತೆಪಡೆದುಕೊಂಡಿದ್ದಾರೆ.

* ಈ ಮೊದಲು ದೀಪಾ ಕರ್ಮಾಕರ್ ಅವರು 2016 ರ ರಿಯೊ ಒಲಿಂಪಿಕ್ಸ್‌ನ ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ಅರ್ಹತೆ ಪಡೆದುಕೊಂಡಿದ್ದರು, ಇದೀಗ 2020 ರ ಟೋಕಿಯೊ ಒಲಿಂಪಿಕ್ಸ್‌ಗೆ ಪ್ರಣತಿ ನಾಯಕ್ ಅವರು ಅರ್ಹತೆ ಪಡೆದ ಭಾರತದ 2 ನೇ ಮಹಿಳಾ ಸ್ಪರ್ಧಿ ಇವರಾಗಿದ್ದಾರೆ.

* ಪ್ರಣತಿ ನಾಯಕ್ ಅವರು 2019 ರಲ್ಲಿ ನಡೆದ ಏಷ್ಯನ್ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಶಿಪ್‌ನ ವಾಲ್ಟ್‌ವಿಭಾಗದಲ್ಲಿಪ್ರಣತಿಕಂಚಿನಪದಕಜಯಿಸಿದ್ದರು.

## ಬಾಂಗ್ಲಾಗೆಭಾರತದಿಂದಆಮ್ಲಜನಕಪೂರೈಕೆ



* ಪ್ರಸ್ತುತ ಭಾರತದಿಂದ ಸುಮಾರು 200 ಟನ್'ಗಳಷ್ಟು ಆಮ್ಲಜನಕವನ್ನು ಹೊತ್ತ 'ಆಕ್ಸಿಜನ್ ಎಕ್ಸ್‌ಪ್ರೆಸ್ ರೈಲು' ಬಾಂಗ್ಲಾ ದೇಶಕ್ಕೆ ತಲುಪಿದೆ, ಇದೇ ಮೊದಲ ಬಾರಿ ಭಾರತೀಯ ರೈಲ್ವೆಯು ವಿದೇಶಕ್ಕೆ ಆಮ್ಲಜನಕ ಪೂರೈಕೆ ಮಾಡಿದೆ.

* ಪ್ರಸ್ತುತ ಭಾರತೀಯ 'ಆಕ್ಸಿಜನ್ ಎಕ್ಸ್‌ಪ್ರೆಸ್ ರೈಲು' ಜಾರ್ಖಂಡ್‌ನ ಟಾಟಾನಗರದಿಂದ ಹೊರಟು ಬಾಂಗ್ಲಾದೇಶದಬೆನಪೋಲ್‌ಗೆತಲುಪಲಿದೆ.

## ಟೋಕಿಯೊ ಒಲಂಪಿಕ್ಸ್ ನ ಜೂಡೋ ಸುತ್ತಿನಲ್ಲಿ ಭಾರತಕ್ಕೆ ಸೋಲು



* ಭಾರತದ ಜೂಡೋ ಆಟಗಾರ್ತಿ ಸುಶೀಲಾ ದೇವಿ ಅವರು ಟೋಕಿಯೊ ಒಲಂಪಿಕ್ಸ್ ನಲ್ಲಿ ನಡೆದ 48 ಕೆಜಿ ಮಹಿಳಾ ಆರಂಭಿಕ ಜೂಡೋ ಸುತ್ತಿನಲ್ಲಿ ಹಂಗೇರಿಯ ಇವಾ ಸೆರ್ನೋವಿಕ್ ವಿರುದ್ಧ ಸೋಲ ಅನುಭವಿಸಿದ್ದಾರೆ.

* 2020 ರ ಟೋಕಿಯೊ ಒಲಿಂಪಿಕ್ ಕ್ರೀಡಾಕೂಟದಲ್ಲಿ ಜೂಡೋ ಕ್ರೀಡೆಯನ್ನು ಪ್ರತಿನಿಧಿಸಿದ ಭಾರತದ ಏಕೈಕ ಆಟಗಾರ್ತಿ ಸುಶೀಲಾ ದೇವಿಯವರಾಗಿದ್ದರೆ.

* ವಿಜೇತಸೆರ್ನೋವಿಕ್ಅವರುಮುಂದೆಜಪಾನ್'ನಫೂನಾಟೋನಕಿಯನ್ನುವಿರುದ್ಧಆಡಲಿದ್ದಾರೆ.

## ಒಲಿಂಪಿಕ್ಸ್ ನಲ್ಲಿ ಭಾರತದ ಮಹಿಳಾ ಹಾಕಿ ತಂಡಕ್ಕೆ ನೆದರ್ ಲ್ಯಾಂಡ್ ವಿರುದ್ಧಸೋಲು



* ಭಾರತದ ಮಹಿಳಾ ಹಾಕಿ ತಂಡವು ಟೋಕಿಯೊ ಒಲಿಂಪಿಕ್ಸ್'ನಲ್ಲಿ ನಡೆದ 'ಎ' ಗುಂಪಿನ ಮೊದಲಪಂದ್ಯದಲ್ಲಿ ನೆದರ್ ಲ್ಯಾಂಡ್ ಹಾಕಿ ತಂಡದ ವಿರುದ್ಧ ಸೋಲು ಅನುಭವಿಸಿದೆ.

* 'ಎ' ಗುಂಪಿನ ಮುಂದಿನಪಂದ್ಯ ಜುಲೈ 26ರಂದು ಭಾರತ ತಂಡವು ಜರ್ಮನಿಯ ತಂಡದ ವಿರುದ್ಧ ಆಡಲಿದೆ.

## ಒಲಿಂಪಿಕ್ಸ್‌ನಅರ್ಹತೆಪಡೆಯುವಲ್ಲಿಕನ್ನಡಿಗಶ್ರೀಹರಿವಿಫಲ



* ಟೋಕಿಯೊ ಒಲಂಪಿಕ್ಸ್‌ನ ಈಜು ಸ್ಪರ್ಧೆಯಲ್ಲಿ ಸೆಮಿಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ಕರ್ನಾಟಕದ ಈಜುಪಟು ಶ್ರೀಹರಿ ನಟರಾಜ್ ವಿಫಲರಾಗಿದ್ದಾರೆ, ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ 27 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

* ಒಟ್ಟು ಅಗ್ರ 16 ಈಜುಪಟುಗಳು ಟೋಕಿಯೊ ಒಲಂಪಿಕ್ಸ್‌ನ ಈಜು ಸ್ಪರ್ಧೆಯ ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ.

* ಬೆಂಗಳೂರು ಮೂಲದ ಶ್ರೀಹರಿ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ.

## ತೆಲಂಗಾಣದ ರುದ್ರೇಶ್ವರ ದೇವಸ್ಥಾನ ಇದೀಗ ವಿಶ್ವ ಪರಂಪರೆಯ ತಾಣ



* ಪ್ರಸ್ತುತ ತೆಲಂಗಾಣ ರಾಜ್ಯದ ಮುಲುಗು ಜಿಲ್ಲೆಯ ಪಾಲಂಪೆಟ್‌ನಲ್ಲಿನ ರುದ್ರೇಶ್ವರ ದೇವಸ್ಥಾನವನ್ನು ಯುನೆಸ್ಕೋದ 39 ನೇ ವಿಶ್ವ ಪರಂಪರೆಯ ತಾಣ ಎಂದು ಪಟ್ಟಿಯಲ್ಲಿ ಪ್ರಕಟಿಸಿದೆ.

* ಈ ಹಿಂದೆ 2019 ರಲ್ಲಿ ಭಾರತ ಸರ್ಕಾರವು ರಾಮಪ್ಪ ದೇವಸ್ಥಾನವನ್ನು ಏಕೈಕ ವಿಶ್ವ ಪರಂಪರೆಯ ತಾಣ ಎಂದು ಯುನೆಸ್ಕೋ ನಾಮನಿರ್ದೇಶನವಾಗಿ ಪ್ರಸ್ತಾಪಣೆಯನ್ನು ಮಾಡಿತ್ತು.

* ಕ್ರಿ.ಶ 1213 ರಲ್ಲಿ ಈ ರುದ್ರೇಶ್ವರ ದೇವಸ್ಥಾನವನ್ನು ಕಾಕತೀಯ ಸಾಮ್ರಾಜ್ಯದ ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ, ಹಾಗೂ ಈ ದೇವಸ್ಥಾನವನ್ನು ರಾಮಪ್ಪ ದೇವಸ್ಥಾನ ಎಂದೂ ಕರೆಯಲಾಗುತ್ತದೆ.

## ಬಾಂಗ್ಲಾದೇಶವು ಫೇಸ್‌ಬುಕ್‌ಗೆ ಪರ್ಯಾಯವಾಗಿ "ಜೋಗಜಾಗ್" ಆ್ಯಪ್ ಬಿಡುಗಡೆ



* ಪ್ರಸ್ತುತ ಬಾಂಗ್ಲಾ ದೇಶವು ಸಾಮಾಜಿಕ ಜಾಲತಾಣ ಫೇಸ್‌ಬುಕ್‌ಗೆ ಪರ್ಯಾಯವಾಗಿರುವ 'ಜೋಗಾಜಾಗ್' ಹಾಗೂ ವಾಟ್ಸಾಪ್'ಗೆ ಪರ್ಯಾಯವಾಗಲಿರುವ 'ಅಲಾಪಾನ್' ಎಂಬ ಹೆಸರಿನ ಬಾಂಗ್ಲಾದೇಶ ತನ್ನದೇ ಆದ ಸಾಮಾಜಿಕ ಜಾಲತಾಣಗಳನ್ನೂ ಆರಂಭಿಸಲಿದೆ, ಹಾಗೂ ಆನ್‌ಲೈನ್‌ನಲ್ಲಿ ಜೂಮ್ ಆನ್‌ಲೈನ್'ಗೆ ಪರ್ಯಾಯವಾಗಿ ಬೋಯಿಥೋಕ್ ಅಪ್ಲಿಕೇಶನ್ ಹಾಗೂ ಲಸಿಕೆ ನೋಂದಣಿ ಮಾಡಲು ಸುರೋಖಾ ಆ್ಯಪ್ ಪ್ರಾರಂಭಿಸಲಿದೆ ಎಂದು ಇದೇ 24 ರಂದು ಬಾಂಗ್ಲಾದೇಶದ ರಾಜ್ಯ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಸಚಿವರಾದ ಜುನೈದ್ ಅಹ್ಮದ್ ಪಾಲಾಕ್ಅವರುಘೋಷಣೆಮಾಡಿದರು.

*ದೇಶದಡಿಜಿಟಲ್ಇ ಕಾಮರ್ಸ್ 2018ರನೀತಿಯು2021ರವೇಳೆಗೆಮಾಹಿತಿಮತ್ತುಸಂವಹನ ತಂತ್ರಜ್ಞಾನ ಕ್ಷೇತ್ರದಲ್ಲಿ 20 ಲಕ್ಷಕ್ಕೂ ಅಧಿಕ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಲಾಗಿದೆಎಂದಿದ್ದಾರೆ.

## ಅಮಿತ್ ಷಾ ರಿಂದ ಹಸಿರು ಸೊಹ್ರಾ ಅರಣ್ಯಕರಣ ಅಭಿಯಾನವನ್ನು ಚಿರಪುಂಜಿ(ಸೊಹ್ರಾ)ಯಲ್ಲಿ ಆರಂಭ



* 2021 ರ ಜುಲೈ. 25 ರಂದು ಕೇಂದ್ರ ಸಚಿವ ಅಮಿತ್ ಷಾ ರಿಂದ ಹಸಿರು ಸೊಹ್ರಾ ಅರಣ್ಯಕರಣ ಅಭಿಯಾನವನ್ನು ಚಿರಪುಂಜಿ( ಸೊಹ್ರಾ)ಯಲ್ಲಿ ಆರಂಭಿಸಿದ್ದಾರೆ.

* ಅಸ್ಸಾಂ ರೈಫಲ್ಸ್ ಮತ್ತು ಮೇಘಾಲಯ 'ಎವರ್ಗ್ರೀನ್ ಈಶಾನ್ಯ' ಈ ಅಭಿಯಾನವನ್ನು ನಡೆಸಲಿದೆ.

* 'ಎವರ್ಗ್ರೀನ್ ಈಶಾನ್ಯ ಈ ಅಭಿಯಾನವನ್ನು ರಾಜ್ಯದಲ್ಲಿ ಅರಣ್ಯನಾಶ ಹಾಗೂ ಮರಗಳ ತೋಟದಮಹತ್ವವನ್ನುತಿಳಿಸಲು ಆರಂಭಿಸಲಾಗಿದೆ.

* ಚಿರಾಪುಂಜಿಯನ್ನು ಸ್ಥಳೀಯವಾಗಿ ಸೊಹ್ರಾ ಎಂದು ಕರೆಯುತ್ತಾರೆ, ಹಾಗೂಗ್ರೇಟರ್‌ಸೊಹ್ರಾನೀರು ಸರಬರಾಜುಯೋಜನೆಯನ್ನುಸಹಆರಂಭಿಸಿದರು.

# 27-07-2021

## ಮೀರಾಬಾಯಿ ಚಾನು ಮಣಿಪುರ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾಗಿ ನೇಮಕ



* ಪ್ರಸ್ತುತ ಮಣಿಪುರ ಮುಖ್ಯಮಂತ್ರಿ ಎನ್ ಬಿರೆನ್ ಸಿಂಗ್ ಅವರು ತಿಳಿಸಿರುವ ಪ್ರಕಾರ ಟೋಕಿಯೊ ಒಲಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ವೇಟ್‌ಲಿಫ್ಟರ್ ಸೈಖೋಮ್ ಮೀರಾಬಾಯಿ ಚಾನು ಅವರನ್ನು ರಾಜ್ಯ ಪೊಲೀಸ್ ಇಲಾಖೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾಗಿ ನೇಮಕ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ, ಹಾಗೂ ರಾಜ್ಯ ಸರ್ಕಾರದಿಂದ 1 ಕೋಟಿ ರೂ. ಬಹುಮಾನ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.

* ಶೀಘ್ರದಲ್ಲೇ ಮಣಿಪುರ ರಾಜ್ಯದಲ್ಲಿ ವಿಶ್ವ ದರ್ಜೆ ಗುಣಮಟ್ಟದ ವೇಯ್ಟ್ ಲಿಫ್ಟಿಂಗ್ ಅಕಾಡೆಮಿ ಸ್ಥಾಪನೆ ಮಾಡಲು ಸರ್ಕಾರ ನಿರ್ಧಾರವನ್ನು ಕೈಗೊಂಡಿದೆ.

* ಭಾರತದ ಜೂಡೋ ಆಟಗಾರ್ತಿ ಸುಶೀಲಾ ದೇವಿ ಅವರು ಇದೀಗ ಕಾನ್ ಸ್ಟೇಬಲ್ ಹುದ್ದೆಯಿಂದ ಸಬ್ ಇನ್ಸ್ ಪೆಕ್ಟರ್ ಆಗಿ ಬಡ್ತಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ, ಹಾಗೂ ಇದರ ಜೊತೆಗೆ ರಾಜ್ಯದಿಂದ ಟೋಕಿಯೊ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ 25 ಲಕ್ಷ ರೂ. ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

* ಪ್ರಸ್ತುತ ಮಣಿಪುರ ರಾಜ್ಯದಿಂದ ಟೋಕಿಯೊ ಒಲಂಪಿಕ್ಸ್‌ನಲ್ಲಿ ಚಾನು, ದೇವಿ ಹಾಗೂ ಮೇರಿ ಕೋಮ್ ಸೇರಿ '5' ಕ್ರೀಡಾಪಟುಗಳು ದೇಶವನ್ನು ಪ್ರತಿನಿಧಿಸುತ್ತಿದ್ದಾರೆ.

**ಕನ್ನಡ ಚಿತ್ರರಂಗದ ಹಿರಿಯ ನಟಿ ಜಯಂತಿ ನಿಧನ*** ಕನ್ನಡ ಚಿತ್ರರಂಗದ



ಅಭಿನಯ ಶಾರದೆ, ಹಿರಿಯ ನಟಿ ಜಯಂತಿ ಅವರು ಜುಲೈ.26ರಂದು ನಿಧನರಾಗಿದ್ದಾರೆ, ಇವರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಅರ್ಪಿಸಲಾಯಿತು, ಮಾಜಿ ಸಚಿವರಾದ ಶ್ರೀ.ರಾಮಲಿಂಗಾರೆಡ್ಡಿ ರವರು ದಿವಂಗತ ಶ್ರೀಮತಿ. ಜಯಂತಿ ಅವರಿಗೆ ಗೌರವಪೂರ್ವಕ ನಮನಗಳನ್ನು ತಿಳಿಸಿದ್ದಾರೆ.

* ಇವರ ಹೆಸರು ಕಮಲಾ ಕುಮಾರಿ ಆದರೆ ರಂಗಮಂದಿರನಾಮ ಜಯಂತಿ ಎಂದೇ ಪ್ರಖ್ಯಾತಿ, ಕನ್ನಡ ಹಾಗೂ ತಮಿಳು ಚಿತ್ರರಂಗದಲ್ಲಿ ನಟಿಸಿದ್ದಾರೆ, ಇದಲ್ಲದೇ 1960, 1970 ಹಾಗೂ 1980ರ ದಶಕದಆರಂಭದವಿವಿಧಚಲನಚಿತ್ರಗಳಲ್ಲಿನಟಿಸಿಪ್ರಸಿದ್ಧಿಯಾಗಿದ್ದರು.

## ಅಸ್ಸಾಂ ಮಿಜೋರಾಂರಾಜ್ಯಗಳಗಡಿವಿವಾದ



* ಪ್ರಸ್ತುತ ಅಸ್ಸಾಂ ಮಿಜೋರಾಂ ಗಡಿಯಲ್ಲಿ ಎರಡೂ ರಾಜ್ಯಗಳದ ಜನಗಳ ನಡುವೆ ಘರ್ಷಣೆಗಳು ನಡೆದಿವೆ, ಇತ್ತೀಚಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶಿಲ್ಲಾಂಗ್‌ನಲ್ಲಿ ಈಶಾನ್ಯದ ಎಲ್ಲಾ ಮುಖ್ಯಮಂತ್ರಿಗಳನ್ನ ಭೇಟಿಯಾದ ನಂತರ ದಿನಗಳಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ.

* ಅಸ್ಸಾಂ ಮಿಜೋರಾಂ ರಾಜ್ಯ ಪ್ರದೇಶಗಳ ನಡುವೆ ದೀರ್ಘಕಾಲದಿಂದ ಭೂ ವಿವಾದದ ಹಿಂಸಾಚಾರ ನಡೆಯುತ್ತಿದೆ, ಇದರ ಮಧ್ಯೆ ಅಮಿತ ಷಾ ಅವರು ಅಸ್ಸಾಂ ಮತ್ತು ಮಿಜೋರಾಂ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಬಳಿಕ ಈ ಸಂಘರ್ಷವನ್ನು ಪರಿಹರಿಸಲು ಒಂದು ಮಾರ್ಗವನ್ನ ಕಂಡುಕೊಳ್ಳಿ ಎಂದು ಹೇಳಿದ್ದಾರೆ.

## ಬಾಕ್ಸಿಂಗ್‌ಆಶಿಶ್‌ಕುಮಾರ್‌ಟೋಕಿಯೋಒಲಿಂಪಿಕ್ಸ್‌ನಿರ್ಗಮನ



* ಟೋಕಿಯೊ ಒಲಿಂಪಿಕ್ಸ್'ನ ಬಾಕ್ಸಿಂಗ್ ವಿಭಾಗದಲ್ಲಿ ಇದೇ ಮೊದಲ ಬಾರಿಗೆ ಭಾರತದ ಪರವಾಗಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿರುವ ಆಶಿಶ್ ಕುಮಾರ್ ಸೋಲು ಕಂಡಿದ್ದಾರೆ.

* ಪುರುಷರ 75 KG. ವಿಭಾಗದಲ್ಲಿ ಚೀನಾದ ಎರ್ಬಿಕ್ ಟೌಹೆಟಾ ಅವರ ವಿರುದ್ಧ ಆಶಿಶ್ ಕುಮಾರ್ ಅವರು ಸೋಲು ಅನುಭವಿಸಿದರು. *ಆಶಿಶ್ ಕುಮಾರ್ ಅವರು ಹಿಮಾಚಲ ಪ್ರದೇಶದ ಕ್ರೀಡಾ ಪಟುವಾಗಿದ್ದಾರೆ.

* ಈ ಮೊದಲು ವಿಕಾಸ್ ಕೃಷ್ಣನ್ 69KG ವಿಭಾಗದಲ್ಲಿ ಮತ್ತು ಮನೀಶ್ ಕೌಶಿಕ್ 63 KG ವಿಭಾಗದಲ್ಲಿ ಇದೀಗ ಆಶಿಶ್ ಕುಮಾರ್ ಅವರು ಒಲಿಂಪಿಕ್ಸ್‌ನಿಂದನಿರ್ಗಮಿಸಿದ್ದಾರೆ.

## 13ನೇವಯಸ್ಸಿಗೆಚಿನ್ನದಪದಕಗೆದ್ದಮೊಮಿಜಿ



* ಪ್ರಸ್ತುತ ಜಪಾನ್ ಟೋಕಿಯೊದಲ್ಲಿ ನಡೆಯುತ್ತಿರುವ ಒಲಂಪಿಕ್ಸ್‌ನಲ್ಲಿ ಜಪಾನ್'ನ 13 ವರ್ಷ ವಯಸ್ಸಿನ ಮೊಮಿಜಿ ನಿಶಿಯಾ ಅವರು ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ, ಹಾಗೂ ಇವರು ಚಿನ್ನದ ಪದಕ ಗೆದ್ದ 2ನೇ ಅತ್ಯಂತ ಕಿರಿಯ ವ್ಯಕ್ತಿಗೆ ಪಾತ್ರರಾಗಿದ್ದಾರೆ.

* ಈ ಬಾರಿ ಟೋಕಿಯೊ ಒಲಂಪಿಕ್ಸ್‌ನಲ್ಲಿ ಹೊಸದಾಗಿ ಪ್ರಾರಂಬಿಸಲಾಗಿರುವ ಸ್ಕೇಟ್ ಬೋರ್ಡಿಂಗ್‌ನಲ್ಲಿ ನಿಶಿಯಾ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ, ಹಾಗೂ ಇವರು ಮೊದಲ ಮಹಿಳಾ ಸ್ಕೇಟ್ ಬೋರ್ಡಿಂಗ್ ಚಾಂಪಿಯನ್ ಆಗಿದ್ದಾರೆ.

* ಈ ಮೊದಲು ಚಿನ್ನದ ಪದಕವನ್ನು ಬ್ರೆಜಿಲ್'ನ ರೆಸಾ ಲೀಲ್ ಅವರು ಜಯಿಸಿದ್ದರು, ಹಾಗೂ 1936ರ ಬರ್ಲಿನ್ ಕ್ರೀಡಾಕೂಟದಲ್ಲಿ ಅಮೆರಿಕಾದ 13 ವರ್ಷದ ಡೈವರ್ ಮಾರ್ಜೋರಿ ಗೆಸ್ಟ್ರಿಂಗ್ ಅವರು ಬರ್ಲಿನ್ ಒಲಿಂಪಿಕ್'ನಲ್ಲಿ ಪದಕ ಜಯಿಸಿದ ಅತ್ಯಂತ ಕಿರಿಯ ವ್ಯಕ್ತಿಯಾಗಿದ್ದಾರೆ.

## ಬಿ.ಎಸ್.ಯಡಿಯೂರಪ್ಪಮುಖ್ಯಮಂತ್ರಿಸ್ಥಾನಕ್ಕೆರಾಜೀನಾಮೆ



* ಬುಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ(BSY)ನವರು ಕರ್ನಾಟಕ ರಾಜ್ಯದ 19ನೇ ಮುಖ್ಯಮಂತ್ರಿಯಾಗಿದ್ದರು, ಇದೀಗ ಇವರು ಈ ಮುಖ್ಯಮಂತ್ರಿ ಸ್ಥಾನಕ್ಕೆ 2021ರ ಜುಲೈ. 26ರಂದು ರಾಜೀನಾಮೆಯನ್ನು ನೀಡಿದ್ದಾರೆ.

* BSY ಅವರು 1943ರ ಫೆಬ್ರವರಿ. 27ರಂದು ಜನಿಸಿದ್ದಾರೆ, ಶಿವಮೊಗ ಜಿಲ್ಲೆಯ ಶಿಕಾರಿಪುರ ಕ್ಷೇತ್ರದ ಶಾಸಕರಾಗಿ '8' ಬಾರಿ ಆಯ್ಕೆಯಾಗಿದ್ದಾರೆ, ಇವರನ್ನು ರಾಜಾ ಹುಲಿ ಎಂದು ಮಾಧ್ಯಮಗಳು ಹಾಗೂ ಅವರ ಅನುಯಾಯಿಗಳು ಜನಪ್ರಿಯವಾಗಿ ಕರೆಯುತ್ತಾರೆ.

* BSY ಅವರು ಇಲ್ಲಿಯವರೆಗೆ ಕರ್ನಾಟಕದ ಉಸ್ತುವಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಭಾರತೀಯ ರಾಜಕಾರಣಿ, ಹಾಗೂ ಇವರು ಒಟ್ಟು '4' ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ, ಇದಲ್ಲದೇ ಕರ್ನಾಟಕದ ವಿಧಾನಸಭೆಯಲ್ಲಿ '3' ಬಾರಿ ಪ್ರತಿಪಕ್ಷದ ನಾಯಕರಾಗಿಯು ಕೂಡ ಸೇವೆ ಸಲ್ಲಿಸಿದ ಏಕೈಕ ರಾಜಕಾರಣಿ ಇವರಾಗಿದ್ದಾರೆ.

* ಯಡಿಯೂರಪ್ಪನವರು '4' ಬಾರಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದರು: ಮೊದಲ ಬಾರಿ: 2007ರ ನವೆಂಬರ್ 7 ರಿಂದ 2007ರ ನವೆಂಬರ್ 10 ರವರೆಗೆ. ಎರಡನೇ ಬಾರಿ: 2008ರ ಮೇ 30 ರಿಂದ 2011ರ ಜುಲೈ 31 ರವರೆಗೆ. ಮೂರನೇ ಬಾರಿ: 2018ರ ಮೇ 17 ರಿಂದ 2018ರ ಮೇ 19 ರವರೆಗೆ. ನಾಲ್ಕನೇಬಾರಿ:2019ರಜುಲೈ26ರಿಂದ2021ರಜುಲೈ26ರವರೆಗೆ.

* ಯಡಿಯೂರಪ್ಪನವರ ವೈಯಕ್ತಿಕ ಜೀವನ: ಯಡಿಯೂರಪ್ಪ ಅವರು 1943ರ ಫೆಬ್ರವರಿ. 27ರಂದು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟ್ ತಾಲ್ಲೂಕಿನ ಬುಕನಕೆರೆ ಎಂಬ ಹಳ್ಳಿಯಲ್ಲಿ ಜನಿಸಿದರು, ಇವರು ಪೂರ್ವ ವಿಶ್ವವಿದ್ಯಾಲಯ ಕಾಲೇಜು ಶಿಕ್ಷಣವನ್ನು ಸರ್ಕಾರಿ ಕಾಲೇಜು, ಮಂಡ್ಯ (ಮೈಸೂರು ವಿಶ್ವವಿದ್ಯಾಲಯ) 1960–61ರಲ್ಲಿ ಪೂರ್ಣಗೊಳಿಸಿದ್ದಾರೆ.

* ಯಡಿಯೂರಪ್ಪನವರು 1965ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಥಮ ವಿಭಾಗದ ಗುಮಾಸ್ತರಾಗಿ ನೇಮಕ ಮಾಡಲಾಗಿತ್ತು, ಆದರೆ ಇವರು ಈ ಕೆಲಸವನ್ನು ಬಿಟ್ಟು, ಶಿಕಾರಿಪುರಕ್ಕೆ ತೆರಳಿ ಅಲ್ಲಿ ವೀರಭದ್ರ ಶಾಸ್ತ್ರಿಗಳ ಶಂಕರ ಭತ್ತದ ಗಿರಣಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡಲು ಸೇರಿಕೊಂಡರು, ನಂತರದ ದಿನಗಳಲ್ಲಿ ಅಂದರೆ 1967ರಲ್ಲಿ ಮೈತ್ರಾದೇವಿ ಅವರನ್ನು ಮದುವೆಯಾದರು, ಇವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ, (ರಾಘವೇಂದ್ರ, ಬಿ.ವೈ.ವಿಜೇಂದ್ರ) ಹಾಗೂ ಮೂವರು ಪುತ್ರಿಯರು (ಅರುಣಾದೇವಿ, ಪದ್ಮಾವತಿ ಮತ್ತು ಉಮಾದೇವಿ) ಎಂಬುವರು ಇದು ಇವರ ವಯಕ್ತಿಕಜೀವನ.

## ಜುಲೈ26:ಕಾರ್ಗಿಲ್‌ವಿಜಯ್‌ದಿವಸ್




* ಪ್ರತಿ ವರ್ಷವೂ ದೇಶದಲ್ಲಿ ಜುಲೈ 26ರಂದು ಕಾರ್ಗಿಲ್ ವಿಜಯ್ ದಿವಾಸ್ ಆಚರಿಸಲಾಗುತ್ತದೆ, ಇದು 22ನೇ ವಾರ್ಷಿಕೋತ್ಸವವಾಗಿದೆ ಈ ಸಂಧರ್ಭದಲ್ಲಿ ರಾಷ್ಟ್ರವು ಹುತಾತ್ಮ ಯೋಧರಿಗೆ ಗೌರವ ಸಲ್ಲಿಸುತ್ತದೆ.

* 1999ರಲ್ಲಿ ಈ ದಿನದಂದು ಭಾರತೀಯ ಸಶಸ್ತ್ರ ಪಡೆಗಳ ಪಾಕಿಸ್ತಾನದ ಸೈನ್ಯದ ಮೇಲೆ ಆಪರೇಷನ್ ವಿಜಯವನ್ನು ಆರಂಭಿಸಿ ಪಾಕಿಸ್ತಾನದ ಸೈನ್ಯವನ್ನು ಭಾರತದ ಕಾರ್ಗಿಲ್ ಪ್ರದೇಶದಿಂದ ಹೊರಹಾಕಲಾಯಿತು.

* ಈ ಕಾರ್ಗಿಲ್ ವಿಜಯ್ ದಿವಾಸ್ ಯುದ್ಧದ ಸಂಧರ್ಭದಲ್ಲಿ ಹುತಾತ್ಮರಾಗಿರುವವರಿಗೆ ಭಾರತದ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ಲಡಾಖ್‌ನ ಡ್ರಾಸ್‌ನಲ್ಲಿರುವ ಕಾರ್ಗಿಲ್ ಯುದ್ಧ ಸ್ಮಾರಕಕ್ಕೆ ಭೇಟಿ ಗೌರವ ಸಲ್ಲಿಸಿದರು.

* 1999ರ ಮೇ. 3 ರಿಂದ ಜುಲೈ. 26 ರವರೆಗೆ ಕಾರ್ಗಿಲ್ ಯುದ್ಧವು ನಡೆದಿದೆ.

* ಭಾರತ ಮತ್ತು ಪಾಕಿಸ್ತಾನದ ನಡುವೆ ಕಾಶ್ಮೀರದ ಕಾರ್ಗಿಲ್ ಜಿಲ್ಲೆಯಲ್ಲಿ ಮತ್ತು ನಿಯಂತ್ರಣ ರೇಖೆಯಲ್ಲಿ (LOC) ನಡೆದ ಸಶಸ್ತ್ರ ಸಂಘರ್ಷವಾಗಿದೆ.

## ರಾಷ್ಟ್ರೀಯ ಆಹಾರ ತಂತ್ರಜ್ಞಾನ ಮಸೂದೆಯನ್ನು ಅಂಗೀಕರಿಸಿದಲೋಕಸಭೆ



* 2021ರ ಜುಲೈ 26ರಂದು ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಹಾಗೂ ಉದ್ಯಮಶೀಲತೆ ಮತ್ತು ನಿರ್ವಹಣಾ ಮಸೂದೆ 2021'ನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ.

* ಕೇಂದ್ರ ಆಹಾರ ಸಂಸ್ಕರಣೆ ಮತ್ತು ಕೈಗಾರಿಕಾ ಸಚಿವರಾಗಿರುವ ಪಶುಪತಿ ಕುಮಾರ್ ಪರಾಸ್ ಅವರು ಈ ಮಸೂದೆಯನ್ನು ಮಂಡಿಸಿದ್ದಾರೆ.

* ಮಾರ್ಚ್ ತಿಂಗಳಲ್ಲಿ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಲಾಗಿದೆ.

* ಲೋಕಸಭೆಯು ಭಾರತದ ಸಂಸತ್ತಿನ ಕೆಳಮನೆಯಾಗಿದೆ, ಹಾಗೂ ರಾಜ್ಯಸಭೆಯು ಮೇಲ್ಮನೆಯಾಗಿದೆ.

* ಪ್ರಸ್ತುತ ಲೋಕಸಭೆಯ ಸದಸ್ಯರನ್ನು ಆಯಾ ಕ್ಷೇತ್ರಗಳನ್ನು ಪ್ರತಿನಿಧಿಸಲು ಐದು ವರ್ಷಗಳ ಅವಧಿಗೆ ದೇಶದ ಜನರು ಆಯ್ಕೆ ಮಾಡುತ್ತಾರೆ.

* ಸದ್ಯ 552 ಭಾರತದ ಸಂವಿಧಾನದಿಂದ ನಿಗದಿಪಡಿಸಲ್ಪಟ್ಟ ಸದನದ ಗರಿಷ್ಠ ಸದಸ್ಯತ್ವವಾಗಿದೆ, ಆದರೆ ಮನೆಯಲ್ಲಿ 543 ಸ್ಥಾನಗಳಿವೆ, 543 ಚುನಾಯಿತ ಸದಸ್ಯರು ಭರ್ತಿ

ಮಾಡಲಾಗಿದೆ.

* ಲೋಕಸಭೆಯ ಪ್ರಸ್ತುತ ಭಾಷಣಕಾರರುಓಂಬಿರ್ಲಾಅವರುಆಗಿದ್ದಾರೆ.

## ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿ ಆಯ್ಕೆ ವೀಕ್ಷಕರಾಗಿ ಧರ್ಮೇಂದ್ರಪ್ರಧಾನ್,ಅರುಣ್‌ಸಿಂಗ್



* ಪ್ರಸ್ತುತ ಬಿಜೆಪಿ ಹೈಕಮಾಂಡ್ ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿ ಆಯ್ಕೆ ಕಾರಣದಿಂದ ಇಬ್ಬರು ವೀಕ್ಷಕರನ್ನು ರಾಜ್ಯಕ್ಕೆ ಕಳುಹಿಸಲು ತೀರ್ಮಾನಿಸಿದೆ.

* ಕೇಂದ್ರದ ಮಾನವ ಸಂಪನ್ಮೂಲ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಕರ್ನಾಟಕ ರಾಜ್ಯದ ವೀಕ್ಷಕರನ್ನಾಗಿ ನೇಮಕ ಮಾಡಿದ್ದಾರೆ.

## ಭಾರತ ಮತ್ತು ರಷ್ಯಾ 12ನೇ ಆವೃತ್ತಿಯ ಜಂಟಿ ಮಿಲಿಟರಿ ವ್ಯಾಯಾಮಆಗಸ್ಟ್.1ರಿಂದಆರಂಭ




* ಪ್ರಸ್ತುತ ಭಾರತ ಮತ್ತು ರಷ್ಯಾ 12 ನೇ ಆವೃತ್ತಿಯ ಜಂಟಿ ಮಿಲಿಟರಿ ವ್ಯಾಯಾಮವನ್ನು ಆಗಸ್ಟ್. 1 ರಿಂದ 13 ರವರೆಗೆ ರಷ್ಯಾದ ವೋಲ್ಗೊಗ್ರಾಡ್‌ನಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

* ಈ ಮಿಲಿಟರಿ ವ್ಯಾಯಾಮಕ್ಕೆ INDRA 2021 ಎಂದು ಹೆಸರಿಡಲಾಗಿದೆ, ಉಭಯ ದೇಶಗಳ ದ್ವಿಪಕ್ಷೀಯ ಭದ್ರತಾ ಸಹಕಾರವನ್ನು ಇನ್ನು ಉತ್ತಮಗೊಳಿಸುವಲ್ಲಿ ಹಾಗೂ ಅಭಿವೃದ್ಧಿಪಡಿಸಲು ಸಹಾಯಕಾರಿಯಾಗಲಿದೆ, ಹಾಗೂ ಇದರಲ್ಲಿ ಎರಡೂ ರಾಷ್ಟ್ರಗಳ 250 ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ.

* ವಿಶ್ವಸಂಸ್ಥೆಯ ಆದೇಶದ ಮೇರೆಗೆ ಅಂತರರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಜಂಟಿ ಆಪರೇಟಿವ್ ಫೋರ್ಸ್ ನಡೆಸುವ ಅಗತ್ಯವಿದೆ ಎಂದು ತಿಳಿಸಿದೆ.

* ವೋಲ್ಗೊಗ್ರಾಡ್ ಎಂಬುವದು ರಷ್ಯಾ ರಾಷ್ಟ್ರದ ನಗರವಾಗಿದೆ, ಈ ನಗರವು ವೋಲ್ಗಾ ನದಿಯಪಶ್ಚಿಮದಡದಲ್ಲಿದೆ.

# 28-07-2021

## ಅಮೆರಿಕ ವಿದೇಶಾಂಗ ಕಾರ್ಯದರ್ಶಿಯಿಂದ ಭಾರತ ಪ್ರವಾಸ



* ಎರಡು ದಿನಗಳ ಭಾರತ ಪ್ರವಾಸವನ್ನು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಅವರು ಕೈಗೊಂಡಿದ್ದಾರೆ.

* ಆಂಟನಿ ಬ್ಲಿಂಕೆನ್ ಅವರು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಭಾರತ ಭೇಟಿ ನೀಡುತ್ತಿದ್ದಾರೆ, ಅಮೇರಿಕಾ ಅಧ್ಯಕ್ಷರಾಗಿ ಜೋ ಬಿಡೆನ್ ಅಧಿಕಾರಕ್ಕೆ ವಹಿಸಿಕೊಂಡ ನಂತರ ಭಾರತಕ್ಕೆ ಭೇಟಿಯಾದ ಮೂರನೇ ಅಮೇರಿಕಾ ಅಧಿಕಾರಿ ಯಾಗಿದ್ದಾರೆ.

* ಪ್ರಸ್ತುತ ಅಮೇರಿಕಾ ವಿದೇಶಾಂಗ ಕಾರ್ಯದರ್ಶಿಯಾಗಿರುವ ಬ್ಲಿಂಕೆನ್ ಅವರು ವಿದೇಶಾಂಗ ಸಚಿವ ಎಸ್. ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿರುವ ಅಜಿತ್ ದೋವಲ್ ಅವರನ್ನು ಭೇಟಿಯಾಗಲಿದ್ದಾರೆ.

* ವಿದೇಶಾಂಗ ಕಾರ್ಯದರ್ಶಿ ಬ್ಲಿಂಕೆನ್ ಅವರ ಭೇಟಿಯ ದ್ವಿಪಕ್ಷೀಯ ಸಂವಾದವನ್ನು ನಡೆಸಲಿದ್ದಾರೆ, ಹಾಗೂ ಭಾರತ ಅಮೇರಿಕ ರಾಷ್ಟ್ರಗಳ ಸಹಭಾಗಿತ್ವವನ್ನು ಹೆಚ್ಚಿಸಲು ಈ ಭೇಟಿ ಸಹಾಯಕಾರಿಯಾಗಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯಹೇಳಿದೆ.

## ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಧೋಲಾವಿರಾ ನಗರ ಯುನೆಸ್ಕೋ



* ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸಿಂಧೂ ಕಣಿವೆಯ ಹರಪ್ಪ ನಾಗರೀಕತೆ ಯುಗದ ಧೋಲಾವಿರಾ ನಗರವನ್ನು ಸೇರ್ಪಡೆಮಾಡಿದೆ.

* ಗುಜರಾತ್ ರಾಜ್ಯದ ರಾಣ್ ಜಿಲ್ಲೆಯ ಕಚ್ ಎಂಬಲ್ಲಿ ಧೋಲಾವಿರಾ ನಗರವಿದೆ, ಪ್ರಸ್ತುತ ಈ ನಗರವನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆ ಮಾಡಲಾಗುವದು ಎಂದು ಯುನೆಸ್ಕೊ (ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ) ಘೋಷಣೆ ಮಾಡಿದೆ.

* ಯುನೆಸ್ಕೋ ಇತ್ತೀಚಿಗೆ ತೆಲಂಗಾಣ ರಾಜ್ಯದ ಕಾಕತೀಯ ರಾಮಪ್ಪ ದೇಗುಲವನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆ ಮಾಡಿತ್ತು.

* ಧೋಲಾವಿರಾ ನಗರವು ಇದೀಗಭಾರತಕ್ಕೆದೊರೆತ40ನೇವಿಶ್ವಪಾರಂಪರಿಕತಾಣವಾಗಿದೆಎಂದುಕೇಂದ್ರ ಸಂಸ್ಕೃತಿಸಚಿವಜಿ.ಕಿಶನ್‌ರೆಡ್ಡಿಟ್ವೀಟ್‌ಮೂಲಕಮಾಹಿತಿನೀಡಿದ್ದಾರೆ.

* 2014 ರಿಂದ ಒಟ್ಟಾರೆ ಭಾರತದ ಹತ್ತು ಹೊಸ ತಾಣಗಳು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಯಾಗಿವೆ.

* ಈ ಧೋಲಾವಿರಾ ನಗರಕ್ಕೆ ಸುಮಾರು 1500 ವರ್ಷಗಳ ಇತಿಹಾಸವಿದೆ, ತಾಂತ್ರಿಕತೆ, ಹಾಗೂ ಹರಪ್ಪ ನಾಗರೀಕತೆ, ಸಂಸ್ಕೃತಿಯನ್ನು ಎತ್ತಿತೋರಿಸುತ್ತಿರುವ ಧೋಲಾವಿರಾ ನಗರ ಇದೀಗ ವಿಶ್ವಪಾರಂಪರಿಕ ತಾಣವಾಗಿದೆ ಎಂದು ಯುನೊಸ್ಕೊ ತಿಳಿಸಿದೆ.

## ಭಾರತ್ ಬಯೋಟೆಕ್ ನಿಂದ ಮಲೇರಿಯಾ ಲಸಿಕೆ




* ಭಾರತ್ ಬಯೋಟೆಕ್ ಇದೀಗ ಮಲೇರಿಯಾ ವಿರುದ್ಧ ಮೊಟ್ಟ ಮೊದಲ ಎಂಆರ್ಎನ್ಎ ಲಸಿಕೆ ಅಭಿವೃದ್ಧಿಪಡಿಸಲು ಸಿದ್ಧವಾಗಿದೆ, ಮುಂದಿನ ದಿನಗಳಲ್ಲಿ ಅಂದರೆ 2022 ರಲ್ಲಿ ಈ ಲಸಿಕೆಯನ್ನ ಮಾರುಕಟ್ಟೆಗೆ ತರುವ ಗುರಿಯನ್ನ ಹೊಂದಿದೆ ಹಾಗೂ ಕ್ಲಿನಿಕಲ್ ಪ್ರಯೋಗ ನಡೆಸಲು ಸಿದ್ಧವಾಗಿದೆ.

* ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸುತ್ತಿರುವ ಮಲೇರಿಯಾ ಲಸಿಕೆಯು ಸೊಳ್ಳೆಯಿಂದ ಹರಡುವ ರೋಗಗಳನ್ನ ನಿರ್ಮೂಲನೆ ಮಾಡಲು ಸಹಾಯಕಾರಿಯಾಗಲಿದೆ, ಹಾಗೂ ಇದು ಕೆನುಪ್ ಫೌಂಡೇಶನ್‌ನೇತೃತ್ವದಮಲೇರಿಯಾನಿರ್ಮೂಲನೆಯೋಜನೆಇದಾಗಿದೆ.

## ದೆಹಲಿ ಸರ್ಕಾರವು ಪದ್ಮ ಪ್ರಶಸ್ತಿಗಳಿಗೆ ವೈದ್ಯರ ಹೆಸರು ಶಿಫಾರಸು ಮಾಡಲುನಿರ್ಧಾರ





* ಪ್ರಸ್ತುತ ದೆಹಲಿ ಸರ್ಕಾರವು ಈ ಸಾಲಿನ ಪದ್ಮ ವಿಭೂಷಣ, ಪದ್ಮ ಭೂಷಣ ಮತ್ತು ಪದ್ಮಶ್ರೀ, ಪ್ರಶಸ್ತಿಗಳಿಗಾಗಿ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರ ಹೆಸರುಗಳನ್ನು ಶಿಫಾರಸು ಮಾಡಲು ತೀರ್ಮಾನ ಮಾಡಲಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

* ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರಿಗೆ ಕೃತಜ್ಞತೆ ಹಾಗೂ ಗೌರವ ವಂದನೆಗಳನ್ನು ತಿಳಿಸಲು ಈ ನಿರ್ಧಾರವನ್ನು ಕೈಗೊಳ್ಳಾಗಿದೆ ಎಂದು ತಿಳಿಸಿದ್ದಾರೆ.

* ಸಾರ್ವಜನಿಕರು ಹೆಸರುಗಳನ್ನು padmaawards.delhi@gmail.com ಗೆ ಆಗಸ್ಟ್. 15 ಮೇಲ್ ಮಾಡಬಹುದಾಗಿದೆ, ಇದಕ್ಕಾಗಿಯೇ ಪರಾಮರ್ಶಕ ಸಮಿತಿಯನ್ನು ರಚಿಸಲಾಗಿದೆ, ಈ ಸಮಿತಿಯು ಆಗಸ್ಟ್. 15 ರ ಬಳಿಕ ಈ ಪಟ್ಟಿ ಬಿಡುಗಡೆ ಮಾಡಲಿದೆ, ಹಾಗೂ ಅಂತಿಮ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

## ಭಾರತೀಯ ಮೂಲದ ಲೇಖಕನ ಕಾದಂಬರಿ ಬೂಕರ್ ಪ್ರಶಸ್ತಿ ಪಟ್ಟಿಯಲ್ಲಿ ಆಯ್ಕೆ




* ಪ್ರಸ್ತುತ ಭಾರತೀಯ ಮೂಲದ ಬ್ರಿಟಿಷ್ ಲೇಖಕ ಸಂಜೀವ್ ಸಹೋತಾ ಅವರ "ಚೀನಾ ರೂಂ" ಕಾದಂಬರಿಯು2021 ನೇ ಸಾಲಿನ ಪ್ರತಿಷ್ಠಿತ 'ಬೂಕರ್ ಪ್ರಶಸ್ತಿ' ಪಟ್ಟಿಯಲ್ಲಿ ಆಯ್ಕೆಯಾಗಿದೆ.

* 2021 ರ ಪ್ರತಿಷ್ಠಿತ 'ಬೂಕರ್ ಪ್ರಶಸ್ತಿ' ಪಟ್ಟಿಯಲ್ಲಿ ಒಟ್ಟು 13 ಕಾದಂಬರಿಗಳ ಪಟ್ಟಿಯನ್ನು ಅನಾವರಣಗೊಳಿಸಿದ್ದಾರೆ, ಪ್ರಸ್ತುತ ಈ ಪಟ್ಟಿಯನ್ನು 'ದಿ ಬೂಕರ್ ಡಜನ್' ಎಂದೂ ಕರೆಯಲಾಗಿದೆ.

* ಐರ್ಲ್ಯಾಂಡ್‌ನಲ್ಲಿ ಪ್ರಕಟವಾಗಿರುವ ಸುಮಾರು 158 ಕಾದಂಬರಿಗಳ ಪೈಕಿ 13 ಕಾದಂಬರಿಗಳನ್ನು ಆಯ್ಕೆಮಾಡಿದ್ದಾರೆ.

* ನೊಬೆಲ್ ಪ್ರಶಸ್ತಿ ವಿಜೇತ ಕಜುಯೋ ಇಶಿಗರೊ ಹಾಗೂ ಪುಲಿಟ್ಜರ್ ಪ್ರಶಸ್ತಿ ವಿಜೇತ ರಿಚರ್ಡ್ ಪವರ್ಸ್ ಅವರ ಕಾದಂಬರಿಗಳು ಈ ಬೂಕರ್ ಪ್ರಶಸ್ತಿ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತೀಯ ಹಾಕಿ ತಡವು ಸ್ಪೇನ್ ವಿರುದ್ಧ ಜಯಸಾಧಿಸಿದೆ



* ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತೀಯ ಹಾಕಿ ತಡವು ಸ್ಪೇನ್ ವಿರುದ್ಧ ಜಯ ಸಾಧಿಸಿದೆ, ಪುರುಷರಹಾಕಿ ತಂಡವು ಗೆದ್ದಿರುವ ಎರಡನೇ ಹಾಕಿ ಪಂದ್ಯ ಇದಾಗಿದೆ.

* ಕಳೆದ ಪಂದ್ಯದಲ್ಲಿ ಭಾರತವು ಆಸ್ಟ್ರೇಲಿಯಾ ವಿರುದ್ಧ ಸೋಲು ಅನುಭವಿಸಿತ್ತು.

* ಪ್ರಸ್ತುತ ಭಾರತವು 'ಎ' ಗುಂಪಿನಲ್ಲಿರುವ ವಿಶ್ವದ ನಂ. 9 ಹಾಕಿ ತಂಡವಾಗಿರುವ ಸ್ಪೇನ್ ವಿರುದ್ಧ ಜಯ ಸಾಧಿಸಿದೆ.

* ಭಾರತ ಹಾಕಿ ತಂಡವು ಮೊದಲ ಪಂದ್ಯವನ್ನು ನ್ಯೂಜಿಲೆಂಡ್ ತಂಡದ ವಿರುದ್ಧ ಜಯಸಾಧಿಸಿತ್ತು.

* ಪ್ರಸ್ತುತ ಒಲಿಂಪಿಕ್ ಚಾಂಪಿಯನ್ ತಂಡ ಅರ್ಜೆಂಟೀನಾ ವಿರುದ್ಧ ಭಾರತದ ಹಾಕಿ ತಂಡವು ಮುಂದಿನ ಪಂದ್ಯವನ್ನು ಆಡಲಿದೆ.

## 58 ವರ್ಷದ ಕ್ರೀಡಾಪಟುಗೆ ಒಲಂಪಿಕ್ ನಲ್ಲಿ ಕಂಚಿನ ಪದಕ



* ಟೋಕಿಯೋ ಒಲಂಪಿಕ್ ಕ್ರೀಡಾಕೂಟದಲ್ಲಿ 58 ವರ್ಷದ ಆಟಗಾರ ಅಬ್ದುಲ್ಲ ಅಲ್ರಾಶಿದಿ ಅವರು ಕಂಚಿನಪದಕವನ್ನು ಪಡೆದುಕೊಂಡಿದ್ದಾರೆ, ಪ್ರಸ್ತುತ ಕುವೈತ್‌ನ ಅಬ್ದುಲ್ಲ ಅಲ್ರಾಶಿದಿ ಅವರು '7' ಬಾರಿ ಒಲಿಂಪಿಯನ್ ಆಗಿದ್ದಾರೆ, ಇದೀಗ ಅವರು ತಮ್ಮ 58 ನೇ ವಯಸ್ಸಿನಲ್ಲಿ ಪುರುಷರ ಸ್ಕೀಟ್ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನ ಜಯಿಸಿದ್ದಾರೆ.

* 2024 ರ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಂಪಿಕ್ ನಲ್ಲಿ ಚಿನ್ನದ ಪದಕವನ್ನು ಗೆಲ್ಲುವ ಭರವಸೆನಂಗಿದೆ ಎಂದಿದ್ದಾರೆ.

## ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಹಿದಿಲಿನ್ ಡಯಾಸ್‌ಗೆ ಚಿನ್ನ



* ಟೋಕಿಯೊ ಒಲಿಂಪಿಕ್ಸ್ ನ ಮಹಿಳೆಯರ 55 KG ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ ಫಿಲಿಪ್ಪೀನ್ಸ್ ದೇಶದ ಹಿದಿಲಿನ್ ಡಯಾಸ್ ಅವರು ಚಾಂಪಿಯನ್ ಆಗಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ.

* ಹಿದಿಲಿನ್ ಡಯಾಸ್ ಅವರು ಒಟ್ಟು '4' ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದಾರೆ, ಇವರು ಒಟ್ಟು 224 KG ಭಾರ ಎತ್ತಿ ಒಲಿಂಪಿಕ್ಸ್ ನಲ್ಲಿ ದಾಖಲೆ ನಿರ್ಮಿಸಿದ್ದಾರೆ.

* ಇದೆ ವಿಭಾಗದಲ್ಲಿ ಚೀನಾ ದೇಶದ ಲಿಯಾವೊ ಕ್ಯುಯುನ್ ಬೆಳ್ಳಿ ಪದಕ, ಹಾಗೂ ಕಜಕಸ್ತಾನ ದೇಶದ ಜುಲ್ಫಿಯಾ ಕಂಚಿನ ಪದಕ ಜಯಿಸಿದ್ದಾರೆ.

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಬ್ರಿಟನ್ ಜೋಡಿಗೆ ಚಿನ್ನ



* ಟೋಕಿಯೋ ಒಲಿಂಪಿಕ್ಸ್ ನಲ್ಲಿ ಪುರುಷರ 10 ಮೀ. ಸಿಂಕ್ರೊನೈಜ್ಡ್ ಡೈವಿಂಗ್‌ನಲ್ಲಿ ಬ್ರಿಟನ್ ದೇಶದ ಟಾಮ್‌ಡೇಲಿಹಾಗೂಮ್ಯಾಟಿಲೀಜೋಡಿಯುಚಿನ್ನದಪದಕವನ್ನುಜಯಿಸಿದ್ದಾರೆ.

*ಈ ಕ್ರೀಡಾ ವಿಭಾಗದಲ್ಲಿ ಚೀನಾ ದೇಶದ ಕೋಯುವಾನ್ ಹಾಗೂ ಚೆನ್ ಎಸೆನ್ ಅವರ ಜೋಡಿಯು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

* ಇದೇ ಕ್ರೀಡೆಯಲ್ಲಿ ಆರ್‌ಒಸಿಯ ಅಲೆಕ್ಸಾಂಡರ್ ಬಾಂಡರ್ ಹಾಗೂ ವಿಕ್ಟರ್ ಮಿನಿಬೇವ್ 3 ನೇ ಸ್ಥಾನವನ್ನುಪಡೆದುಕೊಂಡಿದ್ದಾರೆ.

## ಕರ್ನಾಟಕ ರಾಜ್ಯದ ನೂತನ ಸಿಎಂ ಆಗಿ ಬೊಮ್ಮಾಯಿ ಪ್ರಮಾಣವಚನಸ್ವೀಕಾರ



* ಕರ್ನಾಟಕ ರಾಜ್ಯದ ನೂತನ ಸಿಎಂ ಆಗಿ ಬಸವರಾಜ ಬೊಮ್ಮಾಯಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ.

* ಬೊಮ್ಮಾಯಿ ಅವರು ಬೆಳಗ್ಗೆ 11 ಗಂಟೆ ಸುಮಾರಿಗೆ ರಾಜಭವನದ ಗಾಜಿನ ಮನೆಯಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

* ಪ್ರಸ್ತುತ ಕರ್ನಾಟಕ ರಾಜ್ಯದ ರಾಜ್ಯಪಾಲರಾದ ಥಾವರ್‌ಚಾಂದ ಗೆಹ್ಲೋಟ್ ಅವರು ಬಸವರಾಜ ಬೊಮ್ಮಾಯಿ ಅವರಿಗೆ ಪ್ರಮಾಣವಚನವನ್ನು ಬೋಧಿಸಿದರು.

* ಈ ಹಿಂದೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರುವ ಸಮಯದಲ್ಲಿ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಗೃಹಮಂತ್ರಿ, ಮತ್ತು ಹಾವೇರಿ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಸೇವೆ ಸಲ್ಲಿಸುತ್ತಿದ್ದರು.

* ಪ್ರಸ್ತುತ ಬಸವರಾಜ ಬೊಮ್ಮಾಯಿಅವರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

* ಬಸವರಾಜ ಬೊಮ್ಮಾಯಿ ಅವರು 2008 ರಲ್ಲಿ ಬಿಜೆಪಿ ಪಕ್ಷವನ್ನು ಸೇರಿಕೊಂಡರು, 2008 ರಿಂದ 2013 ರವರೆಗೆ ಜಲ ಸಂಪನ್ಮೂಲ ಮತ್ತು ಸಹಕಾರ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

* ಬಸವರಾಜ ಬೊಮ್ಮಾಯಿ ಅವರ ತಂದೆ ಎಸ್.ಆರ್. ಬೊಮ್ಮಾಯಿ ಅವರು 1988 89 ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿಸೇವೆಸಲ್ಲಿಸಿದ್ದಾರೆ.

# 29-07-2021

## ಒಲಿಂಪಿಕ್ಸ್ ನಲ್ಲಿ ಭಾರತ ಪುರುಷರ ಹಾಕಿ ತಂಡಕ್ಕೆ ಅರ್ಜೆಂಟೀನಾ ತಂಡದ ವಿರುದ್ಧ ಜಯ



* ಪ್ರಸ್ತುತ ಭಾರತ ಪುರುಷರ ಹಾಕಿ ತಂಡವು ಟೊಕಿಯೊ ಒಲಿಂಪಿಕ್ಸ್ ನಲ್ಲಿ ಅರ್ಜೆಂಟೀನಾ ತಂಡದ ವಿರುದ್ಧ ಗೆಲುವು ದಾಖಲಿಸಿದೆ, ಈ ಪಂದ್ಯವನ್ನು ಗೆದ್ದ ಭಾರತ ತಂಡವು ಕ್ವಾರ್ಟರ್‌ಫೈನಲ್‌ಗೆ ಪ್ರವೇಶವನ್ನು ಪಡೆದುಕೊಂಡಿದೆ.

* ಪ್ರಸ್ತುತ ಭಾರತದ ಪುರುಷರ ಹಾಕಿ ತಂಡವು 'ಎ' ಗುಂಪಿನಲ್ಲಿ ನಾಲ್ಕು ಪಂದ್ಯಗಳನ್ನೂ ಆಡಿದೆ, ಅದರಲ್ಲಿ 3 ಪಂದ್ಯಗಳಲ್ಲಿ ಗೆಲುವು ದಾಖಲಿಸಿದೆ.

* ಭಾರತದ ಪುರುಷರ ಹಾಕಿ ತಂಡವು ಮುಂದಿನ ಪಂದ್ಯವನ್ನು ಜಪಾನ್ ತಂಡದ ವಿರುದ್ಧ ಆಡಲಿದೆ.

## ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಪಡೆದ ಪಿ.ವಿ. ಸಿಂಧು



* ಪ್ರಸ್ತುತ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಟೋಕಿಯೋ ಒಲಿಂಪಿಕ್ಸ್ ನಲ್ಲಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆದುಕೊಂಡಿದ್ದಾರೆ.

* ಈ ಹಿಂದೆ 2016 ರ ರಿಯೋ ಒಲಿಂಪಿಕ್ಸ್‌ನಲ್ಲಿ ಪಿ.ವಿ. ಸಿಂಧು ಅವರು ಬೆಳ್ಳಿ ಪದಕ ಜಯಿಸಿ ಭಾರತೀಯ ಹೆಮ್ಮೆಯ ಬ್ಯಾಡ್ಮಿಂಟನ್ ತಾರೆಯಾಗಿದ್ದರು.

* ಪಿ.ವಿ. ಸಿಂಧು ಅವರು ಮಹಿಳಾ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ವಿರುದ್ಧ ಜಯ ಸಾಧಿಸಿದ್ದಾರೆ.

## ದೇಶದ ನಾಲ್ಕನೇ ಮಹಿಳೆಗೆ ಸ್ಕೈಡೈವಿಂಗ್ ಲೈಸೆನ್ಸ್



* ಗುಜರಾತ್‌ನ ವಡೋದರಾದ ಶ್ವೇತಾ ಪರ್ಮಾರ್ ಅವರು ಸ್ಕೈಡೈವಿಂಗ್‌ಗೆ ಪರವಾನಿಗೆ ಪಡೆದ ದೇಶದ ನಾಲ್ಕನೇ ಮಹಿಳೆಗೆ ಪಾತ್ರರಾಗಿದ್ದಾರೆ.

* ಈ ಮೊದಲು ಸ್ಕೈಡೈವಿಂಗ್ ಲೈಸೆನ್ಸ್ ಪಡೆದ ಭಾರತದ ಮಹಿಳೆಯರು: ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವ ರಾಷೆಲ್ ಥಾಮಸ್, ಶೀತಲ್ ಮಹಾಜನ್, ಇವರ ಜೊತೆಯಲ್ಲಿ ದೇಶದ ಮೊದಲ ಮಹಿಳಾ ಬೇಸ್ ಜಂಪರ್ ಅರ್ಚನಾ ಸರ್ದಾನಾ ಅವರು ಕೂಡ ಸ್ಕೈಡೈವಿಂಗ್ ಲೈಸೆನ್ಸ್ ಪಡೆದುಕೊಂಡಿದ್ದಾರೆ.

## ಭಾರತದ ಲಸಿಕೆ ಕಾರ್ಯಕ್ರಮ 186 ಕೋಟಿ ರೂ. ನೆರವು ಘೋಷಣೆಮಾಡಿದಬ್ಲಿಂಕೆನ್



* ಪ್ರಸ್ತುತ ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಅವರು ದ್ವಿಪಕ್ಷೀಯ ಸಂಬಂಧಗಳ ವೃದ್ಧಿಸಲು ಎರಡು ದಿನಗಳ ಭಾರತ ಪ್ರವಾಸವನ್ನು ಕೈಗೊಂಡಿದ್ದರು ಈ ಸಂಧರ್ಭದಲ್ಲಿ ಭಾರತೀಯ ವಿದೇಶಾಂಗ ಸಚಿವ ಎಸ್.ಜೈಶಂಕರ್, ಹಾಗೂ ಪ್ರಧಾನಿ ಮೋದಿಯವರನ್ನು ಭೇಟಿಯಾಗಿದ್ದಾರೆ.

* ಆಂಟನಿ ಬ್ಲಿಂಕೆನ್ ಅವರು ಭಾರತದಲ್ಲಿನ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ 186 ಕೋಟಿ ರೂ. ನೆರವು ಘೋಷಣೆ ಮಾಡಿದ್ದಾರೆ, ಹಾಗೂ ಎರಡು ದೇಶಗಳ ಉಭಯ ಬಾಂಧವ್ಯವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿಕಾರ್ಯಗಳುನಡೆಯಲಿವೆಎಂದುತಿಳಿಸಿದ್ದಾರೆ.

## 2022ರಲ್ಲಿ'ಚಂದ್ರಯಾನ 3'ಗಗನಯಾನ



* ಪ್ರಸ್ತುತ ಇಸ್ರೋ ಚಂದ್ರನ ಅಂಗಳದಲ್ಲಿ ಲ್ಯಾಂಡರ್ ಹಾಗೂ ರೋವರ್ ಇಳಿಸುವ 'ಚಂದ್ರಯಾನ 3' ಗಗನಯಾನವು 2022 ರ ಅಂತ್ಯದಲ್ಲಿ ನಡೆಯುವ ಎಲ್ಲ ಲಕ್ಷಣಗಳಿವೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಮಾಹಿತಿ ನೀಡಿದ್ದಾರೆ.

* ಚಂದ್ರಯಾನ್ 3 ಎಂಬುದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಯೋಜಿತ ಮೂರನೇ ಚಂದ್ರ ಪರಿಶೋಧನಾ ಕಾರ್ಯಾಚರಣೆಯಾಗಿದೆ.

* ಈ 'ಚಂದ್ರಯಾನ್ 3' ಕೋವಿಡ್ 19 ಕಾರಣದಿಂದಾಗಿ ಈ ಯೋಜನೆಯ ಕಾರ್ಯವು ಕುಂಠಿತವಾಗಿತ್ತು, ಆದರೆ ಇದೀಗ ಈ ಚಂದ್ರಯಾನ 3 ಯೋಜನೆಯ ಉಡಾವಣೆಯ ದಿನಾಂಕವನ್ನು ಮರು ನಿಗದಿಪಡಿಸಲಾಗಿದೆ ಎಂದು ಲೋಕಸಭೆಯಲ್ಲಿ ಲಿಖಿತ ಉತ್ತರ ರೂಪದಲ್ಲಿ ಜಿತೇಂದ್ರ ಸಿಂಗ್ ಅವರು ಮಾಹಿತಿ ನೀಡಿದ್ದಾರೆ.

* ಈ ಹಿಂದೆ 2019 ರ ಜುಲೈ 22 ರಂದು 'ಚಂದ್ರಯಾನ 2' ಉಡಾವಣೆ ಮಾಡಲಾಗಿತ್ತು, ಆದರೆ ಲ್ಯಾಂಡರ್‌ಇಳಿಸುವಲ್ಲಿ ಕೊನೆಯಾಕ್ಷಣದಲ್ಲಿ ಇಸ್ರೊದಕಾರ್ಯವಿಫಲವಾಗಿತ್ತು.

## ದೆಹಲಿ ಪೊಲೀಸ್ ಮುಖ್ಯಸ್ಥರಾಗಿ ರಾಕೇಶ್ ಅಸ್ತಾನ ನೇಮಕ



* ಪ್ರಸ್ತುತ ದೆಹಲಿ ಪೊಲೀಸ್ ಮುಖ್ಯಸ್ಥರಾಗಿ ರಾಕೇಶ್ ಅಸ್ತಾನ ಅವರನ್ನು ನೇಮಕ ಮಾಡಿದ್ದಾರೆ, ಈ ಹಿಂದೆ 2018 ರಲ್ಲಿ ಇವರನ್ನು CBI ನಿಂದ ವಜಾಗೊಳಿಸಿ ನಂತರ ಗಡಿ ಭದ್ರತಾ ಪಡೆಯ (BSF) ಮುಖ್ಯಸ್ಥರನ್ನಾಗಿನೇಮಕಮಾಡಲಾಗಿತ್ತು.

* ರಾಕೇಶ್ ಅಸ್ತಾನ ಅವರು ಗುಜರಾತ್ ಕೇಡರ್ ನ 1984 ರ ಬ್ಯಾಚ್ ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

## ರಫೇಲ್‌ಯುದ್ಧವಿಮಾನಗಳನ್ನುಸ್ವೀಕರಿಸಿದಭಾರತ



* ಪ್ರಸ್ತುತ ಭಾರತ ಸರ್ಕಾರವು 36 ರಫೇಲ್ ಯುದ್ಧವಿಮಾನ ಖರೀದಿ ಒಪ್ಪಂದವನ್ನು ಫ್ರಾನ್ಸ್ ದೇಶದೊಂದಿಗೆ ಮಾಡಿಕೊಂಡಿತ್ತು, ಅದರಲ್ಲಿ ಇದೀಗ 26 ರಫೇಲ್ ಯುದ್ಧ ವಿಮಾನಗಳನ್ನು ಭಾರತವು ಸ್ವೀಕಾರಮಾಡಿದೆ.

* ಭಾರತ ದೇಶವು ಫ್ರಾನ್ಸ್ ದೇಶದ ಡಸಾಲ್ಟ್ ಏವಿಯೇಷನ್ ನಿಂದ 26 ಯುದ್ಧ ವಿಮಾನಗಳು ಸ್ವೀಕರಿಸಿದೆ ಎಂದು ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಅವರು ಲೋಕಸಭೆಯಲ್ಲಿ ಈ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಭಾರತ ದೇಶವು ಈ ಹಿಂದೆ ಫ್ರಾನ್ಸ್ ದೇಶದೊಂದಿಗೆ 59,000 ಕೋಟಿ ರೂ.ಗಳ ವೆಚ್ಚದಲ್ಲಿ 36 ಯುದ್ಧ ವಿಮಾನಗಳನ್ನು ಖರೀದಿಸಲು ಅಂತರ್ ಸರ್ಕಾರಿ ಒಪ್ಪಂದಕ್ಕೆ ಪರಸ್ಪರ ಒಪ್ಪಿ ಸಹಿ ಹಾಕಿದ್ದವು.

* ಫ್ರಾನ್ಸ್ ದೇಶದ '5' ರಫೇಲ್ ಜೆಟ್‌ಗಳ ಮೊದಲ ಬ್ಯಾಚ್ 2020 ರ ಜುಲೈ. 29 ರಂದು ಭಾರತಕ್ಕೆಬಂದುತಲುಪಿವೆ.

## KVIC ಮತ್ತು BSF ನಿಂದ ಜೈಸಲ್ಮೇರ್‌ನಲ್ಲಿ ಪ್ರಾಜೆಕ್ಟ್ ಬೋಲ್ಡ್ ಆರಂಭ



* ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (KVIC)ವು ಗಡಿ ಭದ್ರತಾ ಪಡೆ (BSF) ಸಹಯೋಗದೊಂದಿಗೆ ಪ್ರಾಜೆಕ್ಟ್ ಬೋಲ್ಡ್ ಯೋಜನೆಯನ್ನು ಆರಂಭಿಸಿದೆ, ಈ ಯೋಜನೆಯಿಂದ ರಾಜಸ್ಥಾನದ ಭಾರತೀಯ ಮರುಭೂಮಿಗಳಲ್ಲಿ ಹಸಿರು ಹೊದಿಕೆಯನ್ನು ಅಭಿವೃದ್ಧಿಪಡಿಸುವಪ್ರಾಥಮಿಕಗುರಿಯಾಗಿದೆಎಂದುತಿಳಿಸಲಾಗಿದೆ.

* KVIC ಮತ್ತು BSF ಜೊತೆಗೆ ಪ್ರಾಜೆಕ್ಟ್ ಬೋಲ್ಡ್ ಅಡಿಯಲ್ಲಿ ರಾಜಸ್ಥಾನ ರಾಜ್ಯದ ಜೈಸಲ್ಮೇರ್‌ನ ತನೋಟ್ ಗ್ರಾಮದಲ್ಲಿ 1000 ಬಿದಿರಿನ ಸಸಿಗಳನ್ನು KVIC ಅಧ್ಯಕ್ಷರಾದ ಶ್ರೀ ವಿನಯ್ ಕುಮಾರ್ ಸಕ್ಸೇನಾ ಹಾಗೂ BSF ಡಿಜಿ ಶ್ರೀ ಸುರೇಂದ್ರ ಪನ್ವಾರ್ ಅವರ ಸಮ್ಮುಖದಲ್ಲಿ 2021 ರ ಜುಲೈ. 27 ರಂದು ನೆಟ್ಟಿದ್ದಾರೆ, ಹಾಗೂ ಈ ಸಸ್ಯಗಳ ನಿರ್ವಹಣೆಯನ್ನು BSF ನೋಡಿಕೊಳ್ಳಲಿದೆ.

* ಪ್ರಾಜೆಕ್ಟ್ ಬೋಲ್ಡ್ ಯೋಜನೆಯು ಜೀವನೋಪಾಯವನ್ನು ಹಾಗೂ ಗ್ರಾಮೀಣ ಉದ್ಯಮಕ್ಕೆ ಬೆಂಬಲ ನೀಡುತ್ತದೆ, ಹಾಗೂ ಮರಳುಗಾರಿಕೆಯನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ ಎಂದಿದ್ದಾರೆ.

* ಇದಕ್ಕೂ ಮೊದಲೇ ರಾಜಸ್ಥಾನದ ಉದಯಪುರ ಜಿಲ್ಲೆಯ ಬುಡಕಟ್ಟು ಗ್ರಾಮವಾದ ನಿಚ್ಲಾ ಮಾಂಡ್ವಾದಲ್ಲಿ ಜುಲೈ. 4 ರಂದು ಪ್ರಾಜೆಕ್ಟ್ ಬೋಲ್ಡ್ ಯೋಜನೆಯನ್ನು ಆರಂಭಿಸಲಾಗಿದೆ, ಈ ನಿಚ್ಲಾ ಮಾಂಡ್ವಾ ಗ್ರಾಮದಲ್ಲಿ5000ಬಿದಿರಿನಜಾತಿಗಳಸಸಿಗಳನ್ನುನೆಟ್ಟಿದ್ದಾರೆಎಂದುತಿಳಿದುಬಂದಿದೆ.

## ರಾಷ್ಟ್ರೀಯಮಹಿಳಾಆನ್‌ಲೈನ್‌ಚೆಸ್‌ಪ್ರಶಸ್ತಿ



* ರಾಷ್ಟ್ರೀಯ ಮಹಿಳಾ ಆನ್‌ಲೈನ್ ಚೆಸ್ ಪ್ರಶಸ್ತಿಯನ್ನು ದೆಹಲಿಯು ವಂತಿಕಾ ಅಗರ್ವಾಲ್ ಜಯಿಸಿದ್ದಾರೆ, ಇವರು ಈ ಆನ್‌ಲೈನ್ ಚೆಸ್ ಆಟದ 11 ಸುತ್ತುಗಳಲ್ಲಿ 9.5 ಅಂಕಗಳನ್ನು ಪಡೆದಿದ್ದಾರೆ.

* ಪಶ್ಚಿಮ ಬಂಗಾಳದ ಅರ್ಪಿತಾ ಮುಖರ್ಜಿ ಅವರು 9 ಅಂಕಗಳನ್ನೂ ಪಡೆದುಕೊಂಡು 2 ನೇ ಸ್ಥಾನ ಪಡೆದುಕೊಂಡಿದ್ದಾರೆ.

* ತಮಿಳುನಾಡಿನ ಶ್ರೀಜಾ ಶೇಷಾದ್ರಿ ಅವರು ಈ ಚೆಸ್ ಆಟದಲ್ಲಿ 8.5 ಅಂಕಗಳನ್ನೂಪಡೆದು3ನೇ ಸ್ಥಾನದಲ್ಲಿದ್ದಾರೆ.

*ಮಹಾರಾಷ್ಟ್ರದಸೌಮ್ಯಸ್ವಾಮಿನಾಥನ್‌ಅವರು4ನೇ ಸ್ಥಾನದಲ್ಲಿದ್ದಾರೆ.

* ತಮಿಳುನಾಡಿನ ಆರ್ ವೈಶಾಲಿ ಅವರು 5 ನೇ ಸ್ಥಾನ ಪಡೆದಿದ್ದಾರೆ.

* ಜೂನಿಯರ್ ಓಪನ್ ವಿಭಾಗದಲ್ಲಿ ತಮಿಳುನಾಡಿನ ವಿ.ಎಸ್.ರಾಹುಲ್ 9.5 ಅಂಕಗಳನ್ನೂ ಪಡೆದು ಮೊದಲನೇ ಸ್ಥಾನದಲ್ಲಿದ್ದಾರೆ.

* ಅಂತರರಾಷ್ಟ್ರೀಯ ಮಾಸ್ಟರ್ ಭಾರತ್ ಸುಬ್ರಹ್ಮಣ್ಯಂ ಅವರು 9 ಅಂಕಗಳನ್ನೂ ಪಡೆದು 2 ನೇ ಸ್ಥಾನದಲ್ಲಿದ್ದಾರೆ.

* ಗ್ರ್ಯಾಂಡ್‌ಮಾಸ್ಟರ್ ಪಿ ಇನಿಯಾನ್ 3 ನೇ ಸ್ಥಾನದಲ್ಲಿದ್ದಾರೆ, ಇತ್ತೀಚಿಗೆ ಇವರು ವಿಶ್ವಕಪ್ ಚೆಸ್‌ನಲ್ಲಿ ದೇಶವನ್ನು ಪ್ರತಿನಿಧಿಸಿದ್ದರು.

## ರಾಷ್ಟ್ರೀಯ ಮಹಿಳಾ ಆಯೋಗದಿಂದ ಮಹಿಳೆಯರಿಗಾಗಿ 24/7ಸಹಾಯವಾಣಿಆರಂಭ




* ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ 2021 ರ ಜುಲೈ. 27 ರಂದು ರಾಷ್ಟ್ರೀಯ ಮಹಿಳಾ ಆಯೋಗವು, ನ್ಯೂ ವುಮೆನ್ ಹೆಲ್ಪ್ ಲೈನ್(NCW) 24/7 ಸಹಾಯವಾಣಿಸಂಖ್ಯೆ "7827170170" ಯನ್ನು ಆರಂಭಿಸಿದ್ದಾರೆ.

* ಪ್ರಸ್ತುತ ದೇಶದ ಮಹಿಳೆಯರ ಸುರಕ್ಷತೆಯನ್ನು ಕಾಪಾಡಲು, ಹಾಗೂ ಹಿಂಸಾಚಾರದಿಂದ ಬಳಲುತ್ತಿರುವ ಮಹಿಳೆಯರು, ಆಸ್ಪತ್ರೆಗಳು, ವೈದ್ಯರು, ಪೊಲೀಸ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮುಂತಾದ ಸೂಕ್ತ ಅಧಿಕಾರಿಗಳನ್ನೂ ಈ ಸಹಾಯವಾಣಿಯಿಂದ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ಸಹಾಯವಾಣಿಯು ದೆಹಲಿಯಲ್ಲಿನ ರಾಷ್ಟ್ರೀಯ ಮಹಿಳಾ ಆಯೋಗವು ನಿರ್ವಹಿಸಲಿದೆ, ಈ ಸಹಾಯವಾಣಿಗೆ 18 ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ಮಹಿಳೆಯಾರು ಕರೆಗಳನ್ನೂ ಮಾಡಿ ಸಹಾಯ ಪಡೆಯಬಹುದು.

* ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಡಿಜಿಟಲ್ ಇಂಡಿಯಾ ಕಾರ್ಪೊರೇಶನ್‌ನ ಸಹಾಯದಿಂದ ಈ ಸಹಾಯವಾಣಿಯನ್ನು ಅಭಿವೃದ್ಧಿಪಡಿಸಲಾಗಿದೆ.

* 1992 ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವು (NCW) ರಚನೆಯಾದ ಸರ್ಕಾರದ ಶಾಸನಬದ್ಧ ಸಂಸ್ಥೆಯಾಗಿದೆ, ಪ್ರಸ್ತುತ ರೇಖಾ ಶರ್ಮಾ ಅವರು ಈ NCW ನ ಅಧ್ಯಕ್ಷೆಯಾಗಿದ್ದಾರೆ.

# 30-07-2021

## ಒಲಿಂಪಿಕ್ಸ್ ರೋಯಿಂಗ್‌ನ ಪುರುಷರ ಡಬಲ್ಸ್ ಸ್ಕಲ್ಸ್ ವಿಭಾಗದಲ್ಲಿ ಕ್ರೊವೇಷಿಯಾಸಹೋದರರಿಗೆಚಿನ್ನ



* ಟೋಕಿಯೊ ಒಲಿಂಪಿಕ್ಸ್ ನ ರೋಯಿಂಗ್‌ನ ಪುರುಷರ ಡಬಲ್ಸ್ ಸ್ಕಲ್ಸ್ ವಿಭಾಗದಲ್ಲಿ ಕ್ರೊವೇಷಿಯಾದ ಸಹೋದರರಾಗಿರುವ ಮಾರ್ಟಿನ್ ಸಿನ್ಕೊವಿಕ್ ಮತ್ತು ವ್ಯಾಲೆಂಟ್ ಸಿನ್ಕೊವಿಕ್ ಅವರು ಚಿನ್ನದ ಪದಕ ಪಡೆದುಕೊಂಡಿದ್ದಾರೆ.

* ಈ ಹಿಂದೆ 2012 ರ ಕ್ರೀಡಾ ಕೂಟದಲ್ಲಿ ಕ್ವಾಡ್ರುಪ್ಲೆ ಸ್ಕಲ್ಸ್ ವಿಭಾಗದಲ್ಲಿ ಇದೇ ಜೋಡಿಯು ಬೆಳ್ಳಿ ಪದಕವನ್ನು ಜಯಿಸಿದ್ದರು.

* ಐರ್ಲೆಂಡ್‌ನ ಸನಿತಾ ಪುಸ್ಪೆರ್ ಅವರು 2018 ಮತ್ತು 2019 ರ ವಿಶ್ವ ಚಾಂಪಿಯನ್‌ಷಿಪ್,

2019 ಹಾಗೂ 2020 ರ ಯರೋಪಿಯನ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದರು, ಆದರೆ ಈ ಟೋಕಿಯೊ ಒಲಿಂಪಿಕ್ಸ್'ನಲ್ಲಿ ಫೈನಲ್ ಪ್ರವೇಶ ಪಡೆಯುವಲ್ಲಿ ವಿಫಲರಾಗಿದ್ದಾರೆ.

* ಕ್ರೊವೇಷಿಯಾ ತಂಡ 6 ನಿಮಿಷ 15.29 ಸೆಕೆಂಡ್‌ಗಳಲ್ಲಿ 2 ಸಾವಿರ ಮೀಟರ್ ದೂರ ಕ್ರಮಿಸಿ ಚಿನ್ನದ ಪದಕವನ್ನು ಪಡೆದುಕೊಂಡಿದೆ.

* ರೊಮೆನಿಯಾ ತಂಡ 6 ನಿಮಿಷ.17.58 ಸೆಕೆಂಡ್‌ಗಳಲ್ಲಿ ಕ್ರಮಿಸಿ ಬೆಳ್ಳಿ ಪದಕವನ್ನು ಪಡೆದುಕೊಂಡಿದೆ.

## ವಿದೇಶಗಳಿಗೆ6.4ಕೋಟಿಡೋಸ್‌ಕೋವಿಡ್ 19ಲಸಿಕೆರವಾನೆ




* ಕೇಂದ್ರ ಸರ್ಕಾರವು ಸಂಸತ್ತಿಗೆ ವರದಿಯನ್ನು ನೀಡಿರುವ ಪ್ರಕಾರ ಭಾರತ ದೇಶವು ಈ ವರ್ಷದ ಪ್ರಾರಂಭದಲ್ಲಿ ಅಂದರೆ ಜನೇವರಿ 12 ರಿಂದ ಜುಲೈ 22ರ ಸಮಯದಲ್ಲಿ ಒಟ್ಟಾರೆ 6.4 ಕೋಟಿ ಕೋವಿಡ್ 19 ಲಸಿಕೆಗಳನ್ನು ವಿದೇಶಗಳಿಗೆ ಕಳುಹಿಸಿಕೊಟ್ಟಿದೆ ಎಂದು ತಿಳಿಸಿದೆ.

* ವಿಮಾನಗಳ ಮೂಲಕ ಒಟ್ಟು 42.2 ಕೋಟಿ ಡೋಸ್ ಕೋವಿಡ್ 19 ಲಸಿಕೆಗಳನ್ನು ರವಾನಿಸಲಾಗಿದೆ ಎಂದು ನಾಗರಿಕ ವಿಮಾನಯನ ಸಚಿವ ವಿ.ಕೆ.ಸಿಂಗ್ ಅವರು ಲೋಕಸಭೆಯಲ್ಲಿ ಈ ವಿಷಯದ ಬಗ್ಗೆ ಲಿಖಿತ ಉತ್ತರ ರೂಪದಲ್ಲಿ ಮಾಹಿತಿ ನೀಡಿದ್ದಾರೆ.

* ಪ್ರಸ್ತುತ ದೇಶದಾದ್ಯಂತ 45 ಕೋಟಿಗೂ ಅಧಿಕವಾಗಿ ಕೋವಿಡ್ 19 ಲಸಿಕೆಯನ್ನು ನೀಡಲಾಗಿದೆಎಂದುತಿಳಿಸಿದ್ದಾರೆ.

## ಟೋಕಿಯೋಒಲಿಂಪಿಕ್ಸ್‌ನಪ್ರಿ ಕ್ವಾರ್ಟರ್‌ನಲ್ಲಿಮೇರಿಕೋಮ್'ಗೆ ಸೋಲು



* ಭಾರತದ ಭರವಸೆಯ ಬಾಕ್ಸರ್ ಆಟಗಾರ್ತಿ ಮೇರಿ ಕೋಮ್ ಈ ಟೋಕಿಯೊ ಒಲಿಂಪಿಕ್ಸ್'ನ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಲು ಕಂಡಿದ್ದಾರೆ, ಈ ಹಿಂದೆ ಮೇರಿ ಕೋಮ್ ಅವರು '6' ಬಾರಿ ವಿಶ್ವ ಚಾಂಪಿಯನ್ ಆಗಿದ್ದಾರೆ.

* ಮೇರಿ ಕೋಮ್ ಅವರು 51 KG ಮಹಿಳಾ ವಿಭಾಗದಲ್ಲಿ ಕೊಲಂಬಿಯಾದ ಇಂಗ್ರಿಟ್ ವಲೆನ್ಸಿಯಾ ವಿರುದ್ಧ ಸೋಲು ಕಂಡಿದ್ದಾರೆ.

* ಮೇರಿ ಕೋಮ್ ಅವರು 2012 ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು.

* 2016 ರ ರಿಯೋ ಒಲಿಂಪಿಕ್ಸ್‌ನಲ್ಲಿ ಕೊಲಂಬಿಯಾದ ಇಂಗ್ರಿಟ್ ವಲೆನ್ಸಿಯಾ ಅವರು ಕಂಚಿನ ಪದಕ ಜಯಿಸಿದ್ದರು.

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಭಾರತೀಯಬಾಕ್ಸರ್



* ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತೀಯ ಬಾಕ್ಸರ್ ಸತೀಶ್ ಕುಮಾರ್ ತಮ್ಮ ಆರಂಭದ ಪಂದ್ಯದಲ್ಲಿ ಜಮೈಕಾದ ರಿಕಾರ್ಡೊ ಬ್ರೌನ್ ಅವರ ವಿರುದ್ಧ ಜಯಿಸಿದ್ದಾರೆ, ಇದು ಭಾರತೀಯ ಬಾಕ್ಸರ್ ಸತೀಶ್ ಕುಮಾರ್ ಅವರ ಚೊಚ್ಚಲ ಒಲಿಂಪಿಕ್ ಕ್ರೀಡಾಕೂಟದಲ್ಲಿ ಕ್ವಾರ್ಟರ್ ಫೈನಲ್'ಗೆ ತಲುಪಿದ್ದಾರೆ.

## ಇಸ್ರೋದಿಂದ ಶೀಘ್ರ ನೈಸರ್ಗಿಕ ವಿಪತ್ತು ನಿಗಾ ಉಪಗ್ರಹ ಆರಂಭ




* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ನೈಸರ್ಗಿಕ ವಿಪತ್ತುಗಳ ಮೇಲ್ವಿಚಾರಣೆಗಾಗಿ ಬಳಸುವ ಉಪಗ್ರಹವನ್ನು ಉಡಾಯಿಸಲು ಸಿದ್ಧವಾಗುತ್ತಿದೆ.

* ಇದು ಜಿಯೋ ಇಮೇಜಿಂಗ್ ಉಪಗ್ರಹ, EOS 3 ಉಪಗ್ರಹವಾಗಿದೆ.

* ಈ ಉಪಗ್ರಹವು ಚಂಡಮಾರುತಗಳು, ಪ್ರವಾಹ, ಹಾಗೂ ವಿವಿಧ ನೈಸರ್ಗಿಕ ವಿಕೋಪಗಳ ನೈಜ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ, ಹಾಗೂ ಈ ಉಪಗ್ರಹವು ದಿನಕ್ಕೆ ಕನಿಷ್ಠ 4 ರಿಂದ 5 ಬಾರಿ ದೇಶವನ್ನು ಚಿತ್ರಿಸುವ ಸಾಮರ್ಥ್ಯವನ್ನು ಕೂಡ ಹೊಂದಿದೆ.

* ಈ ಉಪಗ್ರಹವನ್ನು 2021 ರ ನಾಲ್ಕನೇ ತ್ರೈಮಾಸಿಕದಲ್ಲಿ ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲುಯೋಜಿಸಿದೆ.

## ಜುಲೈ29:ಅಂತರಾಷ್ಟ್ರೀಯಹುಲಿದಿನ




* ಅಂತರಾಷ್ಟ್ರೀಯ ಹುಲಿ ದಿನವನ್ನು ವಿಶ್ವ ಹುಲಿ ದಿನ ಎಂದು ಕರೆಯುತ್ತಾರೆ, ಹಾಗೂ ಈ ದಿನವನ್ನು ಜುಲೈ 29 ರಂದು ಆಚರಿಸುತ್ತಾರೆ.

* ಈ ದಿನದಂದು ಪ್ರಪಂಚದಲ್ಲಿನ ಹುಲಿ ಜನಸಂಖ್ಯೆಯು ಎದುರಿಸುತ್ತಿರುವ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಣೆ ಮಾಡಲಾಗುತ್ತದೆ.

* ಮೊದಲ ವಿಶ್ವ ಹುಲಿ ದಿನವನ್ನು 2010 ರಲ್ಲಿ ರಷ್ಯಾದಲ್ಲಿ, ಸೇಂಟ್ ಪೀಟರ್ಸ್‌ಬರ್ಗ್ ಹುಲಿ ಶೃಂಗಸಭೆಯಲ್ಲಿ ಆಚರಿಸಿದ್ದಾರೆ, ಒಟ್ಟಾರೆ 13 ದೇಶಗಳು 2022 ರ ವೇಳೆಗೆ ಕಾಡು ಹುಲಿಗಳ ಸಂಖ್ಯೆಯನ್ನು ಹೆಚ್ಚಿಸುವ ಜಾಗತಿಕ ಗುರಿಯನ್ನು ಕೈಗೊಂಡಿವೆ.

* 20 ನೇ ಶತಮಾನದ ಪ್ರಾರಂಭದಲ್ಲಿ ಸರಿ ಸುಮಾರು 1,00,000 ಹುಲಿಗಳಿದ್ದವು ಎಂದು ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (WWF) ತಿಳಿಸಿದೆ, ಆದರೆ 2010 ರ ಅವಧಿಯಲ್ಲಿ ಹುಲಿಗಳ ಸಂಖ್ಯೆಯು ತೀವ್ರವಾಗಿ 3,200 ಕ್ಕೆ ಕಳಮುಖವಾಗಿದೆ ಎಂದು ತಿಳಿಸಿದ್ದಾರೆ, ಈ ಕಾರಣದಿಂದಾಗಿ ಅಂತರರಾಷ್ಟ್ರೀಯ ಹುಲಿ ದಿನವು ಜಾಗೃತಿ &ಸಂರಕ್ಷಣೆಮಾಡಲುಈದಿನವನ್ನುಆಚರಿಸುತ್ತಾರೆ.

* 2018 ರ ಅಖಿಲ ಭಾರತ ಹುಲಿ ಅಂದಾಜು ವರದಿಯ ಪ್ರಕಾರ ಭಾರತದಲ್ಲಿ 2967 ಹುಲಿಗಳಿವೆಎಂದುತಿಳಿಸಲಾಗಿತ್ತು.

## T 20ಯ ಸರಣಿ : ಶ್ರೀಲಂಕಾ ವಿರುದ್ಧ ಭಾರತಕ್ಕೆ ಸೋಲು



* ಶ್ರೀಲಂಕಾ ದೇಶವು ಟಿ 20 ಸರಣಿಯಲ್ಲಿ ಭಾರತವನ್ನು ಸೋಲಿಸಿ 2 1 ಅಂತರದಿಂದ ಸರಣಿ ವಶಪಡಿಸಿಕೊಂಡಿದೆ.

* ಭಾರತ ತಂಡವು ಮೊದಲು ಬ್ಯಾಟಿಂಗ್ ಆರಂಭಿಸಿ ನಿಗದಿತ 20 ಓವರ್ ಗಳಲ್ಲಿ 8 ವಿಕೆಟ್ ಪತನಕ್ಕೆ 81 ರನ್'ಗಳಷ್ಟೇ ಕಲೆಹಾಕಿದ್ದರು, ಈ ಕಡಿಮೆ ಮೊತ್ತದ ರನ್'ನಿದಾಗಿ ಶ್ರೀಲಂಕಾ ಸುಲಭವಾಗಿ ಈ ಪಂದ್ಯವನ್ನುಗೆದ್ದುಸರಣಿಯನ್ನುವಶಪಡಿಸಿಕೊಂಡಿದೆ.

## AICTE ಪ್ರಾದೇಶಿಕ ಭಾಷೆಗಳಲ್ಲಿ ಉನ್ನತ ಶಿಕ್ಷಣವನ್ನು ಉತ್ತೇಜಿಸಲು ಡೇಟಾಬೇಸ್'ರಚನೆ




* ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE) ಸಂಪನ್ಮೂಲಗಳ ದತ್ತಸಂಚಯವನ್ನು ರಚಿಸುತ್ತಿರುವುದಾಗಿ ಘೋಷಣೆ ಮಾಡಿದೆ. ಪ್ರಸ್ತುತ ಎಂಜಿನಿಯರಿಂಗ್ ವಿಷಯವನ್ನು ದೇಶದ 11 ಭಾಷೆಗಳಿಗೆ ಭಾಷಾಂತರಿಸುವ ಸಾಧನವನ್ನು AICTE ಅಭಿವೃದ್ಧಿಪಡಿಸಿದೆ.


* ಪ್ರಾದೇಶಿಕ ಭಾಷೆಗಳನ್ನು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಕ್ರಮ ತಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ.

* 8 ರಾಜ್ಯಗಳಲ್ಲಿ, 14 ಎಂಜಿನಿಯರಿಂಗ್ ಕಾಲೇಜುಗಳು 5 ಭಾರತೀಯ ಭಾಷೆಗಳಲ್ಲಿ ಎಂಜಿನಿಯರಿಂಗ್ ಅಧ್ಯಯನವನ್ನು ಪ್ರಾರಂಭಿಸಲಿವೆ.

* 5 ಭಾರತೀಯ ಭಾಷೆಗಳು: ಬಂಗಾಳಿ, ಹಿಂದಿ, ತೆಲುಗು, ತಮಿಳು ಮತ್ತು ಮರಾಠಿ.

* ಪ್ರಸ್ತುತ ಪ್ರಾದೇಶಿಕ ಭಾಷೆಗಳಲ್ಲಿ ಬೋಧನೆ ಮಾಡುವದರಿಂದ ಕಡಿಮೆ ಆದಾಯ ಹೊಂದಿರುವ ಗ್ರಾಮೀಣ ಕುಟುಂಬಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಪ್ರವೇಶವನ್ನು ನೀಡುವಲ್ಲಿ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

## 'ಕೃಷಿಕರ್ಣ' ಯೋಜನೆ ಕೇರಳ ರಾಜ್ಯದಲ್ಲಿ ಪ್ರಾರಂಭ



* ಕೇರಳ ರಾಜ್ಯದ ರಾಷ್ಟ್ರೀಯ ಕೃಷಿ ತೋಟಗಾರಿಕೆ ಸೊಸೈಟಿ, ಸಸ್ಟೈನಬಿಲಿಟಿ ಫೌಂಡೇಶನ್ ಹಾಗೂ ಕ್ಯೂರೆ 3 ನಾವೀನ್ಯತೆಗಳ ಜಂಟಿ ಉಪಕ್ರಮವಾಗಿರುವ 'ಕೃಷಿಕರ್ಣ' ಯೋಜನೆಯಡಿಯಲ್ಲಿ ಒಂದು ರೀತಿಯ ಹಸಿರುಮನೆಯ ಮಿನಿ ಪಾಲಿಹೌಸ್'ನ್ನು ನಿರ್ಮಿಸಲಾಗುವುದು ಎಂದು ಕೇರಳ ರಾಜ್ಯ ತಿಳಿಸಿದೆ.

* ಕೇರಳದ ತಿರುವನಂತಪುರಂ ಮೂಲದ ಸರ್ಕಾರೇತರ ಸಂಸ್ಥೆಯು ಸರ್ಕಾರದಿಂದ ಮಾನ್ಯತೆ ಪಡೆಡಿರುವ ಸಹಕಾರಿ, ಕೃಷಿ ಮತ್ತು ತೋಟಗಾರಿಕೆ ಪದ್ಧತಿಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಸ್ಟೈನಬಿಲಿಟಿ ಫೌಂಡೇಶನ್ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ಈ ಯೋಜನೆ ರೂಪಿಸಲಾಗುವದು ಎಂದು ತಿಳಿಸಲಾಗಿದೆ.

* ಕ್ಯೂರೆ 3 ಎನ್ನುವದು ಇನ್ನೋವೇಶನ್ಸ್ ಸ್ಟಾರ್ಟ್ ಅಪ್ ಕಂಪನಿಯಾಗಿದೆ, ಈ ಕಂಪನಿಯು ಫಾರ್ಮ್ ಗಳಿಗೆ 'ಎಂಡ್ ಟು ಎಂಡ್ ಸಪೋರ್ಟ್' ಒದಗಿಸುತ್ತದೆ ಎಂದು ತಿಳಿಸಿದೆ.

* ಕೇರಳ ರಾಜ್ಯದಲ್ಲಿ ಕೃಷ್ಣಕರ್ಣರ ಯೋಜನೆ ಅಡಿಯಲ್ಲಿ 2.5 ಶೇಕಡಾ ಭೂಮಿಯಲ್ಲಿ ಸಣ್ಣ ಪಾಲಿಹೌಸ್ ನಿರ್ಮಾಣಮಾಡಲಾಗುವದು ಎಂದು ತಿಳಿಸಿದೆ, ಪ್ರತಿ ಪ್ಲಾಸ್ಟಿಕ್ ಮನೆಯ ಒಟ್ಟು ಅಂದಾಜು ವೆಚ್ಚ 2,35,000 ರೂ. ವೆಚ್ಚತಗುಲಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಕೇರಳ ರಾಜ್ಯದಲ್ಲಿ ನಿರ್ಮಾಣವಾಗುವ ಮಿನಿ ಪಾಲಿಹೌಸ್'ಗಳಲ್ಲಿ ಲಾಂಗ್ ಬೀನ್ಸ್, ಟೊಮ್ಯಾಟೊ, ಸಲಾಡ್ ಸೌತೆಕಾಯಿಗಳು, ಬೆಲ್ ಪೆಪರ್, ಬೆಲ್ ಪೆಪರ್, ಮತ್ತು ಹಸಿರು ಎಲೆಗಳ ತರಕಾರಿಗಳನ್ನು ಬೆಳೆಸುವ ಯೋಜನೆ ಇದೆ ಎಂದು ತಿಳಿಸಿದ್ದಾರೆ.

# 31-07-2021

## ವಿಶ್ವನಂ.1ಟೆನ್ನಿಸ್'ಆಟಗಾರಟೋಕಿಯೋಒಲಿಂಪಿಕ್ಸ್‌ನಿಂದ ನಿರ್ಗಮನ



* ಪ್ರಸ್ತುತ ವಿಶ್ವ ನಂ. 01 ಸೆರ್ಬಿಯನ್ ಟೆನ್ನಿಸ್ ಆಟಗಾರ ನೊವಾಕ್ ಜೊಕೋವಿಕ್ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಿಂದ ನಿರ್ಗಮಿಸಿದ್ದಾರೆ.

* ನೊವಾಕ್ ಜೊಕೋವಿಕ್ ಅವರು ಜರ್ಮನಿಯ ಅಲೆಗ್ಸಾಂಡರ್ ಜ್ವೆರ್ವ್ ವಿರುದ್ಧ ಪುರುಷರ ಸಿಂಗಲ್ಸ್ ವಿಭಾಗದ ಸೆಮಿ ಫೈನಲ್ ಪಂದ್ಯದಲ್ಲಿ ಸೋಲು ಕಂಡು ಕ್ರೀಡಾಕೂಟದಿಂದ ಹೊರ ನಡೆದಿದ್ದಾರೆ.

## ಟೋಕಿಯೋ ಒಲಿಂಪಿಕ್ಸ್ ನ ಟ್ರ್ಯಾಂಪೊಲಿನ್ ಜಿಮ್ನಾಸ್ಟಿಕ್ಸ್ ಕ್ರೀಡೆಯ ಚಿನ್ನ ಮತ್ತು ಬೆಳ್ಳಿ ಚೀನಾ ದೇಶಕ್ಕೆ



* ಚೀನಾ ದೇಶವು ಟೋಕಿಯೊ ಕ್ರೀಡಾಕೂಟದ ಜಿಮ್ನಾಸ್ಟಿಕ್ಸ್ ವಿಭಾಗದ ಚಿನ್ನದ ಪದಕವನ್ನು ಜು ಕ್ಸುಯಿಂಗ್ ಪಡೆದುಕೊಂಡಿದ್ದಾರೆ, ಅಲ್ಲದೇ 2014 ರ ವಿಶ್ವ ಚಾಂಪಿಯನ್ ಲೀ ಲಿಂಗ್‌ಲಿಂಗ್ ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದರು.

* ಕೆನಡಾದ ರೋಸಿ ಮೆಕ್‌ಲೆನಾನ್ ಅವರು 2012 ಮಾತು 2016 ರ ಒಲಿಂಪಿಕ್ಸ್ ಗಳಲ್ಲಿ ಈ ಕ್ರೀಡಾ ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು, ಆದರೆ ಈ ಬಾರಿಯ ಅವರು ಸೋಲನ್ನು ಒಪ್ಪಿಕೊಂಡಿದ್ದಾರೆ.

* ಕೆನಡಾದ ರೋಸಿ ಮೆಕ್‌ಲೆನಾನ್ ಅವರು ಈ ಟೋಕಿಯೋ ಒಲಿಂಪಿಕ್ಸ್ ನಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿದ್ದಾರೆ.

* ಈ ಕ್ರೀಡಾ ವಿಭಾಗದ ಕಂಚಿನ ಪದಕವನ್ನು ಗ್ರೇಟ್ ಬ್ರಿಟನ್‌ನ ಬ್ರಿಯೊನಿ ಪಾಜ್ ಅವರು ಪಡೆದುಕೊಂಡಿದ್ದಾರೆ, ಈ ಹಿಂದೆ ಇವರು 2016 ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದರು.

* ಚೀನಾ ದೇಶವು ಈ ಬಾರಿಯ ಒಲಿಂಪಿಕ್ಸ್ ನ ಟ್ರ್ಯಾಂಪೊಲಿನ್ ವಿಭಾಗದಲ್ಲಿ ಜಂಟಿ 11 ಪದಕಗಳನ್ನು ಜಯಿಸಿ ದಾಖಲೆಯನ್ನು ನಿರ್ಮಿಸಿದೆ, ಇದೇ ಮೊದಲ ಬಾರಿ ಮಹಿಳೆ ಅಥವಾ ಪುರುಷರ ವಿಭಾಗದಲ್ಲಿ ಇಬ್ಬರು ಕ್ರೀಡಾಪಟುಗಳು 'ಪೋಡಿಯಂಫಿನಿಶ್'ಮಾಡಿದ್ದಾರೆಎಂದುತಿಳಿಸಲಾಗಿದೆ.

## ಅಮೇರಿಕ ದೇಶವು ಲಾಟರಿ ಮೂಲಕ ಎಚ್ 1ಬಿ ವೀಸಾ ಅರ್ಜಿದಾರರ ಅಯ್ಕೆಮಾಡಲಿದೆ




* ಪ್ರಸ್ತುತ ಅಮೇರಿಕ ದೇಶವು ಎಚ್ 1ಬಿ ವೀಸಾ ನೀಡಲು 2 ನೇ ಬಾರಿ ಲಾಟರಿ ಮೂಲಕ ಆಯ್ಕೆ ಮಾಡುವ ನಿರ್ಧಾರವನ್ನು ಕೈಗೊಂಡಿದೆ ಎಂದು ತಿಳಿಸಿದೆ.

* ಅಮೇರಿಕದ ಈ ಆಯ್ಕೆಯಿಂದಾಗಿ ಭಾರತದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಕಾರ್ಯ ನಿರ್ವಹಿಸುವವರಿಗೆ ಸಹಾಯಕಾರಿಯಾಗಲಿದೆ, ಹಾಗೂ ಈ ಮೊದಲು ಆಯ್ಕೆಯಾಗದವರಿಗೆ ಈ ವಿಧಾನದ ಮೂಲಕ ವೀಸಾ ಲಭಿಸುವ ಸಾಧ್ಯತೆಗಳಿವೆ.

* ಪ್ರಸ್ತುತ ಮಾಹಿತಿ ತಂತ್ರಜ್ಞಾನ ಕಂಪನಿಗಳು ಭಾರತ, ಚೀನಾ ಒಳಗೊಂಡಂತೆ ಬೇರೆ ಬೇರೆ ದೇಶಗಳ ವೃತ್ತಿಪರರನ್ನುನೇಮಕ ಮಾಡಿಕೊಳ್ಳುತ್ತದೆ.

* ಸಂಸತ್ ಪ್ರತಿ ವರ್ಷ 65 ಸಾವಿರ ಎಚ್ 1ಬಿ ವೀಸಾ ನೀಡಲು ಅನುಮತಿಯನ್ನುನೀಡಿದೆ.

## ಭಾರತದಲ್ಲಿನ 14 ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಸಿಎ / ಟಿಎಸ್‌ಮಾನ್ಯತೆ



* ಕೇಂದ್ರ ಸರ್ಕಾರವು 14 ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಅಂತರರಾಷ್ಟ್ರೀಯ ಹುಲಿ ದಿನಾಚರಣೆಯ ದಿನದಂದು ಸಿಎ / ಟಿಎಸ್ (Global Conservation Assured/Tiger Standards) ಮಾನ್ಯತೆ ನೀಡಿದೆ.

* ಕರ್ನಾಟಕ ರಾಜ್ಯದ ಬಂಡೀಪುರ, ಅಸ್ಸಾಂ ರಾಜ್ಯದ ಒರಾಂಗ್, ಸತ್ಪುರ, ಕನ್ಹ, ಕೇರಳ ರಾಜ್ಯದ ಪರಂಬಿಕುಲಂ, ಮಾನಸ, ಕಾಂಜಿರಂಗ, ಪಶ್ಚಿಮ ಬಂಗಾಳ ರಾಜ್ಯದ ಸುಂದರ್‌ಬನ್, ಮಧ್ಯಪ್ರದೇಶ ರಾಜ್ಯದ ಪನ್ನಾ ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಸಿಎ / ಟಿಎಸ್ ಮಾನ್ಯತೆಯನ್ನು ನೀಡಲಾಗಿದೆ.

* '7' ಹುಲಿ ಸಂರಕ್ಷಿತ ದೇಶಗಳ 125 ತಾಣಗಳಲ್ಲಿ ಸಿಎ/ ಟಿಎಸ್ ಮಾನ್ಯತೆ ಜಾರಿಗೆ ಬರಲಿದೆ ಎಂದಿದ್ದಾರೆ.

* ಭಾರತದಲ್ಲಿನ 94 ತಾಣಗಳು ಈ ಮಾನ್ಯತೆಯನ್ನು ಪಡೆದಿವೆ, WWF (ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್)ಇಂಡಿಯಾ ನೀಡಿರುವ ಮಾಹಿತಿಯ ಪ್ರಕಾರ 20 ಹುಲಿ ಮೀಸಲು ಅರಣ್ಯ ಪ್ರದೇಶಗಳಿಗೆ ಈ ವರ್ಷ ಈ ಮೌಲ್ಯಮಾಪನ ನೀಡುವ ಕಾರ್ಯ ಪೂರ್ಣಗೊಂಡಿದೆ ಎಂದುತಿಳಿಸಿದ್ದಾರೆ.

## ಟೋಕಿಯೊ ಒಲಂಪಿಕ್ಸ್ ನ ಮಹಿಳಾ ವಿಭಾಗದ ಜಿಮ್ನಾಸ್ಟಿಕ್ಸ್ ನಲ್ಲಿ ಸುನೀಸಾಲೀಗೆಚಿನ್ನ



* ಟೋಕಿಯೊ ಒಲಂಪಿಕ್ಸ್ ನ ಮಹಿಳಾ ವಿಭಾಗದ ಜಿಮ್ನಾಸ್ಟಿಕ್ಸ್'ನಲ್ಲಿ ಅಮೆರಿಕದ ಯುವ ಜಿಮ್ನಾಸ್ಟಿಕ್ಸ್ ಕ್ರೀಡಾಪಟು ಸುನೀಸಾ ಲೀ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ, ಈ ಹಿಂದೆ ನಡೆದ ರಿಯೊ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಅಮೇರಿಕದ ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಅವರು ಚಿನ್ನ ಪಡೆದುಕೊಂಡಿದ್ದರು.

* ಬ್ರೆಜಿಲ್'ನ ರೆಬೆಕಾ ಆಯಂಡ್ರಾಡೆ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

*ರಷ್ಯಾದಎಂಜೆಲಿನಾಮೆಲ್ನಿಕೊವಾಅವರುಕಂಚಿನಪದಕವನ್ನುಜಯಿಸಿದ್ದಾರೆ.

## ಪಂಜಾಬ್‌ರಾಜ್ಯದಅಂತರ್ಜಲಮಟ್ಟಪ್ರತಿವರ್ಷ1ಮೀ.ಕಡಿಮೆ



*ಪಂಜಾಬ್ ಕೃಷಿ ವಿಶ್ವವಿದ್ಯಾಲಯ (PAU) ಅಧ್ಯಯನ ನಡೆಸಿರುವ 1998 ಮತ್ತು 2018ರ ಪ್ರಕಾರ ಪಂಜಾಬ್‌ನ 22 ಪ್ರದೇಶಗಳಲ್ಲಿನ ಅಂತರ್ಜಲ ಮಟ್ಟವು ಪ್ರತಿ ವರ್ಷಕ್ಕೆ 1 ಮೀ. ಕಡಿಮೆಯಾಗಿದೆ ಎಂದು ಕಂಡುಹಿಡಿದಿದ್ದಾರೆ.

* ಪ್ರಸ್ತುತ ಪಂಜಾಬ್ ಕೃಷಿ ವಿಶ್ವವಿದ್ಯಾಲಯ ನಡೆಸಿರುವ ಅಧ್ಯಯನದ ಪ್ರಕಾರ ಈ ಮೊದಲು 3 ರಿಂದ 10 ಮೀ.ನಲ್ಲಿ ಲಭ್ಯವಿರುವ ಅಂತರ್ಜಲವು 20 ವರ್ಷಗಳಲ್ಲಿ 30 ಮೀ.ಗಿಂತ ಕಡಿಮೆಯಾಗಿದೆ ಎಂದು ಅಧ್ಯಯನ ವರದಿಯನ್ನು ನೀಡಿದೆ.

* ಈ ಪ್ರದೇಶದಲ್ಲಿ 1990 ರ ನಂತರ ಅಂತರ್ಜಲ ಮಟ್ಟ ಕುಸಿತದ ಸಮಸ್ಯೆ ಪ್ರಾರಂಭವಾಗಿದೆ, ನಂತರ 1998 ರಿಂದ ಅಂತರ್ಜಲ ಕುಸಿತದ ಪ್ರಮಾಣ ಏರಿಕೆಯಾಗುತ್ತಿದೆ, ಹಾಗೂ 2012 ರ ಅವಧಿಗೆ ಪರಿಸ್ಥಿತಿ ಕೈಮೀರಿ ಹೋಗಿದೆ ಎಂದು ಪಂಜಾಬ್ ಕೃಷಿ ವಿಶ್ವವಿದ್ಯಾಲಯ ತಿಳಿಸಿದೆ.

* ಪಂಜಾಬ್ ಕೃಷಿ ವಿಶ್ವವಿದ್ಯಾಲಯವು 2018 ರ ಅವಧಿಗೆ ಪಂಜಾಬ್ ರಾಜ್ಯದ ಅಂತರ್ಜಲ ಮಟ್ಟವು 30 ಮೀ.ಗಿಂತ ಕಡಿಮೆಯಾಗಿದೆ ಎಂದು ವರದಿ ಮಾಡಿದೆ.

## ಉಡಾನ್ ಯೋಜನೆ ಅಡಿಯಲ್ಲಿ 780 ಹೊಸ ವಿಮಾನ ಸಂಚಾರಮಾರ್ಗಗಳಿಗೆಅನುಮೋದನೆ




* ಉಡಾನ್ ಪ್ರಾದೇಶಿಕ ವಾಯು ಸಂಪರ್ಕ ಯೋಜನೆ ಅಡಿಯಲ್ಲಿ ಇದೀಗ ಭಾರತ ಸರ್ಕಾರವು 780 ಹೊಸ ವಿಮಾನ ಸಂಚಾರ ಮಾರ್ಗಗಳಿಗೆ ಅನುಮೋದಿಸಿದೆ ಎಂದು ನಾಗರಿಕ ವಿಮಾನಯಾನ ಸಚಿವರಾಗಿರುವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

* ದೇಶದಲ್ಲಿ ಯೋಜನೆಯಿಂದಾಗಿ 359 ಮಾರ್ಗಗಳನ್ನು ಆರಂಭಿಸಲಾಗಿದೆ, ಹಾಗೂ ಉಡಾನ್ ಯೋಜನೆಯಡಿ 59 ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದ್ದಾರೆ.

* 2017 ರಲ್ಲಿ ಈ ಉಡಾನ್ ಯೋಜನೆಯನ್ನು ಆರಂಭಿಸಲಾಗಿದೆ, UDAN (Ude Desh ka Aam Naagrik) ಎನ್ನುವದು ಭಾರತ ಸರ್ಕಾರದ ಪ್ರಾದೇಶಿಕ ಸಂಪರ್ಕ ಮತ್ತು ಪ್ರಾದೇಶಿಕ ವಿಮಾನ ನಿಲ್ದಾಣ ಅಭಿವೃದ್ಧಿ ಯೋಜನೆಯಾಗಿದೆ.

* ಈ ಉಡಾನ್ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಜಂಟಿಯಾಗಿ ಹಣ ನೀಡುತ್ತವೆ.

## ಭಾರತೀಯ ಮೂಲದ ರಶದ್ ಹುಸೇನ್ ರನ್ನು ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ರಾಯಭಾರಿಯಾಗಿನೇಮಕ



* ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ರಾಯಭಾರಿಯಾಗಿ ಭಾರತ ಅಮೆರಿಕನ್ ವಕೀಲ ರಶದ್ ಹುಸೇನ್' ರನ್ನು ಅಮೆರಿಕ ನೇಮಕ ಮಾಡಿದೆ, ಪ್ರಸ್ತುತ ಶ್ವೇತಭವನಕ್ಕೆ ನೇಮಕವಾದ ಮೊದಲ ಮುಸ್ಲಿಂ ವ್ಯಕ್ತಿ ಇವರಾಗಿದ್ದಾರೆ.

* ರಶದ್ ಹುಸೇನ್ ಅವರು ಈ ಮೊದಲು ರಾಷ್ಟ್ರೀಯ ಭದ್ರತಾ ಮಂಡಳಿಯ ಸಹಭಾಗಿತ್ವ ಹಾಗೂ ಜಾಗತಿಕ ಪಾಲ್ಗೊಳ್ಳುವಿಕೆ ವಿಭಾಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

* ಈ ಹಿಂದೆ ಒಬಾಮಾ ಆಡಳಿತವಿರುವ ಸಂಧರ್ಭದಲ್ಲಿ ರಶದ್ ಹುಸೇನ್ ಅವರು ಅಮೇರಿಕದ ವಿಶೇಷ ರಾಯಭಾರಿಯಾಗಿ ಮತ್ತು ವೈಟ್ ಹೌಸ್ ಕೌನ್ಸಿಲ್‌ನ ಉಪ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.

## ನಿಸಾರ್ಉಪಗ್ರಹಉಡಾವಣೆಗೆಸಿದ್ಧತೆ




* ಪ್ರಸ್ತುತ ಮುಂದಿನ 2023 ರಲ್ಲಿ ನಾಸಾ ಮತ್ತು ಇಸ್ರೊ (ISRO) ಜಂಟಿಯ ನಿಸಾರ್ ಉಪಗ್ರಹವನ್ನು ಉಡಾವಣೆ ಮಾಡುವ ಸಿದ್ಧತೆಗಳನ್ನು ಕೈಗೊಳ್ಳಲಾಗಿತ್ತಿದೆ ಎಂದು ಕೇಂದ್ರ ಭೂ ವಿಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಯಲ್ಲಿ ಲಿಖಿತ ರೂಪದಲ್ಲಿ ಮಾಹಿತಿ ನೀಡಿದ್ದಾರೆ.

* ಈ ನಿಸಾರ್ ಉಪಗ್ರಹವು ಇಡೀ ಜಗತ್ತಿನಾದ್ಯಂತ ಇರುವ ನೈಸರ್ಗಿಕ ಸಂಪನ್ಮೂಲಗಳನ್ನು ಪತ್ತೆಹಚ್ಚುವದು ಮತ್ತು ಭೂಕಂಪ ತರಹದ ನೈಸರ್ಗಿಕ ವಿಕೋಪಗಳ ಮಾಹಿತಿಗಳನ್ನೂ ಪಡೆಯಲು ಈ ಉಪಗ್ರಹವನ್ನು ಉಡಾವಣೆ ಮಾಡುವ ಯೋಜನೆ ಇದೇ ಎಂದು ತಿಳಿಸಿದ್ದಾರೆ.

* ಈ ನಿಸಾರ್ ಉಪಗ್ರಹದಿಂದ ವಾತಾವರಣದ ಹವಾಮಾನ ಪರಿಣಾಮ, ಭೂಮಿ ಹಾಗೂ ಕರಾವಳಿ ಪ್ರದೇಶದ ಪ್ರಕ್ರಿಯೆಗಳ ಮಾಹಿತಿ ಸಂಗ್ರಹಕ್ಕೆ ಈ ಉಪಗ್ರಹ ಉಪಯೋಗವಾಗಲಿದೆ ಎಂದು ತಿಳಿಸಿದ್ದಾರೆ.

## ತೆಂಗು ಅಭಿವೃದ್ಧಿ ಮಂಡಳಿ ಮಸೂದೆಯನ್ನು ಅಂಗೀಕರಿಸಿದ ರಾಜ್ಯಸಭೆ




*ಪ್ರಸ್ತುತ ತೆಂಗು ಅಭಿವೃದ್ಧಿ ಮಂಡಳಿ ಮಸೂದೆ 2021 ನ್ನು ರಾಜ್ಯಸಭೆಯು 2021 ರ ಜುಲೈ. 30 ರಂದು ಅಂಗೀಕರಿಸಿದೆ, ಈ ಮಸೂದೆಯು ಸರ್ಕಾರಿ ಅಧಿಕಾರಿಗಳಿಗಿಂತ ವೃತ್ತಿಪರರನ್ನು ಕಾರ್ಯನಿರ್ವಾಹಕೇತರ ಅಧ್ಯಕ್ಷರನ್ನಾಗಿ ನೇಮಿಸಲು ಸಹಾಯ ಮಾಡಿಕೊಡಲಿದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

* ಈ ತೆಂಗು ಅಭಿವೃದ್ಧಿ ಮಂಡಳಿಯಲ್ಲಿ ಗುಜರಾತ್ ಹಾಗೂ ಆಂಧ್ರಪ್ರದೇಶ ರಾಜ್ಯಗಳು ತಮ್ಮ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಬಹುದಾಗಿದೆ.

* ಈ ತೆಂಗು ಅಭಿವೃದ್ಧಿ ಮಂಡಳಿ ಭಾರತ ಸರ್ಕಾರದ ಕೃಷಿ ಸಚಿವಾಲಯದ ಅಡಿಯಲ್ಲಿರುವ ಒಂದು ಕಾನೂನು ಸಂಸ್ಥೆಯಾಗಿದ್ದು.

* ತೆಂಗು ಅಭಿವೃದ್ಧಿ ಮಂಡಳಿಯುನ್ನು 1981 ರ ಜನೇವರಿ. 12 ರಂದು ಸ್ಥಾಪನೆ ಮಾಡಲಾಗಿದೆ, ಹಾಗೂ ಇದು ಕೇರಳದ ಕೊಚ್ಚಿಯಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿದೆ, ಅಲ್ಲದೇ ಪ್ರಾದೇಶಿಕ ಕಚೇರಿಗಳು ಬೆಂಗಳೂರು, ಚೆನ್ನೈ ಮತ್ತು ಗುವಾಹಟಿ ನಗರಗಳಲ್ಲಿ ಹೊಂದಿದೆ.

* ತೆಂಗು ಅಭಿವೃದ್ಧಿ ಮಂಡಳಿಯು ಕೇರಳ ರಾಜ್ಯದ ಅಲುವಾ ಸಮೀಪದ ವಾಜಕುಲಂನಲ್ಲಿ ತಂತ್ರಜ್ಞಾನಅಭಿವೃದ್ಧಿ ಕೇಂದ್ರವನ್ನು ಸ್ಥಾಪನೆಮಾಡಿದೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App

ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ **KPSC VAANI APP** ಡೌನ್ಲೋಡ್ ಮಾಡಿಕೊಳ್ಳಿ

ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ

ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ



ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram

Scan QR Code
To Download
KPSC Vaani App